ಸಂಪುಟ: 09 ಸಂಚಿಕೆ: 177 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪ್ರಿಯಾಂಕಾಗೆ ಗಾಯ

‘ದಿ ಬ್ಲಫ್’ ಚಿತ್ರದ ಚಿತ್ರೀಕರಣದ ವೇಳೆ ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಅವರು ಗಾಯಗೊಂಡಿದ್ದು, ಗಂಟಲಿನ ಹೊರಭಾಗಕ್ಕೆ ಪೆಟ್ಟು ಬಿದ್ದಿದೆ. ಈ ಕುರಿತಂತೆ ಇನ್ಸ್ಟಾಗ್ರಾಂನಲ್ಲಿ ಪೋಸ್ಟ್ ಹಂಚಿಕೊಂಡಿರುವ ಪ್ರಿಯಾಂಕಾ, ‘ವೃತ್ತಿ ಜೀವನದಲ್ಲಿ ಎದುರಾಗುವ ಅಪಾಯಗಳು’ ಎಂದು ಬರೆದುಕೊಂಡಿದ್ದಾರೆ.

ನಳಂದಾ ವಿವಿಗೆ ಮರು ಹುಟ್ಟು: ಹೊಸ ಕ್ಯಾಂಪಸ್‌ಗೆ ಪ್ರಧಾನಿ ಚಾಲನೆ

ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ದಿನ ಎಂದ ಪ್ರಧಾನಿ

ನಳಂದಾ: ಬಿಹಾರ ರಾಜ್ಯದ ರಾಜಗೀರ್‌ನ ವಿಶ್ವ ಪರಂಪರೆ ತಾಣವಾಗಿರುವ ಐತಿಹಾಸಿಕ ನಳಂದಾ ವಿಶ್ವ ವಿದ್ಯಾಲಯದಲ್ಲಿ 1749 ಕೋಟಿ ರು.ಗಳಷ್ಟು ಭಾರೀ ವೆಚ್ಚದಲ್ಲಿ 455 ಎಕರೆಗಳಲ್ಲಿ ನೂತನವಾಗಿ ನಿರ್ಮಿಸಿರುವ ಕ್ಯಾಂಪಸ್ಸನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಉದ್ಘಾಟಿಸಿದರು. ಬಳಿಕ ನಡೆದ ಸಮಾರಂಭದಲ್ಲಿ ಮಾತನಾಡಿ, ಇಂದಿನ ಹೊಸ ವಿಶ್ವವಿದ್ಯಾಲಯಕ್ಕೆ 12ನೇ ಶತಮಾನದಲ್ಲಿ ನಳಂದಾ ವಿಶ್ವ ವಿದ್ಯಾಲಯಕ್ಕಿದ್ದ ಸ್ಥಾನಮಾನವನ್ನು ಮರಳಿ ನೀಡುವುದು ಕೇಂದ್ರ ಸರಕಾರದ ಆದ್ಯತೆ ಎಂದು ವಿದ್ಯಾರ್ಥಿಗಳಿಗೆ ಭರವಸೆ ನೀಡಿದ್ದಾರೆ.

ಸುಟ್ಟಿದ್ದು ಪುಸ್ತಕ, ಜ್ಞಾನವಲ್ಲ: ನಳಂದಾ ವಿವಿ ಜತೆ ಭಾರತ ಮಾತ್ರವಲ್ಲ ವಿಶ್ವದ ಹಲವು ದೇಶಗಳ ಪರಂಪರೆ ಜೋಡಿಸಿಕೊಂಡಿದೆ. ಬೆಂಕಿ ಜ್ವಾಲೆಯಲ್ಲಿ ಸುಟ್ಟು ಹೋದ ನಳಂದಾ ವಿವಿ ಮರಳಿ ರೂಪುತಳೆದಿದೆ. ಪುಸ್ತಕ ಸುಡಬಹುದೇ ಹೊರತು ಜ್ಞಾನವನ್ನಲ್ಲ ಎಂಬುದನ್ನು ಪ್ರತಿನಿಧಿಸುತ್ತಿದೆ. ನಳಂದಾ ವಿವಿ ಕೇವಲ ಹೆಸರಲ್ಲ. ಅದೊಂದು ಗುರುತು ಮತ್ತು ಗೌರವ. ನಳಂದಾ ಒಂದು ಮೌಲ್ಯ, ಹಾಗೇ ಮಂತ್ರ ಎಂದು ಮೋದಿ ಪ್ರಾಚೀನ ಹಾಗೂ ನವೀನ ನಳಂದಾ ವಿವಿಯನ್ನು ಬಣ್ಣಿಸಿದ್ದಾರೆ.

3ನೇ ಬಾರಿ ಪ್ರಧಾನಿಯಾದ 10 ದಿನದಲ್ಲೇ ನೂತನ ನಳಂದಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಅವಕಾಶ ಸಿಕ್ಕಿದ್ದು ಬಹಳ ಸಂತಸ ತಂದಿದೆ. ನೂತನ ಕ್ಯಾಂಪಸ್ ಉದ್ಘಾಟನೆ ಭಾರತದ ಅಭಿವೃದ್ಧಿ ಪಯಣದ ಶುಭ ಸಂಕೇತ ಎನ್ನಬೇಕಿದೆ. ಪ್ರಾಚೀನ ನಳಂದಾ ವಿವಿಯಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಗುರುತು-ರಾಷ್ಟ್ರೀಯತೆ ಮೇಲೆ ಮಾಡುತ್ತಿರಲಿಲ್ಲ. ಶಿಕ್ಷಣ ಪಡೆಯುವ ಹಂಬಲದ ವಿವಿಧ ರಾಷ್ಟ್ರಗಳ ಎಲ್ಲಾ ವರ್ಗದ ಜನರೂ ನಳಂದಾ ವಿವಿಗೆ ಆಗ ಬರುತ್ತಿದ್ದರು. ಅದೇ ಪ್ರಾಚೀನ ವ್ಯವಸ್ಥೆಯನ್ನು ಈಗಲೂ ಉಳಿಸಿ ಬಲಪಡಿಸಬೇಕಿದೆ.

-ನರೇಂದ್ರ ಮೋದಿ ಪ್ರಧಾನಿ

17 ದೇಶಗಳ ವಿದ್ಯಾರ್ಥಿಗಳ ಅಧ್ಯಯನ

ಅರ್ಜೆಂಟೀನ, ಲೈಬೀರಿಯ, ಮ್ಯಾನ್‌ಮಾರ್, ಮೊಜಂಬಿಕ್, ನೇಪಾಳ, ನೈಜೀರಿಯ, ರಿಪಬ್ಲಿಕ್ ಆಫ್ ಕಾಂಗೊ, ದಕ್ಷಿಣ ಸುಡಾನ್, ಶ್ರೀಲಂಕಾ, ಥಾಯ್ಲೆಂಡ್, ಟರ್ಕಿ, ಉಗಾಂಡ, ಬಾಂಗ್ಲಾದೇಶ , ಭೂತಾನ್, ಘಾನ, ವಿಯೆಟ್ನಾಂ ಸೇರಿ ಅನೇಕ ರಾಷ್ಟ್ರಗಳ ವಿದ್ಯಾರ್ಥಿಗಳು ನೂತನ ನಳಂದಾ ವಿವಿಯಲ್ಲಿ 2022-24, 2023-25ನೇ ಸಾಲಿನಲ್ಲಿ ಸ್ನಾತಕೋತ್ತರ ಅಧ್ಯಯನ ಹಾಗೂ ಪಿಎಚ್‌ಡಿ ಅಧ್ಯಯನಕ್ಕೆ ನೋಂದಾಯಿಸಿಕೊಂಡಿದ್ದಾರೆ. 2014ರಲ್ಲಿ ಹೊಸದಾಗಿ ವಿಶ್ವವಿದ್ಯಾಲಯ ಆರಂಭವಾದಾಗ 14 ವಿದ್ಯಾರ್ಥಿಗಳು ಮಾತ್ರವಿದ್ದರು. ನಳಂದಾ ವಿಶ್ವ ವಿದ್ಯಾಲಯ ಬೌದ್ಧ ಅಧ್ಯಯನ, ತತ್ವಶಾಸ್ತ್ರ ಮತ್ತು ಧರ್ಮ ತುಲನಾತ್ಮಕ ಅಧ್ಯಯನ, ಐತಿಹಾಸಿಕ ಅಧ್ಯಯನ, ಪರಿಸರ ಅಧ್ಯಯನ, ಸುಸ್ಥಿರ ಅಭಿವೃದ್ಧಿ ಮತ್ತು ನಿರ್ವಹಣ ಅಧ್ಯಯನ ಸೇರಿ ಆರು ಕಲಿಕಾ ಕೇಂದ್ರಗಳನ್ನು ಹೊಂದಿದೆ. ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ವಿವಿ 137 ಸ್ಕಾಲರ್‌ಶಿಪ್ ನೀಡುತ್ತಿದೆ.

ನೂತನ ನಳಂದಾ ವಿಶ್ವವಿದ್ಯಾಲಯದ ವೈಶಿಷ್ಟ್ಯ

ಪ್ರಾಚೀನ ನಳಂದ ವಿವಿ ಅಂಗಳದಲ್ಲಿ ಸುತ್ತಾಡಿದ ಪ್ರಧಾನಿ ನರೇಂದ್ರ ಮೋದಿ

- ನೂತನ ಕ್ಯಾಂಪಸ್ ನಿರ್ಮಾಣ 2017ರಲ್ಲಿ ಆರಂಭ
- 1900 ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ಸಾಮರ್ಥ್ಯದ 40 ಶಿಕ್ಷಣ ಕೊಠಡಿಗಳು
- ‘ಇಂಟರ್ನೆಟ್ ಜೀರೋ’ ಹಸಿರು ಕ್ಯಾಂಪಸ್
- 550 ವಿದ್ಯಾರ್ಥಿ ಸಾಮರ್ಥ್ಯದ ಹಾಸ್ಟೆಲ್ ಸೌಲಭ್ಯ, ಅಂತಾರಾಷ್ಟ್ರೀಯ ಸೆಂಟರ್
- 300 ಆಸನಗಳ 2 ಆಡಿಟೋರಿಯಂ
- 2 ಸಾವಿರ ಆಸನಗಳ ಆಂಫಿಥಿಯೇಟರ್, ಕ್ರೀಡಾ ಕೇಂದ್ರ-ನೀರು ಸಂಸ್ಕರಣಾ ಘಟಕ
- ಸೌರಶಕ್ತಿ ಘಟಕಗಳು, 100 ಎಕರೆ ವಿಸ್ತೀರ್ಣದ ಕೆರೆಗಳು
- ಪ್ರಾಚೀನ ನಳಂದಾ ವಿವಿ ಕಟ್ಟಡಗಳ ಸಮೀಪದಲ್ಲೇ ನೂತನ ಕ್ಯಾಂಪಸ್ ನಿರ್ಮಾಣ

ಕೊಲೆ ಪ್ರಕರಣದಲ್ಲಿ ಹೆಸರು ಹೊರಬಾರದಂತೆ 30 ಲಕ್ಷ ರು. ಆಫರ್

ದರ್ಶನ್ ಪರ ಅಖಾಡಕ್ಕಿಳಿದ ಪತ್ನಿ ವಿಜಯಲಕ್ಷ್ಮಿ, ಸ್ಟೇಷನ್‌ನಲ್ಲಿ ಭೇಟಿ

ವರದಿಯಲ್ಲಿ ರೇಣುಕಾಸ್ವಾಮಿ ಹತ್ಯೆಯ ಬೀಭತ್ಸ ಕೃತ್ಯ ಬಹಿರಂಗ

ಡಿ ಗ್ಯಾಂಗ್ ವಿರುದ್ಧ 118 ಸಾಕ್ಷ್ಯ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಒಂದೊಂದೇ ಕರಾಳ ಮುಖಗಳು ತೆರೆದುಕೊಳ್ಳುತ್ತಿದ್ದು, ಪೊಲೀಸ್ ತನಿಖೆ ವೇಳೆ ದರ್ಶನ್ ಮತ್ತು ಸಂಗಡಿಗರ ವಿರುದ್ಧ 118ಕ್ಕೂ ಹೆಚ್ಚು ಸಾಕ್ಷ್ಯಗಳು ಲಭ್ಯವಾಗಿವೆ. ಕೊಲೆ ಪ್ರಕರಣದಲ್ಲಿ ತನ್ನ ಹೆಸರು ಬಾರದಂತೆ ನೋಡಿಕೊಳ್ಳಲು 30 ಲಕ್ಷ ರು. ನೀಡಿರುವುದಾಗಿ ಪೊಲೀಸರ ಮುಂದೆ ದರ್ಶನ್ ಒಪ್ಪಿಕೊಂಡಿದ್ದಾರೆ.

ಆರಂಭದಲ್ಲಿ ಮರಣೋತ್ತರ ಪರೀಕ್ಷೆಯಲ್ಲಿ ತಪ್ಪು ಮಾಹಿತಿ ನೀಡು ವಂತೆ 50 ಲಕ್ಷದ ಆಫರ್ ಮಾಡ ಲಾಗಿತ್ತು ಎನ್ನಲಾಗಿತ್ತು. ಬಳಿಕ ಪೊಲೀಸರಿಗೆ ಲಂಚ ನೀಡಲು ಮುಂದಾಗಿದ್ದು ಬಹಿರಂಗ ವಾಗಿತ್ತು. ಇದೀಗ ಪ್ರಕರಣದಲ್ಲಿ ದರ್ಶನ್ ಹೆಸರು ಬಾರದಂತೆ ಶರಣಾಗಲು 30 ಲಕ್ಷ ರು. ಆಫರ್ ನೀಡಿರುವುದು ಬಹಿರಂಗವಾಗಿದೆ. ಪೊಲೀಸ್ ವಿಚಾರಣೆಯಲ್ಲಿ ತನ್ನ ಹೆಸರನ್ನು ಬಾಯ್ಬಿಡದಂತೆ ಮತ್ತು ಪೊಲೀಸರು, ವಕೀಲರು ಮತ್ತು ಶವ ಸಾಗಿಸುವ ವ್ಯಕ್ತಿಗಳಿಗೆ ತಗಲುವ ವೆಚ್ಚವನ್ನು ಭರಿಸಲು ಪ್ರದೋಷ್‌ಗೆ 30 ಲಕ್ಷ ಹಣ ನೀಡಿರುವುದಾಗಿ ದರ್ಶನ್ ಸ್ವ ಇಚ್ಛೆ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಆದರೆ ಪಟ್ಟಣಗೆರೆಯ ಶೆಡ್‌ನಲ್ಲಿ ನಡೆದ ಹಲ್ಲೆಯಲ್ಲಿ ತಾನು ಭಾಗಿಯಾಗಿದ್ದೇನೆ ಎಂದು ದರ್ಶನ್ ಒಪ್ಪಿಕೊಂಡಿಲ್ಲ. ಶೆಡ್ ಸುತ್ತಲಿನ ಸಿಸಿಟಿವಿ ಕ್ಯಾಮೆರಾಗಳು, ಜೂನ್ 8ರಂದು ರಾತ್ರಿ ದರ್ಶನ್ ತನ್ನ ಜೀಪಿನಲ್ಲಿ ಶೆಡ್ ಕಡೆಗೆ ಆಗಮಿಸಿದ್ದನ್ನು ತೋರಿಸಿವೆ. ಹತ್ಯೆಯ ನಂತರ ದರ್ಶನ್ ಆರೋಪಿಗಳೊಂದಿಗೆ ಪಾರ್ಟಿ ಮಾಡಿದ್ದು ಕೂಡ ಪ್ರತ್ಯಕ್ಷದರ್ಶಿಗಳ ಸಾಕ್ಷಿಯಿಂದ ಗೊತ್ತಾಗಿದೆ. ಆದರೆ ಪಟ್ಟಣಗೆರೆಯ ಶೆಡ್‌ನಲ್ಲಿ ಯಾವುದೇ ಸಿಸಿಟಿವಿ ಸಾಕ್ಷಿಗಳನ್ನು ಆರೋಪಿಗಳು ಉಳಿಸಿಲ್ಲ ಎಂದು ಮೂಲಗಳು ತಿಳಿಸಿವೆ.

→ 4





ವಿಜಯಲಕ್ಷ್ಮಿ ವಿಚಾರಣೆ

ಕೊಲೆಯಾದ ದಿನ ದರ್ಶನ್ ಧರಿಸಿದ್ದ ಶೂ ಪತ್ನಿ ವಿಜಯಲಕ್ಷ್ಮಿ ಮನೆಯಲ್ಲಿ ಪತ್ತೆಯಾಗಿರುವ ಬೆನ್ನಲ್ಲೇ, ಅವರನ್ನು ವಿಚಾರಣೆಗೆ ಕರೆದಿದ್ದರು. ಇದರ ಬೆನ್ನಲ್ಲೇ ಅನ್ನಪೂರ್ಣೇಶ್ವರಿ ಪೊಲೀಸ್ ಠಾಣೆಗೆ ವಿಚಾರಣೆಗೆ ಹಾಜರಾದರು. ಈ ವೇಳೆ ಪೊಲೀಸರ ಹಲವು ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ ಎನ್ನಲಾಗಿದೆ. ಠಾಣೆಯಲ್ಲಿ ವಿಜಯಲಕ್ಷ್ಮಿ ಅವರು, ದರ್ಶನ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಮತ್ತೆ ಕಸ್ಟಡಿಗೆ ಕೇಳಲು ಪೊಲೀಸರ ಸಿದ್ಧತೆ

ದರ್ಶನ್ ಗ್ಯಾಂಗ್ ಪೊಲೀಸರ ಕಸ್ಟಡಿ ಸೇರಿ ಒಂಬತ್ತು ದಿನವಾಗಿದ್ದು, ಗುರುವಾರ ಪೊಲೀಸರ ಕಸ್ಟಡಿ ಅಂತ್ಯವಾಗಲಿದೆ. ಆದ್ದರಿಂದ ಪೊಲೀಸರು ಪುನಃ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಮತ್ತೆ ನಾಲ್ಕು ದಿನ ಕಸ್ಟಡಿಗೆ ಕೇಳುವ ಸಾಧ್ಯತೆಯಿದೆ. ಒಂದು ವೇಳೆ ಕಸ್ಟಡಿಗೆ ಅವಕಾಶ ನೀಡದಿದ್ದರೆ, ದರ್ಶನ್ ಹಾಗೂ ಇನ್ನುಳಿದ ಆರೋಪಿಗಳು ನ್ಯಾಯಾಂಗ ಬಂಧನದ ಮೇಲೆ ಪರಪ್ಪನ ಅಗ್ರಹಾರ ಜೈಲು ಸೇರುವುದು ನಿಶ್ಚಿತವಾಗಿದೆ.

ಪ್ರಮುಖಾಂಶ

- ದರ್ಶನ್ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾದ ಪತ್ನಿ ವಿಜಯಲಕ್ಷ್ಮಿ
- ದರ್ಶನ್, ಪವಿತ್ರಾ ಸೇರಿ ಎಲ್ಲ ಆರೋಪಿಗಳ ಡಿಎನ್‌ಎ ಮಾದರಿ ಸಂಗ್ರಹ
- ಇಂದು ನ್ಯಾಯಾಲಯದ ಮುಂದೆ ದಾಸನನ್ನು ಹಾಜರುಪಡಿಸುವ ಸಾಧ್ಯತೆ
- ಪಟ್ಟಣಗೆರೆ ಶೆಡ್ ಸೆಕ್ಯುರಿಟಿ ಗಾರ್ಡ್ ಹೇಳಿಕೆ ದಾಖಲು
- ಇನ್ನಷ್ಟು ಸಾಕ್ಷ್ಯಗಳ ಹುಡುಕಾಟದಲ್ಲಿ ಪೊಲೀಸರು

ರೇಣುಕಾಸ್ವಾಮಿ ಪೋಸ್ಟ್ ಮಾರ್ಟಂ ವರದಿ

- ಮರ್ಮಾಂಗದಲ್ಲಿ ರಕ್ತ ಹೆಪ್ಪುಗಟ್ಟುವಿಕೆ
- ತಲೆಯಲ್ಲಿ 32 ವಿವಿಧ ಗಾಯದ ಕಲೆ
- ಬೆನ್ನಿನ ಮೇಲೆ ಹಲವೆಡೆ ತೀವ್ರ ರಕ್ತಸ್ರಾವ
- ಒಂದು ಕಿವಿಯೇ ಮಂಗಮಾಯ
- ದೇಹದ ಹಲವೆಡೆ ಕರೆಂಟ್ ಶಾಕ್ ಗುರುತು
- ಮೃತದೇಹದ ಬಹುತೇಕ ಮೂಳೆ ಮುರಿತ

ಸಂಪಾದಕೀಯ ಪುಟಗಳಲ್ಲಿ...

ಸಮಸ್ಯೆಗಳನ್ನೂ ಬಿಜಿನೆಸ್ ಆಗಿ ಪರಿವರ್ತಿಸಬಹುದು!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್

ಸಂ.ಪುಟ | 6

ಸಂಬಂಧಗಳ ವಿಶ್ವಾಸವನ್ನೇ ಕಳೆದು ಕೊಳ್ಳುತ್ತಿದ್ದೇವೆಯೇ?

ಅಭಿಪ್ರಾಯ
ಗಣೇಶ್ ಭಟ್ ವಾರಣಾಸಿ

7 | ಸಂ.ಗಮ

ಮಾತಂದ್ರೆ ಮಾತು

ರಾಜ್ಯದ ಕೈಗಾರಿಕೆಗಳ ‘ಸಿ’ ಮತ್ತು ಡಿ’ ಗ್ರೂಪ್ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇ.100ರಷ್ಟು ಮೀಸಲು ನೀಡಲು ಮುಂದಾಗಿರುವ ಕಾರ್ಮಿಕ ಇಲಾಖೆ ಕ್ರಮ ಸ್ವಾಗತಾರ್ಹ. ಆದರೆ, ನಿರುದ್ಯೋಗಿ ಕನ್ನಡಿಗರನ್ನು ಗುರುತಿಸಿ, ನೇಮಕಾತಿಗೆ ಅಗತ್ಯ ಪ್ರಮಾಣಪತ್ರ ನೀಡುವ ಕೆಲಸ ಆಗಬೇಕು.

- ಪೂಜಾ ಗಾಂಧಿ
ನಟಿ

ಯುಜಿಸಿ ಪರೀಕ್ಷೆ ರದ್ದುಪಡಿಸಿ ಎನ್‌ಟಿಎ ಆದೇಶ

ನೆಟ್ಟಗೆ ನಡೆಯದ NET

ದೆಹಲಿ: ನೀಟ್ ಪರೀಕ್ಷೆಯ ಅಕ್ರಮ ವಿಚಾರದಲ್ಲಿ ಸುಪ್ರೀಂಕೋರ್ಟ್‌ನಿಂದ ಛೀಮಾರಿಗೊಳಗಾಗಿರುವ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್‌ಟಿಎ) ಈಗ ಯುಜಿಸಿ ನೆಟ್ ಪರೀಕ್ಷೆಯಲ್ಲೂ ಮುಖಭಂಗಕ್ಕೊಳಗಾಗಿದೆ.

ಮಂಗಳವಾರ ನಡೆದ ಯುಜಿಸಿ-ನೆಟ್ ಪರೀಕ್ಷೆಯಲ್ಲಿ ಅಕ್ರಮಗಳು ಕೇಳಿಬಂದ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಪಡಿಸುವುದಾಗಿ ಎನ್‌ಟಿಎ ಬುಧವಾರ ಪ್ರಕಟಿಸಿದೆ.

ಪರೀಕ್ಷಾ ಅಕ್ರಮದ ಕುರಿತು ಸಮಗ್ರ ತನಿಖೆಗಾಗಿ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಹಸ್ತಾಂತರಿಸಲಾಗುತ್ತಿದೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

ದೇಶದ 317 ನಗರಗಳಲ್ಲಿ 11.21 ಲಕ್ಷಕ್ಕೂ ಹೆಚ್ಚು ನೋಂದಾಯಿಸಿಕೊಂಡಿದ್ದ ಅಭ್ಯರ್ಥಿಗಳ ಪೈಕಿ ಸುಮಾರು ಶೇ.81 ರಷ್ಟು ಜನರು ನೆಟ್ ಪರೀಕ್ಷೆಗೆ ಹಾಜರಾಗಿದ್ದರು ಎಂದು ಯುಜಿಸಿ ಅಧ್ಯಕ್ಷ ಎಂ.ಜಗದೀಶ್ ಕುಮಾರ್ ಹೇಳಿದ್ದಾರೆ.

ಯುಜಿಸಿ ನೆಟ್ ಭಾರತೀಯ ವಿಶ್ವ ವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಮತ್ತು ಜೂನಿಯರ್ ರಿಸರ್ಚ್ ಫೆಲೋಶಿಪ್‌ಗೆ ಅರ್ಹತೆಯನ್ನು ನಿರ್ಧರಿಸುವ ಪರೀಕ್ಷೆಯಾಗಿದೆ.

ಇತ್ತೀಚೆಗಷ್ಟೇ ನಡೆದ ನೀಟ್ ಪರೀಕ್ಷೆಯಲ್ಲಿ ವ್ಯಾಪಕ ಅಕ್ರಮಗಳು ಕೇಳಿ ಬಂದಿದ್ದವು. ಈ ಸಂಬಂಧ ಕೆಲವರು ಸುಪ್ರೀಂ ಮೋರೆ ಹೋಗಿದ್ದು, ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಾರದೆಂದು ಕೋರ್ಟ್ ಸೂಚಿಸಿದೆ.

ಯುಜಿಸಿ- ನೆಟ್ ಪರೀಕ್ಷೆಯಲ್ಲಿ ಅಕ್ರಮ ಆರೋಪ, ಪರೀಕ್ಷಾ ಅಕ್ರಮದ ಕುರಿತು ಸಮಗ್ರ ತನಿಖೆಗಾಗಿ ಸಿಬಿಐಗೆ ಹಸ್ತಾಂತರ ಸಾಧ್ಯತೆ

68 ಭಾರತೀಯರೂ ಬಿಸಿಲ ಆಘಾತಕ್ಕೆ ಬಲಿ

550 ಹಜ್ ಯಾತ್ರಿಗಳ ಸಾವು

ಜೆರುಸಲೇಮ್: ಉತ್ತರ ಭಾರತ ಹೀಟ್ ವೇವ್‌ನಿಂದ ತತ್ತರಿಸಿದಂತೆ ಸೌದಿ ಅರೇಬಿಯಾದಲ್ಲೂ ತಾಪಮಾನ ಭಾರಿ ಏರಿಕೆ ಕಂಡಿದ್ದು ಮೆಕ್ಕಾಗೆ ಹಜ್ ಯಾತ್ರೆ ಕೈಗೊಂಡವರಲ್ಲಿ 550 ಮಂದಿ ಬಿಸಿಗಾಳಿ ಹೊಡೆತಕ್ಕೆ ಬಲಿಯಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮುಸ್ಲಿಮರ ಪವಿತ್ರ ಧಾರ್ಮಿಕ ಸ್ಥಳ ಮೆಕ್ಕಾದಲ್ಲಿ ಯಾತ್ರೆ ತೆರಳಿದವರ ಆರೋಗ್ಯದ ಬಗ್ಗೆ ಆತಂಕ ಸೃಷ್ಟಿಯಾಗಿದೆ. ಈ ಬಾರಿ ಮೆಕ್ಕಾದಲ್ಲಿ ತೀವ್ರ ಶಾಖದ ವಾತಾವರಣ ಸೃಷ್ಟಿಯಾಗಿದ್ದು ಯಾತ್ರೆಗೆ ಬರುವವರಿಗೆ ಸಂಕಷ್ಟ ತಂದೊಡ್ಡಿದೆ. ಮೃತಪಟ್ಟ 550 ಜನರಲ್ಲಿ ಬಹುತೇಕರು ಶಾಖ ಸಂಬಂಧಿ ಆರೋಗ್ಯ ಸಮಸ್ಯೆ ಯಿಂದಲೇ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ. 550 ಯಾತ್ರಿಕರಲ್ಲಿ 323 ಮಂದಿ ಈಜಿಪ್ಟ್‌ನವರಾಗಿದ್ದರೆ, 60 ಮಂದಿ ಜೋರ್ಡನ್ ಮೂಲದವರು ಎಂದು ತಿಳಿದುಬಂದಿದೆ.

ಧಾರ್ಮಿಕ ಕೇಂದ್ರದಲ್ಲಿ ಪ್ರತಿ ದಶಕಕ್ಕೊಮ್ಮೆ 0.4 ಡಿಗ್ರಿ ಸೆಲ್ಸಿಯಸ್ ತಾಪಮಾನ ಏರಿಕೆಯಾಗುತ್ತಿದೆ ಎಂದು ಸೌದಿ ಮೂಲದ ಹವಾಮಾನ ಸಂಸ್ಥೆ ಮಾಹಿತಿ ನೀಡಿದೆ. ಶಾಖದ ಹೊಡೆತದಿಂದ ಬಳಲುತ್ತಿರುವ 2 ಸಾವಿರ ಯಾತ್ರಿಗಳಿಗೆ ಚಿಕಿತ್ಸೆ ನೀಡಿರುವುದಾಗಿ ಸೌದಿ ಅಧಿಕಾರಿಗಳು ತಿಳಿಸಿದ್ದಾರೆ.

- ಪವಿತ್ರ ನಾಡಲ್ಲಿ 52 ಡಿಗ್ರಿ ಸೆಲ್ಸಿಯಸ್‌ಗೇರಿದ ತಾಪಮಾನ
- ಅನುಮತಿ ಪಡೆದ ಯಾತ್ರಿಗಳಿಗೆ ಎಸಿ, ಆಹಾರ, ನೀರು

ಮಾಲಿನ್ಯ: ದೇಶದಲ್ಲಿ 21 ಲಕ್ಷ ಜನ ಸಾವು

ದೆಹಲಿ: ವಾಯುಮಾಲಿನ್ಯದಿಂದ 2021ರಲ್ಲಿ ಭಾರತದಲ್ಲಿ 21 ಲಕ್ಷ ಸೇರಿದಂತೆ ವಿಶ್ವಾದ್ಯಂತ 81 ಲಕ್ಷ ಜನ ಸಾವಿಗೀಡಾಗಿದ್ದಾರೆ ಎಂದು ವರದಿಯೊಂದು ತಿಳಿಸಿದೆ. ಇದೇ ಅವಧಿಯಲ್ಲಿ ಚೀನಾದಲ್ಲಿ 23 ಲಕ್ಷ ಜನ ಬಲಿಯಾಗಿದ್ದಾರೆ.

2021ರಲ್ಲಿ ಭಾರತದಲ್ಲಿ 5 ವರ್ಷದೊಳಗಿನ 1,69,400 ಮಕ್ಕಳ ಸಾವಿಗೆ ವಾಯು ಮಾಲಿನ್ಯವೇ ಕಾರಣ ಎಂದು ‘ಯುನಿಸೆಫ್’ ಸಹಭಾಗಿತ್ವದಲ್ಲಿ ಅಮೆರಿಕ ಮೂಲದ ಸಂಶೋಧನಾ ಸಂಸ್ಥೆ ಹೆಲ್ತ್ ಎಫೆಕ್ಟ್ಸ್ ಇನ್‌ಸ್ಟಿಟ್ಯೂಟ್ ಬುಧವಾರ ಪ್ರಕಟಿಸಿದ ವರದಿ ಹೇಳಿದೆ.

ಎಣ್ಣೆ ಪ್ರಿಯರಿಗೆ ಶುಭ ಸಮಾಚಾರ!

ಬೆಂಗಳೂರು: ರಾಜ್ಯದಲ್ಲಿ ದುಬಾರಿ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಸರಕಾರ ಇಳಿಕೆ ಮಾಡಲಿದ್ದು, ಜುಲೈ 1ರಿಂದ ಭಾರಿ ಬೆಲೆಯ ಬ್ರ್ಯಾಂಡ್‌ಗಳ ಮದ್ಯದ ದರ ಅಗ್ಗವಾಗಲಿದೆ. ನೆರೆಯ ರಾಜ್ಯಗಳ ಮದ್ಯದ ದರಗಳಿಗೆ ಸಮೀಪಿಸುವಂತೆ ದರ ಪರಿಷ್ಕರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರವರಿಯಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಈ ಘೋಷಣೆಯು ಈಗ ಜಾರಿಯಾಗಲಿದ್ದು, ಜುಲೈ 1ರಿಂದ ಪರಿಷ್ಕೃತ ದರಗಳ ಪ್ರಕಾರ ಮದ್ಯ ಮಾರಾಟವಾಗಲಿದೆ.

ಬಜೆಟ್‌ಪೂರ್ವ ಸಭೆಗೆ ಸಿಎಂ ಗೈರು

ಬೆಂಗಳೂರು: ಪ್ರಧಾನಿ ಮೋದಿ ಅವರ 3.0 ಸರಕಾರ ಪ್ರಥಮ ಬಜೆಟ್‌ಗೆ ಸಕಲ ಸಿದ್ಧತೆ ನಡೆಸಿಕೊಳ್ಳಲಾಗಿದ್ದು, ಜೂ.22ರಂದು ಬಜೆಟ್ ಪೂರ್ವ ಸಭೆ ನಡೆಸಲು ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿದ್ದರು. ಆದರೆ ಪೂರ್ವನಿರ್ಧರಿತ ಕಾರ್ಯಕ್ರಮದ ಹಿನ್ನಲೆಯಲ್ಲಿ ಗೈರಾಗುತ್ತಿರುವುದಾಗಿ ಸಿಎಂ ಪತ್ರ ಬರೆದಿದ್ದಾರೆ. ಸಂಪುಟದ ಸಹೋದ್ಯೋಗಿ ಸಚಿವ ಕೃಷ್ಣ ಭೈರೇಗೌಡ ಭಾಗಿಯಾಗಲಿದ್ದಾರೆ ಎಂದು ಸಿಎಂ ಪತ್ರದ ಮೂಲಕ ತಿಳಿಸಿದ್ದಾರೆ.

ಚನ್ನಪಟ್ಟಣದಿಂದ ಡಿಕೆಶಿ ಸ್ಪರ್ಧೆ: ಎಚ್ಚರಿಕೆಗೆ ಸಡ್ಡು

ಬೆಂಗಳೂರು: ಉಪಚುನಾವಣೆಯಲ್ಲಿ ಚನ್ನಪಟ್ಟಣದ ಜನ ನನ್ನ ಮೇಲೆ ಒಲವು ತೋರಿದರೆ, ಪಕ್ಷ ತೀರ್ಮಾನಿಸಿದರೆ ನಾನು ಸ್ಪರ್ಧೆ ಮಾಡದೇ ಬೇರೆ ವಿಧಿಯಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಚನ್ನಪಟ್ಟಣ ಈ ಹಿಂದೆ ಸಾತನೂರು ಕ್ಷೇತ್ರದ ಭಾಗವಾಗಿದ್ದು, ಈ ಭಾಗ ನನಗೆ ರಾಜಕೀಯವಾಗಿ ಜನ್ಮ ನೀಡಿದ ಸ್ಥಳ. ಅಲ್ಲಿನ ಮತದಾರರು, ನಾಯಕರೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು. ಡಿ.ಕೆ ಸುರೇಶ್ ಅವರ ಸ್ಪರ್ಧಿಸುವ ಬಗ್ಗೆ ಯಾವುದೇ ತೀರ್ಮಾನವಾಗಿಲ್ಲ ಎಂದರು.

ದಾರಿದೀಪೋಕ್ತಿ

ಯಾವುದೇ ಸಂಬಂಧವಾದರೂ ತಾಳಿಕೆ ಬರುವುದು ಹಣ, ಅಂತಸ್ತಿನಿಂದ ಅಲ್ಲ. ಪರಸ್ಪರ ನಂಬಿಕೆ ಮತ್ತು ಗೌರವದಿಂದ. ಯಾವ ಸಂಬಂಧದಲ್ಲಿ ಇವೆರಡರ ಕೊರತೆಯಾದರೂ ಆ ಸಂಬಂಧ ಹೆಚ್ಚು ದಿನ ನಿಲ್ಲುವುದಿಲ್ಲ.

ವಕ್ರತುಂಡೋಕ್ತಿ

ಹೇ ಮೂರ್ಖ ಎಂದು ಜೋರಾಗಿ ಕೂಗಿದಾಗ ಎಲ್ಲರೂ ಹಾಗೆ ಕೂಗಿದವನ ಕಡೆಯೇ ನೋಡುತ್ತಾರೆ.

ಶ್ರೀನಗರದಲ್ಲಿ ನಾಳೆ ಪ್ರಧಾನಿ ಯೋಗ



ಶ್ರೀನಗರ: ಜಮ್ಮು-ಕಾಶ್ಮೀರದ ಪ್ರಸಿದ್ಧ ದಾಲ್ ಸರೋವರದ ದಡದ ಮೇಲೆ ನಡೆಯಲಿರುವ 10ನೇ ಅಂತಾರಾಷ್ಟ್ರೀಯ ಯೋಗ ದಿನದಲ್ಲಿ ಪ್ರಧಾನಿ ಮೋದಿ ಭಾಗಿಯಾಗಲಿದ್ದಾರೆ. ಅವರ ಜತೆ ದೇಶದ ವಿವಿಧೆಡೆಯ 7,000ಕ್ಕೂ ಹೆಚ್ಚು ಜನರು ಯೋಗ ಪ್ರದರ್ಶನ ನಡೆಸಲಿದ್ದಾರೆ. ಮೋದಿ ಜಮ್ಮು-ಕಾಶ್ಮೀರ ದೊಂದಿಗೆ ವಿಶೇಷ ನಂಟು ಹೊಂದಿದ್ದಾರೆ. ಇದೇ ಕಾರಣದಿಂದ 10ನೇ ಅಂತಾರಾಷ್ಟ್ರೀಯ ಯೋಗ ದಿನ ಶ್ರೀನಗರದಲ್ಲಿ ಆಚರಿಸಲಾಗು ತ್ತಿದೆ ಎಂದು ಲೆ.ಗವರ್ನರ್ ಮನೋಜ್ ಸಿನ್ಹಾ ತಿಳಿಸಿದ್ದಾರೆ.

ಐದು ಲಕ್ಷ ಅಕ್ರಮ ವಾಸಿಗಳಿಗೆ ಪೌರತ್ವ



ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷೀಯ ಚುನಾವಣೆ ಸಮೀಪಿಸುತ್ತಿರುವ ಸಮಯದಲ್ಲಿ ಪೌರತ್ವ ವಿಚಾರದಲ್ಲಿ ಮಹತ್ವದ ನಿರ್ಧಾರ ಘೋಷಿಸಿದೆ. ಕಾನೂನು ಮಾನ್ಯತೆ ಇಲ್ಲದೇ ದೇಶದಲ್ಲಿ ನೆಲೆಸಿರುವ 5 ಲಕ್ಷ ಜನಕ್ಕೆ ಪೌರತ್ವ ನೀಡು ವುದಾಗಿ ಶ್ವೇತಭವನ ತಿಳಿಸಿದೆ. ಜೂ 17, 2024ರೊಳಗೆ 10 ವರ್ಷಗಳ ಕಾಲ ಅಮೆರಿಕದಲ್ಲಿ ನೆಲೆಸಿರುವ ಅಮೆರಿಕ ಪೌರತ್ವ ಹೊಂದಿರುವವರನ್ನು ಮದುವೆ ಯಾದ ಸಂಗಾತಿ ಈ ಯೋಜನೆಗೆ ಅರ್ಹರಾಗಿರುತ್ತಾರೆ.

ರಂಗಕರ್ಮಿ ನ.ರತ್ನ ವಿಧಿವಶ

ಮೈಸೂರು: ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಮೊದಲ ನಿರ್ದೇಶಕ ಹಾಗೂ ರಂಗಕರ್ಮಿ ನ.ರತ್ನ (89) ತೀವ್ರ ಹೃದಯಾಘಾತದಿಂದ ಬುಧವಾರ ನಿಧನರಾದರು. ಅವರಿಗೆ ಪತ್ನಿ ಲತಾ, ಪುತ್ರ, ಪುತ್ರಿ ಇದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಆರ್ಡರ್ ಮಾಡಿದ್ದು ಎಕ್ಸ್ ಬಾಕ್ಸ್ ಕಂಟ್ರೋಲರ್; ಬಂದಿದ್ದು ನಾಗರಹಾವು

ದೂರು ನೀಡಿದರೂ, ವಿಷಾದ ವ್ಯಕ್ತಪಡಿಸಿ ಕೈತೊಳೆದುಕೊಂಡ ಸಂಸ್ಥೆ

ಅಮೆಜಾನ್‌ನಲ್ಲಿ ಬಂದ ನಾಗರ!

ಬೆಂಗಳೂರು: ಹಾವುಗಳು ರಸ್ತೆಯಲ್ಲಿ ಕಾಣಿಸುವುದು, ಮರದ ಪೊಟರೆಯಲ್ಲಿ ಕಾಣಿಸುವುದು, ಮನೆಯ ಪಕ್ಕದಲ್ಲಿರುವ ಖಾಲಿ ಸೈಟಿನಲ್ಲಿ ಅಥವಾ ಚರಂಡಿಯಲ್ಲಿ ಕಾಣಿಸುವುದು ಸರ್ವೇ ಸಾಮಾನ್ಯ. ಆದರೆ ನೀವು ಆರ್ಡರ್ ಮಾಡಿರುವ ಅಮೆಜಾನ್ ಪಾರ್ಸೆಲ್‌ನಲ್ಲಿ ಬಂದರೆ ಹೇಗಿರಬೇಡ!

ಹೌದು, ಈ ಘಟನೆ ಅಸಾಧ್ಯವೆಂದೇ ಹೇಳಬಹುದು. ಆದರೆ ನಿಜವಾಗಿಯೂ ಈ ಘಟನೆ ನಡೆದಿದ್ದು, ಅಮೆಜಾನ್ ವಿರುದ್ಧ ನೆಟ್ಟಿಗರು ತಿರುಗಿಬಿದ್ದಿದ್ದಾರೆ. ಬೆಂಗಳೂರಿನ ಸರ್ಜಾಪುರದಲ್ಲಿರುವ ದಂಪತಿ, ಎಕ್ಸ್ ಬಾಕ್ಸ್ ಕಂಟ್ರೋಲ್ ಅನ್ನು ಬುಕ್ ಮಾಡಿದ್ದಾರೆ. ಅಮೆಜಾನ್ ಈ ಆರ್ಡರ್ ಪ್ಯಾಕ್ ಅನ್ನು ದಂಪತಿಗೆ ಡೆಲಿವರಿ ಮಾಡಿದೆ.

ಹೊಸ ಕಂಟ್ರೋಲರ್ ಬಂದಿರುವ ಖುಷಿ ಯಲ್ಲಿ ವಿಡಿಯೊ ಗೇಮ್ ಆಡಲು ಬಾಕ್ಸ್ ಅನ್ನು ತೆರೆಯುತ್ತಿದ್ದಂತೆ ಬಾಕ್ಸ್‌ನಿಂದ ನಾಗರ ಹಾವು ಹೊರಬಂದಿರುವುದನ್ನು ಕಂಡು ದಂಪತಿಗಳು ಶಾಕ್ ಆಗಿದ್ದಾರೆ.

→ 4

ಸ್ಪಂದಿಸದ ಅಮೆಜಾನ್

ಟೆಕ್ಕಿ ದಂಪತಿಗಳು ಅಮೆಜಾನ್‌ನಲ್ಲಿ ಬಂದಿರುವ ಈ ನಾಗರಹಾವಿನ ಪಾರ್ಸೆಲ್‌ಗೆ ಸಂಬಂಧಿಸಿ ದಂತೆ ಸಂಸ್ಥೆಗೆ ನೇರವಾಗಿ ದೂರು ಸಲ್ಲಿಸಿದ್ದಾರೆ. ಇದರೊಂದಿಗೆ, ಸಾಮಾಜಿಕ ಜಾಲತಾಣದಲ್ಲಿಯೂ ಪೋಸ್ಟ್ ಮಾಡಿದ್ದಾರೆ. ಈ ಆತಂಕಕಾರಿ ಪಾರ್ಸೆಲ್‌ಗೂ, ‘ನಮ್ಮಿಂದಾಗಿ ರುವ ಅಡಚಣೆಗೆ ವಿಷಾದ ವ್ಯಕ್ತಪಡಿಸುತ್ತೇವೆ. ತಪ್ಪು ಪಾರ್ಸೆಲ್ ಹಿಂಪಡೆದು, ಹಣ ಮರಳಿ ಸಲಾಗುವುದು’ ಎಂದಷ್ಟೇ ಪ್ರತಿಕ್ರಿಯಿಸಿದೆ.

ಎಂಡಿ ಗುಂಗೆ ಅವಧಿಯಲ್ಲಿನ ಹಗರಣಗಳ ವಿರುದ್ಧ ಲೋಕಾಯುಕ್ತಕ್ಕೆ ದೂರು, ಸರಕಾರದಿಂದಲೂ ತನಿಖೆ ಸಂಭವ

ನೀರಾವರಿ ನಿಗಮದಲ್ಲಿ ಅಕ್ರಮಗಳ ಹೊರ ಹರಿವು

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣದ ಬೆನ್ನಿಗೆಯೇ ಉತ್ತರ ಕರ್ನಾಟಕ ಭಾಗದ ಜೀವ ನದಿಗಳ ಅಭಿವೃದ್ಧಿ ಸಂಸ್ಥೆಯಾದ ಕರ್ನಾಟಕ ನೀರಾವರಿ ನಿಗಮದಲ್ಲಿ ಅಕ್ರಮ ನೇಮಕ ಮತ್ತು ಬಡ್ತಿ ನೀಡಿರುವುದು ಬೆಳಕಿಗೆ ಬಂದಿದೆ.

ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ.) ಮಲ್ಲಿಕಾರ್ಜುನ ಗುಂಗೆ ಅವರ ಅವಧಿಯಲ್ಲಿ ಸುಮಾರು 25ಕ್ಕೂ ಹೆಚ್ಚು ಜನರನ್ನು ಅರ್ಹತೆ ಇಲ್ಲದಿದ್ದರೂ ನೇಮಕ ಮಾಡಲಾಗಿದೆ. ಅನೇಕ ಸಿಬ್ಬಂದಿಗೆ ಅಕ್ರಮವಾಗಿ ಸೇವಾ ಬಡ್ತಿ ನೀಡಿ ಗಜೆಟೆಡ್ ಹುದ್ದೆಗಳನ್ನು ನೀಡಿರುವುದು ಬೆಳಕಿಗೆ ಬಂದಿದೆ. ಈ ಪೈಕಿ ಸದ್ಯ ನೇಮಕ ಮತ್ತು ಬಡ್ತಿ ಅಕ್ರಮ ಲೋಕಾಯುಕ್ತ ಮೆಟ್ಟಿಲೇರಿದೆ. ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಸದ್ಯವೇ ಈ ಅಕ್ರಮಗಳ ಬಗ್ಗೆ ತನಿಖೆಗೆ ಆದೇಶಿಸುವ ನಿರೀಕ್ಷೆ ಇದ್ದು, ಎಂ.ಡಿ. ಅವರ ಗುಂಗೆ ಕಾಲದಲ್ಲಿ ನಡೆದಿರುವ ಕಾಮಗಾರಿಗಳನ್ನೂ ಪರಿಶೀಲನೆಗೊಳಪಡಿಸುವ ನಿರೀಕ್ಷೆ ಇದೆ.

ಮಲ್ಲಿಕಾರ್ಜುನ್ ಗುಂಗೆ ಸತತ 10 ವರ್ಷಗಳ ಕಾಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಗಿದ್ದರು. ಬಸವರಾಜ ಬೊಮ್ಮಾಯಿ ಅವರು ಜಲಸಂಪನ್ಮೂಲ ಸಚಿವರಾದಾಗಿನಿಂದಲೂ ಗುಂಗೆ ಅವರೇ ಎಂ.ಡಿ.ಯಾಗಿದ್ದರು. ಈ ಅವಧಿಯಲ್ಲಿ ಅಕ್ರಮಗಳು ನಡೆದ ಬಗ್ಗೆ ಸರಕಾರಕ್ಕೆ ದೂರುಗಳು ಬಂದಿದ್ದು ಈ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಡಿ ಹುದ್ದೆಗಳಿಗೂ ಬಡ್ತಿ ಭಾಗ್ಯ !

ಅಕ್ರಮವಾಗಿ ನೇಮಕಗೊಂಡಿದ್ದ 25 ಸಿಬ್ಬಂದಿಯಲ್ಲಿ ಸುಮಾರು 6 ಮಂದಿಗೆ ಗೆಜೆಟೆಡ್ ಪರ್ಸನಲ್ ಅಸಿಸ್ಟೆಂಟ್ (ಜಿಪಿಎ) ಹುದ್ದೆಗಳನ್ನು ನೀಡಲಾಗಿದೆ. ಅಂದರೆ ಇವು ಸಚಿವಾಲಯದಲ್ಲಿ ಕಾರ್ಯದರ್ಶಿಗಳಾದ ಐಎಎಸ್ ಅಧಿಕಾರಿಗಳ ಆಪ್ತ ಕಚೇರಿಯ ಹಿರಿಯ ಹಿರಿಯ ಸಿಬ್ಬಂದಿ ಹುದ್ದೆಗಳು. ಈ ಹುದ್ದೆಗಳು ರಾಜ್ಯದ ಯಾವುದೇ ನಿಗಮಗಳಲ್ಲೂ ಇರುವುದಿಲ್ಲ ಎನ್ನಲಾಗಿದೆ. ಇಂಥ ಉನ್ನತ ಹುದ್ದೆಗಳನ್ನು ಸೃಷ್ಟಿಸಿ ಅಲ್ಲಿಗೆ ಬಡ್ತಿ ನೀಡಿರುವುದು ಈಗ ಬಹಿರಂಗವಾಗಿದೆ.

ಡಿ ದರ್ಜೆ ಹುದ್ದೆಗಳಿಗೆ ಭತ್ಯೆ ಹೆಚ್ಚಾಗುತ್ತವೆಯೇ ವಿನಾ ಬಡ್ತಿ ನೀಡಲಾಗುವುದಿಲ್ಲ. ಆದರೆ ಇಲ್ಲಿ ಕಿರಿಯ ಸಹಾಯಕರನ್ನು ಹಿರಿಯ ಸಹಾಯಕರನ್ನಾಗಿ, ಚಾಲಕರನ್ನು ಹಿರಿಯ ಚಾಲಕ ಎಂದು ಅನೇಕ ಸಿಬ್ಬಂದಿ ಬಡ್ತಿ ನೀಡಲಾಗಿದೆ. ಕೇವಲ ಎಸ್‌ಎಸ್‌ಎಲ್‌ಸಿ ಓದಿರುವ ಅನೇಕ ಸಿಬ್ಬಂದಿಗೆ ಪದವಿಗೆ ಸಮಾನಾದ ಅಥವಾ ಅದಕ್ಕೂ ಮೀರಿದ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ ಎಂದು ಲೋಕಾಯುಕ್ತದಲ್ಲಿ ಜೂನ್ 18ರಂದು ದೂರು ದಾಖಲಿಸಿರುವ ಆರ್‌ಟಿಐ ಕಾರ್ಯಕರ್ತ ದಿಲ್ಲಿ ಬಾಬು ತಿಳಿಸಿದ್ದಾರೆ.

ಏನಿದು ನೇಮಕ ಅಕ್ರಮ?

ಕರ್ನಾಟಕ ನೀರಾವರಿ ನಿಗಮದಲ್ಲಿ 2003ರ ಸಮಯದಲ್ಲಿ ಸಾಕಷ್ಟು ಹುದ್ದೆಗಳು ಖಾಲಿಯಾಗಿತ್ತು. ಈ ವೇಳೆ ಕಡಿಮೆ ವಿದ್ಯಾರ್ಹತೆಯ ಅನೇಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ತಾತ್ಕಾಲಿಕ ಎಂದು ತೋರಿಸಲಾಗಿತ್ತು. ಮಲ್ಲಿಕಾರ್ಜುನ ಗುಂಗೆ ಅವರು ಎಂ.ಡಿ.ಯಾಗುತ್ತಿದ್ದಂತೆ, ಸುಮಾರು 25ಕ್ಕೂ ಹೆಚ್ಚು ಸಿಬ್ಬಂದಿಯನ್ನು ಹೊರಗುತ್ತಿಗೆಯಡಿ ನೇಮಿಸಿಕೊಳ್ಳಲಾಗಿತ್ತು. ಈ ರೀತಿಯ ನೇಮಕಕ್ಕೆ ಕನಿಷ್ಠ ವಿದ್ಯಾರ್ಹತೆ ಪದವಿ ಇರಬೇಕಿತ್ತು. ಡಿ. ದರ್ಜೆ ಸಿಬ್ಬಂದಿಗೆ ಕನಿಷ್ಠ ಪಿಯುಸಿ ವಿದ್ಯಾರ್ಹತೆಯಾದರೂ ಬೇಕಿತ್ತು. ಆದರೆ ಅದಕ್ಕಿಂತಲೂ ಕಡಿಮೆ ವಿದ್ಯಾರ್ಹತೆಯ ಸಿಬ್ಬಂದಿಗೆ ಪದವಿಗೆ ಸಮಾನಾದ ಕಿರಿಯ ಸಹಾಯಕ, ಟೈಪಿಸ್ಟ್, ಸ್ಟೆನೋ ಸೇರಿದಂತೆ ಅನೇಕ ಹುದ್ದೆಗಳನ್ನು ಇದಕ್ಕೆ ತಕ್ಕಂತೆ ಸಂಬಳ ನಿಗದಿಪಡಿಸಲಾಗಿತ್ತು ಎಂದು ದೂರಲಾಗಿದೆ. 2007ರ ನಂತರ ಈ ಎಲ್ಲಾ ಅನರ್ಹ ಸಿಬ್ಬಂದಿಗೆ ಏಕಾಏಕಿ ಬಡ್ತಿ ನೀಡಲಾಯಿತು. ಇದಕ್ಕಾಗಿ ನಿಗಮದ ವೃಂದ ಮತ್ತು ನೇಮಕ ನಿಯಮಗಳನ್ನೇ ಬದಲಿಸಲಾಗಿತ್ತು ಎಂದು ಆರೋಪಗಳು ಕೇಳಿ ಬಂದಿವೆ. ಆರ್‌ಟಿಐ ಅರ್ಜಿ ಮೂಲಕ ನೇಮಕಗೊಂಡ ಸಿಬ್ಬಂದಿ ಮತ್ತು ಬಡ್ತಿ ಪಡೆದ ಸಿಬ್ಬಂದಿಗಳ ಶೈಕ್ಷಣಿಕ ದಾಖಲೆಗಳ ವಿವರ ಕೇಳಿದಾಗ ನಿಗಮದ ಅಧಿಕಾರಿಗಳು ನಿರಾಕರಿಸಿದ್ದರು.

ದರ್ಶನ್ ಆ್ಯಂಡ್ ಗ್ಯಾಂಗ್‌ನ ಮೃಗೀಯ ವರ್ತನೆ ಸಾಬೀತು | ತೀವ್ರ ರಕ್ತಸ್ರಾವವಾಗಿ ಸಾವು

ರೇಣುಕಾಸ್ವಾಮಿಗೆ ಕ್ರೌರ್ಯ ದರ್ಶನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರೇಣುಕಾಸ್ವಾಮಿಗೆ ಚಿತ್ರಹಿಂಸೆ ನೀಡಿ ಕೊಲೆ ಮಾಡುವ ಮೂಲಕ ನರಕದರ್ಶನ ತೋರಿದ ದರ್ಶನ್ ಆಂಡ್ ಗ್ಯಾಂಗ್‌ನ ಮೃಗೀಯ ವರ್ತನೆ ಸಾಬೀತಾಗಿದೆ.

ಹತ್ಯೆಯ ಆರೋಪ ಹೊತ್ತಿರುವ ಚಿತ್ರನಟ ದರ್ಶನ್, ಪವಿತ್ರಾ ಗೌಡ ಹಾಗೂ ಗ್ಯಾಂಗ್ ಈಗಾಗಲೇ ಪೊಲೀಸ್ ಕಸ್ಟಡಿಯಲ್ಲಿದೆ. ತನಿಖೆ ನಡೆಸುತ್ತಿರುವ ಪೊಲೀಸರು, ರೇಣುಕಾಸ್ವಾಮಿ ಕೊಲೆ ಯಾರು ಮಾಡಿದರು, ಯಾಕೆ ಮಾಡಿದರು, ಹೇಗೆ ಮಾಡಿದರು ಎನ್ನುವ ಬಗ್ಗೆ ಇಂಚಿಂಚೂ ಶೋಧಿಸುತ್ತಿದ್ದಾರೆ. ಈ ನಡುವೆ ರೇಣುಕಾಸ್ವಾಮಿಯ ಭೀಕರವಾಗಿ ಕೊಲೆ ಆಗಿರುವ ಬಗ್ಗೆ ಫೋಟೊಗಳು ಸಾಕ್ಷಿ ನುಡಿಯುತ್ತಿವೆ.

ಬೆನ್ನ ಮೇಲೆ ಬಾಸುಂಡೆ ಬರೋ ರೀತಿಯಲ್ಲಿ ರೇಣುಕಾಸ್ವಾಮಿಯನ್ನು ದರ್ಶನ್ ಗ್ಯಾಂಗ್ ಥಳಿಸಿದೆ. ಕಿವಿ ಕಟ್ ಆಗಿದ್ದು, ಕೈ ಮೇಲೆ ಕರೆಂಟ್ ಶಾಕ್ ಕೊಟ್ಟು ಬಹಳ ಕ್ರೂರವಾಗಿ ಯುವಕನ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಪೊಲೀಸರ ಪರಿಶೀಲನೆ ಮಾಡುವ ವೇಳೆ ಬೆಳಕಿಗೆ ಬಂದಿವೆ. ದರ್ಶನ್ ಗ್ಯಾಂಗ್ ರೇಣುಕಾಸ್ವಾಮಿ ಮೇಲೆ ರಾಕ್ಷಸರಂತೆ ದುಷ್ಕೃತ್ಯ

ಎಸಗಿದ ಫೋಟೊಗಳು ಪರಿಶೀಲನೆ ವೇಳೆ ಲಭಿಸಿವೆ.

ಶಾಕ್ ಹಾಗೂ ಬಲವಾದ ಹೊಡೆತದಿಂದ ರಕ್ತಸ್ರಾವವಾಗಿ ಸಾವು: ಭೀಕರ ಹಲ್ಲೆಯ ಪರಿಣಾಮ, ರೇಣುಕಾಸ್ವಾಮಿಯ ಸಾವು ಸಂಭವಿಸಿದೆ ಎಂಬ ಅಂಶ ಮರಣೋತ್ತರ ಪರೀಕ್ಷಾ ವರದಿಯಲ್ಲಿ ಬಯಲಾಗಿದೆ. ವರದಿಯಲ್ಲಿ ಅಂದರೆ ಶಾಕ್ ಹಾಗೂ ಬಲವಾದ ಹೊಡೆತಗಳ ಕಾರಣದಿಂದ ರಕ್ತಸ್ರಾವವಾಗಿ ಸಾವು ಸಂಭವಿಸಿದೆ ಎಂಬ ವಿಚಾರವನ್ನು ವರದಿಯನ್ನ ವೈದ್ಯರು ನೀಡಿದ್ದಾರೆ. ಮೃತ ದೇಹದ ಮರಣೋತ್ತರ ಪರೀಕ್ಷೆಯ ವರದಿಯನ್ನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೂ ಕಳುಹಿಸಿರುವ ಪೊಲೀಸರು ವರದಿಗಾಗಿ ಕಾಯುತ್ತಿದ್ದಾರೆ.

ದರ್ಶನ್ ಆ್ಯಂಡ್ ಗ್ಯಾಂಗ್ ಪರಪ್ಪನ ಅಗ್ರಹಾರಕ್ಕೆ?

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಗ್ಯಾಂಗ್ ಕಳೆದ 9 ದಿನಗಳಿಂದ ಪೊಲೀಸ್ ಠಾಣೆಯಲ್ಲಿರುವ ಆರೋಪಿಗಳು ತೀವ್ರ ವಿಚಾರಣೆಯನ್ನು ಎದುರಿಸಿದ್ದಾರೆ. ಗುರುವಾರ ನಟ ದರ್ಶನ್ ಗ್ಯಾಂಗ್ ಪರಪ್ಪನ ಅಗ್ರಹಾರ ಜೈಲು ಪಾಲಾಗುವ ಸಾಧ್ಯತೆ ಹೆಚ್ಚಾಗಿದೆ. ದರ್ಶನ್ ಗ್ಯಾಂಗ್ ಪೊಲೀಸ್ ಕಸ್ಟಡಿ ಬುಧವಾರಕ್ಕೆ ಅಂತ್ಯವಾಗುವ ಹಿನ್ನೆಲೆಯಲ್ಲಿ ಪೊಲೀಸರು ಕೊಲೆ ಪ್ರಕರಣದ 17 ಆರೋಪಿಗಳಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ಮಾಡಲಾಗಿದೆ. ಆರೋಪಿಗಳನ್ನು ಗುರುವಾರ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುತ್ತದೆ.
ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪೊಲೀಸರು 17 ಆರೋಪಿಗಳಿಗೆ ವೈದ್ಯಕೀಯ ಪರೀಕ್ಷೆ ಜತೆಗೆ ಪವಿತ್ರಾ ಗೌಡ ಸೇರಿ 9 ಆರೋಪಿಗಳಿಗೆ ಡಿಎನ್ಎ ಪರೀಕ್ಷೆ ಕೂಡ ಮಾಡಲಾಗಿದೆ. ಆರೋಪಿಗಳ ರಕ್ತ, ಕೂದಲಿನ ಮಾದರಿಯನ್ನು ಡಿಎನ್ಎ ಪರೀಕ್ಷೆಗಾಗಿ ಸಂಗ್ರಹ ಮಾಡಿದ್ದಾರೆ. ರೇಣುಕಸ್ವಾಮಿ ಕೊಲೆ ನಡೆದ ಪಟ್ಟಣಗೆರೆ ಶೆಡ್‌ನಲ್ಲಿ ಪೊಲೀಸರಿಗೆ ಕೂದಲು, ರಕ್ತದ ಮಾದರಿ ಸಿಕ್ಕಿದೆ. ಆರೋಪಿಗಳ ಡಿಎನ್ಎ ಪರೀಕ್ಷೆಯಲ್ಲಿ ಈ ಮಾದರಿಯನ್ನು ಹೋಲಿಕೆ ಮಾಡುವ ಪ್ರಕ್ರಿಯೆ ನಡೆಯಿತು.



ಪಟ್ಟಣಗೆರೆ ಶೆಡ್ ಸೆಕ್ಯುರಿಟಿ ಗಾರ್ಡ್ ಹೇಳಿಕೆ ದಾಖಲು

ರೇಣುಕಾಸ್ವಾಮಿಯ ಹತ್ಯೆ ನಡೆದ ಪಟ್ಟಣಗೆರೆಯ ಶೆಡ್ ಕಾವಲು ಕಾಯುವ ಕೆಲಸ ಮಾಡಿಕೊಂಡಿದ್ದ ಸೆಕ್ಯುರಿಟಿ ಗಾರ್ಡ್ ವಿಚಾರಣೆ ನಡೆಸಿದ್ದ ಪೊಲೀಸರು ಸಿಆರ್‌ಪಿಸಿ - 164ರ ಅಡಿ ನ್ಯಾಯಾಲಯದಲ್ಲಿ ಆತನ ಹೇಳಿಕೆ ದಾಖಲಿಸಿದ್ದಾರೆ. ಹಿಂದಿ ಭಾಷೆ ಮಾತಾನಾಡುತ್ತಿದ್ದ ಸೆಕ್ಯುರಿಟಿ ಗಾರ್ಡ್ ಹೇಳಿಕೆಯನ್ನ ಚಾಮರಾಜಪೇಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಸಹಾಯದಿಂದ ಭಾಷಾಂತರಿಸಲಾಗಿದ್ದು, ನ್ಯಾಯಾಧೀಶರ ಮುಂದೆ ದಾಖಲಿಸಲಾಗಿದೆ ಎಂಬ ಅಂಶವನ್ನ ಪೊಲೀಸರು ಸಲ್ಲಿಸಿರುವ ರಿಮ್ಯಾಂಡ್ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಮೊಬೈಲ್‌ಗೆ 11 ದಿನದಿಂದ ಹುಡುಕಾಟ

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳು ಎಸೆದಿರುವ ಮೊಬೈಲ್ ಫೋನ್‌ಗಳ ಪತ್ತೆಗಾಗಿ ರಾಜ್ಯ ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಯ ನೆರವು ಪಡೆಯಲು ಪೊಲೀಸರು ಮುಂದಾಗಿದ್ದಾರೆ. ಹತ್ಯೆಯಾದ ರೇಣುಕಾಸ್ವಾಮಿ ಹಾಗೂ ಆರೋಪಿ ರಾಘವೇಂದ್ರನ ಮೊಬೈಲ್ ಫೋನ್‌ಗಳಿಗಾಗಿ ಕಳೆದ 11 ದಿನಗಳಿಂದಲೂ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಇದೀಗ ಅವುಗಳ ಪತ್ತೆಗಾಗಿ ಅಗ್ನಿಶಾಮಕ ದಳದ ಸಹಾಯ ಪಡೆಯಲಿದ್ದಾರೆ. ಪಟ್ಟಣಗೆರೆಯ ಶೆಡ್‌ನಲ್ಲಿ ರೇಣುಕಾಸ್ವಾಮಿಯ ಮೇಲೆ ಹಲ್ಲೆ ಮಾಡುವಾಗ ಎ5 ಆರೋಪಿ ರಾಘವೇಂದ್ರನ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಲಾಗಿದೆ. ಅಲ್ಲದೇ, ಆರೋಪಿಗಳ ಸಿಟ್ಟಿಗೆ ಕಾರಣವಾದ ಮೆಸೇಜ್ ಸೇರಿದಂತೆ ಇತರ ಅಂಶಗಳು ರೇಣುಕಸ್ವಾಮಿಯ ಮೊಬೈಲ್ ಫೋನ್‌ನಲ್ಲಿವೆ. ಆದರೆ, ಜೂನ್ 9ರ ಮುಂಜಾನೆ ರೇಣುಕಾಸ್ವಾಮಿ ಹಾಗೂ ರಾಘವೇಂದ್ರನ ಮೊಬೈಲ್ ಪಡೆದುಕೊಂಡಿದ್ದ ಆರೋಪಿ ಪ್ರದೋಶ್, ಅವುಗಳನ್ನು ಸುಮನಹಳ್ಳಿಯ ರಾಜಕಾಲುವೆಗೆ ಎಸೆದಿರುವುದಾಗಿ ಹೇಳಿಕೆ ನೀಡಿದ್ದಾನೆ. ಅದರ ಅನ್ವಯ, ರಾಜಕಾಲುವೆಯ ಬಳಿ ಮಹಜರು ನಡೆಸಿದ್ದ ಪೊಲಿಸರು, ಬಿಬಿಎಂಪಿ ಪೌರ ಕಾರ್ಮಿಕರ ಸಹಾಯದಿಂದ ರಾಜಕಾಲುವೆಯಲ್ಲಿ ಮೊಬೈಲ್ ಹುಡುಕಾಡಿದ್ದಾರೆ. ಮೊಬೈಲ್ ಪತ್ತೆ ಹಚ್ಚಿಕೊಡುವಂತೆ ರಾಜಾಜಿನಗರ ಅಗ್ನಿಶಾಮಕ ಠಾಣೆ ಅಧಿಕಾರಿಗಳಿಗೆ ಪೊಲೀಸರು ಮನವಿ ಸಲ್ಲಿಸಿದ್ದಾರೆ ಎಂದು ತಿಳಿದು ಬಂದಿದೆ.

ಒಂದು ಕೊಲೆಗೆ 118 ಸಾಕ್ಷಿಗಳು ಪತ್ತೆ

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಹಜರು ಮಾಡಿರುವ ಪೊಲೀಸರು ಈವರೆಗೆ ಪ್ರತಿಯೊಂದು ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಈವರೆಗೆ ಪೊಲೀಸರು ಸುಮಾರು 118 ವಸ್ತುಗಳನ್ನು ಜಪ್ತಿ ಮಾಡಿರುವುದು ಅಚ್ಚರಿಗೆ ಕಾರಣವಾಗಿದೆ. ಜಪ್ತಿ ಆದ ವಸ್ತುಗಳ ಬಗ್ಗೆ ರಿಮ್ಯಾಂಡ್ ಕಾಪಿಯಲ್ಲಿ ಪೊಲೀಸರು ಉಲ್ಲೇಖ ಮಾಡಿದ್ದಾರೆ. ನಟ ದರ್ಶನ್ ಅಂಡ್ ಗ್ಯಾಂಗ್‌ನಿಂದ ಕೊಲೆಯಾದ ಪ್ರಕರಣದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಂಡು ಬಂದ ವಸ್ತುಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ರೇಣುಕಸ್ವಾಮಿ ಕೊಲೆ ಮಾಡುವಾಗ ಬಳಸಿದ ವಸ್ತುಗಳು, ಆರೋಪಿಗಳು ಧರಿಸಿದ್ದ ಬಟ್ಟೆ, ಶೂ, ಚಪ್ಪಲಿ, ವಾಹನಗಳನ್ನು ಜಪ್ತಿ ಮಾಡಲಾಗಿದೆ.
ಈವರೆಗೆ ಜಪ್ತಿ ಮಾಡಿದ ಮಾಲುಗಳ ಸಂಖ್ಯೆ 118ಕ್ಕೆ ಏರಿಕೆಯಾಗಿದೆ. ಈ ವಸ್ತುಗಳೇ ಪ್ರಮುಖವಾದ ಸಾಕ್ಷ್ಯಗಳಾಗಿದ್ದು, ರಿಮ್ಯಾಂಡ್ ಕಾಪಿಯಲ್ಲಿ ಸಂಗ್ರಹಿಸಿದ ಸಾಕ್ಷ್ಯಗಳ ವಿವರವನ್ನು ಪೊಲೀಸರು ದಾಖಲಿಸಿದ್ದಾರೆ. ಈ ಎಲ್ಲಾ ಮಾಹಿತಿಯನ್ನು ಪೊಲೀಸರು ಕಳೆದ ಜೂನ್ 15ರಂದೇ ಆರೋಪಿಗಳನ್ನು ಹಾಜರುಪಡಿಸಿದಾಗ ಕೋರ್ಟ್‌ಗೆ ನೀಡಿದ್ದಾರೆ. ಇದರಲ್ಲಿ ಆರೋಪಿಗಳು ಕೃತ್ಯಕ್ಕೆ ಬಳಸಿದ ವಸ್ತುಗಳು, ಕಾರುಗಳು, ಆರೋಪಿಗಳು ಧರಿಸಿದ ಬಟ್ಟೆಗಳು, ಸಿಸಿಟಿವಿ ದೃಶ್ಯಾವಳಿಗಳೂ ಸೇರಿದೆ. ಈ ಎಲ್ಲಾ ಸಾಕ್ಷಿಗಳಿಂದ ಆರೋಪಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗಲೇಬೇಕು ಎಂದು ಖಾಕಿ ಪಡೆ ಪಣ ತೊಟ್ಟಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ: ವಿಚಾರಣೆಗೆ ದರ್ಶನ್ ಪತ್ನಿ ಹಾಜರು

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರು ಬುಧವಾರ ಅನ್ನಪೂರ್ಣೇಶ್ವರಿ ಠಾಣೆಗೆ ಹಾಜರಾದರು.

ಪ್ರಕರಣದ ಬಗ್ಗೆ ತನಿಖೆ ಹಾಗೂ ಮನೆಯಲ್ಲಿ ಸಿಕ್ಕ ಶೂ ಬಗ್ಗೆ ಮಾಹಿತಿ ಕೊಡಲು ಅನ್ನಪೂರ್ಣೇಶ್ವರಿ ಠಾಣಾ ಪೊಲೀಸರು ವಿಜಯಲಕ್ಷ್ಮಿ ಅವರಿಗೆ ನೋಟಿಸ್ ನೀಡಿದ್ದರು. ಬುಧವಾರ ಬೆಳಗ್ಗೆ ವಿಜಯಲಕ್ಷ್ಮಿಗೆ ಪೊಲೀಸರು ನೀಡಿ ತನಿಖೆಗೆ ಬರುವಂತೆ ಸೂಚಿಸಿದ್ದರು. ಪೊಲೀಸರು ನೋಟಿಸ್ ಕೊಟ್ಟ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಗೆ ತನಿಖೆಗಾಗಿ ವಿಜಯಲಕ್ಷ್ಮಿ ಹಾಜರಾಗಿ ವಿಚಾರಣೆ ಎದುರಿಸಿದ್ದಾರೆ. ಮನೆಯಲ್ಲಿ ದರ್ಶನ್ ಶೂ ಸಿಕ್ಕ ಬಗ್ಗೆ ವಿಜಯಲಕ್ಷ್ಮಿ ಹೇಳಿಕೆ ದಾಖಲಿಸಿ ಅನ್ನಪೂರ್ಣೇಶ್ವರಿ ನಗರ ಠಾಣೆಯಿಂದ ಹೊರಟಿದ್ದಾರೆ. ಸುಮಾರು ಐದೂವರೆ ಗಂಟೆಗಳ ಕಾಲ ವಿಜಯಲಕ್ಷ್ಮಿ ಅವರನ್ನು ವಿಚಾರಣೆ ನಡೆಸಿದ ಪೊಲೀಸರು ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ. ದರ್ಶನ್ ಶೂ ವಿಜಯಲಕ್ಷ್ಮೀ ಮನೆಯಲ್ಲಿ ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸರು ಆ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ.

ಎಸ್‌ಪಿಪಿ ಬದಲಾವಣೆ ಬಗ್ಗೆ ಯಾರ ಒತ್ತಡವಿಲ್ಲ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸರಕಾರಿ ಅಭಿಯೋಜಕರ ಬದಲಾವಣೆಯ ಬಗ್ಗೆ ರಾಜಕೀಯ ಒತ್ತಡ ಕೇಳಿ ಬರುತ್ತಿದೆ ಎಂಬ ಮಾತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದು, ತಮ್ಮ ಮೇಲೆ ಯಾವುದೇ ಒತ್ತಡವಿಲ್ಲ ಅಲ್ಲದೇ ಒತ್ತಡ ಹಾಕಿದರೆ ಕೇಳುವುದೂ ಇಲ್ಲ ಎಂದು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ಅಭಿಯೋಜಕರನ್ನು ಬದಲಾಯಿಸಲು ಒತ್ತಡ ಹಾಕಿರುವ ಬಗ್ಗೆ ಮಾಧ್ಯಮಗಳಲ್ಲಿ ಈ ಬಗ್ಗೆ ಬಿತ್ತರವಾಗುತ್ತಿರುವುದು ಸುಳ್ಳು ಹಾಗೂ ಸತ್ಯಕ್ಕೆ ದೂರವಾದುದು. ಕಾನೂನು ಏನು ಹೇಳುತ್ತದೆಯೋ ಅದನ್ನೇ ಮಾಡುತ್ತೇವೆ. ಪೊಲೀಸ್‌ನವರಿಗೆ ಪ್ರಕರಣದಲ್ಲಿ ಎಲ್ಲಾ ಸ್ವಾತಂತ್ರ್ಯವನ್ನೂ ನೀಡಿದ್ದು, ಕಾನೂನಿನ ಪ್ರಕಾರ ತನಿಖೆ ಮಾಡಲು ಸೂಚಿಸಲಾಗಿದೆ ಎಂದರು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಪ್ರತಿಕ್ರಿಯಿಸಿ, ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯಕ್ಕೆ ಎಸ್‌ಪಿಪಿ ಬದಲಾವಣೆ ಮಾಡುವ ಪ್ರಸ್ತಾಪವಿಲ್ಲ. ಒಂದು ವೇಳೆ ಎಸ್‌ಪಿಪಿಯನ್ನು ಬದಲಾವಣೆ ಮಾಡಬೇಕಾದರೆ ಕಾನೂನು ಪ್ರಕಾರವೇ ಮಾಡಲಾಗುತ್ತದೆ. ಅದರಲ್ಲಿ ತಪ್ಪೇನಿಲ್ಲ. ಯಾರೇ ಆದರೀ ಕಾನೂನು ಪ್ರಕಾರವಾಗಿ ನಡೆದುಕೊಳ್ಳಬೇಕು ಎಂದರು.

ಬದಲಾವಣೆ ಮಾಡಬೇಕಾದರೆ ಅದಕ್ಕೆನಾದರೂ ಕಾರಣವಿರುತ್ತದೆ. ನಮಗೂ ಜವಾಬ್ದಾರಿ ಇದೆ. ಕಾನೂನು ಸಲಹೆ ಪಡೆದೇ ತೀರ್ಮಾನ ಕೈಗೊಳ್ಳಲಾಗುವುದು, ಈ ಕೊಲೆ ಕೇಸ್ ಸಡಿಲ ಮಾಡುವ ಉದ್ದೇಶ ಸರಕಾರಕ್ಕಿಲ್ಲ. ಯಾರ ಪ್ರಭಾವಕ್ಕೊಳಗಾಗದೆ ತನಿಖೆ ನಡೆಯುತ್ತಿದೆ ಎಂದು ಹೇಳಿದರು.

ನಟ ದರ್ಶನ್ ಅವರ ಫಾರ್ಮ್ ಹೌಸ್ ಮ್ಯಾನೇಜರ್ ನಾಪತ್ತೆಯಾಗಿರುವ ವಿಚಾರ ಗೊತ್ತಿಲ್ಲ. ಹೊಸದಾಗಿ ಈ ವಿಚಾರ ಪ್ರಸ್ತಾಪವಾಗಿದೆ ಇದರ ಬಗ್ಗೆಯೂ ತನಿಖೆ ಮಾಡಲು ಅಧಿಕಾರಿಗಳು ಅನುಮತಿ ಕೋರಿದರೆ ಸಮ್ಮತಿಸಲಿದೆ. ಮತ್ತೊಬ್ಬ ಮ್ಯಾನೇಜರ್ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರಕ್ಕೂ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೂ ಸಂಬಂಧ ಇದೆಯೇ ಎಂಬುದರ ಬಗ್ಗೆ ವಿಚಾರಣೆ ಮಾಡುತ್ತಾರೆ.

-ಪರಮೇಶ್ವರ್, ಗೃಹ ಸಚಿವ



ವಿರಾಮ
ಪ್ರತಿ ಭಾನುವಾರ

PUBLIC NOTICE

Public are informed that, my client Prakasha S/o. Puttalingaiah, had lost the Original document of 1). Sale Deed dated 02/08/2006 executed by R. Yathish Kumar in favour of E. Ramanna vide regd. as doc. No. 15636/2006-07. If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims. **SCHEDULE** - All that piece & parcel of property bearing No. 134, Katha No. 44, Challaghatta Village, Romohalli Grama Panchayath, Kengeri Hobli, Bangalore South Taluk, measuring East to West 15 feet North to South 40 feet and bounded on: East by : Remaining portion of the same proeprty, West by : Site No. 135, North by : Road, South by : Site No. 115.

KSR Associates
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

PUBLIC NOTICE

Public are hereby informed that my client **SRI. KOTHA SURESH** S/o KOTHA NAGARAJA intending to purchase the schedule property from **SRI. JANARDAN .P.C** S/o. SRI. CHANDRA REDDY. Hence if any person/persons has/have any right, interest, title or claim with respect to schedule property may come and contact me in my office along with documents if any, ***within 7 days*** from the date of this public notice, failing to which my client will proceed with the sale transaction thinking that there is no claim against the schedule property.

SCHEDULE PROPERTY

All that piece and parcel of residential Site bearing **No. 5** foremed in property bearing No.101/6, BBMP Katha Sl.No. 14844, Situated at **Medahalli Village, Bidarahalli Hobli, Bengaluru East Taluk,** Comes under the Jurisdiction of Bruhath Bangalore Mahanagara Palike (BBMP), Bengaluru measuring **East to west 40 feet** and **North** to **South (34+25)/2 feet** in all totally measures **1180 square feet** and bounded on
East : Survey No. 106,
West : Ste No. 6, belongs to Arjun and Private Property,
North : Road,
South : Survey No.106,

Sd/-
KRISHNA. S, Advocate,
No. 34/35, 5th Main, Saw Mill Road, Vinayaka Layout, Bangalore-49
Mob: 9742507509
Bengaluru Date: 19/06/2024

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್. ನಂ. 68/2024

ಅರ್ಜಿದಾರರು: ಶ್ರೀ. ವೆಂಕಟೇಶ ಬಿನ್ ಲೇಟ್ ವೆಂಕಟಪ್ಪ ವಯಸ್ಸು 65 ವರ್ಷ ವಾಸ: ದೇವರಕಗ್ಗಲಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕಮಕಪುರ ತಾಲ್ಲೂಕು ಹಾಲಿ ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು ಬನ್ನಿಕುಪ್ಪೆ ವೃತ್ತ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ ಅರ್ಜಿದಾರರ ತಂದೆಯವರಾದ ವೆಂಕಟಪ್ಪ ಬಿನ್ ಲೇಟ್ ವೆಂಕಟಗಿರಿಗೌಡರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ದೇವರಕಗ್ಗಲಹಳ್ಳಿ ಗ್ರಾಮದಲ್ಲಿ ದಿನಾಂಕ: 13-11-2004 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 23.07.2024ರ ಬೆಳಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ: 19/06/2024 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ಬಿ.ರಾಜು
ವಕೀಲರು, ಕನಕಪುರ
ಸ್ಥಳ: ಕನಕಪುರ
ದಿನಾಂಕ: 19-06-2024

IN THE COURT OF THE ADDITIONAL PRINCIPAL CITY CIVIL AND SESSIONS COURT AT BANGALORE (CCH-56)
O.S. No. 7023/2015

BETWEEN : 1. Praveen, S/o. Narayan Reddy, Aged about 40 years,
2. Rajesh, S/o. Narayan Reddy, Aged about 37 years,
3. Kumari. Neema D/o. Narayan Reddy, Aged about 34 years, All are residing at No. 235/23, 2nd Main, 7th Block, Jayanagar, Bangalore - 560 082.
...**PLAINTIFFS**
AND : Sri. Narayan Reddy and Ors.
...**DEFENDANTS**

SUIT SUMMONS TO DEFENDANT No. 2 AND 3

Defendant No. 2 : Major Singh, S/o. Puran Singh, Aged about 75 years, Residing at Rania District, Moga - Punjab.
Defendant No. 3 : Bhadrinath .R, S/o. Rama Rao, Aged about 62 years, Residing at No. 3P, West Wing Fern Hill Gardens, H.S.R. Layout, Bangalore - 560 034.

WHEREAS, the plaintiffs, above named, have filed the above suit under 7 Rule 1 & 2 of the Code of the Civil Procedure for the relief of partition and separate possession. The court has posted case **on 26.07.2024** at CCH - 56 for appearance you personally on the day. Hence, you are summoned to appear before the court on the date. Otherwise the Hon'ble Court will be deciding the matter in your absence by placing ex-parte.

SCHEDULE

1. All that House Property bearing old No. 235, New No. 23 and present No. 235/23, situated at 2nd Main, 7th Block, Ward No. 59 Jayanagar, Bangalore City measuring 48 x 37.6 feet and bounding on the East by property bearing No. 236, West by Road, North by private property and South property bearing No. 234.
2. All that house property bearing old No. 3/3 (3) situated at 2nd Main Yediyur 7th Block Bangalore City measuring 20 feet x 20 feet bounded on East by Road, West by property No. 2, North property bearing No. 339 and South Road.
3. All that land measuring 20 guntas bearing Survey Nos. 17/1, 17/2, 17/3 in all measuring one acre and 20 guntas situated at Kaikondra Halli, Vartur Hobli, Bangalore South Taluk.
4. All that agricultural land measuring 8 guntas out of total extant of 24 guntas bearing Survey No. 14/1 and 15/2 of Kothanur Village, Uttarahalli Hobli, Bangalore South Taluk.
5. Cash of Rs. 3,00,000/-
6. Gold Ornaments weighing 3,050 grams and silver articles weighing 3 and half kgs.

Given under my hand and seal of the court on 14th day of June 2024 at Bangalore.

By Order of the Court, Senior Sheristedar, City Civil Court, Bengaluru.
Advocate for Plaintiffs :
SIDDARTH SUMAN, Advocate
No. 206, 80 Feet Road, 6th Cross, RMV 2nd Stage, 2nd Block, Bangalore-560094.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **29.11.2021** ರಂದು ಕರೆದು ಸಾಲಗಾರ **ಮೋಹಿತ್ ಗೌರ್ ಮತ್ತು ಮುಖೇಶ್ ಕುಮಾರ್ ಶರ್ಮ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 10,03,051.48 (ಹತ್ತು ಲಕ್ಷ ಮೂರು ಸಾವಿರದ ಐವತ್ತೊಂದು ರೂಪಾಯಿ ಮತ್ತು ನಲವತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **HHLDUB00355517** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **26.11.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **14.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ** ಬಾಕಿ ಇರುವ ಮೊತ್ತ **ರೂ. 10,03,051.48 (ಹತ್ತು ಲಕ್ಷ ಮೂರು ಸಾವಿರದ ಐವತ್ತೊಂದು ರೂಪಾಯಿ ಮತ್ತು ನಲವತ್ತೆಂಟು ಪೈಸೆ ಮಾತ್ರ) 26.11.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ. ಡಿ 412, 4ನೇ ಮಹಡಿ, ಟವರ್ ಡಿ, ಎಂಪ್ರಸಾ ಸ್ಟಾರ್ಟ್‌ಅಪ್ ವ್ಯಾಲಿ, ಕಂಬಳಿಪುರ ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ರೂರಲ್, ಕರ್ನಾಟಕ 562114, ಬೆಂಗಳೂರು ರೂರಲ್, ಕರ್ನಾಟಕ - 562114

ದಿನಾಂಕ : 14.06.2024 — **ಅಧಿಕಾರವಿರುವ ಅಧಿಕಾರಿ**
ಸ್ಥಳ : ಬೆಂಗಳೂರು ರೂರಲ್ — **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (''ಐಎಚ್‌ಎಫ್‌ಎಲ್'') ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **31.05.2021** ರಂದು ಕರೆದು ಸಾಲಗಾರ **ಸೋಮಶೇಖರ್ ಎಚ್. ಮತ್ತು ದೀಪಾ ಎಚ್. ಕೆ.** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **21.05.2021** ರ ವರೆಗೆ **ರೂ. 19,69,267.49 (ಹತ್ತೊಂಬತ್ತು ಲಕ್ಷ ಅರವತ್ತೊಂಬತ್ತು ಸಾವಿರದ ಇನ್ನೂರಾ ಅರವತ್ತೇಳು ರೂಪಾಯಿ ಮತ್ತು ನಲವತ್ತೊಂಬತ್ತು ಪೈಸೆ ಮಾತ್ರ)** ಸಾಲ ಖಾತೆ ನಂ. **HHLMYS00356279** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **22.05.2021** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಆ ನಂತರದಲ್ಲಿ, **ಐಎಚ್‌ಎಫ್‌ಎಲ್** ಸಾಲಗಾರ/ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಐಎಚ್‌ಎಫ್‌ಎಲ್** ದಿನಾಂಕ **30.06.2021** ರ ಅಸ್ಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಸಂಬಂಧಪಟ್ಟ ಎಲ್ಲಾ ಸೆಕ್ಯುರಿಟಿಗಳನ್ನು **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ಗೆ - ಎಸ್‌ಸಿ** 432 ವಹಿಸಿಕೊಟ್ಟಿದೆ.

ಅನಂತರ, **ಐಎಚ್‌ಎಫ್‌ಎಲ್** ಸಾಲಗಾರ (ರಿಗೆ) / ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಸಂಸ್ಥೆಯು ಎಸ್‌ಸಿ** 432 **ಮತ್ತು ಇಎಆರ್‌ಸಿ ಟ್ರಸ್ಟ್-ಎಸ್‌ಸಿ 439ರ** ಟ್ರಸ್ಟಿ ಆಗಿ ದಿನಾಂಕ **25.08.2023** ರ ಅಸ್ಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು, ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಸಿಪಿಎಸ್-IV, ಟ್ರಸ್ಟ್‌ನ ('ಆರ್ಸಿಲ್')** ಟ್ರಸ್ಟಿಯಾಗಿ ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ** ಜಾಗದಲ್ಲಿ ಆರ್ಸಿಲ್ ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) / ಗ್ಯಾರಂಟರ್(ಗಳ) / ಮಾರ್ಟ್‌ಗೇಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು / ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಆರ್ಸಿಲ್‌ಗೆ ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸಾಂಕೇತಿಕ ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **14.06.2024** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **18.04.2024** ರ ವರೆಗೆ **ರೂ. 28,83,264.28 (ಇಪ್ಪತ್ತೆಂಟು ಲಕ್ಷ ಎಂಬತ್ಮೂರು ಸಾವಿರದ ಇನ್ನೂರಾ ಅರವತ್ನಾಲ್ಕು ರೂಪಾಯಿ ಮತ್ತು ಇಪ್ಪತ್ತೆಂಟು ಪೈಸೆ ಮಾತ್ರ)** ಮೊತ್ತಕ್ಕೆ , ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **19.04.2024** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೇಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ಪ್ರಾಪರ್ಟಿಯ ಮಾಲೀಕರು: **ಸೋಮಶೇಖರ್ ಎಚ್. ಆರ್.**

ಪ್ರಾಪರ್ಟಿ ಐಡಿ ನಂ. 2-5-554-6ಸಿ, ಖಾತೆ ನಂ. 2591/987, ಎಸ್‌ಎಎಸ್ ನಂ. 1515, ಮಿನಿ ವಿಧಾನಸೌಧದ ಹಿಂದುಗಡೆ, ಕ್ರಾಸ್ ರೋಡ್, ಅಡುವಳ್ಳಿ ವಿಸ್ತರಣೆ, ಉದಯಗಿರಿ, ವಾರ್ಡ್ ನಂ. 02, ಮಿನಿ ವಿಧಾನಸೌಧ, ಹಾಸನ - 573101, ಕರ್ನಾಟಕ

ದಿನಾಂಕ : 14.06.2024 — **ಅಧಿಕಾರವಿರುವ ಅಧಿಕಾರಿ**
ಸ್ಥಳ : ಹಾಸನ — **ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್ (ಆರ್ಸಿಲ್-ಸಿಪಿಎಸ್- IV, ಟ್ರಸ್ಟ್‌ನ ಟ್ರಸ್ಟಿ)**

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **29.12.2021** ರಂದು ಕರೆದು ಸಾಲಗಾರ **ಶ್ರೀಮತಿ ಅಪಾರ್ನಾ ಕೆ ನೈಕ್ ಮತ್ತು ಕೃಷ್ಣಮೂರ್ತಿ ಪಿ ನೈಕ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 38,40,033.86 (ರೂಪಾಯಿ ಮೂವತ್ತ ಎಂಟು ಲಕ್ಷದ ನಲ್ವತ್ತು ಸಾವಿರದ ಮೂವತ್ತ ಮೂರು ಮತ್ತು ಪೈಸೆ ಎಂಬತ್ತ ಆರು ಮಾತ್ರ)** ಸಾಲ ಖಾತೆ ನಂ. **HHLBGM00461919** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **22.12.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **15.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ** ಬಾಕಿ ಇರುವ ಮೊತ್ತ **ರೂ. 38,40,033.86 (ರೂಪಾಯಿ ಮೂವತ್ತ ಎಂಟು ಲಕ್ಷದ ನಲ್ವತ್ತು ಸಾವಿರದ ಮೂವತ್ತ ಮೂರು ಮತ್ತು ಪೈಸೆ ಎಂಬತ್ತ ಆರು ಮಾತ್ರ) 22.12.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಕೋಡಿಗೆಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು -560092, ಕರ್ನಾಟಕ ಇಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್ ಎಂಪ್ಲಾಯಿಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ ಇವರಿಂದ ಸೈಟ್ ನಂ.220ನ್ನು ಹೊಂದಿರುವ ಸ್ಥಿರ ವಾಸ್ತವ್ಯದ ಸೊತ್ತಿನ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, 6ನೇ ಮಹಡಿ, 6ನೇ ಮೈನ್, 7 ನೇ ಕ್ರಾಸ್, ಟಾಟಾ ನಗರ, ಗ್ರೌಂಡ್‌ನ ಎದುರು ಇಲ್ಲಿ 'ಮಿರ್ಯಾಕಲ್ ಮೆಡೋಸ್'ಎಂದು ತಿಳಿಯಲಾಗುವ ಅಪಾರ್ಟ್‌ಮೆಂಟ್‌ನಲ್ಲಿ 2ನೇ ಮಹಡಿಯಲ್ಲಿ ಎರಡು ಬೆಡ್ ರೂಮ್‌ಗಳನ್ನು ಹೊಂದಿರುವ 1150 ಚ.ಅಡಿ ಮಾಪನದ ಸೂಪರ್ ಬಿಲ್ಟ್ ಅಪ್ ಏರಿಯಾದ ನಂ.-4ನ್ನು ಹೊಂದಿರುವ ಫ್ಲ್ಯಾಟ್, 180 ಚ.ಅಡಿ ಕವರ್ ಮಾಡಲಾದ ಒಂದು ಕಾರ್ ಪಾರ್ಕಿಂಗ್ ಜಾಗದೊಂದಿಗೆ, ಪ್ಯಾಸೇಜುಗಳು, ಲಾಬಿಗಳು, ಲಿಫ್ಟ್ ಮತ್ತು ಸ್ಟೇರ್‌ಕೇಸ್ ಮುಂತಾದ ಸಾಮಾನ್ಯ ಜಾಗಗಳಲ್ಲಿ ಪ್ರಮಾಣಾನುಸಾರ ಪಾಲನ್ನು ಒಳಗೊಂಡು ಈಗ ಪ್ರತ್ಯೇಕವಾಗಿ ಸರ್ವೆ ನಂಬರ್‌ನಲ್ಲಿ ''ಭಾರತ ರತ್ನ ಜೆ.ಆರ್.ಡಿ. ಟಾಟಾ ನಗರ'' ಎಂದು ತಿಳಿಯಲಾಗುತ್ತಿದೆ ಮತ್ತು ಪೂರ್ವದಿಂದ ಪಶ್ಚಿಮಕ್ಕೆ 4175 ಅಡಿ, ಉತ್ತರದಿಂದ ದಕ್ಷಿಣಕ್ಕೆ 4000 ಅಡಿ ಒಟ್ಟು 2505 ಚ.ಅಡಿ ಮಾಪನವನ್ನು ಹೊಂದಿದೆ ಮತ್ತು ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ
ಪೂರ್ವ : ಸೈಟ್ ನಂ 219 — ಪಶ್ಚಿಮ : ರಸ್ತೆ
ಉತ್ತರ : ಸೈಟ್ ನ: 195 — ದಕ್ಷಿಣ : ರಸ್ತೆ

ದಿನಾಂಕ: 15.06.2024 — **ಅಧಿಕಾರವಿರುವ ಅಧಿಕಾರಿ**
ಸ್ಥಳ : ಬೆಂಗಳೂರು — **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**

ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441)
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಿ ನಿ., ಬೆಂಗಳೂರು.
ಇವರ ನ್ಯಾಯಾಲಯದಲ್ಲಿ ನಂ.132, 2ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು-560027.

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /73/2024-25
ವಾದಿ
ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.73/1, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560 004.
ಪ್ರತಿವಾದಿಗಳು
1) **ಶ್ರೀ ಪ್ರಶಾಂತ್ ಕುಮಾರ್ ಎಸ್.** ನಂ.16, 10ನೇ ಅಡ್ಡರಸ್ತೆ, ಲಕ್ಷ್ಮೀಪುರ ಮುಖ್ಯರಸ್ತೆ, ಕೋಟೆ ಮೈಲಾರಪ್ಪ ಲೇಔಟ್, ಬೆಂಗಳೂರು-560090
2) **ಶ್ರೀ ಜಯಂತ್ ಕೆ,** ಎಸ್ ಎನ್ ಎಸ್ ಇಂಡಸ್ಟ್ರೀಸ್, ನಂ-ಪಿ-26-ಸಿ, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಪೀಣ್ಯ ಕೈಗಾರಿಕ ವಲಯ, ಬೆಂಗಳೂರು-560058
3) **ಶ್ರೀ ಭರತ್ ಕುಮಾರ್** ಸಿ.ಬಿ. ಟೋಟಲ್ ಎನ್ವಿರಾನ್ಮೆಂಟ್ ಬಿಲ್ಡಿಂಗ್ ಸಿಸ್ಟಮ್ ಪ್ರೈ ಲಿ, ನಂ.78, ಐಟಿಪಿಎಲ್ ಮುಖ್ಯರಸ್ತೆ, ಇಪಿಐಪಿ ಝೋನ್, ವೈಟ್ ಫೀಲ್ಡ್, ಬೆಂಗಳೂರು-560066.
ದಾವಾ ಮೊತ್ತ: ರೂ.60,542/-
ಪ್ರತಿವಾದಿ-2 ಶ್ರೀ ಜಯಂತ್ ಕೆ, 3. ಶ್ರೀ ಭರತ್ ಕುಮಾರ್ ಸಿ ಬಿ ರವರಿಗೆ

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /74/2024-25
1) **ಶ್ರೀ ವಿಶ್ವನಾಥ್ ಹೆಚ್ ಆರ್.** ಫ್ಲಾಟ್ ನ.301, ಮಿಲ್ ಪಾಂಡ್, 3ನೇ ಅಡ್ಡರಸ್ತೆ, ಬಿ ರೋಡ್, ಗುರುರಾಜ ಲೇಔಟ್, ವಿಭೂತಿಪುರ ಬಡಾವಣೆ, ದೊಡ್ಡಾನೆಕುಂದಿ, ಮಾರತಹಳ್ಳಿ, ಬೆಂಗಳೂರು-560037.
2). **ಶ್ರೀ ಅಭಿಜೀತ್ ಕೌಲ್ಗಿ,** ನಂ.1656, 3ನೇ ಅಡ್ಡರಸ್ತೆ, ಪ್ರಕಾಶ್ ನಗರ, ರಾಘವೇಂದ್ರ ದೇವಸ್ಥಾನದ ಹತ್ತಿರ, ಬೆಂಗಳೂರು -560021
3) **ಶ್ರೀಮತಿ. ಶ್ವೇತ ಆರ್,** ನಂ.10, 1ನೇ ಮಹಡಿ, 1ನೇ ಮುಖ್ಯರಸ್ತೆ, ರಾಘವ ನಗರ, ಎನ್ ಟಿ ವೈ ಲೇಔಟ್, ಬೆಂಗಳೂರು -560026
ದಾವಾ ಮೊತ್ತ: ರೂ.2,71,546/-
ಪ್ರತಿವಾದಿ-1 ಶ್ರೀ ವಿಶ್ವನಾಥ್ ಹೆಚ್.ಆರ್. 2. ಶ್ರೀ ಅಭಿಜೀತ್ ಕೌಲ್ಗಿ, 3. ಶ್ರೀಮತಿ ಶ್ವೇತ ಆರ್ ರವರಿಗೆ.

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್/ 75 /2024-25
1) **ಪ್ರಸನ್ನ ಕುಮಾರ್ ಬಿ.** ನಂ. ಎಫ್2, ಮೊದಲನೇ ಮಹಡಿ, ಹರ ವಿಜಯ ವ್ಯಾಲಿ ವ್ಯೂ ಅಪಾರ್ಟ್‌ಮೆಂಟ್ ಪೈನ್ ಬ್ಲಾಕ್, ಇಟ್ಟಮಡು, ಬೆಂಗಳೂರು-560085.
2) **ಶ್ರೀ ಶ್ರೀಧರ್ ಧರ್ಮಾವರಮ್,** ನಂ 14/1, ವಿಶ್ವಾಮೃತ ಅಪಾರ್ಟ್‌ಮೆಂಟ್, ತಲಕಾವೇರಿ ಲೇಔಟ್, ಅಮೃತಹಳ್ಳಿ, ಸಹಕಾರ ನಗರ ಪೋಸ್ಟ್, ಬೆಂಗಳೂರು ಉತ್ತರ- 560092.
3) **ಶ್ರೀ. ನಾಗೇಂದ್ರ ಚನ್ನಿಗರಾಯ,** ಸೆಂಚುರಿ ಲಿಂಕ್ ಟೆಕ್ನಾಲಜಿ, ಸಲಾರ್‌ಪುರಿಯ ಹಾಲ್ ಮಾರ್ಕ್ ಬ್ಲಾಕ್, ಬಿ1 ಅಂಡ್ 2ನೇ ಮಹಡಿ, 002 ಬಿ ವಿಂಗ್, ಸರ್ವೇ ನಂ 15/3 ಮತ್ತು 16, ವರ್ತೂರು ಹೋಬಳಿ, ಕಾಡುಬೇಸನಹಳ್ಳಿ, ಬೆಂಗಳೂರು-560103.
ದಾವಾ ಮೊತ್ತ: ರೂ.2,36,098/-
ಪ್ರತಿವಾದಿ-1 ಶ್ರೀ.ಪ್ರಸನ್ನ ಕುಮಾರ್ ಬಿ, 2. ಶ್ರೀ.ಶ್ರೀಧರ್ ಧರ್ಮಾವರಮ್, 3. ಶ್ರೀ.ನಾಗೇಂದ್ರ ಚನ್ನಿಗರಾಯ ರವರಿಗೆ.

ಪ್ರತಿವಾದಿಗಳಿಗೆ ದಿನ ಪತ್ರಿಕೆಯ ಪ್ರಕಟಣೆಯ ಮೂಲಕ ನ್ಯಾಯಾಲಯದ ಸಮನ್ಸ್

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70(1) ರ ಪ್ರಕಾರ ವಾದಿಯು ಪ್ರತಿವಾದಿಗಳ ವಿರುದ್ಧ ಮೇಲೆ ನಮೂದಿಸಿರುವ ಸಾಲದ ಮೊತ್ತದ ವಸೂಲಾತಿಗೆ ಅವಾರ್ಡ ನೀಡಲು ಕೋರಿ ಈ ದಾವೆಯನ್ನು ದಾಖಲಿಸಿರುತ್ತಾರೆ. ಪ್ರತಿವಾದಿಗಳಿಗೆ ಆರ್.ಪಿ.ಎ.ಡಿ ಮೂಲಕ ನೋಟೀಸ್ ಕಳುಹಿಸಿದ್ದು, ಜಾರಿಯಾಗದೇ ವಾಪಸ್ಸಾಗಿರುತ್ತವೆ. ಆದ್ದರಿಂದ ವಾದಿ ಪ್ರತಿನಿಧಿಯು ದಿನಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ನೋಟೀಸ್ ಜಾರಿ ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಿ; ವಿಚಾರಣೆಯನ್ನು **ದಿನಾಂಕ: 25.06.2024 ರಂದು ಮಧ್ಯಾಹ್ನ/ಬೆಳಿಗ್ಗೆ 3.00 ಘಂಟೆಗೆ** ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441) ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು - 560 027 ಇವರ ನ್ಯಾಯಾಲಯ, ಇಲ್ಲಿ ನಿಗದಿಪಡಿಸಿದ್ದು, ವಿಚಾರಣೆಗೆ ಹಾಜರಾಗಲು ಪ್ರತಿವಾದಿಗಳಿಗೆ ಈ ಮೂಲಕ ತಿಳಿಸಲಾಗಿದೆ. ಈ ದಾವೆಯ ವಿಷಯದಲ್ಲಿ ಅವರ ಪರವಾದ ಲೆಕ್ಕ-ಪತ್ರಗಳನ್ನು/ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಆ ದಿವಸ ಹಾಜರುಪಡಿಸಲು ತಿಳಿಸಲಾಗಿದೆ ತಪ್ಪಿದಲ್ಲಿ, ದಾವೆಗಳನ್ನು ಅವರ ಗೈರು ಹಾಜರಿಯಲ್ಲಿಯೇ ವಿಚಾರಣೆ ಮಾಡಿ ಇತ್ಯರ್ಥ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. **ದಿನಾಂಕ: 10.06.2024 ರಂದು** ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441) ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳಿ ನಿ., ಬೆಂಗಳೂರು
ಇವರ ಆದೇಶದ ಮೇರೆಗೆ
ಸ್ಥಳ: ಬೆಂಗಳೂರು — **ಸಹಿ/- (ಅಧಿಕೃತ ಅಧಿಕಾರಿ)**

ಸಮಾಚಾರ ಸಣ್ಣದಲ್ಲ

ಜೂ.22ಕ್ಕೆ ನೃತ್ಯ ಕಾರ್ಯಕ್ರಮ

ಬೆಂಗಳೂರು: ಆರವಾಸ್ ಡ್ಯಾನ್ಸ್ ಅಕಾಡೆಮಿ ವತಿಯಿಂದ ಎಡಿಎ ರಂಗ ಮಂದಿರದಲ್ಲಿ ಜೂ.22 ಶನಿವಾರದಂದು ಸಂಜೆ 6.30 ಗಂಟೆಗೆ ಪಲ್ಸ್ ನೃತ್ಯ ಪ್ರದರ್ಶನ ಕಾರ್ಯಕ್ರಮ ವನ್ನು ಆಯೋಜಿಸಿದೆ. ಕಾರ್ಯಕ್ರಮಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಸಾಮಾಜಿಕ ಕಾರ್ಯಕರ್ತ ನವೀನ್ ಕುಮಾರ್ ತೇಜಸ್ವಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮುಂಗಡ ಟಿಕೆಟ್ ಬುಕಿಂಗಾಗಿ ವಾಟ್ಸ್ ಅಪ್ ನಂಬರ್ 8904757714 ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಿ.ಎಸ್ ಪ್ರಹ್ಲಾದ್‌ಗೆ ಪಿಎಚ್.ಡಿ

ಬೆಂಗಳೂರು: ಬಿಬಿಎಂಪಿಯ ಪ್ರಧಾನ ಅಭಿಯಂತರರಾಗಿ ಕಾರ್ಯ ನಿರ್ವಹಿಸುತ್ತಿರುವ ಬಿ.ಎಸ್ ಪ್ರಹ್ಲಾದ್‌ರವರು ವಿಶ್ವೇಶ್ವರಯ್ಯ ತಂತ್ರಜ್ಞಾನ ವಿವಿಯಲ್ಲಿ ಸಿವಿಲ್ ಎಂಜಿನಿಯರಿಂಗ್ ವಿಜ್ಞಾನದ ಇಫೆಕ್ಟ್ಸ್ ಆಫ್ ಆ್ಯರ್ ವೋಯ್ಡ್ಸ್ ಆ್ಯಂಡ್ ಆಸ್ಫಾಲ್ಟ್ ಕಂಟೆಂಟ್ ಆನ್ ಪರ್ಫಾಮೆನ್ಸ್ ಆಫ್ ಬಿಟ್ಯುಮಿನಸ್ ಕಾಂಕ್ರೀಟ್ ಮಿಕ್ಸ್ (Effect of Air Voids and Asphalt Content on Performance of Bituminous Concrete (BC) Mixes) ವಿಷಯದಲ್ಲಿ ಡಾ. ಕೃಷ್ಣಮೂರ್ತಿ ಮತ್ತು ಜಯ ಶಿಂಗನಮಕ್ಕಿ ಮಾರ್ಗ ದರ್ಶನದಲ್ಲಿ ಕೈಗೊಂಡ ಸಂಶೋಧನೆಗೆ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

ಭುವನೇಶ್ವರಿ ಪ್ರತಿಮೆ ಸ್ಥಾಪನೆಗೆ ಭೂಮಿಪೂಜೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜೂ.20 ಗುರುವಾರ ಬೆಳಗ್ಗೆ 11.00 ಗಂಟೆಗೆ ವಿಧಾನಸೌಧದ ಪಶ್ಚಿಮ ಗೇಟ್-1 -2ರನ ನಡುವೆ ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ಸ್ಥಾಪನೆ ಭೂಮಿ ಪೂಜೆಯನ್ನು ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಭೂಮಿ ಪೂಜೆ ನೆರವೇರಿಸಲಿದ್ದು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಸಚಿವೆ ಶೋಭಾ ಕರಂದ್ಲಾಜೆ, ಉಪಮುಖ್ಯಮಂತ್ರಿ ಡಿ,.ಕೆ ಶಿವ ಕುಮಾರ್, ವಿಧಾನಪರಿಷತ್ ಸಭಾಪತಿ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಸಭೆ ಸಭಾಧ್ಯಕ್ಷ ಯುಟಿ ಖಾದರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್ ತಂಗಡಗಿ, ಸಚಿವರಾದ ಕೆ.ಜೆ ಜಾರ್ಜ್, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಸತೀಶ ಜಾರಕಿಹೊಳಿ ಮುಖ್ಯಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭಾನುವಾರ ನೂಪುರ ನಿರಂತರ-5

ಬೆಂಗಳೂರು: ಮಲ್ಲೇಶ್ವರದ ಸೇವಾ ಸದನ ಆಡಿಟೋರಿಯಂನ್‌ಲ್ಲಿ ಜೂ.23ರಂದು ಭಾನುವಾರ ಸಂಜೆ 4.30 ಗಂಟೆಗೆ ರಚನಾ ಅಕಾಡೆಮಿಯ ವಾರ್ಷಿಕೋತ್ಸವದ ನೂಪುರ ನಿರಂತರ-5 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ವಿಶೇಷ ಕಾರ್ಯಕ್ರಮದಲ್ಲಿ ವಿವಿಧ ಶೈಲಿಗಳ ಸುಮನೋಹರ ನೃತ್ಯಾರ್ಪಣೆ ನಡೆಯಲಿದ್ದು, ವರ್ಣರಂಜಿತ ಈ ಸುಮನೋಹರ ನೃತ್ಯಗಳ ಸೊಬಗಿನ ಪ್ರದರ್ಶನ ವಾಗಲಿದೆ. ಕಾರ್ಯಕ್ರಮದಲ್ಲಿ ವಿಮರ್ಶಕಿ ವೈ.ಕೆ.ಸಂಧ್ಯಾ ಶರ್ಮ ಮತ್ತು ಕಲಾ ಸಂಕುಲದ ನಿರ್ದೇಶಕಿ ಡಾ. ಪೂರ್ಣಾ ಸುರೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ಗುರುವಾರ ಜೂ.20ರಂದು ನಿರ್ವಹಣಾ ಕಾರ್ಯವನ್ನು ಹಮ್ಮಿಕೊಳ್ಳುತ್ತಿರುವುದರಿಂದ ಬೆಳಗ್ಗೆ 10.00ರಿಂದ ಸಂಜೆ 3.00 ಗಂಟೆಯವರೆಗೆ ಕೆಲ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ನಗರದ 66/11ಕೆವಿ ಸೌದೇಲಾ ವಿ.ವಿ. ಕೇಂದ್ರ, ವಿಶ್ವಪ್ರಿಯಲೇಔಟ್, ಬೇಗೂರು ಕೊಪ್ಪ ರೋಡ್, ದೇವರಚಿಕ್ಕನಹಳ್ಳಿ, ಅಕ್ಷಯನಗರ, ತೇಜಸ್ವಿನಿ ನಗರ, ಹಿರಾನಂದಿನ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಹಾಗೂ 66/11ಕೆವಿ ಬನ್ನೇರುಘಟ್ಟ ವಿ.ವಿ.ಕೇಂದ್ರ ವೇವರ್ ಕಾಲೋನಿ, ಗೊತ್ತಿಗೆರೆ ಮಂಟಪ. ಪೂರ್ವಂಕರ, ಎ.ಎಂ.ಸಿ.ಕಾಲೇಜ್, ರಾಗಿಹಳ್ಳಿ, ಕಸರಗುಪ್ಪೆ, ಶಿವನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ತಮ್ಮ ದೂರುಗಳನ್ನು ದಾಖಲಿಸಲು 1912 ಗೆ ಕರೆ ಮಾಡುವುದು ಎಂದು ಪ್ರಕಟಣೆ ತಿಳಿಸಿದೆ.

ಮತ್ತೆ ಎಸ್‌ಐಟಿ ಕಸ್ಟಡಿಗೆ ಪ್ರಜ್ವಲ್ ರೇವಣ್ಣ

ಬೆಂಗಳೂರು: ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಆರೋಪಿ, ಮಾಜಿ ಸಂಸದ ಪ್ರಜ್ವಲ್ ರೇವಣನನ್ನು ಮತ್ತೆ ಎಸ್ ಐಟಿ ಕಸ್ಟಡಿಗೆ ನೀಡಲಾಗಿದೆ. ಕೆ.ಆರ್.ನಗರ ಸಂತ್ರಸ್ತೆ ಅತ್ಯಾಚಾರ ಪ್ರಕರಣದಲ್ಲಿ ಜೂನ್ 24ರವರೆಗೆ ಪ್ರಜ್ವಲ್ ರೇವಣ್ಣನನ್ನು ಎಸ್‌ಐಟಿ ಕಸ್ಟಡಿಗೆ ನೀಡಿ 42ನೇ ಎಸಿಎಂಎಂ ಜನಪ್ರತಿನಿಧಿಗಳ ನ್ಯಾಯಾಲಯ ಆದೇಶ ನೀಡಿದೆ. ಕೆ.ಆರ್.ನಗರ ಸಂತ್ರಸ್ತೆ ಅತ್ಯಾಚಾರ ಪ್ರಕರಣದಲ್ಲಿ ಸ್ಥಳ ಮಹಜರು, ಹೇಳಿಕೆ ದಾಖಲು, ಧ್ವನಿ ಮಾದರಿ, ವೈದ್ಯಕೀಯ ಪರೀಕ್ಷೆ ಸಲುವಾಗಿ ಕಸ್ಟಡಿಗೆ ನೀಡಲಾಗಿದೆ. ಮಂಗಳವಾರ 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿ ಕೋರ್ಟ್ ಆದೇಶಿಸಿತ್ತು. ಆದರೆ, 3ನೇ ಪ್ರಕರಣದಲ್ಲಿ ವಿಚಾರಣೆ ನಡೆಸಲು ತನಿಖಾಧಿಕಾರಿಗಳು ಬಾಡಿ ವಾರಂಟ್ ಮೇಲೆ ಮತ್ತೆ ಎಸ್‌ಐಟಿ ಕಸ್ಟಡಿಗೆ ಪಡೆದಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶದ ಮುನ್ನೋಟ ಕಾರ್ಯಕ್ರಮ | ವಾರ್ಷಿಕ ಶೇ.15ರಿಂದ 16ರಷ್ಟು ಬೆಳವಣಿಗೆ

6 ವರ್ಷದಲ್ಲಿ ಒಂದು ಟ್ರಿಲಿಯನ್ ಡಾಲರ್ ಜಿಡಿಪಿ ಸಾಧನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾರ್ಷಿಕ ಶೇ 15 ರಿಂದ 16 ರಷ್ಟು ಕೈಗಾರಿಕಾ ಬೆಳವಣಿಗೆ ಸಾಧಿಸಿ 2032ರ ಹೊತ್ತಿಗೆ 1 ಟ್ರಿಲಿಯನ್ ಡಾಲರ್ ಜಿಡಿಪಿ ಸಾಧಿಸಲು ಗುರಿ ಸಾಧಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮುಂಬರುವ ಫೆಬ್ರವರಿ 12, 13 ಮತ್ತು 14ರಂದು ಬೆಂಗಳೂರಿನಲ್ಲಿ ನಡೆಯಲಿರುವ ಪ್ರತಿಷ್ಠಿತ 'ಜಾಗತಿಕ ಹೂಡಿಕೆದಾರರ ಸಮಾವೇಶ'ದ ಕರ್ಟನ್ ರೈಸರ್ ಕಾರ್ಯಕ್ರಮದಲ್ಲಿ ಮಾತನಾಡಿ, ರಾಜ್ಯ ಸರಕಾರವು ಗ್ರಾಮೀಣಾಭಿವೃದ್ಧಿ ಮತ್ತು ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಸಾಧಿಸಲು ಪಣ ತೊಟ್ಟಿದೆ.

ಇದಕ್ಕಾಗಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಕೈಗಾರಿಕಾ ಕ್ಲಸ್ಟರ್‌ಗಳನ್ನು ಬೆಳೆಸಲು ತೀರ್ಮಾನಿಸಲಾಗಿದೆ. ಮಹಾನಗರಗಳ ಆಚೆಗೂ ಆರ್ಥಿಕ ಪ್ರಗತಿಯನ್ನು ಕೊಂಡೊಯ್ಯಬೇಕು ಎನ್ನುವುದು ನಮ್ಮ ಸಂಕಲ್ಪವಾಗಿದೆ ಎಂದು ತಿಳಿಸಿದರು.

ಸ್ಥಳೀಯ ಪ್ರತಿಭೆ ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡು, ವಿಶೇಷ ಪರಿಣತ ಉದ್ದಿಮೆಗಳನ್ನು ಬೆಳೆಸಲು ಸರಕಾರ ಬದ್ಧವಾಗಿದ್ದು, ಇದಕ್ಕಾಗಿ ಎಲೆಕ್ಟ್ರಾನಿಕ್ಸ್, ಆಟೋ ಮತ್ತು ಇ.ವಿ., ಫಾರ್ಮಸುಟಿಕಲ್ಸ್, ಜವಳಿ ಮುಂತಾದ ವಲಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಹೆಚ್ಚು ಹೆಚ್ಚು ಹೂಡಿಕೆ ಆಕರ್ಷಣೆ ಮತ್ತು ಉದ್ಯೋಗ ಸೃಷ್ಟಿ ಎರಡಕ್ಕೂ ನಾವು ಒತ್ತು ಕೊಡುತ್ತಿದ್ದೇವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ, ಐಟಿ- ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಆರೋಗ್ಯ ಸಚಿವ ದಿನೇಶ ಗುಂಡೂರಾವ್, ವೈದ್ಯಕೀಯ ಮತ್ತು ಕೌಶಲ ಅಭಿವೃದ್ಧಿ ಸಚಿವ ಶರಣ ಪ್ರಕಾಶ ಪಾಟೀಲ, ಜವಳಿ ಮತ್ತು ಎಪಿಎಂಸಿ ಖಾತೆ ಸಚಿವ ಶಿವಾನಂದ ಪಾಟೀಲ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಇದ್ದರು.

ಸಣ್ಣ, ಸೂಕ್ಷ್ಮ ಕೈಗಾರಿಕೆ, ಸ್ಟಾರ್ಟಪ್‌ಗೆ ಒತ್ತು: ಎಂ. ಬಿ. ಪಾಟೀಲ್

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಇದೇ ಮೊದಲ ಬಾರಿಗೆ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳಿಗೂ ಆದ್ಯ ಗಮನ ಹರಿಸಲಾಗುತ್ತಿದೆ. ಜತೆಗೆ ಕಳೆದ ಬಾರಿಯಂತೆ ಈ ಸಲವೂ ನವೋದ್ಯಮಗಳಿಗೆ ಬಂಡವಾಳ ಸೆಳೆಯಲು ವಿಶೇಷ ಉಪಕ್ರಮ ಅಳವಡಿಸಿಕೊಳ್ಳುತ್ತಿದ್ದೇವೆ. ಇದರ ಭಾಗವಾಗಿ 'ಎಸ್ ಎಂಇ ಕನೆಕ್ಟ್- 25' ಮತ್ತು 'ವೆಂಚರೈಸ್- 24' ಪರಿಕಲ್ಪನೆಗಳನ್ನು ರೂಪಿಸಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು. ಜಾಗತಿಕ ಹೂಡಿಕೆದಾರರ ಸಮಾವೇಶದ ಭಾಗವಾಗಿ ರಾಜ್ಯದ ತಯಾರಿಕಾ ವಲಯದ ಕಾರ್ಯ ಪರಿಸರವನ್ನು ಜಾಗತಿಕ ಮಟ್ಟದ ಉದ್ದಿಮೆಗಳಿಗೆ ತೋರಿಸಲು ನಾಲ್ಕು ರೋಡ್ ಶೋ ನಡೆಸಲಾಗುವುದು. ಅಲ್ಲದೆ, ಗಣ್ಯ ಉದ್ಯಮಿಗಳನ್ನು ಖುದ್ದಾಗಿ ಆಹ್ವಾನಿಸಲು ಜೂನ್ 24ರಿಂದ 28ರವರೆಗೆ ಜಪಾನಿನ ಟೋಕಿಯೋ, ನಗೋಯ ಮತ್ತು ಒಸಾಕ ನಗರಗಳಿಗೆ ಹಾಗೂ ಜುಲೈ ಮೊದಲ ವಾರದಲ್ಲಿ ದಕ್ಷಿಣ ಕೊರಿಯಾದ ಸಿಯೋಲ್, ಇಂಚೆಯಾನ್ ಮತ್ತು ಜಿಯಾಂಗಿ ನಗರಗಳಿಗೆ ಭೇಟಿ ಕೊಡಲಾಗು ವುದು ಎಂದು ಮಾಹಿತಿ ನೀಡಿದರು. ಬೆಳವಣಿಗೆಯ ಹೊಸ ಪರಿಕಲ್ಪನೆ (ರೀ ಇಮ್ಯಾಜನಿಂಗ್) ಧ್ಯೇಯ ದಡಿ ನಡೆಯಲಿರುವ ಸಮಾವೇಶದ ಮೂಲಕ ತಯಾರಿಕಾ ವಲಯ, ಮೂಲಸೌಕರ್ಯ ಅಭಿವೃದ್ಧಿ, ಐಟಿ, ಇಂಧನ, ಶಿಕ್ಷಣ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಿಗೆ ಹೆಚ್ಚಿನ ಬಂಡವಾಳ ಬರುವಂತೆ ನೋಡಿ ಕೊಳ್ಳಲಾಗುವುದು ಎಂದು ಹೇಳಿದರು.

ನಗರದ ಸುಂಕದಕಟ್ಟೆ ಲಕ್ಷ್ಮಣ ನಗರದ ವಿದ್ಯಾನಿಕೇತನ ಕಿಶೋರ ಕೇಂದ್ರದಲ್ಲಿ 2024-25ನೇ ಸಾಲಿನ ವಿದ್ಯಾರ್ಥಿ ಪ್ರತಿನಿಧಿಗಳ ಚುನಾವಣೆಯಲ್ಲಿ ವಿವಿಧ ವಿಭಾಗಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ಬೋಧನೆ ಮಾಡಲಾಯಿತು. ಈ ವೇಳೆ ವಿದ್ಯಾರ್ಥಿ ಪ್ರತಿನಿಧಿಗಳು, ಶಾಲೆಯ ಶಿಕ್ಷಕ ವೃಂದ ಮತ್ತು ಶಾಲಾ ಆಡಳಿತ ಮಂಡಳಿಯ ಸದಸ್ಯರು ಇದ್ದರು.

ಅಂಡಮಾನ್‌ನಲ್ಲಿ ನಡೆದ 19ನೇ ರಾಷ್ಟ್ರೀಯ ಕನ್ನಡ ಸಂಸ್ಕೃತಿ ಸಮ್ಮೇಳನದಲ್ಲಿ ಬೆಂಗಳೂರಿನ ರಂಗಪುತ್ಥಳಿ ಯಶೋಧ ಪಪ್ಪೆಟರಿ ತಂಡದಿಂದ ಪ್ರದರ್ಶನಕ್ಕೆ ಪ್ರಶಂಸನೀಯ ಪತ್ರವನ್ನು ನೀಡಲಾಯಿತು. ಈ ವೇಳೆ ತಂಡದ ಡಾ. ಯಶೋಧ ಶಶಿಧರ್, ಗಾಯತ್ರಿ, ಹರೀಶ್ ಇದ್ದರು.

ಕೆಎಸ್‌ಆರ್‌ಟಿಸಿ ಟಿಕೆಟ್ ದರ ಹೆಚ್ಚಳ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರವನ್ನು ಹೆಚ್ಚಿಸುವ ಕುರಿತಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸುಳಿವು ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತೈಲ ಬೆಲೆ ಏರಿಕೆಯಿಂದ ಸಾಗಾಣಿಕೆ ವೆಚ್ಚ ಕೂಡ ಹೆಚ್ಚಾಗಿದೆ. ರಾಜ್ಯದಲ್ಲಿ ಡೀಸೆಲ್ ಬೆಲೆ ಹೆಚ್ಚಳವಾಗಿದೆ. ಹೀಗಾಗಿ ನಿಗಮಗಳಿಂದ ಸಾರಿಗೆ ಬಸ್ ಟಿಕೆಟ್ ದರ ಹೆಚ್ಚಳಕ್ಕೆ ಪ್ರಸ್ತಾವನೆ ಬಂದರೆ ಪರಿಶೀಲಿಸಿ ಕ್ರಮ ವಹಿಸಲಾಗುತ್ತದೆ.

ಕೆಎಸ್‌ಆರ್‌ಟಿಸಿ ಟಿಕೆಟ್ ದರವನ್ನು 2020ರಲ್ಲಿ ಹೆಚ್ಚಳ ಮಾಡಲಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರವನ್ನು ಹೆಚ್ಚಳ ಮಾಡಲಾಗಿಲ್ಲ. ನಿಗಮಕ್ಕೆ ಶಕ್ತಿ ಯೋಜನೆಯಡಿ ರಾಜ್ಯ ಸರಕಾರದಿಂದ 1100 ಕೋಟಿ ಬರಬೇಕಿದೆ. ಸಾರಿಗೆ ನಿಗಮ ಗಳಿಂದ ದರ ಪರಿಷ್ಕರಣೆ ಪ್ರಸ್ತಾವನೆ ಬಂದರೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಈ ಮೂಲಕ ಕೆಲವೇ ದಿನಗಳಲ್ಲಿ ಕೆಎಸ್‌ಆರ್ ಟಿಸಿ ಬಸ್ ಟಿಕೆಟ್ ದರ ಹೆಚ್ಚಳ ಆಗುವುದು ಖಚಿತ ಎನ್ನುವ ಸುಳಿವು ನೀಡಿದ್ದಾರೆ.

ಕಸ್ತೂರಿನಗರ ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ. ಶ್ರೀನಿವಾಸ್ ಪ್ರಸಾದ್ ಅವರ ಪಿವೈ 03 ಬಿ 4093 ನೋಂದಣಿ ಸಂಖ್ಯೆಯ ಮರ್ಸಿಡಿಸ್ ಬೆನ್ಜ್ ಕಾರಿನ ಮಾಲೀಕರಿಂದ ಬುಧವಾರ 10.78ಲಕ್ಷ ಜೀವಿತಾವಧಿ ತೆರಿಗೆ ವಸೂಲಿ ಮಾಡಿದ್ದಾರೆ. ಮೋಟಾರು ವಾಹನ ಇನ್ಸ್‌ಪೆಕ್ಟರ್ ಎ.ಟಿ. ಸುರೇಶ್, ನಂದೀಶ್ ಇದ್ದರು.

ಡಿಕೆಶಿ ಹೇಳಿಕೆಗೆ ಸಾಹಿತಿಗಳ ಆಕ್ರೋಶ

ಬೆಂಗಳೂರು: ಕಾಂಗ್ರೆಸ್ ಕಚೇರಿಯಲ್ಲಿ ನಡೆದ ನೂತನ ಅಕಾಡೆಮಿ ಅಧ್ಯಕ್ಷರ ಸಭೆ ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಇನ್ನು ಈ ವಿಚಾರಕ್ಕೆ ಸಂಬಂಧಿಸಿದ್ದಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡಿರುವ ಹೇಳಿಕೆ ಭಾರಿ ಚರ್ಚೆಗೆ ಗ್ರಾಸವಾಗಿದೆ. ವಿಚಾರಕ್ಕೆ ಆಕ್ರೋಶ ವ್ಯಕ್ತಪಡಿಸಿರುವ, ಜಾಗೃತ ನಾಗರಿಕರು ಕರ್ನಾಟಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಪ್ರವೇಶಿಸಿ ವಿವಾದವನ್ನು ಬಗೆಹರಿಸುವಂತೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಸಾಹಿತಿಗಳು, ಅಕಾಡೆಮಿ, ಪ್ರಾಧಿಕಾರಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವುದು ಸರಕಾರವೇ ಆಗಿದ್ದರೂ ಅದರ ಕಾರ್ಯನಿರ್ವಹಣೆ ಸ್ವಾಯತ್ತವಾಗಿ ಕಾರ್ಯನಿರ್ವಹಿಸಲಿದ್ದು, ಇದುವರೆಗೂ ಹಾಗೆಯೇ ನಡೆದುಕೊಂಡು ಬಂದಿದೆ. ಆದರೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಾಹಿತಿಗಳನ್ನು ಕರೆಸಿದ್ದೇ ನಾನು, ತಪ್ಪೇನು, ಎಂಬುದಾಗಿ ಸಮರ್ಥನೆ ಮಾಡಿಕೊಂಡಿದ್ದಲ್ಲದೇ ಅದೇ ಭರದಲ್ಲಿ ಅಕಾಡೆಮಿಗಳು ಸ್ವಾಯತ್ತ ಸಂಸ್ಥೆಗಳಲ್ಲ ಎಂದೂ ಸಾರಿರುವುದು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಬಾಯಲ್ಲಿ ಇಂತಹ ಮಾತು ಬಂದಿದ್ದು, ಅದು ಅವರ ಪಕ್ಷದ ನಿಲುವೂ ಕೂಡಾ ಎಂದು ಭಾವಿಸಬೇಕಾಗುತ್ತದೆ ಎಂದು ತಿಳಿಸಲಾಗಿದೆ.

ಪ್ರೊ.ಕೆ.ಮರುಳಸಿದ್ದಪ್ಪ, ಡಾ.ಜಿ.ರಾಮಕೃಷ್ಣ, ಪ್ರೊ.ಎಸ್. ಜಿ.ಸಿದ್ದರಾಮಯ್ಯ, ಡಾ.ವಿಜಯಾ, ವಿಮಲಾ.ಕೆ.ಎಸ್, ಬಿ.ಶ್ರೀಪಾದ ಭಟ್, ಟಿ. ಸುರೇಂದ್ರ ರಾವ್, ಡಾ.ಬಂಜಗೆರೆ ಜಯಪ್ರಕಾಶ್, ಡಾ.ಮೀನಾಕ್ಷಿ ಬಾಳಿ, ಡಾ.ಎನ್. ಗಾಯತ್ರಿ, ಎನ್.ಕೆ.ವಸಂತ ರಾಜ್, ಎನ್. ಯೋಗಾನಂದ, ಜಾಣಗೆರೆ ವೆಂಕಟರಾಮಯ್ಯ ಪತ್ರಕ್ಕೆ ಸಹಿ ಹಾಕಿದ್ದಾರೆ.

ಮುಖ್ಯಮಂತ್ರಿಗಳ ಮಧ್ಯಪ್ರವೇಶಕ್ಕೆ ಮನವಿ

ಮುಖ್ಯಮಂತ್ರಿಗಳು ಪಕ್ಷದ ಆಡಳಿತಕ್ಕೆ ಒಳಪಡದ, ನೇರವಾಗಿ ಕರ್ನಾಟಕ ಸರಕಾರದ ಆಡಳಿತಕ್ಕೆ ಸಂಬಂಧಿಸಿದ ಈ ಸಾಂಸ್ಕೃತಿಕ ಕ್ಷೇತ್ರಗಳ ವಿವಾದದವನ್ನು ಕೊನೆಗೊಳಿಸಲು ಮಧ್ಯಪ್ರವೇಶ ಮಾಡಬೇಕು. ಸ್ವಾಯತ್ತ ಸಂಸ್ಥೆಗಳ ಘನತೆ ಗೌರವಕ್ಕೆ ಕುಂದುಂಟಾಗದಂತೆ ನಿಯುಕ್ತಗೊಂಡ ಸದಸ್ಯರು ಕಾರ್ಯನಿರ್ವಹಿಸುವುದು ತಮ್ಮ ಆದ್ಯ ಕರ್ತವ್ಯ ಎಂದು ನಿಯುಕ್ತರಾದ ಎಲ್ಲರೂ ಎಚ್ಚರವಹಿಸಬೇಕು ಎಂದು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ದರ ಏರಿಕೆ: 2ನೇ ಹಂತದಲ್ಲಿ ರಾಜ್ಯವ್ಯಾಪಿ ಪ್ರತಿಭಟನೆ

ಇಂದು ಬಿಜೆಪಿ ರಸ್ತೆತಡೆ

ಬೆಂಗಳೂರು: ಸರಕಾರದ ಬೆಲೆ ಏರಿಕೆ ವಿರೋಧಿಸಿ ಬಿಜೆಪಿ ಮತ್ತೆ ಪ್ರತಿಭಟನೆಗೆ ಮುಂದಾಗಿದ್ದು, ಗುರುವಾರ ಎರಡನೇ ಹಂತದ ಹೋರಾಟದಲ್ಲಿ ರಾಜ್ಯಾದ್ಯಂತ ರಸ್ತೆ ತಡೆ ಆಂದೋಲನ ನಡೆಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡೀಸೆಲ್-ಪೆಟ್ರೋಲ್ ದರ ಏರಿಕೆ ವಿರೋಧಿಸಿ ಮತ್ತು ದರ ಏರಿಕೆಯನ್ನು ವಾಪಸ್ ಪಡೆಯಲು ಆಗ್ರಹಿಸಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿ ರಸ್ತೆತಡೆ ಆಂದೋಲನ ನಡೆಸಲಿದ್ದೇವೆ. ರಾಜ್ಯ ಸರಕಾರ ವಿಪರೀತ ತೆರಿಗೆ ಶುಲ್ಕ ಹೆಚ್ಚಳದ ಅಭಿಯಾನವನ್ನೇ ನಡೆಸುತ್ತಿದ್ದು, ಹಲವಾರು ಕ್ಷೇತ್ರಗಳ ತೆರಿಗೆಯನ್ನು ಹೆಚ್ಚಿಸಿ ಜನರ ಜೀವನವನ್ನೇ ಕಷ್ಟದಾಯಕವನ್ನಾಗಿ ಮಾಡಿದೆ. ರೈತವಿರೋಧಿ, ಎಸ್‌ಸಿ, ಎಸ್‌ಟಿ ಒಬಿಸಿಗಳ ವಿರೋಧಿ ಸರಕಾರ ಇದಾಗಿದ್ದು, ಈ ಕೂಡಲೇ ಪೆಟ್ರೋಲ್, ಡೀಸೆಲ್ ದರ ಏರಿಕೆಯನ್ನು ಹಿಂಪಡೆಯುವಂತೆ ಆಗ್ರಹಿಸಿದರು. ಆಸ್ತಿ ತೆರಿಗೆಯನ್ನು ಶೇ.20ರಿಂದ ಶೇ.120 ವರೆಗೆ ಹೆಚ್ಚಿಸಲಾಗಿದ್ದು, ಮೋಟಾರು ವಾಹನ ತೆರಿಗೆಯನ್ನು ಶೇ. 40ರಿಂದ ಶೇ.80ರಷ್ಟು, ಅಬಕಾರಿ ತೆರಿಗೆ (ಮದ್ಯ) ಶೇ 20ರಿಂದ ಶೇ 400ವರೆಗೆ ಹೆಚ್ಚಳ, ಹೆಣ್ಣು ಮಕ್ಕಳಿಗೆ ಬಸ್ ಪ್ರಯಾಣ ದರ ಉಚಿತ ಎನ್ನುತ್ತಿದ್ದರು. ಆದ್ದರಿಂದ ಗಂಡಸರ ಬಸ್ ಪ್ರಯಾಣದರ ಏರಿಸಿದ್ದಾರೆ ಎಂದರು.

ವಿದ್ಯುತ್ ದರವನ್ನೂ ಹೆಚ್ಚಿಸಿದ್ದಾರೆ. ಇದರಿಂದ ಕೈಗಾರಿಕಾ ಉತ್ಪನ್ನಗಳ ದರ ಏರಿದೆ. ರೈತರಿಗೆ ಕೊಡುತ್ತಿದ್ದ ಹಾಲಿನ ಪ್ರೋತ್ಸಾಹಧನವನ್ನು ಕಡಿಮೆ ಮಾಡಿದ್ದಾರೆ. ಪ್ರತಿ ಲೀಟರ್ ಹಾಲಿನ ದರ ಏರಿಸಿದ್ದಾರೆ. ಇದರಿಂದ ಹಾಲು, ಮೊಸರು, ತುಪ್ಪ ಮತ್ತಿತರ ಉತ್ಪನ್ನಗಳ ದರ ಏರಿದೆ.

-ಎನ್.ರವಿಕುಮಾರ್, ವಿಧಾನಪರಿಷತ್ ಸದಸ್ಯ

ಸಬ್ಸಿಡಿ ಕೊಡಲು ನಾವೂ ಸಿದ್ಧ

ಬೆಂಗಳೂರು: ಕೇಂದ್ರ ಸಚಿವ ಕುಮಾರಸ್ವಾಮಿ ಹಾಗೂ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ನಡುವಿನ ವಾಕ್ ಸಮರ ಮುಂದುವರೆದಿದ್ದು, ಗುಜರಾತ್ ಮಾದರಿಯಲ್ಲೇ ರಾಜ್ಯಕ್ಕೂ ಸಬ್ಸಿಡಿ ನೀಡಿದರೆ ತಮ್ಮ ಪಾಲಿನ ಸಬ್ಸಿಡಿ ನೀಡಲು ಸಿದ್ಧರಿದ್ದೇವೆ ಎಂದು ಕುಮಾರಸ್ವಾಮಿ ಹೇಳಿಕೆಗೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸವಾಲೆಸೆದಿದ್ದಾರೆ. ಈ ಕುರಿತು ತಮ್ಮ ಎಕ್ಸ್ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ಸೆಮಿಕಂಡಕ್ಟರ್ ಉದ್ಯಮದ ಬೆಳವಣಿಗೆಗೆ ಕೇಂದ್ರ ಸರಕಾರ ಗುಜರಾತ್ ರಾಜ್ಯಕ್ಕೆ ಕೊಟ್ಟಿರುವ ಹಾಗೆ ಶೇ.50ರಷ್ಟು ಸಬ್ಸಿಡಿಯನ್ನು ನೀಡುವುದಾದರೆ ರಾಜ್ಯ ಸರಕಾರ ಕೂಡ ತನ್ನ ಪಾಲಿನ ಶೇ.20ರಷ್ಟು ಸಬ್ಸಿಡಿ ಕೊಡಲು ಸಿದ್ಧವಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಕೇಂದ್ರ ಸರಕಾರ ಯಾವುದೇ ಉದ್ದಿಮೆಯಿರಲಿ ಎಲ್ಲ ರಾಜ್ಯಗಳಿಗೂ ಸಮಾನ ನೀತಿ ಅನುಸರಿಸಬೇಕು ಎನ್ನುವುದು ಕರ್ನಾಟಕದ ಪ್ರತಿಪಾದನೆಯಾಗಿದೆ. ಇದು ಸಹಜ ನ್ಯಾಯದ ತತ್ವವಾಗಿದ್ದು, ಇದನ್ನು ಕುಮಾರಸ್ವಾಮಿ ಅವರು ಅರ್ಥ ಮಾಡಿಕೊಂಡಿದ್ದಾರೆ. ರಾಜ್ಯ ಸರಕಾರವು ಉದ್ಯಮಸ್ನೇಹಿ ನೀತಿಗಳನ್ನು ಅನುಸರಿಸುತ್ತಿದೆ. ಆದರೆ ಕೇಂದ್ರ ಸರಕಾರ ಪ್ರಧಾನಿ ಮೋದಿ ಅವರ ಕಾರಣ ದಿಂದಾಗಿ ಗುಜರಾತ್ ಪರ ಧೋರಣೆ ತೋರಿಸುತ್ತಿದೆ. ನಾವು ಇದನ್ನಷ್ಟೇ ಪ್ರಶ್ನೆ ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ನಾಳೆ ಸ್ಮಾರ್ಟ್ ಪಾರ್ಕಿಂಗ್ ಲೋಕಾರ್ಪಣೆ

ಬೆಂಗಳೂರು: ಪಾಲಿಕೆ ಖಾಸಗಿ ಸಹಭಾಗಿತ್ವದಲ್ಲಿ ಫ್ರೀಡಂಪಾರ್ಕ್‌ನ ಬಹುಮಹಡಿ ಕಟ್ಟಡದಲ್ಲಿ ನಿರ್ಮಾಣ ಮಾಡಿರುವ ದೇಶದ ಮೊದಲ ಸ್ಮಾರ್ಟ್ ಪಾರ್ಕಿಂಗ್ ಸೆಂಟರ್ ಶುಕ್ರವಾರ ಜೂ.21ರಂದು ಲೋಕಾರ್ಪಣೆಗೊಳ್ಳಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಹು ನಿರೀಕ್ಷಿತ ಪಾರ್ಕಿಂಗ್ ಸೆಂಟರ್‌ನ್ನು ಉದ್ಘಾಟಿಸಲಿದ್ದು, ಡಿಸಿಎಂ ಡಿ.ಕೆ.ಶಿವಕುಮಾರ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಮೆಜೆಸ್ಟಿಕ್, ಕೆಆರ್ ಮಾರ್ಕೆಟ್, ವಿಧಾನಸೌಧ ಸುತ್ತಮುತ್ತಲ ಪ್ರದೇಶದ ವಾಹನಗಳ ಪಾರ್ಕಿಂಗ್ ಸಮಸ್ಯೆಗೆ ಈ ಪಾರ್ಕಿಂಗ್ ಸೆಂಟರ್ ಪರಿಹಾರವಾಗಿದೆ.

ಸಮಾಚಾರ ಸಣ್ಣದಲ್ಲ

ಕ್ರೂಸರ್‌ಪಲ್ಟಿ; 15 ಮಂದಿಗೆ ಗಾಯ

ಮುದ್ದೇಬಿಹಾಳ: ಮದರಿ ಹತ್ತಿರ ಇರುವ ಶ್ರೀ ಬಾಲಾಜಿ ಸಕ್ಕರೆ ಕಾರ್ಖಾನೆಗೆ ಸಿಬ್ಬಂದಿ ಮತ್ತು ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಕ್ರೂಸರ್ ಜೀಪ್ ಪಲ್ಟಿಯಾಗಿ 15 ಮಂದಿ ಗಾಯಗೊಂಡಿದ್ದು, ಇವರಲ್ಲಿ ಮೂವರ ಸ್ಥಿತಿ ಗಂಭೀರವಾಗಿರುವ ಘಟನೆ ಕೋಳೂರು ಗ್ರಾಮದ ಆಲಮಟ್ಟಿ ಎಡದಂಡೆ ಕಾಲುವೆಯ ಹತ್ತಿರ ನಡೆದಿದೆ. ತಾಲೂಕಿನ ಯರಗಲ್ಲ ಮುದ್ದೇಬಿಹಾಳದ ಅನೀ ವಡ್ಡರ, ಮುದ್ನಾಳದ ವಿಠ್ಠಲ ನಾವಿ, ಮುಧೋಳದ ಮಲ್ಲಿಕಾರ್ಜುನ ಕುಂಬಾರ ಗಂಭೀರವಾಗಿ ಗಾಯಗೊಂಡಿದ್ದು ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳಿಗೆ ಇಲ್ಲಿನ ತಾಲೂಕು ಸರಕಾರಿ ಆಸ್ಪತ್ರೆಯಲ್ಲಿ ವೈದ್ಯ ಡಾ. ಪರಶುರಾಮ ವಡ್ಡರ ನೇತೃತ್ವದ ವೈದ್ಯಕೀಯ ಸಿಬ್ಬಂದಿ ಪ್ರಾಥಮಿಕ ಚಿಕಿತ್ಸೆ ನೀಡಿದರು. ಜೀಪ್ ಪಲ್ಟಿ ಆಗಲು ನಿಖರ ಕಾರಣ ತಕ್ಷಣಕ್ಕೆ ತಿಳಿದುಬಂದಿಲ್ಲ. ಈ ಕುರಿತು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂಡೆ ಉರುಳಿ ಚಾಲಕ ಸಾವು

ಟೇಕಲ್: ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ಹಳೇಪಾಳ್ಯ ಗ್ರಾಮದ ಬಳಿ ಕಲ್ಲು ಬಂಡೆ ಒಡೆಯುವ ಸಂದರ್ಭದಲ್ಲಿ ಹಿಟಾಚಿ ಮೇಲೆ ಬೃಹತ್ ಕಲ್ಲು ಬಂಡೆ ಬಿದ್ದು ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೆಜಿಎಫ್ ತಾಲೂಕಿನ ಕ್ಯಾಸಂಬಳ್ಳಿ ಗ್ರಾಮದ ಪ್ರವೀಣ್ (32) ಮೃತ ಚಾಲಕ. ಟ್ರ್ಯಾಕ್ಟರ್ ಮೇಲೂ ಬಂಡೆ ಉರುಳಿದ್ದು, ಇತರ ಕಾರ್ಮಿಕರು ಸಿಲುಕಿಕೊಂಡಿರಬಹುದೆಂಬ ಶಂಕೆಯಿಂದ ಜೆಸಿಬಿ ಬಳಸಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಬಂಡೆ ಕೆಳಗೆ ಸಿಲುಕಿರುವ ಪ್ರವೀಣ್ ಮೃತ ದೇಹ ತೆಗೆಯುವ ಕಾರ್ಯಾಚರಣೆ ನಡೆದಿದೆ. ಹಳೇಪಾಳ್ಯ ಮಂಜುನಾಥ್ ಎಂಬುವರು ಗುತ್ತಿಗೆ ಪಡೆದು ಕಲ್ಲು ಬಂಡೆ ಒಡೆಯುವ ಕೆಲಸ ಮಾಡುತ್ತಿದ್ದಾರೆ. ಗಣಿ ಹಾಗೂ ಭೂವಿಜ್ಞಾನ ಇಲಾಖೆಯಿಂದ ಮಾಹಿತಿ ಪಡೆಯಲಾಗುವುದು ಎಂದು ಕೋಲಾರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ತಿಳಿಸಿದರು.

ಸ್ಥಿತಿವಂತರು ಗ್ಯಾರಂಟಿ ಲಾಭ ಕೈಬಿಡಲಿ

ಕಾರವಾರ: ಆರ್ಥಿಕವಾಗಿ ಸ್ಥಿತಿವಂತರಾದವರು ಗ್ಯಾರಂಟಿ ಯೋಜನೆಯ ಸೌಲಭ್ಯ ಪಡೆಯುತ್ತಿದ್ದರೆ, ಅದನ್ನು ನಿರಾಕರಿಸಿ ಬಡವರಿಗೆ ಅನುಕೂಲ ಕಲ್ಪಿಸಿಕೊಡಲಿ ಎಂದು ಮೀನುಗಾರಿಕೆ ಸಚಿವ ಮಂಕಾಳ ವೈದ್ಯ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಡವರು, ಅಶಕ್ತರ ನೆರವಿಗೆ ರಾಜ್ಯ ಸರಕಾರ ಕಲ್ಪಿಸಿದ ಗ್ಯಾರಂಟಿ ಯೋಜನೆಯ ಸೌಲಭ್ಯ ಕೆಲ ಸ್ಥಿತಿವಂತರಿಗೂ ಸಿಗುತ್ತಿದೆ. ಅಗತ್ಯ ಇಲ್ಲದಿದ್ದರೂ ಆ ಸೌಲಭ್ಯ ಪಡೆಯುವ ಬದಲು ಬಡವರಿಗೆ ಸಿಗುವಂತೆ ಅನುಕೂಲ ಮಾಡಿಕೊಡಬೇಕೆಂದು ಜನರಲ್ಲಿ ಕೋರುತ್ತೇನೆ ಎಂದು ತಿಳಿಸಿದರು.

ಎಚ್‌ಡಿಕೆ ಕ್ಷೇತ್ರವನ್ನು ಕಬ್ಜ ಮಾಡಿಕೊಳ್ಳಲು ಡಿಕೆ ಪ್ಲಾನ್ | ಡಿಕೆಶಿ ಚನ್ನಪಟ್ಟಣದಿಂದ ನಿಂತರೆ, ರಾಜ್ಯದಲ್ಲಿ ಮತ್ತೊಂದು ಉಪಚುನಾವಣೆ | ಕನಕಪುರದಿಂದ ಡಿ.ಕೆ ಸುರೇಶ್‌ರನ್ನು ಗೆಲ್ಲಿಸಿಕೊಂಡು ಬರುವ ಲೆಕ್ಕಾಚಾರ

ಅನಿವಾರ್ಯವಾದರೆ ಚನ್ನಪಟ್ಟಣದಿಂದ ಸ್ಪರ್ಧೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಕೀಯದಿಂದ ರಾಷ್ಟ್ರ ರಾಜಕಾರಣದತ್ತ ಮುಖ ಮಾಡಿರುವ ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣದ ಮೇಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಣ್ಣಿಟ್ಟಿದ್ದಾರೆ.

ರಾಜಕೀಯ ಬದ್ಧವೈರಿಯಾಗಿರುವ ಕುಮಾರಸ್ವಾಮಿ ಅವರ 'ಭದ್ರಕೋಟೆ' ಎನಿಸಿರುವ ಚನ್ನಪಟ್ಟಣಕ್ಕೆ ನಡೆಯುವ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವ ಮೂಲಕ, ಜೆಡಿಎಸ್ ಕುಟುಂಬದ ಭದ್ರಕೋಟೆಯೊಂದನ್ನು ಕಬ್ಜ ಮಾಡುವ ಲೆಕ್ಕಾಚಾರದಲ್ಲಿ ಡಿಕೆಶಿಯಿದ್ದಾರೆ. ಅಂದುಕೊಂಡಂತೆ ಡಿ.ಕೆ.ಶಿವಕುಮಾರ್ ಚನ್ನಪಟ್ಟಣದಿಂದ ಸ್ಪರ್ಧಿಸಿ, ಆರಿಸಿ ಬಂದರೆ ಡಿಕೆ ರಾಜೀನಾಮೆಯಿಂದ ತೆರವಾಗುವ ಕನಕಪುರಕ್ಕೆ ಮತ್ತೊಂದು ಉಪಚುನಾವಣೆ ನಡೆಯಲಿದ್ದು, ಅಲ್ಲಿಂದ ಡಿ.ಕೆ.ಸುರೇಶ್ ಅವರನ್ನು ನಿಲ್ಲಿಸಿ ವಿಧಾನಸಭೆಗೆ ಕರೆತರುವ ಲೆಕ್ಕಾಚಾರದಲ್ಲಿ ಡಿಕೆ ಇದ್ದಾರೆ ಎನ್ನಲಾಗಿದೆ.

ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣಕ್ಕೆ ಡಿ.ಕೆ ಸುರೇಶ್ ಎನ್ನುವ ಮಾತುಗಳು ಆರಂಭದಲ್ಲಿ ಕೇಳಿಬಂದಿತ್ತು. ಆದರೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಹೇಳಿಕೊಳ್ಳುವ 'ಲೀಡ್' ಪಡೆಯದೇ ಇರುವ ಕಾರಣ, ಇದೀಗ ಉಪಚುನಾವಣೆಗೆ ಸ್ಪರ್ಧಿಸಿ ಮುಖಭಂಗ ಅನುಭವಿಸುವುದು ಬೇಡ ಎನ್ನುವ ಕಾರಣಕ್ಕೆ ಡಿ.ಕೆ.ಶಿವಕುಮಾರ್ 'ತಂತ್ರ' ಬದಲಾಯಿಸಿದ್ದಾರೆ ಎನ್ನಲಾಗುತ್ತಿದೆ. ಇದರ ಭಾಗವಾಗಿಯೇ, ಬುಧವಾರ ಇಡೀ ದಿನ ಚನ್ನಪಟ್ಟಣದ ವಿವಿಧ ದೇವಾಲಯಗಳಿಗೆ ಭೇಟಿ ನೀಡುವುದರೊಂದಿಗೆ, 'ಅನಿವಾರ್ಯ'ವಾದರೆ ಚನ್ನಪಟ್ಟಣದಿಂದ ಸ್ಪರ್ಧಿಸುತ್ತೇನೆ ಎನ್ನುವ ಮಾತನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಡಿದ್ದಾರೆ.

ಪಕ್ಷದ ತೀರ್ಮಾನಕ್ಕೆ ಬದ್ಧ: ಚನ್ನಪಟ್ಟಣ ಪ್ರವಾಸಕ್ಕೂ ಮುನ್ನ ಸದಾಶಿವ ನಗರದ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪಚುನಾವಣೆಯಲ್ಲಿ ಚನ್ನಪಟ್ಟಣದ ಜನ ನನ್ನ ಮೇಲೆ ಒಲವು ತೋರಿದರೆ, ಪಕ್ಷ ತೀರ್ಮಾನಿಸಿದರೆ ನಾನು ಸ್ಪರ್ಧೆ ಮಾಡದೇ ಬೇರೆ ವಿಧಿಯಿಲ್ಲ. ಚನ್ನಪಟ್ಟಣ ಈ ಹಿಂದೆ ಸಾತನೂರು ವಿಧಾನಸಭಾ ಕ್ಷೇತ್ರದ ಭಾಗವಾಗಿದ್ದು, ಈ ಭಾಗ ನನಗೆ ರಾಜಕೀಯವಾಗಿ ಜನ್ಮ ನೀಡಿದ ಸ್ಥಳ. ಈ ಭಾಗದ ಜನ ಕಷ್ಟಕಾಲದಲ್ಲಿ ಹೆಚ್ಚಿನ ಮತ ನೀಡಿ ಬೆಂಬಲ ನೀಡಿದ್ದಾರೆ. ನಾನು ಅವರ ಋಣ ತೀರಿಸಬೇಕು. ಕನಕಪುರ ಯಾವ ರೀತಿ ಅಭಿವೃದ್ಧಿ ಮಾಡಿದ್ದೇನೋ ಅದಕ್ಕಿಂತ ಹೆಚ್ಚಿನ ಅಭಿವೃದ್ಧಿಗೆ ಅವಕಾಶವಿದೆ. ಹೀಗಾಗಿ ಈ ಕ್ಷೇತ್ರದ ಮೇಲೆ ನನಗೆ ವಿಶೇಷವಾದ ಕಾಳಜಿಯಿದೆ. ಚನ್ನಪಟ್ಟಣ ಅಭಿವೃದ್ಧಿ ಹಾಗೂ ಬದಲಾವಣೆಗೆ ನಾನು ಬದ್ಧವಾಗಿದ್ದೇನೆ. ಹೀಗಾಗಿ ಅಲ್ಲಿನ ದೇವಾಲಯಗಳಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿ ಮತದಾರರು, ನಾಯಕರೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು. ಡಿ.ಕೆ ಸುರೇಶ್ ಅವರು ಸ್ಪರ್ಧಿಸುವ ಬಗ್ಗೆ ಯಾವುದೇ ತೀರ್ಮಾನವಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಚನ್ನಪಟ್ಟಣ ಮಳೂರಿನ ಇತಿಹಾಸ ಪ್ರಸಿದ್ಧ ಶ್ರೀ ಅಪ್ರಮೇಯ ಸ್ವಾಮಿ ದೇಗುಲದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಬುಧವಾರ ಪೂಜೆ ಸಲ್ಲಿಸಿದರು.

> ಲೋಕಸಭೆ ಚುನಾವಣೆಯಲ್ಲಿ ಒಕ್ಕಲಿಗರು ಕೈ ಹಿಡಿಯಲಿಲ್ಲ ಎಂದು ಕೆಂಪೇಗೌಡ ಜಯಂತಿ ಆಚರಣೆಗೆ ಹೆಚ್ಚಿನ ಅನುದಾನ ನೀಡಲಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಬಿಜೆಪಿ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡ ಪ್ರತಿಮೆ ಅನಾವರಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕರೆಸಿದ್ದು ಏಕೆ? ಆ ಕಾರ್ಯಕ್ರಮಕ್ಕೆ ಜನ ಸೇರಿಸಲಾಗದೇ ಬಲವಂತವಾಗಿ ಶಾಲಾ, ಕಾಲೇಜು ಮಕ್ಕಳನ್ನು ಕರೆಸಿದ್ದು ಏಕೆ?
> –ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಪರಿಶೀಲನೆ ಬಳಿಕ ದರ ಏರಿಕೆ

ಜಲ ಮಂಡಳಿ ದೊಡ್ಡ ನಷ್ಟಕ್ಕೆ ಸಿಲುಕಿದ್ದು, ಕಳೆದ ಹತ್ತು ವರ್ಷಗಳಲ್ಲಿ ಬೆಂಗಳೂರಿನಲ್ಲಿ ನೀರಿನ ದರ ಪರಿಷ್ಕರಣೆ ಮಾಡಿಲ್ಲ. ಪ್ರತಿವರ್ಷ ನಷ್ಟ ಎದುರಾಗುತ್ತಿರುವುದರಿಂದ ಪರಿಹಾರದ ಸಾಧ್ಯತೆಗಳನ್ನು ಪರಿಶೀಲಿಸುತ್ತಿದ್ದು, ಆರ್ಥಿಕ ನೆರವು ನೀಡಲು ಯಾವುದೇ ಬ್ಯಾಂಕ್‌ಗಳು ಮುಂದೆ ಬರುತ್ತಿಲ್ಲ. ವಿಶ್ವ ಬ್ಯಾಂಕ್ ಸೇರಿದಂತೆ ಎಲ್ಲಾ ಸಂಸ್ಥೆಗಳು ಮಂಡಳಿ ನಷ್ಟದಿಂದ ಮೇಲೆ ಬರುವ ಪರ್ಯಾಯ ವಿಧಾನವನ್ನು ಕೇಳುತ್ತಿವೆ. ಸದ್ಯದಲ್ಲಿಯೇ ಕಾವೇರಿ ಐದನೇ ಹಂತದ ಯೋಜನೆ ಪೂರ್ಣಗೊಳ್ಳುತ್ತಿದೆ. ಕಾವೇರಿಯ 6 ಟಿಎಂಸಿ ನೀರನ್ನು ಬೆಂಗಳೂರಿಗೆ ಬಳಸಲು ನಾನು ಆದೇಶ ಹೊರಡಿಸಿದ್ದು, ಮತ್ತೊಂದು ಹಂತದ ಯೋಜನೆ ಅಗತ್ಯವಿದೆ. ಹೀಗಾಗಿ ಅಧಿಕಾರಿಗಳು ಸಾಧ್ಯಾಸಾಧ್ಯತೆಗಳ ಪರಿಶೀಲಿಸಿದ ನಂತರ ದರ ಏರಿಕೆ ವಿಚಾರವಾಗಿ ಅಧಿಕೃತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ಸಚಿವ ಜಾರ್ಜ್ ಭೇಟಿ

ಡೆಂಘೀ ಪ್ರಸರಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ

ಚಿಕ್ಕಮಗಳೂರು: ಇಂಧನ ಸಚಿವ ಕೆ.ಜೆ. ಜಾರ್ಜ್ ಬುಧವಾರ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಡೆಂಘೀ ಜ್ವರದಿಂದ ಚೇತರಿಸಿಕೊಳ್ಳುತ್ತಿರುವ ರೋಗಿಗಳ ಆರೋಗ್ಯ ವಿಚಾರಿಸಿ ಆಸ್ಪತ್ರೆಯ ವ್ಯವಸ್ಥೆ ಪರಿಶೀಲಿಸಿದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿರುವ ಡೆಂಘೀ ಪ್ರಕರಣಗಳ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು, ಆಸ್ಪತ್ರೆಯ ವ್ಯವಸ್ಥೆ ಸುಧಾರಣೆ ಹಾಗೂ ಉತ್ತಮ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಕುರಿತು ಜಿಲ್ಲಾ ಆರೋಗ್ಯಾಧಿಕಾರಿಗಳು, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ವೈದ್ಯರ ತಂಡದೊಂದಿಗೆ ಸಚಿವರು ಚರ್ಚಿಸಿದರು.

ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ರೋಗಿಗಳು ಹಾಗೂ ಸಂಬಂಧಿಕರಿಗೆ ಧೈರ್ಯ ತುಂಬಿದರಲ್ಲದೆ, ಉತ್ತಮ ಚಿಕಿತ್ಸೆ, ಆರೈಕೆಯ ಭರವಸೆ ನೀಡಿದರು. ಡೆಂಘೀ ಹಿನ್ನೆಲೆಯಲ್ಲಿ ಸಾರ್ವಜನಿಕ ಜಾಗೃತಿ ಅಭಿಯಾನ ನಡೆಸಿ, ಜನರಲ್ಲಿ ಅರಿವು ಮೂಡಿಸುವಂತೆ ಆರೋಗ್ಯ ಅಧಿಕಾರಿಗಳಿಗೆ ಸಲಹೆ ನೀಡಿದರು.

> ಡೆಂಘೀ ಚಿಕಿತ್ಸೆ ನೆಪದಲ್ಲಿ ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದಾರೆಂಬ ದೂರುಗಳು ಬರುತ್ತಿದ್ದು, ಅಂತಹ ಖಾಸಗಿ ಆಸ್ಪತ್ರೆಗಳ ವಿರುದ್ಧ ಕಠಿಣ ಕ್ರಮ.
> –ಎಚ್.ಡಿ.ತಮ್ಮಯ್ಯ, ಶಾಸಕ

ಡೆಂಘೀ ನಿಯಂತ್ರಣಕ್ಕೆ ಕ್ರಮ

ಡೆಂಘೀ ಹರಡುವಿಕೆಯನ್ನು ನಿಯಂತ್ರಿಸಲು ತಕ್ಷಣವೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಸಮುದಾಯದ ಆರೋಗ್ಯ ಮತ್ತು ಸುರಕ್ಷತೆಗೆ ನಮ್ಮ ಸರಕಾರ ಬದ್ಧವಾಗಿದೆ ಎಂದು ಸಚಿವ ಜಾರ್ಜ್ ತಿಳಿಸಿದರು.

ಇಂಧನ ಸಚಿವ ಕೆ.ಜೆ. ಜಾರ್ಜ್ ಬುಧವಾರ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಡೆಂಘೀ ಜ್ವರದಿಂದ ಚೇತರಿಸಿಕೊಳ್ಳುತ್ತಿರುವ ರೋಗಿಗಳ ಆರೋಗ್ಯ ವಿಚಾರಿಸಿ ಆಸ್ಪತ್ರೆಯ ವ್ಯವಸ್ಥೆ ಪರಿಶೀಲಿಸಿದರು.

ಬಸ್‌ನಲ್ಲಿ ಮರೆತ 2.50 ಲಕ್ಷ ಮರಳಿಸಿದ ಸಾರಿಗೆ ಸಿಬ್ಬಂದಿ

ರಾಯಚೂರು: ಸಾರಿಗೆ ಸಂಸ್ಥೆಯ ಬಸ್‌ನಲ್ಲಿ 2.50 ಲಕ್ಷ ನಗದು ಹಾಗೂ ಬ್ಯಾಂಕ್ ದಾಖಲಾತಿಗಳನ್ನು ಮರೆತುಹೋಗಿದ್ದ ವ್ಯಕ್ತಿಗೆ ಚಾಲಕ, ನಿರ್ವಾಹಕ ಮರಳಿ ಒಪ್ಪಿಸಿ ಪ್ರಾಮಾಣಿಕತೆ ಮೆರೆದಿದ್ದಾರೆ.

ವಾಯುವ್ಯ ಸಾರಿಗೆ ವಿಭಾಗದ ಹುಬ್ಬಳ್ಳಿ–ಹೈದರಾಬಾದ್ ಬಸ್‌ನಲ್ಲಿ ನಗರದ ಸೋಮಶೇಖರ್ ಪಾಟೀಲ್ ಎನ್ನುವವರು ಮಾನ್ವಿಯಿಂದ ರಾಯಚೂರಿಗೆ ಆಗಮಿಸಿದ್ದರು. ಇವರು ಡಿಸಿ ಮನೆ ಪಕ್ಕದ ನಿಲ್ದಾಣದಲ್ಲಿಯೇ ಅವಸರದಲ್ಲಿ ಇಳಿದುಕೊಂಡಿದ್ದಾರೆ. ಬಸ್‌ನಲ್ಲಿ ಹಣ ಮತ್ತು ದಾಖಲೆಗಳಿದ್ದ ಚೀಲ ಬಿಟ್ಟು ಹೋಗಿದ್ದಾರೆ. ಆದರೆ, ಚಾಲಕ ಮತ್ತು ನಿರ್ವಾಹಕ ಹೈದರಾಬಾದ್‌ನಲ್ಲಿ ಬಸ್ ಸ್ವಚ್ಛಗೊಳಿಸುವಾಗ ಚೀಲ ಸಿಕ್ಕಿದೆ. ಪರಿಶೀಲಿಸಿದಾಗ ಹಣ ಇರುವುದು ಪತ್ತೆಯಾಗಿದೆ. ಕೂಡಲೇ ಬ್ಯಾಂಕ್ ಪಾಸ್‌ಬುಕ್‌ನಲ್ಲಿ ಮೊಬೈಲ್ ನಂಬರ್ ಪಡೆದು ಕರೆ ಮಾಡಿದಾಗ ಹೌದು ಹಣ ಕಳೆದುಕೊಂಡಿದ್ದಾಗಿ ಪ್ರಯಾಣಿಕ ತಿಳಿಸಿದ್ದಾರೆ. ಬಸ್ ಬುಧವಾರ ಮರಳಿ ರಾಯಚೂರು ಬಸ್ ನಿಲ್ದಾಣಕ್ಕೆ ಬರಲಿದ್ದು, ಅಲ್ಲಿಗೆ ಬರುವಂತೆ ತಿಳಿಸಿದ್ದಾರೆ. ರಾಯಚೂರು ನಿಲ್ದಾಣಾಧಿಕಾರಿ ಶೀಲಪ್ಪ ಸಮ್ಮುಖದಲ್ಲಿ ಹಣದ ಜತೆಗೆ ಎಲ್ಲ ದಾಖಲೆಗಳನ್ನು ಮಾಲೀಕರಿಗೆ ಒಪ್ಪಿಸುವ ಮೂಲಕ ಪ್ರಾಮಾಣಿಕತೆ ಮೆರೆಯಲಾಗಿದೆ.

ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಅಸಮಾಧಾನ

ವೇತನ ಆಯೋಗದ ವರದಿ ಜಾರಿಗೆ ವಿಳಂಬ

> ಹೊಸ ಪಿಂಚಣಿ ಪದ್ಧತಿ ರದ್ದಾಗಬೇಕು. ಹಳೆ ಪಿಂಚಣಿ ಪದ್ಧತಿ ಜಾರಿಗೆ ಬರಬೇಕು ಎಂದು ಸಂಘ ಸರಕಾರವನ್ನು ಒತ್ತಾಯಿಸುತ್ತಲೇ ಬಂದಿದೆ. ಸರಕಾರ ನೌಕರರ, ಅವರ ಕುಟುಂಬಗಳ ಹಿತದೃಷ್ಟಿಯಿಂದ ಹಳೆ ಪಿಂಚಣಿ ವ್ಯವಸ್ಥೆಯನ್ನು ಶೀಘ್ರ ಜಾರಿಗೆ ತರಲಿದೆ.
> –ಸಿ.ಎಸ್.ಷಡಕ್ಷರಿ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ

ಶಿವಮೊಗ್ಗ: ಏಳನೇ ವೇತನ ಆಯೋಗದ ವರದಿ ಜಾರಿಗೆ ಸರಕಾರ ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯೋಗದ ವರದಿ ಅನುಷ್ಠಾನದ ಕುರಿತು ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ಸರಕಾರ ತೀರ್ಮಾನ ಕೈಗೊಳ್ಳುವ ವಿಶ್ವಾಸವಿದೆ. ಹಿಂದೆಲ್ಲಾ ವೇತನ ಆಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿದ ಒಂದು ತಿಂಗಳ ಒಳಗಾಗಿ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಸಂಪ್ರದಾಯವಿತ್ತು. ಆದರೆ ಏಳನೇ ವೇತನ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ನಾಲ್ಕು ತಿಂಗಳು ಗತಿಸಿವೆ. ಆದರೆ ಇನ್ನೂ ವರದಿ ಜಾರಿಯಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜೂನ್ ಅಂತ್ಯದ ಒಳಗೆ ಸರಕಾರ ಆಯೋಗದ ವರದಿಯನ್ನು ಜಾರಿಗೊಳಿಸುವ ವಿಶ್ವಾಸವಿದೆ. ಒಂದು ವೇಳೆ ಜಾರಿಯಾಗದಿದ್ದರೆ ಮುಂದೇನು ಮಾಡಬೇಕು ಎಂಬುದರ ಬಗ್ಗೆ ಸಂಘದ ಕಾರ್ಯಕಾರಿ ಮಂಡಳಿಯಲ್ಲಿ ಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕಾಡಾನೆ ಶವ ಪತ್ತೆ: ಆರ್‌ಎಫ್‌ಒ ಭೇಟಿ



ಹುಣಸೂರು: ನಾಗರಹೊಳೆ ಉದ್ಯಾನದ ಅಂತರ ಸಂತೆ ತಾಕರ ಶಾಖೆ ವಲಯದಲ್ಲಿ 25 ರಿಂದ 30 ವರ್ಷದ ಕಾಡಾನೆ ಶವ ಪತ್ತೆಯಾಗಿದೆ.

ಹೊಸಕೆರೆ ಗಸ್ತಿನ ಗೋಪಾಲದೇವರ ಗುಡಿ ಬೆಂಕಿ ರೇಖೆ ಬಳಿಯಲ್ಲಿ ಆನೆ ಶವ ಪತ್ತೆಯಾಗಿದೆ. ಗಸ್ತಿನಲ್ಲಿದ್ದ ಸಿಬ್ಬಂದಿಗಳು ಮಾಹಿತಿ ನೀಡಿದ ಮೇರೆಗೆ ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ ಎ.ಸಿ.ಎಫ್. ರಂಗಸ್ವಾಮಿ, ಆರ್.ಎಫ್.ಓ. ಭರತ್ ಭೇಟಿ ನೀಡಿ ಪರಿಶೀಲಿಸಿದರು.

ಅಂತರಸಂತೆ ಪಶು ಆಸ್ಪತ್ರೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಪ್ರಸನ್ನ ಮರಣೋತ್ತರ ಪರೀಕ್ಷೆ ನಡೆಸಿದರು. ಇದು ಸುಮಾರು 25 ರಿಂದ 30 ವರ್ಷ ಪ್ರಾಯದ ಗಂಡಾನೆಯಾಗಿದ್ದು, ಸಹಜವಾಗಿ ಸಾವನ್ನಪ್ಪಿದೆ. ಮರಣೋತ್ತರ ಪರೀಕ್ಷೆ ಬಳಿಕ ಆನೆಯ ಅಂತ್ಯ ಸಂಸ್ಕಾರ ನಡೆಸಲಾಗಿದೆ.

ಪಾರ್ಸೆಲ್‌ನಲ್ಲಿ ಬಂದ ನಾಗರಾಜ!

← ಮೊದಲಪುಟದಿಂದ

ಹೆಡೆ ಎತ್ತಿರುವ ಹಾವನ್ನು ನೋಡುತ್ತಿದ್ದಂತೆ, ಬಕೆಟ್ ಒಂದನ್ನು ಹಾಕಿ ಹಾವು ಹಿಡಿಯುವವರನ್ನು ಕರೆಸಿ ಹಾವನ್ನು ಮನೆಯಿಂದ ಸಾಗಿಸಿದ್ದಾರೆ. ಈ ಎಡವಟ್ಟಿಗೆ ಸಂಬಂಧಿಸಿದಂತೆ ಕೂಡಲೇ ದಂಪತಿ ಅಮೆಜಾನ್‌ಗೆ ದೂರು ನೀಡಿದ್ದಾರೆ. ದೂರು ಸ್ವೀಕರಿಸಿರುವ ಅಮೆಜಾನ್, ದಂಪತಿ ನೀಡಿದ್ದ ಹಣವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದೆ. ಆದರೆ, ವಿಷಪೂರಿತ ಹಾವು ಒಳನುಸುಳಿರುವ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಬದಲಾಗಿ ತಪ್ಪಾಗಿ ಪಾರ್ಸೆಲ್ ಬಂದಿರುವುದಕ್ಕೆ ವಿಷಾದ ವ್ಯಕ್ತಪಡಿಸುವುದಾಗಿ ಹೇಳಿಕೊಂಡಿದೆ.

ಅಮೆಜಾನ್‌ನ ಈ ರೊಬೊಟಿಕ್ ಪ್ರತಿಕ್ರಿಯೆಗೆ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದು, ಹೆಚ್ಚುಕಮ್ಮಿಯಾಗಿ ಈ ಪಾರ್ಸೆಲ್ ಅನ್ನು ಯಾರಾದರೂ ಮಕ್ಕಳು ತಗೆದುಕೊಂಡಿದ್ದರೆ ಗತಿಯೇನು? ಅಥವಾ ಪಾರ್ಸೆಲ್ ತಗೆಯುತ್ತಿದ್ದಂತೆ ಹಾವು ಕಚ್ಚಿದ್ದರೆ ಯಾರು ಹೊಣೆ ಎಂದು ಪ್ರಶ್ನಿಸಿದ್ದಾರೆ. ಆದರೆ ಪಾರ್ಸೆಲ್ ಒಳಗಡೆ ಜೀವಂತ ಹಾವು ಹೇಗೆ ಬಂತು? ಎನ್ನುವುದು ಇದೀಗ ಇರುವ ಬಹುದೊಡ್ಡ ಪ್ರಶ್ನೆಯಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ.

ದರ್ಶನ್ ವಿರುದ್ಧ 118 ಸಾಕ್ಷ್ಯ

← ಮೊದಲಪುಟದಿಂದ

ಮರಣೋತ್ತರ ವರದಿಯಲ್ಲಿ ಭೀಕರತೆ ಬಹಿರಂಗ

ರೇಣುಕಾಸ್ವಾಮಿ ಮೃತ ದೇಹದ ಮರಣೋತ್ತರ ಪರೀಕ್ಷೆಯ ವರದಿಯಲ್ಲಿನ ಅಂಶಗಳು ಬಹಿರಂಗವಾಗಿದೆ. ಅದರಲ್ಲಿ ರೇಣುಕಾಸ್ವಾಮಿ ಮೇಲೆ ಯಾವ ರೀತಿ ಕ್ರೌರ್ಯ ಮೆರೆದಿದ್ದರು ಎನ್ನುವುದು ಸ್ಪಷ್ಟವಾಗಿದೆ. ವೈದ್ಯರು ಸಲ್ಲಿಸಿರುವ ವರದಿಯಲ್ಲಿ, 'ಶಾಕ್ ಹಾಗೂ ಬಲವಾದ ಹೊಡೆತಗಳಿಂದ ರಕ್ತಸಾವ್ರವಾಗಿ ಸಾವು ಸಂಭವಿಸಿದೆ' ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಮೃತದೇಹದ ಮರಣೋತ್ತರ ಪರೀಕ್ಷೆಯ ವರದಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೂ ಕಳುಹಿಸಿರುವ ಪೊಲೀಸರು ವರದಿಗಾಗಿ ಕಾಯುತ್ತಿದ್ದಾರೆ ಎಂದು ತಿಳಿದುಬಂದಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕನಾಯಕನಹಳ್ಳಿ.

ದೂ.08133–268245 ಇ ಮೇಲ್–cdpocnhalli@yahoo.com

ಸಂ.ಶಿಅಯೋಚಿ/ಹೊಗು ವಾಹನ/2022–23 ದಿನಾಂಕ: 15.06.2024

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಚಿಕ್ಕನಾಯಕನಹಳ್ಳಿ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕಛೇರಿಗೆ 2024–25 ನೇ ಸಾಲಿನಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ವಾಹನ ಪಡೆಯಲು ಟ್ರಾವಲ್ ಏಜೆನ್ಸಿ/ ಸರಬರಾಜುದಾರರು/ಮಾಲೀಕರಿಂದ ಸ್ಪರ್ಧಾತ್ಮಕದರದಲ್ಲಿ ಪಾರದರ್ಶಕ ಅಧಿನಿಯಮದಂತೆ e-procurement ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 15.06.2024 ರಿಂದ 24.06.2024ರ ಸಂಜೆ 5.00ಗಂಟೆಯೊಳಗೆ ಟೆಂಡರ್ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು http://kppp. karnataka. gov.in ನಲ್ಲಿ ಪಡೆದು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಯ ಕಛೇರಿ, ಸಾಮರ್ಥ್ಯ ಸೌಧ, ತಾಲ್ಲೂಕು ಪಂಚಾಯಿತಿ ಆವರಣ ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಚಿಕ್ಕನಾಯಕನಹಳ್ಳಿ.

DIPR/TUM/67/KSMCA/2024-25

ರೇಷ್ಮೆ ಇಲಾಖೆ, ರೇಷ್ಮೆ ಸಹಾಯಕ ನಿರ್ದೇಶಕರು, ಚಿಂತಾಮಣಿ ವಿಭಾಗ, ಚಿಂತಾಮಣಿ

ಇ–ಟೆಂಡರ್ ಪ್ರಕಟಣೆ

ಚಿಂತಾಮಣಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ತಾಂತ್ರಿಕ ಸೇವಾ ಕೇಂದ್ರಗಳಾದ **ಚಿಂತಾಮಣಿ, ಕೈವಾರ ಮತ್ತು ಏನಿಗದಲೆ/ಯಗವಕೋಟೆ ತಾಂತ್ರಿಕ ಸೇವಾ ಕೇಂದ್ರಗಳಿಗೆ ಜುಲೈ–2024 ರಿಂದ ಜೂನ್–2025ರ ಮಾಹೆಯವರೆಗೆ** ತಲಾ ಒಬ್ಬರಂತೆ ಕಛೇರಿಗಳಿಗೆ ಕಾರ್ಯಾಧಾರಿತ ದರಗಳಲ್ಲಿ ಗಣಕಯಂತ್ರ ನಿರ್ವಾಹಕರ ಸೇವೆಯನ್ನು ಒದಗಿಸಲು ಸರ್ಕಾರ ನಿಗದಿಪಡಿಸಿರುವ ಮೊತ್ತಕ್ಕೆ ಸೇವಾ ಶುಲ್ಕ ಭರಿಸಲು ನಿಯಮಾನುಸಾರ ಇ–ಸಂಗ್ರಹಣೆ ಮೂಲಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿವುಳ್ಳವರು **ದಿನಾಂಕ: 28.06.2024 ಅಪರಾಹ್ನ:3.00 ಘಂಟೆಯೊಳಗೆ kppp.karnataka.gov.in** ಮೂಲಕ ಸಲ್ಲಿಸಲು ಸೂಚಿಸಿದೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸುವುದು. ಮೊಬೈಲ್ ಸಂ:**9980905217**

ಸಹಿ/– ರೇಷ್ಮೆ ಸಹಾಯಕ ನಿರ್ದೇಶಕರು ಚಿಂತಾಮಣಿ ವಿಭಾಗ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:34/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,ವಿಭಾಗ ವಿಜಯಪುರ

No.EE/MID/VJP/AE-1,2,3,4/4702&SDMF/TND/2024-25/658 Date: 18.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702–ನಬಾರ್ಡ(ಆರ್.ಐ.ಡಿ.ಎಫ್–29) ಕಾಮಗಾರಿಗಳು :– ಒಟ್ಟು 1 ಕಾಮಗಾರಿ(3ನೇ ಕರೆ), ಅಂದಾಜು ಮೊತ್ತ **ರೂ.50.00ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ನಾಲ್ಕು(4) ತಿಂಗಳುಗಳು.**

4702–ಪ್ರಧಾನ ಕಾಮಗಾರಿಗಳು :– ಒಟ್ಟು 6 ಕಾಮಗಾರಿಗಳು, ಅಂದಾಜು ಮೊತ್ತ **ರೂ.510.00ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳಿಂದ ಒಂಭತ್ತು(9) ತಿಂಗಳುಗಳು.**

2245–ರಾಜ್ಯ ವಿಪತ್ತು ಉಪಶಮನ ನಿಧಿ ಕಾಮಗಾರಿಗಳು :– ಒಟ್ಟು 5 ಕಾಮಗಾರಿಗಳು, ಅಂದಾಜು ಮೊತ್ತ **ರೂ.500.00ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಆರು(6) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**21.06.2024** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್ ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/ portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**28.06.2024** ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ:**25.06.2024** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ:**27.06.2024** ರ 17–30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ (ಫೋನ ನಂ–08352–277188) ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ (ಫೋನ ನಂ–080–25501216 ಮತ್ತು 080–25501227) ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ

ವಾಸಾಸಂಇ/ವಿಜಯಪುರ/49/ಕೆಎಸ್‌ಎಂಸಿಎ/2024–25

ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ.

ಪ್ಲಾಟ್ ನಂ.77, ಜಿಲ್ಲಾಡಳಿತ ಭವನ ಆವರಣ, ಕರೂರು ಇಂಡಸ್ಟ್ರೀಯಲ್ ಏರಿಯಾ, ಹಳೇ ಪಿ.ಬಿ. ರಸ್ತೆ, ದಾವಣಗೆರೆ–577006.

ಸಂಖ್ಯೆ: ಡಿಎಸ್‌ಸಿಎಲ್/ಕಾಅ/Labelling Strategy/2023–24/187 ದಿನಾಂಕ: 18–06–2024

"ಕೊಟೇಷನ್ ಆಹ್ವಾನ"

ಕಾಮಗಾರಿಯ ಹೆಸರು: "Supply, installation and Commissioning of Signages with Labelling for Davanagere Smart City Works in Davanagere City"

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದಾವಣಗೆರೆ ಸ್ಮಾರ್ಟ್ ಸಿಟಿ ಲಿ., ಯೋಜನೆಯಡಿಯಲ್ಲಿಕೈಗೊಂಡು ಪೂರ್ಣಗೊಳಿಸಲಾಗಿರುವ ಕಾಮಗಾರಿಗಳಿಗೆ ದಾವಣಗೆರೆ ಸ್ಮಾರ್ಟ್ ಸಿಟಿ ಲಿ., ನ ಸೂಚನಾ ಫಲಕಗಳನ್ನು ಅಳವಡಿಸಲು "Supply, installation and Commissioning of Signages with Labelling for Davanagere Smart City Works in Davanagere City" ಕಾಮಗಾರಿಯನ್ನು ನಿರ್ವಹಿಸುವುದಕ್ಕಾಗಿಅರ್ಹ ಏಜೆನ್ಸಿಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿರುತ್ತದೆ. ಕೊಟೇಷನ್‌ನಲ್ಲಿ ದರವನ್ನು ಸಲ್ಲಿಸುವಾಗ ಜಿ.ಎಸ್.ಟಿ. ಯನ್ನು ಸೇರಿಸಿ ಸಲ್ಲಿಸುವುದು ಹಾಗೂ ಕಾಮಗಾರಿ ನಿರ್ವಹಿಸಿ ಪೂರ್ಣಗೊಳಿಸುವವರೆಗಿನ ಪೂರ್ಣ ವೆಚ್ಚವನ್ನು ಕೊಟೇಷನ್ ದರದಲ್ಲಿ ನಮೂದಿಸಿ ಸಲ್ಲಿಸುವುದು.

(1) ಉಲ್ಲೇಖದ ಸಂಖ್ಯೆ: DSCL/Quotation/DSCL-Labelling/2023-24 (2) ಕಾಮಗಾರಿ ವಿವರ Signages with Labelling (3) ದರಪಟ್ಟಿ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ 26–06–2024 ರ ಮಧ್ಯಾಹ್ನ 3.00 ಗಂಟೆ ಒಳಗೆ (4) ದರಪಟ್ಟಿ ತೆರೆಯುವ ದಿನಾಂಕ ಮತ್ತು ಸಮಯ 26–06–2024 ರ ಸಂಜೆ 4.00 ಗಂಟೆ ಸದರಿದರಪಟ್ಟಿ (ಕೊಟೇಷನ್) ಅನ್ನು ಸಲ್ಲಿಸುವವರು ದರ ಪಟ್ಟಿಯನ್ನು ಮೊಹರ್ ಮಾಡಿದ ಲಕೋಟೆಯಲ್ಲಿ ದಿನಾಂಕ: 26–06–2024 ರಂದು ಸಂಜೆ 3:00 ಗಂಟೆಯ ಒಳಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08192–222383 ಅಥವಾ ಇ–ಮೇಲ್ smartcitydavanagere@gmail.com ಮುಖಾಂತರ ಕಛೇರಿಯ ಕೆಲಸದ ವೇಳೆಯಲ್ಲಿ ದರಪಟ್ಟಿಯ ಪೂರ್ಣ ದಾಖಲೆಗಳು, ಐಟಂಗಳ ವಿವರ ಹಾಗೂ ಇತರೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಸದರಿದರಪಟ್ಟಿಯನ್ನು ಅಂಗೀಕರಿಸುವ / ತಿರಸ್ಕರಿಸುವ ಅಧಿಕಾರ ಈ ಕೆಳ ಸಹಿದಾರರಿಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ದಾವಣಗೆರೆ ಸ್ಮಾರ್ಟ್ ಸಿಟಿ ಲಿ., ದಾವಣಗೆರೆ.

ವಾಸಾಇ/ದಾವಣಗೆರೆ/66/ ಕೆಎಸ್‌ಎಂಸಿಎ/2024–25

ನಗರಸಭೆ ಕಾರ್ಯಾಲಯ ಕೋಲಾರ

ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಸಿಆರ್/02/2024–25 ದಿನಾಂಕ:15.06.2024

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೋಲಾರ ನಗರಸಭೆ ವತಿಯಿಂದ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ, 15ನೇ ಹಣಕಾಸು ಎನ್‌ಎಂಪಿಸಿ, ನಗರಸಭೆ ನಿಧಿಯಡಿಯಲ್ಲಿ 12 ಸಂಖ್ಯೆ ಕಾಮಗಾರಿಗಳಿಗೆ ಮತ್ತು 2 ಸಂಖ್ಯೆ ಸೇವೆಗಳಿಗೆ ಸಂಬಂಧಿಸಿದಂತೆ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಾಮಾನ್ಯ ವರ್ಗಕ್ಕೆ 11 ಸಂಖ್ಯೆ, ಪರಿಶಿಷ್ಟ ಜಾತಿಗೆ 2 ಸಂಖ್ಯೆ, ಪರಿಶಿಷ್ಟ ಪಂಗಡಕ್ಕೆ 1 ಸಂಖ್ಯೆ ಒಟ್ಟು 14 ಸಂಖ್ಯೆ ಪ್ಯಾಕೇಜ್‌ಗಳಿಗೆ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇಲಾಖಾ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

(1) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 01.07.2024 ರ ಸಂಜೆ 17.30 ಗಂಟೆವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 03.07.2024 ರ ಬೆಳಿಗ್ಗೆ 11.00 ಗಂಟೆಗೆ.** ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 04.07.2024 ರ ಬೆಳಿಗ್ಗೆ 11.00 ಗಂಟೆಗೆ.**

ಸೂಚನೆ: ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/–ಪೌರಾಯುಕ್ತರು, ನಗರಸಭೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:39/ಕೆಎಸ್‌ಎಂಸಿಎ/2024–25

ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ, ಹಾಸನ ಜಿಲ್ಲೆ–573103

ಸಂ/ಜಸಾಆ/ಟೆಂಡರ್/06/2024–25 ದಿನಾಂಕ:15.06.2024

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ

01.ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ ಅರಸೀಕೆರೆ ಇಲ್ಲಿಗೆ 2024–25 ನೇ ಸಾಲಿನ ನಾನ್ ಕ್ಲಿನಿಕ್(ಸ್ವಚ್ಚತಾ ಸೇವೆ), ಗ್ರೂಪ್–ಡಿ ನೌಕರರನ್ನು ಹಾಗೂ ಡಾಟಾ ಎಂಟ್ರಿ ಆಪರೇಟರ್‌ನ್ನು ಹೊರಗುತ್ತಿಗೆ ಆಧಾರದಲ್ಲಿ ಸೇವೆಯನ್ನು ನಿರ್ವಹಿಸಲು ವಿವಿಧ ಸಂಸ್ಥೆಗಳಿಂದ ಇ–ಪ್ರಕ್ಯೂರ್ ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. 02ಟೆಂಡರ್ ಸಲ್ಲಿಸುವ ದಿನಾಂಕ: 15.06.2024 ರಿಂದ 01.07.2024 ರವರೆಗೆ. 03.ಟೆಂಡರ್ ಫಾರಂನ್ನು ಇ–ಪಕ್ಯೂರ್ ಮೆಂಟ್ ಮೂಲಕ ಆನ್ ಲೈನ್ ನಲ್ಲಿ www.kppp.karnataka.gov.in ವೆಬೈಟ್ ಮುಖಾಂತರ ಅರ್ಜಿ ಸಲ್ಲಿಸುವುದು. 03.ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:01.07.2024 ರಂದು ಸಂಜೆ 05:30 ಗಂಟೆಗೆ 05.ದಿನಾಂಕ:02.07.2024 ರಂದು ಸಂಜೆ 5:30 ಗಂಟೆಗೆ ತಾಂತ್ರಿಕ ಲಕೋಟೆಯನ್ನು ತೆರೆಯಲಾಗುವುದು. 06.ಟೆಂಡರ್ ಅನುಮೋದನಾ ಸಮಿತಿ ನಿಗದಿ ಪಡಿಸುವ ದಿನಾಂಕದಂದು ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು. 07.ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು. ಫೋ.ನಂ.08174–232380 ಕ್ರ.ಸಂ.ವಿವರ:1)ನಾನ್ ಕ್ಲಿನಿಕ್ (ಸ್ವಚ್ಚತಾ ಸೇವೆ) ಅಂದಾಜು ಮೊತ್ತ: ರೂ. 3010045/– ಇ.ಎಂ.ಡಿ: ರೂ.602009/– 02)ಗ್ರೂಪ್ ಡಿ. ಅಂದಾಜು ಮೊತ್ತ: ರೂ.2817804/– ಇ.ಎಂ.ಡಿ: ರೂ.70446/– 03)ಡಾಟಾ ಎಂಟ್ರಿ ಆಪರೇಟರ್ ಅಂದಾಜು ಮೊತ್ತ: 231806/– ಇ.ಎಂ.ಡಿ: ರೂ.5796/–

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ, ಹಾಸನ ಜಿಲ್ಲೆ

ವಾಸಾಸಂಇ/ಹಿಸನಿ/ಹಾಸನ/77/ಕೆಎಸ್‌ಎಂಸಿಎ/2024–25

ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ:ನಸಹೊ/ತಾಂತ್ರಿಕ/ಕಾಮಗಾರಿ/ಟೆಂಡರ್/2024–25 ದಿನಾಂಕ:18–06–2024

ಟೆಂಡರಿಗಾಗಿಆಹ್ವಾನ (ಐ.ಎಫ್.ಟಿ.) ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)

2024–25ನೇ ಸಾಲಿನ ನಗರಸಭೆ ಅನುದಾನದ ಅಡಿಯಲ್ಲಿ ಈ ಕೆಳಗಿನ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ (2020–2025 ನೇ ಸಾಲಿನಲ್ಲಿ ನೊಂದಾಯಿತ) ಸೂಕ್ತ ದರ್ಜೆಯಲ್ಲಿ ನೊಂದಾಯಿತಅರ್ಹಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಗುತ್ತಿಗೆದಾರರುತಮಗೆ ಬೇಕಾದಟೆಂಡರ್ ವಿವರಗಳನ್ನು**www.kppp.karnataka.govt.in** ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿಇ–ಪ್ರೋಕ್ಯೂರ್‌ಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1)ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ **: 03–07–2024 ಸಂಜೆ 5.00 ಗಂಟೆವರೆಗೆ.** 2)ತಾಂತ್ರಿಕ ಬಿಡ್‌ತೆರೆಯುವ ದಿನಾಂಕ **: 04–07–2024 ಸಂಜೆ 5.10 ಗಂಟೆ.** 3)ಆರ್ಥಿಕ ಬಿಡ್‌ತೆರೆಯುವದಿನಾಂಕ **05–07–2024 ಸಂಜೆ 5.10 ಗಂಟೆ ನಂತರ.** 4)ಟೆಂಡರ್‌ಗಳನ್ನು ತೆರೆಯುವ ಸ್ಥಳ **: ನಗರಸಭೆ, ಹೊಸಪೇಟೆ.**

2024–25ನೇ ಸಾಲಿನ ನಗರಸಭೆ ನಿಧಿ 1.ಪ್ಯಾಕೇಜ್ ಸಂಖ್ಯೆ : – ಇಂಡೆಂಟ್ ನಂಬರ್: DMA/2024-25/WS/WORK_INDENT-18546. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 113.50

ಸಹಿ/– ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಗರಸಭೆ, ಹೊಸಪೇಟೆ. ಸಹಿ/–ಪೌರಾಯುಕ್ತರು ನಗರಸಭೆ, ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/55

ಸಮಾಚಾರ ಸಣ್ಣದಲ್ಲ

ನೇಹಾ ತಂದೆ ಆಪ್ತನ ಅಪಹರಣ ಯತ್ನ

ಹುಬ್ಬಳ್ಳಿ: ಹತ್ಯೆಯಾದ ನೇಹಾ ಹಿರೇಮಠ ತಂದೆ, ಪಾಲಿಕೆ ಸದಸ್ಯ ನಿರಂಜನಯ್ಯ ಹಿರೇಮಠ ಆಪ್ತ ಸಹಾಯಕನ ಅಪಹರಣಕ್ಕೆ ಮೂವರು ಯತ್ನಿಸಿದ್ದಾರೆಂದು ಆರೋಪಿಸಿ ಇಲ್ಲಿನ ಘಟಿಕೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಿರಂಜನಯ್ಯನ ಆಪ್ತ ಸಹಾಯಕ ಈರಣ್ಣ ಉರೂಫ್ ವಿಜಯ ಅಪಹರಣಕ್ಕೆ ಬುಧವಾರ ಬೆಳಗ್ಗೆ ವಾಳ್ವೇಕರ ಗಲ್ಲಿಯ ಗಜಾನನ ಬ್ಯಾಂಕ್ ಎದುರು ಯತ್ನಿಸಿದ್ದಾರೆಂದು ಆರೋಪಿಸಿ ಠಾಣೆಯಲ್ಲಿ ದೂರು ಸಲ್ಲಿಸಲಾಗಿದೆ. ಈರಣ್ಣ ಬೆಳಗಿನ ಜಾವ 5 ಗಂಟೆ ಸುಮಾರಿಗೆ ಬೀದಿ ದೀಪ ಬಂದ್ ಮಾಡಲು ಹೋಗಿದ್ದ. ಈ ವೇಳೆ ಕಾರು ಹತ್ತುವಂತೆ ಮೂರು ವ್ಯಕ್ತಿಗಳು ಒತ್ತಾಯಿಸಿದ್ದಾರೆ ಎನ್ನಲಾಗಿದೆ. ಈ ವೇಳೆ ಭಯಗೊಂಡು ಮೊಬೈಲ್‌ನಿಂದ ವಿಡಿಯೋ ಮಾಡಲು ಮುಂದಾಗುತ್ತಿದ್ದಂತೆಯೇ ಅವರು ಅಲ್ಲಿಂದ ಕಾಲ್ಕಿತ್ತರೆಂದು ಈರಣ್ಣ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ. ಅಪಹರಿಸಲು ಬಂದವರು ಯಾರು? ಯಾವ ಕಾರಣಕ್ಕೆ ಯತ್ನಿಸಿದ್ದರು ಎಂಬ ಕುರಿತು ಪೊಲೀಸರು ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಘಂಟಿಕೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆಪ್ಪ ಮುಳುಗಿ ಮೂವರು ಸಾವು

ಚಿಕ್ಕಮಗಳೂರು: ತೆಪ್ಪ ಮುಳುಗಿ ಮೂವರು ಪ್ರವಾಸಿಗರು ನೀರುಪಾಲಾದ ಘಟನೆ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲೂಕಿನ ಬೈರಾಪುರ ಗ್ರಾಮದಲ್ಲಿ ಬುಧವಾರ ನಡೆದಿದೆ. ನೀರುಪಾಲಾದವರನ್ನು ಆದೀಲ್, ಸಾಜೀದ್ ಹಾಗೂ ಅಫ್ಘಾಖಾನ್ ಎಂದು ಗುರುತಿಸಲಾಗಿದ್ದು, ಇವರು ಶಿವಮೊಗ್ಗ ಜಿಲ್ಲೆಯ ವಿದ್ಯಾನಗರ ವಾಸಿಗಳೆಂದು ಹೇಳಲಾಗಿದೆ. ಬೈರಾಪುರ ಗ್ರಾಮದಲ್ಲಿರುವ ಭದ್ರಾ ನದಿಯ ಹಿನ್ನೀರಿನಲ್ಲಿ ತೆಪ್ಪದಲ್ಲಿ ಹೋಗುತ್ತಿದ್ದ ವೇಳೆ ತೆಪ್ಪ ಮುಳುಗಿ ಮೂವರು ನೀರುಪಾಲಾಗಿದ್ದಾರೆ. ಘಟನಾ ಸ್ಥಳಕ್ಕೆ ವನ್ಯಜೀವಿ, ಪೊಲೀಸ್ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳ ಭೇಟಿ ಶೋಧ ಕಾರ್ಯ ನಡೆಸುತ್ತಿದ್ದಾರೆ. ಎನ್.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಚಿಕ್ಕಮ್ಮನ ಕೊಲೆ ವಿದ್ಯಾರ್ಥಿ ಬಂಧನ

ದಕ್ಷಿಣ ಕನ್ನಡ: ಆಸರೆ ಕೊಟ್ಟ ಚಿಕ್ಕಮ್ಮನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ, ವಿರೋಧಿಸಿದ್ದಕ್ಕೆ ಕೊಲೆ ಮಾಡಿದ ಆರೋಪದ ಮೇಲೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯನ್ನು ಉಪ್ಪಿನಂಗಡಿ ಪೊಲೀಸರು ಬಂಧಿಸಿದ್ದಾರೆ. ಹೇಮಾವತಿ ಮೃತ ಮಹಿಳೆ. ಬಂಟ್ವಾಳ ತಾಲೂಕಿನ ಪೆರ್ನೆ ಗ್ರಾಮದ ಬಿಳಿಯೂರು ಬಳಿ ನಡೆದಿದೆ. ಜೂ.16ರಂದು ಬಿಳಿಯೂರಿನ ಮನೆಯಲ್ಲಿ ಹೇಮಾವತಿ ಅಕ್ಕನ ಮನೆಯಲ್ಲಿಯೇ ಮೃತದೇಹ ಪತ್ತೆಯಾಗಿದೆ. ಎಸ್‌ಎಸ್‌ಎಲ್‌ಸಿ ಓದುತ್ತಿದ್ದ ಅಕ್ಕನ ಮಗನನ್ನು ಹೇಮಾವತಿ ಮನೆಯಲ್ಲಿ ಇರಿಸಿಕೊಂಡಿದ್ದಳು. ಎಂದಿನಂತೆ ಹೇಮಾವತಿ ಊಟ ಮುಗಿಸಿ ಪ್ರತ್ಯೇಕ ಕೋಣೆ ಯಲ್ಲಿ ಮಲಗಿದ್ದಾರೆ. ತಡರಾತ್ರಿ ಆಗುತ್ತಿದ್ದಂತೆ ಬಾಲಕ ಚಿಕ್ಕಮ್ಮನ ಮೇಲೆ ಅತ್ಯಾಚಾರ ಮಾಡಲು ಮುಂದಾಗಿದ್ದಾನೆ. ಈ ವೇಳೆ ಆತನ ಅತ್ಯಾಚಾರ ಯತ್ನಕ್ಕೆ ವಿರೋಧಿಸಿ ಕೆನ್ನೆಗೆ ಒಂದು ಬಾರಿಸಿ ಕಳಿಸಿದ್ದಾಳೆ. ಬೆಳಗಾದರೆ ತನ್ನ ಬಗ್ಗೆ ಚಿಕ್ಕಮ್ಮ ಎಲ್ಲರೆದುರು ಅತ್ಯಾಚಾರ ಯತ್ನದ ಬಗ್ಗೆ ಹೇಳಿ ಮರ್ಯಾದೆ ಕಳೆಯುತ್ತಾರೆ ಎಂದು ಹೆದರಿಕೊಂಡು ರಾತ್ರಿ ಮಲಗಿದ್ದ ಚಿಕ್ಕಮ್ಮನನ್ನು ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ.

ಹುಬ್ಬಳ್ಳಿ-ಮುಂಬೈ ವಿಮಾನ ಪುನಾರಂಭ

ಹುಬ್ಬಳ್ಳಿ: ಹುಬ್ಬಳ್ಳಿ-ಮುಂಬೈ ನಡುವೆ ನಿತ್ಯ ವಿಮಾನಯಾನ ಸೇವೆ ಜುಲೈ 15ರಿಂದ ಪುನರರಾಂಭಗೊಳ್ಳಲಿದೆ. ಇಂಡಿಗೋ ವಿಮಾನಯಾನ ಸಂಸ್ಥೆಯಿಂದ ವಿಮಾನ ಸಂಚಾರ ಕೈಗೊಳ್ಳಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ವಿಮಾನ ಸಂಖ್ಯೆ 6ಇ 736 ಮುಂಬೈ-ಹುಬ್ಬಳ್ಳಿ ವಿಮಾನ ನಿತ್ಯ ಮಧ್ಯಾಹ್ನ 3:00 ಗಂಟೆಗೆ ಹೊರಟಲಿದ್ದು 4:10 ಗಂಟೆಗೆ ಹುಬ್ಬಳ್ಳಿಗೆ ಆಗಮಿಸಲಿದೆ. ಅದೇ ದಿನ ವಿಮಾನ 6ಇ 737 ವಿಮಾನ ಹುಬ್ಬಳ್ಳಿಯಿಂದ ಮಧ್ಯಾಹ್ನ 4:40ಕ್ಕೆ ಹೊರಟು, 5:50 ಗಂಟೆಗೆ ಮುಂಬೈ ತಲುಪಲಿದೆ. ತಮ್ಮ ಪ್ರಸ್ತಾವನೆ ಮೇರೆಗೆ ಇಂಡಿಗೋ ಸಂಸ್ಥೆಯ ನಿರ್ವಹಣಾ ಸಮಿತಿ ವಿಮಾನ ಸೇವೆ ಪುನರರಾಂಭಕ್ಕೆ ಮುಂದಾಗಿದೆ. ಈ ಭಾಗದ ವ್ಯಾಪಾರ- ವಹಿವಾಟು ಅಭಿವೃದ್ಧಿಗೆ ಸಹಕಾರಿ ಆಗಲಿದೆ ಎಂದು ಜೋಶಿ ತಿಳಿಸಿದ್ದಾರೆ.



ಶಿಕ್ಷಣ ಕೇವಲ ಅಂಕಗಳಿಸುವುದಲ್ಲ; ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ಸಹಾಯ ಮಾಡಬೇಕು | ವಿದ್ಯಾವಂತರಲ್ಲಿಯೇ ಜಾತಿಪ್ರಜ್ಞೆ ಹೆಚ್ಚಾಗುತ್ತಿದೆ

ಜಾತಿ ಕಾರಣದಿಂದ ಸಮಾಜದಲ್ಲಿ ಅಸಮಾನತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯಾವಂತರಲ್ಲೇ ಜಾತಿಪ್ರಜ್ಞೆ ಹೆಚ್ಚಾಗುತ್ತಿದೆ. ಡಾಕ್ಟರ್ ಓದಿದವರು ಇನ್ನೂ ಮೌಢ್ಯ ಬಿಟ್ಟಿಲ್ಲ. ಓದಿದವರೇ ಇನ್ನೂ ಹಣೆಬರಹದಲ್ಲಿ, ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ವಿದ್ಯಾರ್ಥಿಗಳು ಇಂತಹ ಮೌಢ್ಯದಲ್ಲಿ ನಂಬಿಕೆ ಇಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಮಾತನಾಡಿದ ಅವರು, ದಲಿತ ಸಂಘರ್ಷ ಸಮಿತಿಯವರು 'ನಮಗೆ ಸರಾಯಿ ಅಂಗಡಿ ಬೇಡ. ವಸತಿ ಶಾಲೆ ಬೇಕು' ಎನ್ನುವ ಹೋರಾಟದಿಂದ ಪ್ರೇರಿತನಾಗಿ ನನ್ನ ಮೊದಲ ಬಜೆಟ್‌ನಲ್ಲಿ ಗ್ರಾಮೀಣ ಭಾಗದಲ್ಲಿ ಮೊರಾರ್ಜಿ ಶಾಲೆಗಳನ್ನು ಆರಂಭಿಸಿದೆ. ಅವತ್ತಿನಿಂದ ನಿರಂತರವಾಗಿ ಮೊರಾರ್ಜಿ ವಸತಿ ಶಾಲೆಗಳನ್ನು ತೆರೆಯುತ್ತಲೇ ಇದ್ದೇನೆ. ಸದ್ಯ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ 833 ವಸತಿ ಶಾಲೆಗಳಿವೆ. ಅಲ್ಪ ಸಂಖ್ಯಾತ ಇಲಾಖೆಯಡಿಯಲ್ಲಿರುವುದೂ ಸೇರಿ ಒಟ್ಟು 946 ವಸತಿ ಶಾಲೆಗಳಿವೆ ಎಂದು ವಿವರಿಸಿದರು.

ಗ್ರಾಮೀಣ ಭಾಗದಲ್ಲಿ ಸರ್ವರಿಗೂ ಗುಣಮಟ್ಟದ ವೈಚಾರಿಕತೆ, ವೈಜ್ಞಾನಿಕತೆಯಿಂದ ಕೂಡಿದ ಶಿಕ್ಷಣ ದೊರೆಯಬೇಕು. ಜಾತಿ ವ್ಯವಸ್ಥೆ ಕಾರಣದಿಂದ ಸಮಾಜದಲ್ಲಿ ಅಸಮಾನತೆ ಸೃಷ್ಟಿಯಾಗಿದೆ. ಎಲ್ಲಾ ಜಾತಿ, ಜನವರ್ಗದ ಮಕ್ಕಳಿಗೆ ಓದುವ ಅವಕಾಶ ಕಲ್ಪಿಸಿದ್ದು ನಮ್ಮ ಸಂವಿಧಾನ ಎಂದರು.

ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಈ ವೇಳೆ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಶಾಸಕ ರಿಜ್ವಾನ್ ಅರ್ಷದ್, ವಿಧಾನಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ, ಪರಿಷತ್ ಸದಸ್ಯ ಸುದಾಮ್ ದಾಸ್ ಇದ್ದರು.

ಹಿಂದೆ ಮುಂದುವರೆದ ಜಾತಿಯ ಹೆಣ್ಣು ಮಕ್ಕಳಿಗೂ ಶಿಕ್ಷಣ ಕಲಿಯುವ ಅವಕಾಶ ಇರಲಿಲ್ಲ. ಎಲ್ಲಾ ಜಾತಿಯ ಹೆಣ್ಣುಮಕ್ಕಳೂ ಶಿಕ್ಷಣದ ವಿಚಾರದಲ್ಲಿ ಶೋಷಿತರಾಗಿದ್ದವರೇ. ಈಗ ಹೆಣ್ಣು ಮಕ್ಕಳೇ ಶಿಕ್ಷಣದಲ್ಲಿ ಮುಂದಿರುವುದು ಖುಷಿಯಾಗುತ್ತದೆ. ಸರಕಾರಿ ವಸತಿ ಶಾಲೆಗಳ ಮಕ್ಕಳು ಈ ಬಾರಿ ಶೇ.96ರಷ್ಟು ಫಲಿತಾಂಶ ಪಡೆದಿದ್ದಾರೆ. ಮುಂದಿನ ಬಾರಿ ಶೇ.100ರಷ್ಟು ಅಂಕ ಪಡೆಯಬೇಕು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಜಾತಿ, ಧರ್ಮ ಕಲಿಸುವವರು ನಾವೇ

ಮಕ್ಕಳಿಗೆ ಜಾತಿ, ಧರ್ಮದ ತಾರತಮ್ಯ ಕಲಿಸುವವರೇ ನಾವು. ಆದ್ದರಿಂದ ಪೋಷಕರು, ಶಿಕ್ಷಕರು ಮೊದಲು ಕಂದಾಚಾರ, ಮೌಢ್ಯದಿಂದ ಹೊರಗೆ ಬರಬೇಕು. ಆಗ ಮಕ್ಕಳೂ ವೈಜ್ಞಾನಿಕವಾಗಿ ಬೆಳೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳುತ್ತಾರೆ. ಹುಟ್ಟುವಾಗ ಎಲ್ಲಾ ಮಕ್ಕಳೂ ವಿಶ್ವ ಮಾನವರಾಗಿ ಹುಟ್ಟಿ ಬೆಳೆಯುತ್ತಾ ಅಲ್ಪ ಮಾನವರಾಗುತ್ತಾರೆ. ಮಕ್ಕಳು ಅಲ್ಪ ಮಾನವರಾಗದಂತೆ ಕಾಪಾಡುವ ಜವಾಬ್ದಾರಿ ಶಿಕ್ಷಕರು, ಪೋಷಕರ ಮೇಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಏಕರೂಪತೆ ಪರಿಸ್ಥಿತಿಗೆ ನಮ್ಮ ವಿರೋಧ

ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಮಾತನಾಡಿ, ರಾಜ್ಯದಲ್ಲಿ 175 ಹಿಂದುಳಿದ ವರ್ಗಗಳ, 154 ಪರಿಶಿಷ್ಟ ವರ್ಗದ ಹಾಗೂ 500 ಕ್ಕೂ ಹೆಚ್ಚು ಪರಿಶಿಷ್ಟ ಜಾತಿಯ ವಸತಿ ಶಾಲೆಗಳಿವೆ. ಇಲ್ಲಿ ಪ್ರವೇಶ ನೀಡುವಾಗ ಪರಿಶಿಷ್ಟ ಜಾತಿ ಪಂಗಡದ ಮಕ್ಕಳಿಗೆ ಶೇ.75 ರಷ್ಟು ಹಾಗೂ ಸಾಮಾನ್ಯ ವರ್ಗಕ್ಕೆ ಶೇ.25 ರಷ್ಟು ಮೀಸಲು ನೀಡಲಾಗುತ್ತಿದೆ ಎಂದು ವಿವರಿಸಿದರು. ದೇಶದಲ್ಲಿ ವಾಕ್ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯಕ್ಕೆ ತಡೆಯಾಗುವ ವಾತಾವರಣ ನಿರ್ಮಾಣವಾಗಿತ್ತು. ಭಾಷೆ, ಉಡುಪು ಮತ್ತು ಆಹಾರ ಪದ್ಧತಿಯಲ್ಲಿ ಏಕರೂಪತೆಗಾಗಿ ಬಲವಂತಗೊಳಿಸುವ ಪರಿಸ್ಥಿತಿ ಎದುರಾದಾಗ ನಮ ಸರಕಾರ ಜಾಗೃತಿ ಜಾಥಾ ನಡೆಸಿ ಅರಿವು ಮೂಡಿಸಿತ್ತು ಎಂದು ವಿವರಿಸಿದರು.

ಜಾತಿ ವ್ಯವಸ್ಥೆ ಕಾರಣದಿಂದ ಸಮಾಜದಲ್ಲಿ ಅಸಮಾನತೆ ಸೃಷ್ಟಿಯಾಗಿದೆ. ಇದನ್ನು ಹೋಗಲಾಡಿಸಬೇಕಾಗಿದೆ.

ನನಗೆ ಶಿಕ್ಷಣ ಸಿಕ್ಕಿದ್ದರಿಂದಲೇ ಮುಖ್ಯಮಂತ್ರಿ ಆಗುವ ಅವಕಾಶ ದೊರೆಯಿತು. ಇಲ್ಲದಿದ್ದರೆ ನಾನೂ ಎಮ್ಮೆ, ಹಸು ಮೇಯಿಸುತ್ತಾ ಅಷ್ಟಕ್ಕೇ ಸೀಮಿತ ಆಗಬೇಕಾಗಿತ್ತು. ಬುದ್ಧ, ಬಸವಣ್ಣ ಎಷ್ಟೋ ಶತಮಾನಗಳ ಹಿಂದೆಯೇ ಜಾತಿ ವ್ಯವಸ್ಥೆ ಅಳಿಸಲು ಶ್ರಮಿಸಿದರು. ಆದರೆ ವಿದ್ಯಾವಂತರಲ್ಲೇ ಜಾತಿಪ್ರಜ್ಞೆ ಹೆಚ್ಚಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈ ವೇಳೆ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಶಾಸಕ ರಿಜ್ವಾನ್ ಅರ್ಷದ್, ವಿಧಾನಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ, ಪರಿಷತ್ ಸದಸ್ಯ ಸುದಾಮ್ ದಾಸ್ ಇದ್ದರು.

ಪೇಜಾವರ ಮಠದ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಮತ

ರಾಮನ ಗುಣಗಳಿಂದ ರಾಮರಾಜ್ಯ ನಿರ್ಮಾಣ

ತುಮಕೂರು: ರಾಮನ ಗುಣಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ರಾಮರಾಜ್ಯ ನಿರ್ಮಾಣ ಮಾಡಬೇಕು ಎಂದು ಉಡುಪಿಯ ಪೇಜಾವರ ಮಠದ ಶ್ರೀ1008 ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ನಗರದ ಎಂಪ್ರೆಸ್ ಶಾಲಾ ಆವರಣದಲ್ಲಿ ಗುರುವಂದನಾ ಸಮಿತಿ ಆಯೋಜಿಸಿದ್ದ ಸಮಾರಂಭದಲ್ಲಿ ಗುರುವಂದನೆ ಸ್ವೀಕರಿಸಿ ಮಾತನಾಡಿ, ಶ್ರೀರಾಮ ಒಬ್ಬ ಆದರ್ಶ ಪುರುಷ. ಸಮಾಜದಲ್ಲಿ ನಾವು ಹೇಗೆ ಇರಬೇಕು ಎಂಬುದಕ್ಕೆ ರಾಮ ಆದರ್ಶನಾದರೆ ಹೇಗೆ ಇರಬಾರದು ಎಂಬುದಕ್ಕೆ ರಾವಣ ಆದರ್ಶನಾಗುತ್ತಾನೆ. ರಾಮನ ಪ್ರತಿಯೊಂದು ಹೆಜ್ಜೆಯನ್ನು ಗಮನಿಸಿ ನಾವು ಅವನಂತೆ ಇರಬೇಕು. ಪ್ರಜೆಗಳ ಮನೆಯಲ್ಲಿ ಸಾವುನೋವು ಸಂಭವಿಸಿದರೆ ಶ್ರೀರಾಮ ದುಃಖ ಪಡುತ್ತಿದ್ದ. ಹಾಗೆಯೇ ಪ್ರಜೆಗಳ ಮನೆಯಲ್ಲಿ ಹಬ್ಬ ಹರಿದಿನಗಳು ನಡೆದರೆ ತಾನು ಸಂತೋಷ ಪಡುತ್ತಿದ್ದ. ಲೋಕ ಕಲ್ಯಾಣಕ್ಕಾಗಿ ರಾಮಚಂದ್ರ ಕಾಡಿಗೆ ಹೋದರೆ ರಾವಣ ತನ್ನ ಅಹಂಕಾರ ತೋರಿಸುವ ಮೂಲಕ ಅಂತ್ಯಕಂಡ. ಇದನ್ನು ಸಮಾಜಕ್ಕೆ ತೋರಿಸಲು ರಾಮಮಂದಿರ ನಿರ್ಮಾಣ ಅವಶ್ಯಕವಾಗಿತ್ತು. ಇವತ್ತಿನ ಕಾಲದಲ್ಲಿ ರಾಮರಾಜ್ಯವಾಗಲು ಪ್ರಜೆಗಳು ರಾಮರಾಗಬೇಕು ಎಂದರು.

ಸಿದ್ದಗಂಗಾ ಮಠದ ಶ್ರೀಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಗುರುವಿನ ಸ್ಥಾನ ಮುಖ್ಯವಾದದ್ದು, ಗುರು ಎಂದರೆ ಬೆಳಕು, ಜ್ಞಾನ, ಸೇವೆಯಾಗಿದೆ. ಗುರು ಎಂಬ ಪದಕ್ಕೆ ಹಲವಾರು ಅರ್ಥಗಳಿವೆ. ಗ್ರಹಗಳಲ್ಲಿ ದೊಡ್ಡ ಗ್ರಹ ಗುರು ಗ್ರಹ. ಅಂತೆಯೇ ಸಮಾಜದಲ್ಲಿ ಗುರು ದೊಡ್ಡ ಸ್ಥಾನ ಪಡೆದಿದ್ದಾನೆ. ಪೇಜಾವರ ಶ್ರೀಗಳು ಸಹ ಸಮಾಜದ ಭಾರವನ್ನು ತಮ್ಮ ಹೆಗಲ ಮೇಲೆ ಹೊತ್ತಿಕೊಂಡಿದ್ದು ಸಮಾಜವನ್ನು ಧರ್ಮದ ದಾರಿಯತ್ತ ಕೊಂಡೊಯ್ಯುತ್ತಿದ್ದಾರೆ ಎಂದರು.

ಮಠದಿಂದ ಆಸ್ಪತ್ರೆ

ಪೇಜಾವರ ಮಠ ಈಗಾಗಲೇ ಎಲ್ಲ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದೆ. ಮುಂದಿನ ದಿನಗಳಲ್ಲಿ ತುಮಕೂರಿನಲ್ಲಿ ಪೇಜಾವರ ಮಠದಿಂದ ಆಸ್ಪತ್ರೆ ನಿರ್ಮಾಣ ಮಾಡುವುದಾಗಿ ಪೇಜಾವರ ಶ್ರೀಗಳು ಭರವಸೆ ನೀಡಿದರು.

ಗುರುವಂದನಾ ಸಮಿತಿ ಆಯೋಜಿಸಿದ್ದ ಸಮಾರಂಭವನ್ನು ಶ್ರೀವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ, ಶ್ರೀ ಸಿದ್ದಲಿಂಗ ಸ್ವಾಮೀಜಿ ಉದ್ಘಾಟಿಸಿದರು.

ಯಾವುದೇ ದೇವಾಲಯಗಳಿಗೆ ಹೋದಾಗ 10 ರು.ಗಳಿಂದ ಹಿಡಿದು ಸಾವಿರದವರೆಗೆ ಸೇವೆ ಮಾಡುತ್ತೇವೆ. ಅದರ ಬದಲಾಗಿ ನಾವು ನಮ್ಮ ಊರುಗಳಲ್ಲಿಯೇ ಕಷ್ಟದಲ್ಲಿ ರುವವರಿಗೆ ಸಹಾಯ ಮಾಡಿದರೆ ಶ್ರೀರಾಮನ ಸೇವೆ ಮಾಡಿದಂತಾಗುತ್ತದೆ. ಮದುವೆಗೆ ಕೋಟ್ಯಾಂತರ ರು. ಖರ್ಚು ಮಾಡುವವರಿದ್ದಾರೆ. ಅದರ ಬದಲು ಬಡವರಿಗೆ ಲಕ್ಷ ರು. ಖರ್ಚು ಮಾಡಿದರೆ ಸಾಕು ಅವರ ಅಭಿವೃದ್ಧಿಯಾಗುತ್ತದೆ.

-ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಪೇಜಾವರ ಮಠ

ಕೊಲೆ ಪ್ರಕರಣದಲ್ಲಿ ಕಾನೂನು ಪ್ರಕಾರ ಕ್ರಮ: ಚಲುವರಾಯಸ್ವಾಮಿ

ಸಿಎಂ ಯಾರ ಒತ್ತಡಕ್ಕೂ ಮಣಿಯುವವರು ಅಲ್ಲ

ಮಂಡ್ಯ: ರೇಣುಕಾಸ್ವಾಮಿ ಕೊಲೆ ಆರೋಪದಲ್ಲಿರುವ ನಟ ದರ್ಶನ್ ಬಿಡುಗಡೆಗೆ ಯಾವ ಸಚಿವರೂ ಒತ್ತಡ ಹಾಕಿಲ್ಲ. ನಮ್ಮ ಮುಖ್ಯಮಂತ್ರಿ, ಒತ್ತಡಕ್ಕೆ ಮಣಿಯುವವರೂ ಅಲ್ಲ ಎಂದು ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಕೆಆರ್‌ಎಸ್ ಜಲಾಶಯದ ಖಾಸಗಿ ಹೋಟೆಲ್‌ನಲ್ಲಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಲೆ ಪ್ರಕರಣದಲ್ಲಿ ಕಾನೂನು ಪ್ರಕಾರ ಕ್ರಮ ಆಗಲಿದೆ ಎಂದರು.

ನಟ ದರ್ಶನ್ ಜತೆಗೆ ಆತ್ಮೀಯತೆ ಇರಬಹುದು. ಆದರೆ ಆತ್ಮೀಯತೆ ಬೇರೆ, ವಿಶ್ವಾಸವೇ ಬೇರೆ.

ಆದರೆ ಪ್ರಕರಣದಲ್ಲಿ ತನಿಖೆ ನಡೆಯುತ್ತಿದ್ದು, ನ್ಯಾಯಾಲಯದಲ್ಲಿ ತೀರ್ಮಾನ ಆಗಲಿದೆ. ಕಲಾವಿದ ಎಂಬ ಹಿನ್ನೆಲೆಯಲ್ಲಿ ಎಲ್ಲರಿಗೂ ಪರಿಚಯ ಇರುತ್ತಾರೆ. ಹಾಗಂತ ತನಿಖೆ ಹಳ್ಳ ಹಿಡಿಯತ್ತೆ ಅಂತ ಅಲ್ಲ. ನಮ್ಮ ಸರ್ಕಾರ ನೂರಕ್ಕೆ ನೂರು ನಿಷ್ಪಕ್ಷಪಾತ ತನಿಖೆಗೆ ಬದ್ಧವಾಗಿದೆ ಎಂದು ತಿಳಿಸಿದರು.

ಕೇಂದ್ರ ಸಚಿವರಾಗಿರುವ ಎಚ್.ಡಿ. ಕುಮಾರಸ್ವಾಮಿ ಅತ್ಯಂತ ಬಹುಮತದಿಂದ ಗೆದ್ದಿದ್ದಾರೆ. ಕೇಂದ್ರದಲ್ಲಿ ಉತ್ತಮವಾದ ಖಾತೆಯನ್ನು ಪಡೆದುಕೊಂಡಿದ್ದಾರೆ. ಜಿಲ್ಲೆಯ ಯುವಕರಿಗೆ ಉದ್ಯೋಗ ಕೊಡಿಸುವುದಾದರೆ ಸಂತೋಷ.

ಅದನ್ನು ಸ್ವಾಗತಿಸುತ್ತೇನೆ. ಅಭಿವೃದ್ಧಿ ಬಗ್ಗೆ ಸಹಕಾರ ಬೇಕಿದ್ದರೆ ನೀಡುವುದಕ್ಕೆ ನಾವು ಸಿದ್ಧರಿದ್ದೇವೆ. ಚುನಾವಣೆ ಮುಗಿದಿದೆ. ಟೀಕೆ, ಟಿಪ್ಪಣಿ ಬೇಡ. ನಮಗೆ ಅಭಿವೃದ್ಧಿ ಮುಖ್ಯ ಎಂದರು.

ಚನ್ನಪಟ್ಟಣದಲ್ಲಿ ಡಿ.ಕೆ.ಶಿವಕುಮಾರ್ ಸ್ಪರ್ಧೆ ಮಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಡಿ.ಕೆ.ಶಿವಕುಮಾರ್ ಶಾಸಕರಾಗಿ ಉಪಮುಖ್ಯಮಂತ್ರಿ ಆಗಿದ್ದಾರೆ. ಸ್ಪರ್ಧೆ ಮಾಡುತ್ತಾರೆ ಎನ್ನುವುದೆಲ್ಲ ಊಹಾಪೋಹ. ಡಿ.ಕೆ.ಸುರೇಶ್ ಲೋಕಸಭಾ ಚುನಾವಣೆಯಲ್ಲಿ ಸೋತಿರುವುದರಿಂದ ಅಲ್ಲಿ ಸ್ಪರ್ಧೆ ಮಾಡುತ್ತಾರೆ ಎನ್ನುವ ಮಾತಿದೆ. ಡಿ.ಕೆ.ಸುರೇಶ್ ಸ್ಪರ್ಧೆ ಬಗ್ಗೆ ಪಕ್ಷ ಮತ್ತು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ನಿರ್ಧಾರ ಮಾಡುತ್ತಾರೆ.

-ಎನ್.ಚಲುವರಾಯಸ್ವಾಮಿ, ಸಚಿವ

ಸಿದ್ದರಾಮಯ್ಯ ಅವರಿಗೆ ಎಲ್ಲವೂ ಗೊತ್ತಿದೆ: ಬೈರತಿ ಸುರೇಶ್

ಬಿಜೆಪಿಯವರನ್ನು ಕೇಳಿ ಬೆಲೆ ಏರಿಕೆ ಮಾಡಬೇಕಿಲ್ಲ

ಚಿಕ್ಕಮಗಳೂರು: 15 ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಲ್ಲವೂ ಗೊತ್ತಿದೆ. ಬಿಜೆಪಿ ಮುಖಂಡರನ್ನು ಕೇಳಿ ಬೆಲೆ ಏರಿಕೆ ಅಥವಾ ಇಳಿಕೆ ಮಾಡುವ ಅವಶ್ಯಕತೆ ಇಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಏರಿಕೆ ಸಣ್ಣ ವಿಷಯ. ಬಿಜೆಪಿಯವರಿಗೆ ಬೇರೆ ಏನೂ ಕೆಲಸ ಇಲ್ಲದೆ ಪ್ರತಿಭಟನೆ ಮಾಡುತ್ತಿದ್ದಾರೆ. ಸುತ್ತಮುತ್ತಲ ರಾಜ್ಯಕ್ಕಿಂತ ನಮ್ಮ ರಾಜ್ಯದಲ್ಲಿ ತೈಲ ಬೆಲೆ ಕಡಿಮೆ ಇದೆ. ಜನರಿಗೆ ಒಳ್ಳೆಯದನ್ನು ಮಾಡಬೇಕು ಎಂಬ ಆಸೆ ಇರುವುದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ. ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿದಾಗ ಬಿಜೆಪಿಯವರು ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದರು.

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ನೇಮಿಸುವ ಬಗ್ಗೆ ಇನ್ನೊಂದು ವಾರದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಎಷ್ಟೇ ಪ್ರಬಲ ವ್ಯಕ್ತಿ ಭಾಗಿಯಾಗಿದ್ದರೂ ಶಿಕ್ಷೆ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎಷ್ಟೇ ಪ್ರಬಲ ವ್ಯಕ್ತಿ ಭಾಗಿಯಾಗಿದ್ದರೂ ಅವರಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ. ರೇಣುಕಾಸ್ವಾಮಿ ಕುಟುಂಬಕ್ಕೆ ಅನ್ಯಾಯವಾಗಿದೆ. ಆದರೆ ಸಿದ್ದರಾಮಯ್ಯ ಸರಕಾರ ಯಾರಿಗೂ ಕಿಂಚಿತ್ತೂ ಅನ್ಯಾಯವಾಗಲು ಬಿಡಲ್ಲ ಸರಕಾರಕ್ಕೆ ಜನರ ಬಗ್ಗೆ ಬಹಳ ಕಮಿಟ್ಮೆಂಟ್ ಇದೆ. ಎಷ್ಟೇ ಪ್ರಬಲ ವ್ಯಕ್ತಿ ಇಂತಹ ಕುಕೃತ್ಯದಲ್ಲಿ ಭಾಗಿಯಾಗಿದ್ದರೂ ಶಿಕ್ಷೆ ಕಟ್ಟಿಟ್ಟ ಬುತ್ತಿ ಎಂದು ಎಂದು ಸಚಿವ ಬೈರತಿ ಹೇಳಿದ್ದಾರೆ.

ಗ್ಯಾರಂಟಿ ಯೋಜನೆಗಳಿಗೆ 60 ಸಾವಿರ ಕೋಟಿ ಬೇಕಿದೆ. ತೈಲ ಬೆಲೆ ಏರಿಕೆಯಿಂದ ಗರಿಷ್ಠ 3 ಸಾವಿರ ಕೋಟಿ ನಿರೀಕ್ಷೆ ಮಾಡಲಾಗಿದೆ. ಈ ಹಣದಿಂದ ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲಾಗುತ್ತಿದೆ ಎಂಬುದು ಸುಳ್ಳು.

-ಬೈರತಿ ಸುರೇಶ್, ಸಚಿವ

ಸಚಿವ ಶಿವರಾಜ್ ತಂಗಡಗಿ ವಾಗ್ದಾಳಿ

ಜನಾರ್ದನ ರೆಡ್ಡಿ ರಾಜ್ಯದ ಜನರ ಕ್ಷಮೆಯಾಚಿಸಲಿ

ಕೊಪ್ಪಳ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಶಾಸಕ ಜನಾರ್ದನ ರೆಡ್ಡಿ ಮಣ್ಣಿನ ಕಳ್ಳ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ವಾಗ್ದಾಳಿ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದನ್ನು ವಿರೋಧಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಅಶೋಕ ವೃತ್ತದಲ್ಲಿ ಬುಧವಾರ ನಡೆದ ಪ್ರತಿಭಟನೆ ವೇಳೆ ಮಾತನಾಡಿ, ಬಿಜೆಪಿ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಹತ್ತು ವರ್ಷದಲ್ಲಿ ತೈಲ ಬೆಲೆಯನ್ನು ನೂರು ರೂಪಾಯಿ ದಾಟಿಸಿದರು. ಜನಾರ್ದನ ರೆಡ್ಡಿ ಬಿಜೆಪಿ ಸೇರಿದ ಹಿನ್ನೆಲೆಯಲ್ಲಿ ಆ ಪಕ್ಷದ ನಾಯಕರ ಓಲೈಕೆಗೆ ಅಬ್ಬರಿಸುತ್ತಿದ್ದಾರೆ. ರೆಡ್ಡಿ ನಮ್ಮ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಕಾಲಿನ ಉಗುರಿನಲ್ಲಿನ ದೂಳಿಗೂ ಸಮ ಇಲ್ಲ. ರೆಡ್ಡಿ ಅವರೇ ಇದು ಬಳ್ಳಾರಿಯಲ್ಲ, ಕೊಪ್ಪಳ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜನತೆಗೆ ಸುಳ್ಳು ಆಶ್ವಾಸನೆ ಕೊಟ್ಟು ಶಾಸಕರಾಗಿ ಆಯ್ಕೆಯಾಗಿರುವ ಬಗ್ಗೆ ಜನತೆಗೆ ಗೊತ್ತಾಗಿದೆ. ಮುಂದಿನ ದಿನಗಳಲ್ಲಿ ಜನ ನಿಮಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹರಿಹಾಯ್ದರು.

ಲೋಕಸಭಾ ಚುನಾವಣೆಯಲ್ಲಿ ಕೊಪ್ಪಳ ಜನ ಕಾಂಗ್ರೆಸ್ ಪಕ್ಷದ ಪರ ತೀರ್ಪು ನೀಡುವ ಮೂಲಕ ರೆಡ್ಡಿ ಅವರಿಗೆ ಕಪಾಳಮೋಕ್ಷ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ದೇಶ ಮೆಚ್ಚಿದ ನಾಯಕ. ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ಬದುಕಿಗೆ ಆಸರೆಯಾಗಿದ್ದಾರೆ. ಇಂತಹ ನಾಯಕನ ಬಗ್ಗೆ ಮಾತನಾಡಲು ಇವರಿಗೆ ಯಾವುದೇ ನೈತಿಕತೆ ಇಲ್ಲ.

-ಶಿವರಾಜ್ ತಂಗಡಗಿ, ಸಚಿವ

ಸರಕಾರಿ ಆಸ್ತಿ ನಗದೀಕರಣಕ್ಕೆ ಆಕ್ಷೇಪ

ರಾಜ್ಯ ಸರಕಾರ ದಿವಾಳಿ: ಬೊಮ್ಮಾಯಿ

ಗದಗ: ಸರಕಾರಿ ಆಸ್ತಿ ನಗದೀಕರಣ ವಿಷಯಕ್ಕೆ ಬೊಮ್ಮಾಯಿ ಆಕ್ಷೇಪ ವ್ಯಕ್ತಪಡಿಸಿದ್ದು, ಸರಕಾರಿ ಜಾಗ ನಗದೀಕರಣಕ್ಕೆ ಬಾಸ್ಟನ್ ಕಂಪನಿಯ ಜತೆ ಸಮಾಲೋಚನೆ ನಡೆಸಲಾಗಿದೆ. ಬೆಂಗಳೂರು ಸುತ್ತಲಿನ ಭೂಮಿ ಮಾರೋಣ ಎಂದು ಕಂಪನಿ ಹೇಳಿದೆ. ಆಸ್ತಿ ಮಾರುವ ಹಾಗೂ ಅದರಲ್ಲಿ ಡೀಲ್ ನಡೆಸಿರುವ ಶಂಕೆಯಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರ, ಸರಕಾರದ ಪಿತ್ರಾರ್ಜಿತ ಆಸ್ತಿ ಮಾರಾಟಕ್ಕೆ ಮುಂದಾಗಿದೆ. ಭೂಮಿ ಮಾರುವ ಪರಿಸ್ಥಿತಿ ಬಂದಿದೆ. ಸರಕಾರ ದಿವಾಳಿ ಹಂತದಲ್ಲಿದೆ. ಸಿಎಂ ಏನೇ ಹೇಳಲಿ ಸಂಕಷ್ಟದ ಪರಿಸ್ಥಿತಿಯಲ್ಲಿ ಸರಕಾರ ಸ್ವಂತಕ್ಕೆ ಡೀಲ್ ಮಾಡಿಕೊಳ್ಳುತ್ತಿದೆ ಎಂದರು.

ರಾಜ್ಯ ದ್ರೋಹ, ಜನ ದ್ರೋಹದ ಕೆಲಸವನ್ನು ಸರಕಾರ ಮಾಡುತ್ತಿದೆ. ಮೊದಲ ಹಂತದಲ್ಲಿ 15 ಸಾವಿರ ಎಕರೆ ನಗದೀಕರಣದ ಬಗ್ಗೆ ವರದಿಯಾಗಿದೆ. ಇದು ಅಕ್ಷಮ್ಯ ಅಪರಾಧ. ಮುಂದಿನ ಪೀಳಿಗೆಗೆ ಆಸ್ಪತ್ರೆ ಕಟ್ಟಲು, ಶಾಲೆ ಕಟ್ಟಲು ಭೂಮಿ ಇರಲ್ಲ. ಮತ್ತೆ ಖಾಸಗಿಯವರ ಬಳಿ ಹೋಗಬೇಕು. ಈಗ ಖರೀದಿಸಿದ ಹಣಕ್ಕಿಂತ ಹತ್ತು ಪಟ್ಟು ಹೆಚ್ಚಿಗೆ ಹಣ ಆಗ ಹೇಳುತ್ತಾರೆ. ನಮ್ಮ ಭೂಮಿಯನ್ನು 10 ಪಟ್ಟು ಹೆಚ್ಚಿಗೆ ಹಣ ಕೊಟ್ಟು ಖರೀದಿಸುವ ಪರಿಸ್ಥಿತಿ ಬರುತ್ತದೆ. ಯಾವುದೋ ಬಾಸ್ಟನ್ ಕನ್ಸಲ್‌ಟೆನ್ಸಿಗೆ ಹೋಗಿದ್ದಾರೆ. ಇಲ್ಲಿಯಾರೂ ಸಿಗಲಿಲ್ಲ ಅವರಿಗೆ ಎಂದರು.

ಮುಂದಿನ ಜನಾಂಗದ ಕಿಸೆಯಿಂದ ಕಳ್ಳತನ ಮಾಡಬಾರದು. ಹಿಂದಿನವರು ಉಳಿಸಿಕೊಂಡು ಬಂದಿದ್ದಕ್ಕೆ ನಮ್ಮ ಬಳಿ ಭೂಮಿ ಇದೆ. ಎಲ್ಲ ರಕ್ಷಣೆ ಮಾಡುತ್ತೇನೆ ಎಂದು ಪ್ರಮಾಣವಚನ ತೆಗೆದುಕೊಂಡಿದ್ದಾರೆ. ಸರಕಾರದ ನಿಯಮ ಮೀರಿ ಕೆಲಸ ಮಾಡುತ್ತಿರುವುದು ರಾಜದ್ರೋಹವಾಗಿದೆ.

-ಬಸವರಾಜ ಬೊಮ್ಮಾಯಿ, ಸಂಸದ

ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ 24ರಿಂದ

ಹುಬ್ಬಳ್ಳಿ: 12ನೇ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ ಜೂ.24-30 ರವರೆಗೆ ಗೋವಾದ ಪೋಂಡಾದ ರಾಮನಾಥ ದೇವಸ್ಥಾನದಲ್ಲಿ ನಡೆಯಲಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಹಿಂದೂ ಜನಜಾಗೃತಿ ಸಮಿತಿ ರಾಜ್ಯ ವಕ್ತಾರ ಮೋಹನಗೌಡ, ಹಿಂದೂ ರಾಷ್ಟ್ರಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಸಂವಾದ, ಚರ್ಚೆ ನಡೆಯಲಿದೆ. ಅಧಿವೇಶನದಲ್ಲಿ ಅಮೆರಿಕ, ಇಂಗ್ಲೆಂಡ್, ಬಾಂಗ್ಲಾ ದೇಶದ ಪ್ರತಿನಿಧಿಗಳಲ್ಲದೆ, ದೇಶದ 26 ರಾಜ್ಯಗಳಿಂದ 2000ಕ್ಕೂ ಅಧಿಕ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ದೇಶದಲ್ಲಿ ಸಿಎಎ ಹಾಗೂ ಎನ್ ಆರ್‌ಸಿ ಕಾಯ್ದೆಗಳನ್ನು ಸಂಪೂರ್ಣವಾಗಿ ಜಾರಿಗೊಳಿಸುವುದು ಅತ್ಯವಶ್ಯ ಎಂದಿದ್ದಾರೆ.

ಮರಣೋತ್ತರ ವರದಿ ತಿರುಚುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ

ರೇಣುಕಾಸ್ವಾಮಿ ಪ್ರಕರಣ: ತಪ್ಪಿತಸ್ಥರಿಗೆ ಶಿಕ್ಷೆ

ಮೈಸೂರು: ನಟ ದರ್ಶನ್ ಅಂಡ್ ಗ್ಯಾಂಗ್‌ನಿಂದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ವೈದ್ಯಕೀಯ ಇಲಾಖೆಯಿಂದ ಮರಣೋತ್ತರ ಪರೀಕ್ಷೆ ವರದಿ ತಿರುಚುವ ಪ್ರಯತ್ನದ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಪೊಲೀಸರು ಎಲ್ಲಾ ರೀತಿಯ ಕ್ರಮ ತೆಗೆದುಕೊಳ್ಳುತ್ತಾರೆ. ಅತ್ಯಂತ ಅಮಾನವೀಯ ರೀತಿಯಲ್ಲಿ ಕೊಲೆ ನಡೆದಿದೆ. ಅದು ಯಾರೇ ಇದ್ದರೂ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾಜದಲ್ಲಿ ಇಂತಹ ಘಟನೆಗಳು ನಡೆಯಬಾರದು. ಕೋಪದಲ್ಲಿ ಇಂತಹ ಘಟನೆಗಳು ಆಗುತ್ತವೆ, ಈ ಹಿಂದೆಯೂ ಆಗಿವೆ. ಸರಕಾರಗಳು ಇಂತಹ ಘಟನೆಗಳ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು. ನಾನೇ ಸರಿ, ನಾನು ಮಾಡಿದ್ದೇ ಸರಿ ಎನ್ನುವ ಅತಿರೇಕದ ವರ್ತನೆ ಜಾಸ್ತಿಯಾದಾಗ ಈ ರೀತಿಯ ಘಟನೆಗಳು ನಡೆಯುತ್ತವೆ. ಇಂತಹ ಘಟನೆಗಳು ಸಮಾಜಕ್ಕೆ ಒಳ್ಳೆಯದಲ್ಲ ಎಂದರು.

ರಾಜ್ಯದ ಹಲವೆಡೆ ಭ್ರೂಣಹತ್ಯೆ ಪ್ರಕರಣಗಳು ಬೆಳಕಿಗೆ ಬಂದಿರುವ ವಿಚಾರದ ಬಗ್ಗೆ ಮಾತನಾಡಿದ ಅವರು, ಭ್ರೂಣ ಹತ್ಯೆ ವಿಚಾರದಲ್ಲಿ ನಮ್ಮ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿ ಹದ್ದಿನ ಕಣ್ಣಿಟ್ಟು ಗಮನಹರಿಸುತ್ತಿದ್ದಾರೆ. ಎಲ್ಲೆಲ್ಲಿ ಭ್ರೂಣ ಹತ್ಯೆ ಆಗುತ್ತಿತ್ತೋ, ಆ ಎಲ್ಲಾ ಕಡೆಯೂ ದಾಳಿ ಮಾಡಿ ಹಿಡಿದಿದ್ದೇವೆ. ನಮ್ಮ ಇಲಾಖೆಯಿಂದ ತಪ್ಪು ಮಾಡಿದವರನ್ನು ಪತ್ತೆ ಮಾಡುತ್ತೇವೆ. ಕೋರ್ಟ್ ಮೂಲಕ ಶಿಕ್ಷೆ ಆಗಬೇಕು. ಹೆರಿಗೆ ಆಸ್ಪತ್ರೆಗಳಲ್ಲಿ ಹಣ ಪಡೆಯುವುದು ನಮ್ಮ ವ್ಯವಸ್ಥೆಯಲ್ಲಿ ಇಂದಿಗೂ ಇದು ನಡೆಯುತ್ತಿದೆ. ಎಲ್ಲವೂ ಸರಿಯಿದೆ ಎನ್ನುವುದಿಲ್ಲ. ಇದನ್ನು ಕೂಡ ಗಮನಹರಿಸಿ ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಡೀಸೆಲ್ ಬೆಲೆ ಕಡಿಮೆಯಿದೆ. ಕೇಂದ್ರ ಸರಕಾರ ಈ ಹಿಂದೆ ಬೊಮ್ಮಾಯಿಯವರ ಮೇಲೆ ಒತ್ತಡ ತಂದು ರಾಜ್ಯದಲ್ಲಿ ಬೆಲೆ ಇಳಿಕೆ ಮಾಡಿದ್ದರು. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರಕ್ಕೆ ಹೋಲಿಸಿದರೆ ನಮ್ಮಲ್ಲಿ ಬೆಲೆ ಕಡಿಮೆಯಿದೆ. ಗ್ಯಾರಂಟಿ ಯೋಜನೆ ಹಾಗೂ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಗೂ ಸಂಬಂಧವಿಲ್ಲ.

-ದಿನೇಶ್ ಗುಂಡೂರಾವ್, ಸಚಿವ

ಆರ್ಥಿಕತೆ ದಿಕ್ಕು ತಪ್ಪಿದೆ: ಎಚ್‌ವಿ



ಮೈಸೂರು: ರಾಜ್ಯದಲ್ಲಿ ಆರ್ಥಿಕತೆ ಸಂಪೂರ್ಣ ದಿಕ್ಕು ತಪ್ಪಿದ್ದು, ಸರಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಪರದಾಡುತ್ತಿದೆ. ಇಲಾಖೆಗಳಲ್ಲಿ ಹಣ ದಿಕ್ಕಾಪಾಲಾಗಿ ಪೋಲಾಗುತ್ತಿದೆ. ಸರಕಾರದ ಆರ್ಥಿಕ ನೀತಿ ದುರ್ಬಲವಾಗಿದೆ. ನೀವು ಯಾವ ಸೀಮೆ ಹಣಕಾಸು ಸಚಿವರು ಮಿಸ್ಟರ್ ಸಿದ್ದರಾಮಯ್ಯ ಎಂದು ಛೇಡಿಸಿದರು. ಗ್ಯಾರಂಟಿ ಬದಲು ಉಚಿತ ಶಿಕ್ಷಣ ಕೊಡಬೇಕಿತ್ತು ಎಂದರು.

ವಿಶ್ವವಾಣಿ

ಸಂಪಾದಕೀಯ

ದರ್ಶನ್ ಬಗ್ಗೆ ಸಮಗ್ರ ತನಿಖೆಯಾಗಲಿ

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಬಂಧನವಾದಾಗ, ಸಿಟ್ಟಿನ ಭರದಲ್ಲಿ ಯುವಕನೊಬ್ಬನ ಕೊಲೆ ಆಗಿದೆ ಎಂದಷ್ಟೇ ಪೊಲೀಸರೂ ಸೇರಿ ಎಲ್ಲರ ಭಾವನೆಯಾಗಿತ್ತು. ಆದರೆ ಈಗ ದರ್ಶನ್ ಮತ್ತು ಸಂಗಡಿಗರ ಮತ್ತಷ್ಟು 'ಸಾಧನೆ'ಗಳು ಬೆಳಕಿಗೆ ಬರುತ್ತಿವೆ. ಈ ಹಿಂದೆ ಮುಚ್ಚಿ ಹೋಗಿದ್ದ ಪ್ರಕರಣಗಳೆಲ್ಲವೂ ಒಂದೊಂದಾಗಿ ತೆರೆದುಕೊಳ್ಳುತ್ತಿವೆ. ಈ ಎಲ್ಲ ಪ್ರಕರಣಗಳಲ್ಲಿ ದರ್ಶನ್ ಕೈವಾಡವಿದೆಯೋ, ಇಲ್ಲವೋ ಗೊತ್ತಿಲ್ಲ. ಆದರೆ ನಾಯಕ ನಟನ ಪ್ರಭಾವಳಿಯಲ್ಲಿ ಸಿಲುಕಿದ್ದ ಪೊಲೀಸರು ಸರಿಯಾದ ತನಿಖೆ ನಡೆಸಿಲ್ಲ ಎನ್ನುವುದು ಸ್ಪಷ್ಟ.

ದರ್ಶನ್ ಅವರ ಸಿನಿಮಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಮ್ಯಾನೇಜರ್ ಮಲ್ಲಿಕಾರ್ಜುನ ಬಿ ಸಂಕೇಗೌಡರ್ ಕಾಣೆಯಾಗಿ ಎಂಟು ವರ್ಷಗಳೇ ಕಳೆದಿವೆ. ಇದುವರೆಗೂ ಆತ ಬರೆದಿದ್ದಾನೆನ್ನಲಾದ 'ಪತ್ರ'ವನ್ನು ಮುಂದಿಟ್ಟುಕೊಂಡು ಬದುಕಿದ್ದಾನೆಂದು ಹೇಳಲಾಗುತ್ತಿದೆ. ''ನಟ ಅರ್ಜುನ್ ಸರ್ಜಾ ಸೇರಿದಂತೆ ಕೆಲವರಿಂದ ಈತ ಸಾಲ ಪಡೆದಿದ್ದ. ಈ ಕಾರಣಕ್ಕಾಗಿ ದರ್ಶನ್ ಕೈಯಲ್ಲಿ ಬೈಸಿಕೊಂಡಿದ್ದ. ಸಾಲ ಕಟ್ಟಲಾಗದೆ ತಲೆ ಮರೆಸಿಕೊಂಡಿದ್ದಾನೆ'' ಎಂಬ ಮಾತನ್ನು ಪೊಲೀಸರೂ ಒಪ್ಪಿಕೊಂಡು ಮೌನವಾಗಿರಲು ಹೇಗೆ ಸಾಧ್ಯ? ಇಷ್ಟು ವರ್ಷಗಳ ನಂತರವಾದರೂ, ಪ್ರಕರಣದ ಸತ್ಯಾಸತ್ಯತೆಯನ್ನು ಹೊರಗೆಳೆಯುವ ಕೆಲಸ ಮಾಡಿಲ್ಲದಿರುವುದು ಅಚ್ಚರಿಯ ಸಂಗತಿ. ಆನೇಲ್‌ನಲ್ಲಿರುವ ದರ್ಶನ್ ಅವರ ಫಾರ್ಮ್ ಹೌಸ್‌ನ ಮ್ಯಾನೇಜರ್ ಶ್ರೀಧರ್, ಕಳೆದ ಏಪ್ರಿಲ್ ತಿಂಗಳಿನಲ್ಲಿ ನಿಗೂಢವಾಗಿ ಮೃತಪಟ್ಟ ಸುದ್ದಿ ಹೊರ ಬಿದ್ದಿದೆ. ಈತನದ್ದು ಎನ್ನಲಾದ ಡೆತ್ ನೋಟ್‌ನಲ್ಲಿ '' ನನ್ನ ಸಾವಿಗೆ ನಾನೇ ಕಾರಣ, ಯಾರಿಗೂ ತೊಂದರೆ ಕೊಡಬೇಡಿ'' ಎಂದು ಮೂರ್‍ನಾಲ್ಕು ಬಾರಿ ಬರೆಯಲಾಗಿದೆ. ಕೊನೆಯಲ್ಲಿ ಸಹಿ ಮಾಡುವ ಬದಲು ಹೆಬ್ಬೆಟ್ಟು ಒತ್ತಲಾಗಿದೆ. ಜನಸಾಮಾನ್ಯರಲ್ಲೂ ಸಂಶಯ ಹುಟ್ಟಿಸುವ ಈ ಡೆತ್‌ನೋಟ್ ಇಟ್ಟುಕೊಂಡು ಪೊಲೀಸರು ಪ್ರಕರಣವನ್ನು ಬದಿಗೆ ತಳ್ಳಿದ್ದು ವಿಚಿತ್ರವಾಗಿ ಕಾಣಿಸುತ್ತಿದೆ. ದರ್ಶನ್ ಅವರ ಮೈಸೂರಿನ ಫಾರ್ಮ್ ಹೌಸಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನೊಬ್ಬ ಹಸುವಿನಿಂದ ತಿವಿಸಿಕೊಂಡು ಕೊಂಬು ಮಿದುಳಿಗೆ ತಾಗಿ ಜೀವನ ಪರ್ಯಂತ ಹಾಸಿಗೆ ಹಿಡಿದಿರುವ ಸಂಗತಿಯೂ ಈಗ ಬೆಳಕಿಗೆ ಬಂದಿದೆ. 'ಸಹಾಯ ಕೇಳಿಕೊಂಡು ಹೋದ ನನ್ನ ಕುಟುಂಬದವರ ಮೇಲೆ ದರ್ಶನ್ ಬೆಂಬಲಿಗರು ನಾಯಿಗಳನ್ನು ಛೂ ಬಿಟ್ಟರು' ಎಂಬ ಈ ವ್ಯಕ್ತಿಯ ಮಾತು ಆಲಿಸಿದ ಬಳಿಕ, ಪಟ್ಟಣಗೆರೆಯ ಸೆಟ್ಲ್‌ಮೆಂಟ್ ಅಡ್ಡಾದ ಕತೆಗಳನ್ನು ಕೇಳಿದ ಮೇಲೆ, 'ದರ್ಶನ್ ಇಂಥವರಾ ?' ಎಂಬ ಪ್ರಶ್ನೆ ಮತ್ತೆ ಕೇಳಬೇಕೆನಿಸುವುದಿಲ್ಲ. ಈಗಲಾದರೂ ಈ ಎಲ್ಲ ಪ್ರಕರಣಗಳ ಬಗ್ಗೆ ತನಿಖೆಯಾಗಬೇಕು. ದರ್ಶನ್ ಇರಲಿ ಅಥವಾ ಅವರ ಸಂಗಡಿಗರಿರಲಿ, ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಲೇಬೇಕು. ಸಂತ್ರಸ್ತರಿಗೆ ನ್ಯಾಯ ದೊರಕಲೇಬೇಕು.

ಸೊಂಪಾದಕೀಯ

ಪಂಚ್ ಕಜ್ಜಾಯ

ಸಾರ್ವಜನಿಕ ವಾಹನಗಳಲ್ಲಿ ಓಡಾಡೋ ತೊಂದರೆನೇ ಬೇಡ ಅಂತ ಸ್ವಂತ ವಾಹನ ಖರೀದಿ ಮಾಡ್ತಾರೆ ಬಹುತೇಕ ಜನ. ಆದರೆ ಈ ಸ್ವಂತ ವಾಹನಗಳ ತಲೆನೋವು ಅಷ್ಟಿಷ್ಟಲ್ಲ. ಅದಕ್ಕೆ ದುಡ್ಡು ಕೊಟ್ಟು ಖರೀದಿ ಮಾಡಿ ಟ್ಯಾಕ್ಸ್ ಕಟ್ಟಿ ರೋಡಿಗಿಳಿದರೂ ಅದರ ಸಮಸ್ಯೆ ತೀರಲ್ಲ. ಪೆಟ್ರೋಲ್ ಡೀಸೆಲ್ ಹಾಕಿಸೋದು, ಸರ್ವೀಸ್ ಮಾಡಿಸೋದು ಒಂದು ಕಡೆ ತಲೆನೋವಾದರೆ ಅದಕ್ಕಿಂತ ದೊಡ್ಡ ತಲೆನೋವು ಅಂದ್ರೆ ನಮ್ಮ ಟ್ರಾಫಿಕ್ ಪೊಲೀಸರದ್ದು. ಎಲ್ಲ ಸರಿ ಇದ್ರೂ ಏನಾದ್ರೂ ಒಂದು ನೆಪ ಹುಡುಕಿ ನಿಮ್ಮ ಹೆಸರಲ್ಲಿ ಚಲನ್ ಕಟ್ ಮಾಡಿ ಫೈನ್ ಕಟ್ಟಿ ಅಂತಾರೆ. ಇಂಥದ್ದೇ ಒಂದು ಪ್ರಕರಣದಲ್ಲಿ ಉತ್ತರ ಪ್ರದೇಶದ ಕಾರು ಚಾಲಕ ಸಂತ್ರಸ್ತನಾಗಿದ್ದಾನೆ. ಪಾಪ ಆತ ಟಾಟಾ ಪಂಚ್ ಕಾರು ಖರೀದಿಸಿದ್ದ. ಅವನು ಸರಪಂಚ ಅಂತೆ. ಜೊತೆಗೆ ಗುರ್ಜರ್ ಅನ್ನೋ ಜಾತಿಗೆ ಸೇರಿದವ. ಹಾಗಾಗಿ ತನ್ನ ಕ್ರಿಯೇಟಿವಿಟಿ ತೋರಿಸಿ ಪಂಚ್ ಅನ್ನೋ ಕಾರಿನ ಹೆಸರಿನ ಹಿಂದೆ ಸರ್ ಅಂತ ಹಾಕಿ, ಪಂಚ್ ಮುಂದೆ ಜೀ ಅಂತ ಹಾಕಿ ಅದನ್ನು ಸರಪಂಚ್ ಜೀ ಅಂತ ಮಾಡಿದ್ದ. ಜೊತೆಗೆ ಗುರ್ಜರ್ ಅನ್ನೋ ತನ್ನ ಜಾತಿಯ ಸೂಚಕವನ್ನು ಹಾಕಿಕೊಂಡಿದ್ದ. ಅದನ್ನು ನೋಡಿ ಅವನಿಗೆ ಟ್ರಾಫಿಕ್ ಪೊಲೀಸರು ಪಂಚನಾಮೆ ಮಾಡದೆಯೇ ಫೈನ್ ಹಾಕುವ ಮೂಲಕ ಪಂಚ್ ಕಜ್ಜಾಯ ಕೊಟ್ಟಿದ್ದಾರೆ. ಇದಕ್ಕೆ ಕಾರಣ ಉತ್ತರ ಪ್ರದೇಶದ ಕಾನೂನು. ಅಲ್ಲಿನ ಕಾನೂನುಗಳು ಯಾವಾಗ್ಲೂ ಡಿಫ್ರೆಂಟ್ ಬಿಡಿ. ಅಲ್ಲಿ ವಾಹನಗಳ ಮೇಲೆ ತಮ್ಮ ಜಾತಿ, ಧರ್ಮವನ್ನು ಬರೆಸುವಂತಿಲ್ಲ ಅನ್ನೋ ಕಾನೂನು ತರಲಾಗಿದೆಯಂತೆ. ಅದು ಈ ತರಲೆಗೆ ಕಾರಣ ಆಗಿದೆ. ಆದರೆ ಇಂಥ ಕಾನೂನೇನಾದರೂ ಕರ್ನಾಟಕದಲ್ಲಿ ಬಂದರೆ ಏನು ಗತಿ ಅಂತ ನಮ್ಮ ಪೊಲೀಸರು ಯೋಚನೆ ಮಾಡುತ್ತಿದ್ದಾರೆ. ಯಾಕಂದ್ರೆ ಜಾತಿ ಹೇಳಿಕೊಳ್ಳೋದ್ರಲ್ಲಿ ನಮ್ಮ ಜನ ಎತ್ತಿದ ಕೈ. ತಮ್ಮ ಗಾಡಿಗಳ ಮೇಲೆ ಆ ಊರಿನ ಗೌಡ್ರು, ಈ ಊರಿನ ಗೌಡ್ರು ಅಂತ ಮೀಸೆ ತಿರುವುವವರು, ವಿಶ್ವಕರ್ಮ, ಕುರುಬಾಸ್ ಅಂತಲೂ, ಕುಂತ್ರೆ ಕುರುಬ, ನಿಂತ್ರೆ ಕಿರುಬ ಅಂತ ಗುಟುರು ಹಾಕುವವರ ಸಂಖ್ಯೆ ಕಮ್ಮಿ ಏನಿಲ್ಲ. ಅವರಿಗೆಲ್ಲ ಉತ್ತರ ಪ್ರದೇಶದಂತೆ ಫೈನ್ ಹಾಕ್ತಾ ಹೋದ್ರೆ, ಪೊಲೀಸರು ಮತ್ತು ವಾಹನ ಸವಾರರ ನಡುವೆ ರಸ್ತೆಯಲ್ಲೇ ಕುರುಕ್ಷೇತ್ರ ನಡೆದು ಆ ಬಸವಣ್ಣನವರು ಬಂದ್ರೂ ತಡೆಯೋಕಾಗಲ್ಲ ಅನ್ನೋದಂತೂ ಗ್ಯಾರಂಟಿ.

ಸಂಪಾದಕರ ಸದ್ಯಶೋಧನೆ

ನಾಮಕರಣ ಪ್ರಸಂಗವು!

ಪುಸ್ತಕಕ್ಕೆ ಹೆಸರಿಡುವುದು ಮಗುವಿಗೆ ಹೆಸರಿಟ್ಟ ಹಾಗೆ. ಎಲ್ಲರೂ ತಾವಿಡುವ ಹೆಸರು ಚೆಂದವಾಗಿರಬೇಕು, ಅದು ಯಾರೂ ಇಡದ ಹೆಸರಾಗಿರಬೇಕು, ವಿಶೇಷವಾಗಿರಬೇಕು ಎಂದು ಯೋಚಿಸುತ್ತಾರೆ. ಆದರೆ ಹೆಸರಿಟ್ಟ ನಂತರ, ತಾವು ಇನ್ನೂ ಒಳ್ಳೆಯ ಹೆಸರನ್ನಿಡಬಹುದಿತ್ತು ಎಂದು ಅಂದುಕೊಳ್ಳುತ್ತಾರೆ. ಐನೂರು ಪುಟಗಳ ಪುಸ್ತಕವನ್ನು ಬರೆಯುವಾಗ, ಈ ಕೃತಿಗೆ ಯಾವ ಹೆಸರಿಡಬೇಕು ಎಂದು ಆಗಾಗ ಅನಿಸುತ್ತಲೇ ಇರುವುದಂತೆ. ಇಂಥವರ ಬಗ್ಗೆ ಬೀಚಿ ಅವರು ಬರೆದಿದ್ದರು – 'ಮುನ್ನೂರು ಪುಟಗಳ ಪುಸ್ತಕವನ್ನು ಮೂವತ್ತು ದಿನಗಳಲ್ಲಿ ಬರೆದು ಮುಗಿಸಿ, ಅದಕ್ಕೆ ಯಾವ ಹೆಸರಿಡಬೇಕು ಎಂದು ಮೂವತ್ತು ದಿನ ಯೋಚಿಸಿ, ಕೊನೆಗೆ – ಮುನ್ನೂರು ಪುಟಗಳು – ಎಂದು ಹೆಸರಿಟ್ಟಂತಾಯಿತು.' ತಮ್ಮ ಮಕ್ಕಳಿಗೆ ಪ್ರಾಸಬದ್ಧವಾಗಿ ಹೆಸರಿಡಬೇಕೆಂದು ನಿರ್ಧರಿಸಿದ ಒಬ್ಬ ಮಹನೀಯರಿಗೆ, ಮೊದಲನೆಯವಳು ಹೆಣ್ಣು ಮಗಳಾದಾಗ ಅಂಜನಾ ಎಂದು ಹೆಸರಿಟ್ಟರಂತೆ. ಎರಡನೆಯವಳೂ ಹೆಣ್ಣು ಮಗಳಾದಾಗ ರಂಜನಾ ಎಂದು ಹೆಸರಿಟ್ಟರಿಂತೆ. ಮೂರನೆಯದೂ ಹೆಣ್ಣೇ ಆಯಿತಂತೆ. ಆ ಮಗುವಿಗೆ ಸಂಜನಾ ಎಂದು ನಾಮಕರಣ ಮಾಡಿದರಂತೆ. ನಾಲ್ಕನೆಯವಳಿಗೆ ತಂಜಾನಾ ಎಂದು ಹೆಸರಿಟ್ಟರಂತೆ. ಐದನೆಯವಳೂ ಹೆಣ್ಣೇ ಆದರೆ ಏನು ಮಾಡೋದು ಅಂದು ಚಡಪಡಿಸುತ್ತಿದ್ದರಂತೆ. ಐದನೆಯದೂ ಹೆಣ್ಣು ಮಗುವೇ ಆಯಿತಂತೆ. ಆಗ ಬಹಳ ಯೋಚಿಸಿ 'ಅಮೃತಾಂಜನ' ಎಂದು ಹೆಸರಿಟ್ಟರಂತೆ. ಇದು ಕಾಲ್ಪನಿಕ ತಮಾಷೆ ಪ್ರಸಂಗವಿರಬಹುದು. ಆದರೂ ಸೂಕ್ತ ನಾಮಕರಣ ಮಾಡುವುದು ತುಸು ಸವಾಲಿನ ಕೆಲಸವೇ. ಬೇಕಾದರೆ ಮೇಲ್ಸೇತುವೆಗೆ ಯಾರ ಹೆಸರಿಡಬೇಕು ಎಂಬ ಬಗ್ಗೆ ಈಗ ನಡೆಯುತ್ತಿರುವ ವಿವಾದವನ್ನು ಗಮನಿಸಿ. ಹೆಸರಿಡುವುದಿರಬಹುದು, ಹೆಸರು ಬದಲಿಸುವುದಿರಬಹುದು, ಆ ಬಗ್ಗೆ ಜನರ ಕುತೂಹಲವಂತೂ ಇದ್ದೇ ಇರುತ್ತದೆ. 'ನನಗೆ ಪುಸ್ತಕ ಬರೆಯುವುದು ಕಷ್ಟವಲ್ಲ. ಆದರೆ ಆ ಪುಸ್ತಕಕ್ಕೆ ಯಾವ ಹೆಸರಿಡಬೇಕು ಎಂಬ ಬಗ್ಗೆ ಬಹಳ ತಲೆಕೆಡಿಸಿಕೊಳ್ಳುತ್ತೇನೆ' ಎಂದು ಖ್ಯಾತ ಇಂಗ್ಲಿಷ್ ಕಾದಂಬರಿಕಾರ ಜೆಫ್ರಿ ಆರ್ಚರ್ ಹೇಳಿದ ಮಾತು ನೆನಪಾಗುತ್ತದೆ. ಇತ್ತೀಚಿಗೆ ನನ್ನ ಸಂಗ್ರಹದಲ್ಲಿರುವ ಒಂದು ಪುಸ್ತಕದ ಶೀರ್ಷಿಕೆ ಬಹಳ ಮಜಾ ಎನಿಸಿತು. ನಿಸ್ಸಂದೇಹವಾಗಿ, ಈ ಕೃತಿಯನ್ನು ಬರೆದ ಲೇಖಕ ಅದರ ಬಗ್ಗೆ ಸಾಕಷ್ಟು ಯೋಚನೆ ಮಾಡಿ ಶೀರ್ಷಿಕೆ ನೀಡಿರಬಹುದು ಎಂದು ಅನಿಸಿತು. Everything I know about Women I learned from my tractor ಅಂತ ಆ ಶೀರ್ಷಿಕೆ. ಇದರ ಕೃತಿಕಾರ ರೋಜರ್ ವೆಲ್ಶ್. ವಿಚಿತ್ರ ಎಂದೆನಿಸಿದರೂ, ಈ ಶೀರ್ಷಿಕೆ ಎಂಥವರ ಗಮನವನ್ನಾದರೂ ಸೆಳೆಯುತ್ತದೆ. ಕೆಲವು ದಿನಗಳ ಹಿಂದೆ ಒಂದು ಪುಸ್ತಕದ ಶೀರ್ಷಿಕೆ ನನ್ನನ್ನು ಆಕರ್ಷಿಸಿತು. ಆ ಶೀರ್ಷಿಕೆ – Italian Without Words: Now you can communicate in Italian even if you don't know a single word. ಅದೇ ರೀತಿ ಇನ್ನೊಂದು ಶೀರ್ಷಿಕೆ ಹೀಗಿದೆ – Everything I Want to Do is Illegal: War Stories from the Local Food Front. ನ್ಯೂಯಾರ್ಕಿನ 'ಹೆರಾಲ್ಡ್ ಟ್ರಿಬ್ಯೂನ್' ಪತ್ರಿಕೆಯಲ್ಲಿ ಡೊನಾಲ್ಡ್ ರೋಜರ್ಸ್ ಎಂಬ ಪತ್ರಕರ್ತನಿದ್ದ. ಆತ ಪುಸ್ತಕದ ಶೀರ್ಷಿಕೆ ಕೊಡುವುದರಲ್ಲಿ ನಿಸ್ಸೀಮನಾಗಿದ್ದ. ಕೃತಿ ಬರೆದು ಶೀರ್ಷಿಕೆ ಸೂಚಿಸುವಂತೆ ಸಾಹಿತಿಗಳು ಅವನನ್ನು ಕೋರುತ್ತಿದ್ದರು. ಒಮ್ಮೆ ಲೇಖಕನೊಬ್ಬ, 'ಗಂಡನ ಆಸ್ತಿಯನ್ನು ಉಳಿಸಿಕೊಳ್ಳುವುದು ಹೇಗೆ, ಗಂಡನ ಬಿಜಿನೆಸ್ಸನ್ನು ಆತನ ನಂತರ ನಡೆಸಿಕೊಂಡು ಹೋಗುವುದು ಹೇಗೆ' ಎಂಬ ವಿಷಯವಾಗಿ ಒಂದು ಪುಸ್ತಕ ಬರೆದು ಶೀರ್ಷಿಕೆ ಸೂಚಿಸುವಂತೆ ಆತನನ್ನು ಕೋರಿದ. ಅದಕ್ಕೆ ರೋಜರ್ಸ್ ನೀಡಿದ ಶೀರ್ಷಿಕೆ – TEACH YOUR WIFE TO BE A WIDOW.

ಸಮಸ್ಯೆಗಳನ್ನೂ ಬಿಜಿನೆಸ್ ಆಗಿ ಪರಿವರ್ತಿಸಬಹುದು!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ನಿಮ್ಮಲ್ಲಿ ಯಾವುದಾದರೂ ಬಿಜಿನೆಸ್ ಐಡಿಯಾಗಳಿದ್ದರೆ ಹೇಳಿ, ಅದನ್ನು ಇಂಪ್ಲಿಮೆಂಟ್ ಮಾಡೋಣ' ಆಪ್ತ ಸ್ನೇಹಿತರಾದ ಬಸು ಉಳ್ಳಾಗಡ್ಡಿ ಹೇಳಿದರು. ತಟ್ಟನೆ ಏನು ಹೇಳಬೇಕೆಂದು ತೋಚಲಿಲ್ಲ. ಆಗ ಅವರೇ 'ಯಾವುದಾದರೂ ಐಡಿಯಾಗಳಿದ್ದರೆ ಹೇಳಿ. ಇಲ್ಲವಾದರೆ, ಬೆಂಗಳೂರಿನಲ್ಲಿ ಮೆಜಾರಿಟಿ ಜನ ಎದುರಿಸುವ ಗಂಭೀರ ಸಮಸ್ಯೆಗಳಿದ್ದರೆ ಹೇಳಿ. ಅದಕ್ಕೆ ಪರಿಹಾರ ಸೂಚಿಸುವ ಮೂಲಕ ಅದನ್ನೇ ಬಿಜಿನೆಸ್ ಐಡಿಯಾವಾಗಿ ಪರಿವರ್ತಿಸಬಹುದು. ಯಾರೂ ಪ್ರಯತ್ನಿಸದ ಕ್ಷೇತ್ರ ಅಥವಾ ಬಿಜಿನೆಸ್‌ನಲ್ಲಿ ಪೈಪೋಟಿ ಇರುವುದಿಲ್ಲ. ಅಂಥ ಬಿಜಿನೆಸ್ ಬಹುಬೇಗ ಕ್ಲಿಕ್ ಆಗುತ್ತದೆ ' ಅಂದರು.

ಅಂದಹಾಗೆ ಬಸವರಾಜ್ ಉಳ್ಳಾಗಡ್ಡಿ ಅವರು ಮೂಲತಃ ಉತ್ತರಕನ್ನಡದ ಬನವಾಸಿಯವರು. ಕಳೆದ 30 ವರ್ಷಗಳಿಂದ ಅಮೆರಿಕದಲ್ಲಿ ನೆಲೆಸಿದ್ದಾರೆ. ಕೆಲವು ವರ್ಷ ಅಲ್ಲಿಯೇ ನೌಕರಿ ಮಾಡಿ, ಆನಂತರ ಬಿಜಿನೆಸ್ ಆರಂಭಿಸಿದವರು. ಈಗ ತಮ್ಮ ಬಿಜಿನೆಸ್‌ನ್ನು ಬೆಂಗಳೂರು ಹಾಗೂ ಇತರ ನಗರಗಳಿಗೂ ವಿಸ್ತರಿಸಿದ್ದಾರೆ. ಒಬ್ಬ ಯಶಸ್ವಿ entrepreneur ಆಗಿದ್ದಾರೆ.

ಕೆಲ ವರ್ಷದ ಹಿಂದೆ ಈ ರೀತಿ ಹೇಳಿದ್ದ ನೀಡಿದ್ದ ಬಸವರಾಜ್ ಅವರು ತಮ್ಮ ಹೇಳಿಕೆಯನ್ನು ಮನದಟ್ಟು ಮಾಡಿಕೊಡಲು ಒಂದು ನಿದರ್ಶನ ಹೇಳಿದರು. 'ನೋಡಿ, ಅಮೆರಿಕದಲ್ಲಿ ಗಂಡ-ಹೆಂಡತಿ ಇಬ್ಬರೂ ದುಡಿಯುತ್ತಾರೆ. ಅವರಿಗೆ ತಮ್ಮ ಮನೆಯನ್ನು ಸ್ವಚ್ಛಗೊಳಿಸಲು ಸಮಯ ಸಿಗುವುದಿಲ್ಲ. ವಾರದಲ್ಲಿ ಎರಡು ದಿನ ಮಾತ್ರ ಈ ಕೆಲಸ ಮಾಡಿಕೊಳ್ಳಬೇಕು. ಸಿಗುವ ಎರಡು ದಿನ ರಜಾ ಸಹ ಇದಕ್ಕೇ ಹೋಗಿ ಬಿಡುತ್ತದೆ. ವೀಕೆಂಡ್‌ಗೆಂದು ಬೇರೆಲ್ಲೂ ಹೋಗಲು ಆಗುವುದಿಲ್ಲ. ಅಲ್ಲಿ ಮನೆಗೆಲಸಕ್ಕೆ ಹೆಂಗಸರು (maids) ಸಿಗುವುದಿಲ್ಲ. Its s big problem. ಇದು ಪ್ರತಿ ಮನೆಯ ಸಮಸ್ಯೆ. ಮನೆ ಕೆಲಸಕ್ಕೆಂದು ಹೆಂಡತಿ ದುಡಿಯಲು ಹೋಗದಿದ್ದರೆ ಸಂಸಾರ ರಥ ಸಾಗುವುದಿಲ್ಲ. ಒಂದು ಸಮಸ್ಯೆ ಕೆಲವರನ್ನಷ್ಟೇ ಬಾಧಿಸಿದರೆ ಅದು ವೈಯಕ್ತಿಕ ಸಮಸ್ಯೆಯಾಗುತ್ತದೆ. ಆದರೆ ಅದರ ಬಿಸಿ ಎಲ್ಲರಿಗೂ ತಟ್ಟಿದರೆ ಅದು ಗಂಭೀರ ಸಮಸ್ಯೆಯಾಗುತ್ತದೆ, talking point ಆಗುತ್ತದೆ. ಮನೆಗೆಲಸದವರ ಸಮಸ್ಯೆಯೂ ಅಮೆರಿಕದಲ್ಲಿ ಅದೇ ಸ್ವರೂಪವನ್ನು ಪಡೆಯಿತು. ಈಗ ಭಾರತದಲ್ಲಿ ಇದರ ಬಿಸಿ ತಟ್ಟಲಾರಂಭಿಸಿದೆ, ಅದು ಬೇರೆ ಮಾತು. ಯಾರೋ ಒಂದಷ್ಟು ಜನ ಸೇರಿ ಈ ಸಮಸ್ಯೆಗೆ ಹೇಗೆ ಪರಿಹಾರ ಕಂಡು ಹಿಡಿಯಬಹುದು, ಅದನ್ನು ಬಿಜಿನೆಸ್ ಆಗಿ ಹೇಗೆ ಪರಿವರ್ತಿಸಬಹುದು ಎಂದು ಯೋಚಿಸಿದರು. ಅದರ ಫಲವೇ ಏಳೆಂಟು ವರ್ಷದ ಹಿಂದೆ ಆರಂಭಗೊಂಡ "mollymaid.com'

'ಈ ಮೊಲ್ಲಿಮೇಡ್ ಏನು ಮಾಡುತ್ತದೆ ಅಂದ್ರೆ, ನಿಮ್ಮ ಮನೆಗೆ ಕೆಲಸದವರನ್ನು ಕಳಿಸಿಕೊಡುತ್ತದೆ. ನೀವು ಮನೆಯಲ್ಲಿ ಇರಬೇಕೆಂದಿಲ್ಲ. ಅವರೇ ಬಂದು ಮನೆಯನ್ನು ಸ್ವಚ್ಛಗೊಳಿಸಿ, ಅಂದವಾಗಿ ಜೋಡಿಸಿ, ನೀವು ಹೇಳಿದ ಎಲ್ಲ ಕೆಲಸಗಳನ್ನೂ ಒಪ್ಪವಾಗಿ ಮಾಡಿ ಹೋಗುತ್ತಾರೆ. ನೀವು ಎಷ್ಟೇ ಅಮೂಲ್ಯ ವಸ್ತು, ಒಡವೆ, ಆಭರಣ, ಹಣ ಏನೇ ಇಟ್ಟರೂ ಸ್ವಲ್ಪವೂ ವ್ಯತ್ಯಾಸವಾಗೊಲ್ಲ. ಅವರು ಕೆಲಸ ಮಾಡುವಾಗ ನೀವು ಇರಬೇಕಿಲ್ಲ ಹಾಗೂ ಯಾವ ವಸ್ತುವೂ ಕಳುವಾಗುವುದಿಲ್ಲ ಎಂಬ ಸಂಗತಿಯೇ ಆ ಸೇವೆಯ ವೈಶಿಷ್ಟ್ಯ. ಮೊಲ್ಲಿಮೇಡ್ ಕೆಲಸಕ್ಕೆ ಸೇರಿಸಿಕೊಳ್ಳುವಾಗಲೇ ಸಿಬ್ಬಂದಿಯನ್ನು ಇಂಥ ಸೇವೆಗೆ ತರಬೇತಿ ಕೊಟ್ಟು ಅಣಿಗೊಳಿಸುತ್ತದೆ. House Keeping ಬಗ್ಗೆ ಟ್ರೇನಿಂಗ್ ಕೊಡುತ್ತದೆ. ಅವರ ಸಂಪೂರ್ಣ ಜಾತಕ ಸಂಗ್ರಹಿಸುತ್ತದೆ. ಯಾರ ಮನೆಯಲ್ಲಾದರೂ ಗುಂಡುಸೂಜಿ ಕದ್ದರೂ ಅವರನ್ನು ಸುಲಭವಾಗಿ track ಮಾಡಬಹುದು. ನಿಮ್ಮ ಮನೆಗೇ ಬೇಕಾದ customised maid service ಲಭ್ಯ. ಅವರವರ ಬೇಡಿಕೆ, ಅಪೇಕ್ಷೆ, ಅವಶ್ಯಕತೆಗೆ ಅನುಗುಣವಾಗಿ ಮನೆಯನ್ನು ಸ್ವಚ್ಛಗೊಳಿಸಿ, ಚೆಂದ ಮಾಡಿ ಹೋಗುತ್ತಾರೆ. ಹಾಗಂತ ಇದು ಬಹಳ ದುಬಾರಿಯೇನಲ್ಲ. ನಮ್ಮ ಮನೆಯನ್ನು ಬೇರೆಯವರಿಗೆ ಒಪ್ಪಿಸಬೇಕಲ್ಲ ಎಂಬ ಚಿಂತೆಯೂ ಇಲ್ಲ. ಅಮೆರಿಕದ ಎಲ್ಲ ಮನೆಗಳಲ್ಲೂ ವ್ಯಾಪಿಸಿದ್ದ, ಜಾಗತಿಕ ಬಿಕ್ಕಟ್ಟಿಗಿಂತ ಗಂಭೀರವಾಗಿ ಬಾಧಿಸುತ್ತಿದ್ದ ಸಮಸ್ಯೆಗೆ ಮೊಲ್ಲಿಮೇಡ್ ಪರಿಹಾರ ಕಲ್ಪಿಸಿದೆ. ಅಲ್ಲದೇ ಸಾವಿರಾರು ಕೋಟಿ ವ್ಯವಹಾರ ನಡೆಸುವ ದೊಡ್ಡ ಸಂಸ್ಥೆಯಾಗಿದೆ. ಲಕ್ಷಾಂತರ ಜನರಿಗೆ ಉದ್ಯೋಗ ಕಲ್ಪಿಸಿದೆ. ಪ್ರತಿದಿನ ಎರಡು-ಮೂರು ಗಂಟೆ ಬಿಡುವಿನ ಸಮಯ ವಿದೆಯೆನ್ನಿ ಅಂಥವರು ಮೊಲ್ಲಿಮೇಡ್‌ಗೆ ಸೇರಿಕೊಂಡು ಬೇರೆ ಯವರ ಮನೆ ಸ್ವಚ್ಛಗೊಳಿಸಿ ಬರಬಹುದು. ಬಹಳ ದೊಡ್ಡ ಸಂಖ್ಯೆಯಲ್ಲಿ ಯುವಕ, ಯುವತಿಯರು, ವಿದ್ಯಾರ್ಥಿಗಳು, ಗೃಹಿಣಿಯರು ಮೊಲ್ಲಿಮೇಡ್ ಸೇರಿಕೊಂಡು, ಕಂಪನಿಯ ಕಾರಿನಲ್ಲಿ ಗ್ರಾಹಕರ ಮನೆಗೆ ಹೋಗಿ ಡ್ಯೂಟಿ ಮಾಡಿ ಬರುತ್ತಾರೆ. ಬೇರೆಯವರ ಮನೆಯ ಕೆಲಸ ಮಾಡಬೇಕೆಂಬ ಕೀಳರಿಮೆಯನ್ನು ಹೊಡೆದು ಹಾಕಲಾಗಿದೆ. ಮನೆಗೆಲಸಕ್ಕೂ ಬ್ರ್ಯಾಂಡಿಂಗ್ ಮಾಡಿ, ಅದೊಂದು ಪ್ರತಿಷ್ಠೆ ಕೆಲಸ ಹಾಗೂ ಲಾಭದಾಯಕ ಉದ್ಯೋಗ ಎಂಬಂತೆ ರೂಪಿಸಲಾಗಿದೆ. ಮೊಲ್ಲಿಮೇಡ್ ಸೇವೆ ಪಡೆದರೆ ಮನೆ ಸ್ವಚ್ಛವಾಗಿರುತ್ತದೆ ಎಂಬ ಅಭಿಪ್ರಾಯ ಬೇರೂರುವಂತೆ ಆ ಸೇವೆ ಯನ್ನು ರೂಪಿಸಲಾಗಿದೆ. ಒಂದು ಜ್ವಲಂತ ಸಮಸ್ಯೆಗೆ ಯಾರದೋ ತಲೆಯಲ್ಲಿ ಮೂಡಿದ ಒಂದು ಐಡಿಯಾ ಇಂದು ಒಂದು ದೊಡ್ಡ ಉದ್ಯಮವಾಗಿ ಬೆಳೆದಿದೆ.

ಬಸು ಅವರು ಯಾವ ವಿಷಯದ ಬಗ್ಗೆ ಹೇಳುತ್ತಿದ್ದಾರೆಂಬುದು ಪಕ್ಕಾ ಆಯಿತು. 'ಅದು ಸರಿ ನೀವು ಈ ನಿಟ್ಟಿನಲ್ಲಿ ಏನು ಮಾಡಿದ್ದೀರಿ?' ಎಂದು ಕೇಳಿದೆ. ಅದಕ್ಕೆ ಅವರು ತಮ್ಮದೇ startup ಕಂಪನಿ ಬಗ್ಗೆ ಹೇಳಿದರು. ಪ್ರತಿದಿನ ನಾವು ಬೆಂಗಳೂರಿನಲ್ಲಿ ಎದುರಿಸುತ್ತಿರುವ ಸಮಸ್ಯೆಗೆ ಕಂಡುಕೊಂಡ ಪರಿಹಾರ ಹೇಗೆ ಒಂದು ಉದ್ಯಮವಾಗಿದೆ, Business opportunity ಆಗಿ ಪರಿವರ್ತನೆಯಾಗಿದೆಯೆಂಬುದನ್ನು ಅವರು ವಿವರಿಸಿದರು.

ನಮಗೆಲ್ಲ ಓಲಾ, ಉಬರ್, ಮೇರು ಕ್ಯಾಬ್ ಸರ್ವಿಸ್ ಗೊತ್ತು. ಬೆಂಗಳೂರಿನಂಥ ನಗರದಲ್ಲಿ ಆಟೋಗಳ ಹಾಗೆ ಇಂದು ಕ್ಯಾಬ್, ಟ್ಯಾಕ್ಸಿಗಳು ನಾವು ಕರೆದಲ್ಲಿಗೆ ಬರುತ್ತವೆ. ಓಲಾ ಕಾರ್, ಆಟೋ ಬೇಕೆಂದು ಫೋನ್ ಮಾಡಿದರೆ ಐದು ನಿಮಿಷದೊಳಗೆ ನಾವು ಇರುವಲ್ಲಿಗೇ ಬರುತ್ತದೆ. ನಾವು ಎಲ್ಲಿದ್ದೇವೆಂದು ಅಡ್ರೆಸ್ ಸಹ ಹೇಳಬೇಕಿಲ್ಲ. ಜಿಪಿಎಸ್ ತಂತ್ರಜ್ಞಾನದ ಸಹಾಯದಿಂದ ನಾವಿರುವ ಜಾಗವನ್ನು ಹುಡುಕಿಕೊಂಡು ಬರುತ್ತಾರೆ. ಮೂರು-ನಾಲ್ಕು ಜನ ಒಂದೇ ಕಡೆ ಕೆಲಸಕ್ಕೆ ಹೋಗುವವರು ತಮ್ಮ ತಮ್ಮ ಕಾರನ್ನು ತೆಗೆದುಕೊಂಡು ಹೋಗುವ ಬದಲು, ಒಂದೇ ಓಲಾ ಕಾರಿನಲ್ಲಿ ಆಫೀಸಿಗೆ ಹೋಗುವುದು, ಬರುವುದು ಬಹಳ ಲಾಭದಾಯಕ ಹಾಗೂ ಅನುಕೂಲಕರ. ನಿಮ್ಮ ಬಳಿ ಎರಡು-ಮೂರು ಕಾರುಗಳಿದ್ದರೆ, ಓಲಾ ಕಂಪನಿಗೆ ಕೊಟ್ಟರೆ, ಅವರೇ ಅದನ್ನು ಓಡಿಸಿ ಕೊಂಡು ತಿಂಗಳ ಕೊನೆಯಲ್ಲಿ, ಇಂತಿಷ್ಟು ಅಂತ ಕೊಡುತ್ತಾರೆ. ಒಂದು ಕಾರನ್ನು ಬಾಡಿಗೆ ಬಿಟ್ಟವರು ಎಷ್ಟೋ. ಹಾಗೆ ನೋಡಿದರೆ ಓಲಾ ಕಂಪನಿಯವರ ಬಳಿಯಿರುವುದೆಲ್ಲ ಮಂದಿ ಕಾರುಗಳೇ. ಅವರು ಅದಕ್ಕೆ ಒಂದು ಪೈಸೆಯನ್ನೂ ಖರ್ಚು ಮಾಡಿಲ್ಲ, ಡ್ರೈವರ್‌ಗಳಿಗೂ ಓಲಾ ಸಂಬಳ ಅಂತ ಕೊಡುವುದಿಲ್ಲ. ಗ್ರಾಹಕರು, ಕಾರು ಮಾಲೀಕರು, ಡ್ರೈವರ್‌ಗಳ ಮಧ್ಯೆ ಓಲಾ ಒಂದು ಸೇತುವೆಯಾಗಿದೆ. ಇದಕ್ಕೊಂದಿಷ್ಟು ಕಮಿಷನ್ ಅಂತ ತನ್ನ ಪಾಲನ್ನು ತೆಗೆದುಕೊಳ್ಳುತ್ತದೆ. ಅದೇ ಸಾವಿರಾರು ಕೋಟಿ ರುಪಾಯಿಗಳಾಗುತ್ತವೆ! ಇದು ನಿಮಗೆ ಗೊತ್ತಿರಬಹುದು. ಬಸು ಹಾಗೂ ಅವರ ಸ್ನೇಹಿತರು ಆರಂಭಿಸಿರುವ ಸ್ಟಾರ್ಟ್ ಅಪ್ ಕಂಪನಿ ಇದಕ್ಕಿಂತ ಸ್ವಲ್ಪ ಭಿನ್ನ. ನಿಮ್ಮ ಬಳಿ ಕಾರ್ ಇದೆ. ಆದರೆ ಡ್ರೈವರ್ ಬಂದಿಲ್ಲ. ಹೇಳಿಯೋ, ಹೇಳದೆಯೋ ಮೂರ್‍ನಾಲ್ಕು ದಿನ ಬರುವುದಿಲ್ಲ, ನಿಮಗೆ ಹೊರಹೋಗಬೇಕು, ಡ್ರೈವಿಂಗ್ ಬರೊಲ್ಲ ಅಥವಾ ನಿಮ್ಮ ಸ್ಟೇಟಸ್‌ಗೆ ಡ್ರೈವ್ ಮಾಡಲು ಮನಸ್ಸಿಲ್ಲ ಅಥವಾ ಕಾರಿನಲ್ಲೇ ಆಫೀಸ್‌ಗೆ ಸಂಬಂಧಿಸಿದ ಹತ್ತಾರು ಕೆಲಸಗಳನ್ನು ಮಾಡಬೇಕಾದ್ದರಿಂದ ಡ್ರೈವ್ ಮಾಡುತ್ತಿಲ್ಲ, ಅಂತೂ ಒಟ್ಟಾರೆ ನಿಮಗೆ ತಕ್ಷಣ ಡ್ರೈವರ್ ಬೇಕು ಅಂತಿಟ್ಟುಕೊಳ್ಳಿ, ಬಸು ಅವರ 'ಡ್ರೈವ್ ಯು' ಕಂಪನಿಗೆ ಫೋನ್ ಮಾಡಿದರಾಯಿತು. ಐದು-ಹತ್ತು ನಿಮಿಷಗಳಲ್ಲಿ ಡ್ರೈವರ್‌ನನ್ನು ಕಳಿಸಿಕೊಡುತ್ತಾರೆ. ಗಂಟೆಗೆ 99 ರು. ಛಾರ್ಜ್ ಮಾಡುತ್ತಾರೆ.

ಮನೆಯಿಂದ ಆಫೀಸಿಗೆ ಹೋಗಿ ನಿಮ್ಮನ್ನು ಬಿಟ್ಟ ನಂತರ, ನಿಮ್ಮ ಡ್ರೈವರ್ ವಾಹನದಲ್ಲಿ ಮಲಗಿ ಕಾಲ ಕಳೆಯುತ್ತಾನೆ. ಆತ ವಾಹನ ಓಡಿಸಿ ಡ್ಯೂಟಿ ಮಾಡುವುದೇ ಎರಡು-ಮೂರು ತಾಸು ಅಂತಿಟ್ಟುಕೊಳ್ಳಿ. ಅವರಿಗೆ 16-18 ಸಾವಿರ ರುಪಾಯಿ ಕೊಡುವ ಬದಲು, ಮನೆಯಿಂದ ನಿಮ್ಮನ್ನು ಆಫೀಸಿಗೆ ಕರೆದುಕೊಂಡು ಹೋಗಿ ಬಿಡಲು ಹಾಗೂ ಅಲ್ಲಿಂದ ಮನೆಗೆ ಕರೆದುಕೊಂಡು ಬರಲು 'ಡ್ರೈವ್ ಯು' ಸೇವೆ ಪಡೆದರೆ, ತಿಂಗಳಿಗೆ ಆರೇಳು ಸಾವಿರ ರುಪಾಯಿಗಳಲ್ಲಿ ನಿಭಾಯಿಸಬಹುದು.

ಮೊಲ್ಲಿಮೇಡ್ ಮನೆಗೆ ಮನೆಗೆಲಸದವರನ್ನು ಕಳಿಸಿಕೊಡುವಂತೆ, 'ಡ್ರೈವ್ ಯು' ನಿಮಗೆ ಡ್ರೈವರ್‌ಗಳನ್ನು ಕಳಿಸಿಕೊಡುತ್ತದೆ. ತನ್ನ ಸೇವೆಗೆ ಆಯ್ದುಕೊಳ್ಳುವ ಡ್ರೈವರ್‌ಗಳಿಗೆ Drive U ಉತ್ತಮ ತರಬೇತಿ, ಗ್ರಾಹಕರ ಜತೆ ಹೇಗೆ ವರ್ತಿಸಬೇಕು, ರಸ್ತೆ ನಿಯಮ, ಉತ್ತಮ ಸಂಬಂಧ ಹೊಂದುವ ಪರಿ, ಗ್ರಾಹಕ ಸೇವೆ ಮಹತ್ವ ಮುಂತಾದವುಗಳ ಬಗ್ಗೆ ಟ್ರೇನಿಂಗ್ ನೀಡಿ, ಕೆಲಸಕ್ಕೆ ಕಳಿಸುತ್ತದೆ. ಪ್ರತಿದಿನ ನಿಮಗೆ ಮೂರ್‍ನಾಲ್ಕು ತಾಸು ಹೆಚ್ಚುವರಿ ಸಮಯವಿದ್ದರೆ 'ಡ್ರೈವ್ ಯು'ನಲ್ಲಿ ಸೇರಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಪಾಕೆಟ್ ಮನಿ ಬೇಕಾದರೆ, ಎರಡು-ಮೂರು ತಾಸು ವಾಹನ ಓಡಿಸಬಹುದು. ಅಂದಿನ ಕೆಲಸಕ್ಕೆ ಅಂದೇ ಅವರ ಅಕೌಂಟಿಗೆ ಹಣ ಜಮಾ ಆಗುತ್ತದೆ. ಕಾರಿನ ಮಾಲೀಕರು ಹಾಗೂ ಡ್ರೈವರ್ ಮಧ್ಯೆ 'ಡ್ರೈವ್ ಯು' ಸೇತುವೆಯಾಗುತ್ತದೆ. ಅಂದರೆ ಡ್ರೈವರ್‌ಗಳ ಸೇವೆಗೆ 'ಡ್ರೈವ್ ಯು' ಒಂದು ಬ್ರ್ಯಾಂಡಿಂಗ್ ಮಾಡಿ ಅದಕ್ಕೆ ವೃತ್ತಿ ಪರತೆಯ ಮಹತ್ವ ಕಲ್ಪಿಸಿಕೊಟ್ಟಿದೆ. ಕಾರಿದ್ದೂ ಡ್ರೈವರ್‌ಗಳು ಸಿಗದೇ ಪರದಾಡುವ ಅಸಂಖ್ಯ ಜನರಿಗೆ ಈ ಸೇವೆ ನಿಜಕ್ಕೂ ವರದಾನವಾಗಿದೆ. ಈಗಾಗಲೇ 'ಡ್ರೈವ್ ಯು' ನಲ್ಲಿ ಏಳುನೂರಕ್ಕೂ ಹೆಚ್ಚು ಡ್ರೈವರ್‌ಗಳಿದ್ದು, ದಿನದ ಯಾವ ಹೊತ್ತಿನಲ್ಲಾದರೂ ಸಂಪರ್ಕಿಸಿದರೆ ತಕ್ಷಣ ಧಾವಿಸಿ ಬರುತ್ತಾರೆ. ದುಬಾರಿ, ಲಕ್ಷುರಿ ಕಾರಿಗೆ ಅದಕ್ಕೆ ತಕ್ಕ ಹಾಗೆ, ಚೆನ್ನಾಗಿ ಯೂನಿಫಾರ್ಮ್ ಧರಿಸಿದ, ಇಂಗ್ಲಿಷ್ ಮಾತಾಡಬಲ್ಲ ಡ್ರೈವರ್‌ಗಳು ಬರುತ್ತಾರೆ. 'ಡ್ರೈವ್ ಯು' ಡ್ರೈವರ್ ಇದ್ದರೆ ಸ್ವಲ್ಪವೂ ಭಯಪಡುವ ಅಗತ್ಯವಿಲ್ಲ. ಈಗ ಈ ಸೇವೆಯನ್ನು ಬೆಂಗಳೂರು ಹೈದರಾಬಾದ್, ಚೆನ್ನೈ, ಮುಂಬೈ, ದಿಲ್ಲಿ ಮುಂತಾದ ನಗರಗಳಿಗೂ ವಿಸ್ತರಿಸಿದೆ. ಕೆಲವು ಜನರ ಐಡಿಯಾ ಹೇಗೆ ಒಂದು ಹೊಸ ಉದ್ಯಮಕ್ಕೆ ನಾಂದಿಯಾಗಿದೆ ನೋಡಿ. ಅದಕ್ಕಿಂತ ಹೆಚ್ಚಾಗಿ ಹಲವರು ನಿತ್ಯ ಎದುರಿಸುವ ಸಮಸ್ಯೆಗೆ ಪರಿಹಾರ ಒದಗಿಸಿದೆ.

ಇದೇ 'ಡ್ರೈವ್ ಯು' ಹಿಂದಿರುವ ಮನಸ್ಸುಗಳು ಮತ್ತೊಂದು ಸೇವೆಯನ್ನೂ ಆರಂಭಿಸಿದೆ. ಅದು 'ಪಾರ್ಕ್ ಇನ್'. ನೀವು ಬೆಂಗಳೂರಿನ ಯಾವುದಾದರೂ ಏರಿಯಾಕ್ಕೆ ಹೋಗುತ್ತೀರಿ. ಆದರೆ ವಾಹನ ಪಾರ್ಕ್ ಮಾಡಲು ಜಾಗ ಸಿಗುವುದಿಲ್ಲ. ಆಗ 'ಪಾರ್ಕ್ ಇನ್'ಗೆ ಫೋನ್ ಮಾಡಿದರೆ, ಅವರು ನಿಮ್ಮ ವಾಹನವನ್ನು ತೆಗೆದುಕೊಂಡು ಹೋಗಿ ಪಾರ್ಕ್ ಮಾಡುತ್ತಾರೆ. ಎಲ್ಲಿ ಪಾರ್ಕ್ ಮಾಡುತ್ತಾರೆ ಎಂಬುದು ನಿಮ್ಮ ಸಮಸ್ಯೆಯಲ್ಲ. ಅವರೇನು ಮಾಡುತ್ತಾರೆಂದರೆ, ಉದಾಹರಣೆಗೆ, ಎಂಜಿ ರೋಡಿನಲ್ಲಿ ನಿಮಗೆ ಪಾರ್ಕಿಂಗ್‌ಗೆ ಜಾಗ ಸಿಗದಿದ್ದಾಗ ಪಾರ್ಕ್ ಇನ್‌ಗೆ ಫೋನ್ ಮಾಡುತ್ತೀರೆನ್ನಿ. ಅವರು ಸುತ್ತಮುತ್ತ ಒಂದೆರಡು ಕಿಮಿ ದೂರದಲ್ಲಿರುವ ಅಪಾರ್ಟ್‌ಮೆಂಟ್ ಮಾಲೀಕರ ಕಾರ್ ಪಾರ್ಕಿಂಗ್ ಜಾಗವನ್ನು ಬಾಡಿಗೆಗೆ ಪಡೆಯುತ್ತಾರೆ. ಅಪಾರ್ಟ್‌ಮೆಂಟ್ ಮಾಲೀಕರು ತಮ್ಮ ವಾಹನದಲ್ಲಿ ಆಫೀಸ್‌ಗೆ ಹೋಗುವುದರಿಂದ, ಇಡೀ ದಿನ ಆ ಜಾಗ ಖಾಲಿಯಿರುತ್ತದೆ. ಆ ಜಾಗವನ್ನು 'ಪಾರ್ಕ್ ಇನ್' ಬಳಸಿಕೊಳ್ಳುತ್ತದೆ. ಇದರಿಂದ ಅಪಾರ್ಟ್‌ಮೆಂಟ್‌ಗಳ ಮಾಲೀಕರಿಗೆ ಎಕ್ಸ್‌ಟ್ರಾ ಹಣ ಸಿಕ್ಕಂತಾಯಿತು. ಜನಸಾಮಾನ್ಯರಿಗೆ ಪಾರ್ಕಿಂಗ್ ತಲೆನೋವು ಬಗೆಹರಿದಂತಾಯಿತು. ಯಾರದ್ದೋ ಕಾರನ್ನು ಯಾರದ್ದೋ ಜಾಗದಲ್ಲಿ ನಿಲ್ಲಿಸಲು ಅನುವು ಮಾಡಿಕೊಟ್ಟ 'ಪಾರ್ಕ್ ಇನ್'ಗೂ ಲಾಭ. ಅಲ್ಲದೇ ಪಾರ್ಕಿಂಗ್‌ನಂಥ ಜ್ವಲಂತ ಸಮಸ್ಯೆಯನ್ನು ಅಷ್ಟರಮಟ್ಟಿಗೆ ಬಗೆಹರಿಸಿದಂತಾಯಿತು.

ಅಮೆಜಾನ್, ಫ್ಲಿಪ್‌ಕಾರ್ಟ್, ಸ್ನ್ಯಾಪ್‌ಡೀಲ್, ಬಿಗ್ ಬಾಸ್ಕೆಟ್, ಓಎಲ್‌ಎಕ್ಸ್...ಇವೆಲ್ಲವೂ ಆರಂಭವಾಗಿದ್ದು ಸ್ಟಾರ್ಟ್‌ಪ್‌ಗಳಾಗಿಯೇ. ಫ್ಲಿಪ್‌ಕಾರ್ಟ್ ಶುರುವಾಗಿದ್ದು ಕೋರಮಂಗಲದ ಒಂದು ಗ್ಯಾರೇಜಿನಲ್ಲಿ. ಇಂದು ಅವರ ಮೌಲ್ಯ ಹತ್ತಾರು ಸಾವಿರ ಕೋಟಿ ರುಪಾಯಿಗೆ ಕಮ್ಮಿಯಿಲ್ಲ. ಒಂದು ಸಣ್ಣ ಐಡಿಯಾ ಇಂದು ಹೆಮ್ಮರವಾಗಿ ಇಡೀ ದೇಶವನ್ನೇ ಆಕ್ರಮಿಸಿಕೊಂಡಿದೆ. ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ.

ಇನ್ನೊಂದು ಉದಾಹರಣೆ ನೀಡುವುದಾದರೆ, ಗಂಡ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುತ್ತಾರೆನ್ನಿ. ವಾರದಲ್ಲಿ ಒಂದು ದಿನ ಜಯನಗರದ ಮಯ್ಯಾಸ್‌ಗೆ ಹೋಗಿ ದೋಸೆ, ಇಡ್ಲಿ, ವಡಾ ತಿನ್ನುವ ಆಸೆ. ಕೋರಮಂಗಲದಲ್ಲಿರುವ ಅವರಿಗೆ ಅಲ್ಲಿಗೆ ಹೋಗಿ ತಿನ್ನಲು ಟೈಮಿಲ್ಲ. ಮಯ್ಯಾಸ್ ಸಹ ತಮ್ಮ ತಿಂಡಿಗಳನ್ನು ಹೊರಗೆ ಪೂರೈಸುವ ವ್ಯವಸ್ಥೆಯನ್ನು ಹೊಂದಿಲ್ಲ. ಅದೇ ರೀತಿ, ಮತ್ಯಾರಿಗೋ ವಾರದಲ್ಲಿ ಒಂದು ಸಲವಾದರೂ ಶಂಕರಪುರಂನಲ್ಲಿರುವ ಬ್ರಾಹ್ಮಣ ಕಾಫಿಬಾರ್‌ನ ಇಡ್ಲಿ-ವಡಾ, ಚಟ್ನಿ ತಿನ್ನುವ ಆಸೆಯಾಯಿತೆನ್ನಿ ಅಥವಾ ರಾಮಕೃಷ್ಣ ಆಶ್ರಮದ ಸರ್ಕಲ್ ಸನಿಹವಿರುವ ಎಸ್‌ಎಲ್‌ವಿ ಹೋಟೆಲ್‌ನ ತಿಂಡಿ ಸೇವಿಸಬೇಕೆಂದು ಅನಿಸಿತೆನ್ನಿ. ಆದರೆ ಈ ಟ್ರಾಫಿಕ್ ಭರಾಟೆಯಲ್ಲಿ ಅಲ್ಲಿಗೇ ಹೋಗಿ ತಿನ್ನಲು ಆಗೊಲ್ಲ. ಇದಕ್ಕೆ ಹುಟ್ಟಿಕೊಂಡ ಐಡಿಯಾವೇ 'ಸ್ವಿಗ್ಗಿ', ಜೋಮ್ಯಾಟೋ.

ಈ ರೀತಿಯ ವ್ಯವಸ್ಥೆ ಅಮೆರಿಕದಲ್ಲಿ ಆರಂಭವಾಯಿತು. Door Dash ಎಂಬ ಆ್ಯಪ್‌ಗೆ ಹೋದರೆ ನಿಮಗೆ ಬೇಕಾದ ಹೋಟೆಲ್‌ನಿಂದ, ನಿಮಗಿಷ್ಟವಾದ ತಿಂಡಿಗಳನ್ನು ತರಿಸಿಕೊಂಡು ತಿನ್ನಬಹುದು. ಅಲ್ಲಿ ಸಾಧ್ಯವಾಗುವುದು, ಇಲ್ಲಿಯೂ ಸಾಧ್ಯವಾಗಬಹುದು. ಒಂದು ವ್ಯವಸ್ಥಿತ ಪ್ಲಾನ್ ರೂಪಿಸಿದರೆ, ಐಡಿಯಾ ಕ್ಲಿಕ್ ಆಗಬಹುದು. ಮನೆಮನೆಗೆ ಪಿಜ್ಜಾ, ಪುಸ್ತಕ, ತರಕಾರಿ, ಹಣ್ಣು-ಹಂಪಲು ಕಳಿಸುವುದು ಸಾಧ್ಯವಾಗುವುದಾದರೆ, ಗಿಫ್ಟ್‌ಗಳನ್ನು ತಲುಪಿಸುವುದೇನು ಮಹಾ?! ಅದೂ ಸಾಧ್ಯ ತಾನೆ. Sendmygift ಜನ್ಮ ತಾಳಿದ್ದು ಈ ಯೋಚನೆಯ ಮೂಲದಿಂದ .ನಿಮಗೆ ಆಪ್ತರಾದವರು ನಗರದ ಯಾವುದೇ ಮೂಲೆಯಲ್ಲಿರಲಿ, ಮೂವತ್ತನೇ ಮಹಡಿಯಲ್ಲಿರಲಿ, ಸೆಂಡ್‌ಮೈಗಿಫ್ಟ್‌ನವರಿಗೆ ಹೇಳಿದರೆ , ಅವರ ಜನ್ಮದಿನ, ಮದುವೆ ಆ್ಯನಿವರ್ಸರಿ ಅಥವಾ ಇನ್ನಿತರ ಮಹತ್ವದ ದಿನಗಳಂದು ಖುದ್ದಾಗಿ ಹೋಗಿ ಹೂಗೊಂಚಲು, ಚಾಕಲೇಟ್ ಕೊಟ್ಟು ನಿಮ್ಮ ಪರವಾಗಿ ಅಭಿನಂದನೆ ಸಲ್ಲಿಸಿ ಬರುತ್ತಾರೆ. ಸೆಂಡ್ ಮೈ ಗಿಫ್ಟ್‌ನವರು ಕೇವಲ ಸಂಪರ್ಕವಾಗಿಯಷ್ಟೇ ಕೆಲಸ ಮಾಡುತ್ತದೆ. ಖುದ್ದಾಗಿ ಹೋಗಿ ತಲುಪಿಸುವವರು ಆಯಾ ಏರಿಯಾಗಳಲ್ಲಿರುವ ವೆಂಡರ್‌ಗಳು. ಅವರು ಕೆಲವೊಂದು Specification ಗಳನ್ನು ಕೂಡ ಪಾಲಿಸಬೇಕಾಗುತ್ತದೆ ಅಷ್ಟೆ. ಇದರಿಂದ ಹೂಗುಚ್ಛ ಮಾರಾಟ ಮಾಡುವವರಿಗೆ ಹೆಚ್ಚುವರಿ ಬಿಜಿನೆಸ್ ಆದಂತಾಯಿತು. ಜನರಿಗೆ ಸುಲಭವಾಗಿ ತಮ್ಮ ಕೆಲಸ ಈಡೇರಿಸಿದಂತಾಯಿತು. ಸೆಂಡ್ ಮೈಗಿಫ್ಟ್ ಇವರಿಬ್ಬರ ಮಧ್ಯೆ ಸೇತುವೆಯಾಗಿ ತನ್ನ ಪಾಲಿನ ಲಾಭವನ್ನು ಪಡೆದಂತಾಯಿತು.

ಬೆಂಗಳೂರಿನ ತುಂಬಾ ಇಂಥ ಸ್ಟಾರ್ಟ್‌ಪ್‌ಗಳದ್ದೇ ಸುದ್ದಿ. ಕೋರಮಂಗಲಕ್ಕೆ ಹೋದರೆ ಅಮೆರಿಕಕ್ಕೆ ಹೋದ ಅನುಭವವಾಗುತ್ತದೆ. ಈ ಹೊಸ ಐಡಿಯಾಗಳಿಗೆ ಕಾವು ಕೊಡುತ್ತಿರುವವರು ಇಪ್ಪತ್ತೈದರಿಂದ ಮೂವತ್ತೈದು ವರ್ಷದವರು. ಇವರ ಐಡಿಯಾಗಳನ್ನು ವಾಸ್ತವ ರೂಪಕ್ಕಿಳಿಸಲು ಯಾರಾದರೂ ಹಣ ಹೂಡುವವರು ಸಿಕ್ಕೇ ಸಿಗುತ್ತಾರೆ. ಅದರಲ್ಲೂ ಭಾರತದಂಥ ದೇಶ ಇಂಥ ಬಿಜಿನೆಸ್‌ಗೆ ಹೇಳಿ ಮಾಡಿಸಿದ ಚಿನ್ನದ ಗಣಿ!

'ನಿಮ್ಮಲ್ಲಿ ಯಾವುದಾದರೂ ಐಡಿಯಾಗಳಿದ್ದರೆ ಹೇಳಿ' ಎಂದು ಬಸು ಅವರು ಹೇಳಿದ್ದು ಈ ಉದ್ದೇಶದಿಂದ. ಹೌದು ನಿಮ್ಮಲ್ಲೂ ಅಂಥ ಐಡಿಯಾಗಳಿದ್ದರೆ, ನೀವು ಚಿನ್ನದ ಗಣಿ ಮೇಲೆ ಕುಳಿತಿದ್ದೀರಿ ಎಂದರ್ಥ. ಆದರೆ ನಿಮ್ಮ ಐಡಿಯಾ ಇಲ್ಲಿತನಕ ಯಾರ ತಲೆಯಲ್ಲೂ ಹೊಳೆದಿರಬಾರದು ಅಥವಾ ಯಾರೂ ಅನುಷ್ಠಾನ ಮಾಡಿರಬಾರದು. ನಿಮ್ಮ ಐಡಿಯಾದ ಮೇಲೆ ದುಡ್ಡು ಹೂಡುವವರು ಸಾಲುಗಟ್ಟಿ ನಿಂತಿರುತ್ತಾರೆ, ಯೋಚನೆ ಬೇಡ.

ದೊಡ್ಡ ಪ್ರಶ್ನೆ: ನೀಟ್ ಹಗರಣದ ಮಾಸ್ಟರ್‌ಮೈಂಡ್ ಯಾರು?

ಅಕ್ರಮ ದಂಧೆಕೋರರು ಈಗ ನೀಟ್ ಪರೀಕ್ಷೆಗೂ ಕೈಹಾಕಿದ್ದಾರೆ. ದೇಶದಲ್ಲೀಗ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಹಗರಣಗಳು ನಡೆಯುತ್ತಿವೆ ಎಂದಾದರೆ ನಾವು ಭವಿಷ್ಯಕ್ಕಾಗಿ ಎಂತಹ ತಲೆಮಾರನ್ನು ಸೃಷ್ಟಿ ಮಾಡುತ್ತಿದ್ದೇವೆ ಎಂದು ಗಂಭೀರವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು.

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಈ ಬಾರಿಯ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಬಗ್ಗೆ ದೇಶಾದ್ಯಂತ ದೊಡ್ಡ ಪ್ರಮಾಣದಲ್ಲಿ ಆಕ್ರೋಶ ಕೇಳಿಬರುತ್ತಿದೆ. ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ನೀಡಲು ನಡೆಸುವ ಈ ಪರೀಕ್ಷೆಯಲ್ಲಿ ಯದ್ವಾತದ್ವಾ ಅಕ್ರಮಗಳು ನಡೆದಿವೆ ಎಂದು ವಿದ್ಯಾರ್ಥಿಗಳೇ ಆರೋಪಿಸಲು ಆರಂಭಿಸಿದ ಮೇಲೆ ಗ್ರೇಸ್ ಅಂಕ ಕೈಬಿಡಲು ಕೇಂದ್ರ ಸರಕಾರ ನಿರ್ಧರಿಸಿದೆ. ಅಷ್ಟಕ್ಕೇ ವಿಷಯ ಮುಕ್ತಾಯವಾಯಿತೇ? ಇಲ್ಲ! ಎಲ್ಲಕ್ಕಿಂತ ದೊಡ್ಡ ಪ್ರಶ್ನೆ ಏನೆಂದರೆ, ಈ ಹಗರಣದ ರೂವಾರಿ ಯಾರು? ಅಥವಾ ನೀಟ್ ಹಗರಣದ ನಿಜವಾದ ನಟವರಲಾಲ್ ಯಾರು? ಖಂಡಿತ ಇದರ ಹಿಂದೆ ಒಬ್ಬನೇ ವ್ಯಕ್ತಿ ಇಲ್ಲ, ಹಲವಾರು ಜನರಿದ್ದಾರೆ. ಅದರಲ್ಲಿ ಯಾವ ಅನುಮಾನವೂ ಬೇಡ. ಅವರೆಲ್ಲರೂ ಈಗ ಜೈಲಿಗೆ ಹೋಗುತ್ತಾರೆಯೇ? ಅಥವಾ ಕೆಲ ಕಾಣದ ಕೈಗಳು ಎಂದಿನಂತೆ ಈ ದುರುಳರನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತವೆಯೇ?

ನಮ್ಮ ದೇಶಗಳಲ್ಲಿ ಬೇರೆ ಬೇರೆ ರೀತಿಯ ಪರೀಕ್ಷೆಗಳಲ್ಲಿ ಅಕ್ರಮಗಳು ಅಥವಾ ಹಗರಣಗಳು ನಡೆಯುವುದು, ಅವುಗಳನ್ನು ಮುಚ್ಚಿಹಾಕುವುದು, ಕಳ್ಳಾಟ ಆಡಿದವರನ್ನು ರಕ್ಷಿಸುವುದು ಇವೆಲ್ಲ ಹೊಸತೇನಲ್ಲ. ಆದರೆ ಇಂತಹ ಎಲ್ಲ ಚಟುವಟಿಕೆಗಳೂ ಈಗ ರಾಜಾರೋಷವಾಗಿ, ಎಲ್ಲರ ಕಣ್ಣೆದುರೇ ನಡೆಯುತ್ತವೆ ಅಂದರೆ ಜನರು ಸಹಜವಾಗಿಯೇ ರೊಚ್ಚಿಗೇಳುತ್ತಾರೆ. ಅವರಲ್ಲಿ ವ್ಯವಸ್ಥೆಯ ಮೇಲೆ ಅನುಮಾನಗಳು ಮೂಡಲಾರಂಭಿಸುತ್ತವೆ. ಅಂತಹ ಅಪಸವ್ಯಕ್ಕೆ ಆಡಳಿತ ವ್ಯವಸ್ಥೆ ಅವಕಾಶ ನೀಡಬಾರದು.

ನೀಟ್ ಪರೀಕ್ಷೆ ನಡೆದಿದ್ದು 2024ರ ಮೇ 5ರಂದು. ಆವತ್ತೇ ಬಿಹಾರದ ಪಾಟ್ನಾದಲ್ಲಿ ಪರೀಕ್ಷಾ ಅಕ್ರಮದ ಆರೋಪದ ಮೇಲೆ 5 ಅಭ್ಯರ್ಥಿಗಳನ್ನು ಬಂಧಿಸಲಾಗಿತ್ತು. ಅದೇ ದಿನ ರಾಜಸ್ಥಾನದ ಸವಾಯಿ ಮಾಧೋಪುರ ನಗರದಲ್ಲಿ ಹಿಂದಿ ಮಾಧ್ಯಮದ ಅಭ್ಯರ್ಥಿಗಳಿಗೆ ಇಂಗ್ಲಿಷ್ ಮಾಧ್ಯಮದ ಪ್ರಶ್ನೆ ಪತ್ರಿಕೆಗಳನ್ನು ನೀಡಿದ ಆರೋಪ ಕೇಳಿಬಂದಿತ್ತು. ಬರೋಬ್ಬರಿ ಒಂದು ತಾಸಿನ ನಂತರ ಅವರಿಗೆ ಸರಿಯಾದ ಪ್ರಶ್ನೆ ಪತ್ರಿಕೆ ನೀಡಲಾಯಿತು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಕೂಡ ಈ ರೀತಿಯ ಸಮಸ್ಯೆ ಉಂಟಾಗಿದ್ದನ್ನು ಒಪ್ಪಿಕೊಂಡಿತು. ಆದರೆ, ಫಲಿತಾಂಶ ಪ್ರಕಟವಾದ ಮೇಲೆ ಈ ವಿಷಯದಲ್ಲಿ ಇನ್ನೂ ದೊಡ್ಡ ಅನುಮಾನ ವ್ಯಕ್ತವಾಯಿತು. ಸವಾಯಿ ಮಾಧೋಪುರದಲ್ಲಿ ಅಚಾತುರ್ಯದಿಂದ ಬೇರೆ ಪ್ರಶ್ನೆಪತ್ರಿಕೆ ನೀಡಲಾಗಿತ್ತೇ ಅಥವಾ ಗ್ರೇಸ್ ಅಂಕಗಳನ್ನು ನೀಡಲು ಅವಕಾಶ ಸೃಷ್ಟಿಸಿಕೊಳ್ಳುವುದಕ್ಕಾಗಿ ಬೇಕಂತಲೇ ತಪ್ಪು ಪ್ರಶ್ನೆಪತ್ರಿಕೆ ನೀಡಲಾಗಿತ್ತೇ ಎಂಬ ಶಂಕೆಯನ್ನು ಅನೇಕರು ವ್ಯಕ್ತಪಡಿಸಲಾರಂಭಿಸಿದರು. ಇನ್ನೊಂದು ಎಡವಟ್ಟು ಆಗಿದ್ದು ಭೌತಶಾಸ್ತ್ರದ ಪ್ರಶ್ನೆಯಲ್ಲಿ. ಆ ಪ್ರಶ್ನೆಗೆ ಎರಡು ಸರಿ ಉತ್ತರಗಳಿದ್ದವು. ಒಂದು ಸರಿಯುತ್ತರ ಹೊಸ ಪುಸ್ತಕದಲ್ಲಿ, ಇನ್ನೊಂದು ಸರಿಯುತ್ತರ ಹಳೆಯ ಪುಸ್ತಕದಲ್ಲಿತ್ತು. ಹೀಗಾಗಿ ಪ್ರಶ್ನೆಪತ್ರಿಕೆ ಹಂಚಿಕೆಯಲ್ಲಿ ಸಮಸ್ಯೆ ಅನುಭವಿಸಿದವರಿಗೆ ಹಾಗೂ ಭೌತಶಾಸ್ತ್ರದ ಪ್ರಶ್ನೆಗೆ ಎರಡನೇ ಸರಿಯುತ್ತರ ಬರೆದವರಿಗೆ ಕೃಪಾಂಕ ನೀಡಲು ನಿರ್ಧರಿಸಲಾಯಿತು. ಹೀಗೆ ದೇಶದಲ್ಲಿ ಒಟ್ಟು 1563 ವಿದ್ಯಾರ್ಥಿಗಳು ಕೃಪಾಂಕ ಪಡೆದುಕೊಂಡರು. ಇದು ಇಷ್ಟಕ್ಕೇ ಮುಗಿಯಲಿಲ್ಲ. ಪರೀಕ್ಷೆಯ ಫಲಿತಾಂಶ ಪ್ರಕಟವಾದಾಗ ವಿದ್ಯಾರ್ಥಿಗಳಿಗೆ ಇನ್ನೂ ದೊಡ್ಡ ಶಾಕ್ ಕಾದಿತ್ತು. ಬರೋಬ್ಬರಿ 67 ವಿದ್ಯಾರ್ಥಿಗಳು 720ಕ್ಕೆ 720 ಅಂಕ ಪಡೆದು ದೇಶದಲ್ಲಿ ನೀಟ್ ಪರೀಕ್ಷೆಯ ಟಾಪರ್‌ಗಳಾಗಿ ಹೊರಹೊಮ್ಮಿದ್ದರು! ಅವರ ಪೈಕಿ ಆರು ವಿದ್ಯಾರ್ಥಿಗಳು ಹರ್ಯಾಣದ ಫರೀದಾಬಾದ್‌ನ ಒಂದೇ ಕೇಂದ್ರದಲ್ಲಿ ಪರೀಕ್ಷೆ ಬರೆದವರಾಗಿದ್ದರು. ಕುತೂಹಲಕರ ಸಂಗತಿ ಏನೆಂದರೆ, ನೀಟ್ ಪರೀಕ್ಷೆಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ತಲಾ ನಾಲ್ಕು ಅಂಕಗಳಿರುತ್ತವೆ. ಹೀಗಾಗಿ ವಿದ್ಯಾರ್ಥಿಗಳಿಗೆ ಸಿಗುವ ಅಂಕ ನಾಲ್ಕರ ಮಲ್ಟಿಪಲ್ ಆಗಿರಬೇಕು. ಆದರೆ ಕೆಲ ವಿದ್ಯಾರ್ಥಿಗಳಿಗೆ 718 ಮತ್ತು 719 ಅಂಕಗಳೂ ಬಂದಿವೆ. ಅದು ಹೇಗೆ ಸಾಧ್ಯ? ಈ ಎಡವಟ್ಟುಗಳೆಲ್ಲವೂ ಪರೀಕ್ಷೆಯಲ್ಲಿ ಗೋಲ್‌ಮಾಲ್ ನಡೆದಿರುವುದಕ್ಕೆ ಸ್ಪಷ್ಟ ಸೂಚನೆಗಳು. ಇದೇ ಕಾರಣಕ್ಕೆ ಸುಪ್ರೀಂಕೋರ್ಟ್ ಕೂಡ 'ಪರೀಕ್ಷೆಯ ಪಾವಿತ್ರ್ಯವನ್ನು ಹಾಳುಗೆಡವಿದ್ದೀರಿ ಎಂದು ಎನ್‌ಟಿಎಗೆ ಛೀಮಾರಿ ಹಾಕಿತು. ಖಂಡಿತ ಇದು ಗಂಭೀರವಾಗಿ ತೆಗೆದುಕೊಳ್ಳಬೇಕಾದ ವಿಚಾರ. ಈ ಪರೀಕ್ಷಾ ಅಕ್ರಮ ಇಡೀ ದೇಶದ ಮೇಲೆ ದುಷ್ಪರಿಣಾಮ ಬೀರಿದೆ. ದೇಶದ ಮೂಲೆಮೂಲೆಗಳಲ್ಲಿ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಒತ್ತಡಕ್ಕೆ ಸಿಲುಕಿದ್ದಾರೆ. ತನ್ನ ಮಗನ ಫಲಿತಾಂಶದ ವಿಷಯದಲ್ಲಿ ಒತ್ತಡಕ್ಕೆ ಒಳಗಾಗಿದ್ದ ಡಾಕ್ಟರ್ ಒಬ್ಬರು ರೋಗಿಯ ಶಸ್ತ್ರಚಿಕಿತ್ಸೆಯಲ್ಲೇ ಅಪರಾತಪರಾ ಮಾಡಿದ್ದಾರೆ ಎಂದು ಸುದ್ದಿ ಬಂದಿತ್ತು. ನನಗೆ ಅದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಆದರೆ ಒಂದು ಪರೀಕ್ಷೆಯ ಅವಾಂತರದಿಂದ ದೇಶದಲ್ಲಿ ಏನೇನಾಗುತ್ತಿದೆ ಎಂಬುದನ್ನು ನೋಡಿ! ಇವೆಲ್ಲವೂ ಈ ಸಮಸ್ಯೆಯ ಆಳ ಹಾಗೂ ಅಗಲವನ್ನು ಹೇಳುತ್ತಿವೆ.

ದೇಶದಲ್ಲಿ ಮಾಫಿಯಾದ ಡಾನ್‌ಗಳು ಶಿಕ್ಷಣ ವ್ಯವಸ್ಥೆಯನ್ನು ಒತ್ತೆ ಇರಿಸಿಕೊಂಡಿದ್ದಾರೆ ಎಂದು ಜನರು ಈಗ ಅನುಮಾನವಿಲ್ಲದೆ ಹೇಳುತ್ತಿದ್ದಾರೆ. ಪ್ರತಿ ವರ್ಷ ಒಂದಲ್ಲಾ ಒಂದು ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗುತ್ತವೆ. ಆದರೆ ಅದರ ಮಾಸ್ಟರ್ ಮೈಂಡ್‌ಗಳು ತಪ್ಪಿಸಿಕೊಳ್ಳುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಗಳು ಕೂಡ ಇಂತಹವರ ಕೈಗೆ ಸಿಲುಕಿ ನಲುಗುತ್ತಿವೆ ಎಂದಾದರೆ ನಾವು ಭವಿಷ್ಯಕ್ಕೆ ಎಂತಹ ತಲೆಮಾರಿನ ಯುವಶಕ್ತಿಯನ್ನು ಸೃಷ್ಟಿ ಮಾಡುತ್ತಿದ್ದೇವೆ? ದೇಶದ ಜನರ ಜೀವನದ ಮೇಲೆ ಗಂಭೀರ ಪರಿಣಾಮ ಬೀರುವಂತಹ ಪ್ರಮುಖ ಹುದ್ದೆಗಳಿಗೆ ನೇಮಕ ಅಥವಾ ಆಯ್ಕೆಯಾಗುವ ಅಭ್ಯರ್ಥಿಗಳನ್ನು ಈ ಸ್ಪರ್ಧಾತ್ಮಕ ಪರೀಕ್ಷೆಗಳು ನಿರ್ಧರಿಸುತ್ತವೆ. ಇಂತಹ ಪ್ರಮುಖ ಪರೀಕ್ಷೆಯಲ್ಲೇ ಅವ್ಯವಹಾರ ನಡೆಯುತ್ತಿದೆ ಎಂದಾದರೆ ದೇಶದ ಕತೆಯೇನು? ಈ ರೀತಿಯ ಮೋಸಗಳನ್ನು ಎಸಗಿ ವೈದ್ಯಕೀಯ ಕ್ಷೇತ್ರಕ್ಕೆ ಬರುವ ಡಾಕ್ಟರ್‌ಗಳು ಅಥವಾ ಶಿಕ್ಷಣ ಕ್ಷೇತ್ರಕ್ಕೆ ಬರುವ ಶಿಕ್ಷಕರು ಹೇಗೆ ಸಮರ್ಥರಾಗಿರಲು ಸಾಧ್ಯ? ಅವರು ರೋಗಿಗಳಿಗೆ ಎಂತಹ ಚಿಕಿತ್ಸೆ ನೀಡಬಲ್ಲರು? ಅವರು ತಮ್ಮ ವಿದ್ಯಾರ್ಥಿಗಳಿಗೆ ಏನು ಪಾಠ ಮಾಡಬಲ್ಲರು? ಅವರಿಂದ ಪಾಠ ಮಾಡಿಸಿಕೊಳ್ಳುವ ವಿದ್ಯಾರ್ಥಿಗಳ ಗತಿಯೇನಾಗಬೇಕು? ನಾನಿಲ್ಲಿ ಬರೀ ವೈದ್ಯಕೀಯ ಕ್ಷೇತ್ರದ ಬಗ್ಗೆ ಹೇಳುತ್ತಿದ್ದೇನೆ. ಆದರೆ, ಎಂಜಿನಿಯರಿಂಗ್ ಸೇರಿದಂತೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಇದೇ ರೀತಿಯ ಗುಣಮಟ್ಟದ ಸಮಸ್ಯೆಯಿದೆ. ಪ್ರಾಥಮಿಕ ಶಿಕ್ಷಣದಲ್ಲಿ ನಕಲಿ ವಿದ್ಯಾರ್ಥಿಗಳು, ನಕಲಿ ಶಿಕ್ಷಕರು ಹಾಗೂ ನಕಲಿ ಶಾಲಾ ಕಟ್ಟಡಗಳ ಮೂಲಕ ಸರ್ಕಾರದ ನೂರಾರು ಕೋಟಿ ರೂಪಾಯಿ ಅನುದಾನ ಕಳ್ಳರ ಪಾಲಾಗುತ್ತಿರುವ ಅನೇಕ ಉದಾಹರಣೆಗಳು ಬೆಳಕಿಗೆ ಬರುತ್ತಿವೆ. ಉನ್ನತ ಶಿಕ್ಷಣ ವ್ಯವಸ್ಥೆಯಂತೂ ಇನ್ನೂ ಕೆಟ್ಟ ಪರಿಸ್ಥಿತಿಯಲ್ಲಿದೆ. ನೆನಪಿಡಿ, ಶಿಕ್ಷಣದ ಗುಣಮಟ್ಟ ಕುಸಿದರೆ ದೇಶದ ಅಧಃಪತನ ಆರಂಭವಾಗುತ್ತದೆ.

ನಿಜ ಹೇಳಬೇಕೆಂದರೆ, ದೇಶದಲ್ಲಿ ಇಂದು ನುರಿತ ನೌಕರರ ಕೊರತೆ ತುಂಬಾ ಇದೆ. ಒಬ್ಬ ಉದ್ಯೋಗದಾತನಾಗಿ ನಾನಿದನ್ನು ಅಧಿಕಾರಯುತವಾಗಿ ಹೇಳಬಲ್ಲೆ. ಯಾವುದೇ ಕೌಶಲ್ಯಯುತ ಕೆಲಸಕ್ಕೆ ನುರಿತ ನೌಕರರನ್ನು ಹುಡುಕುವುದು ಇಂದು ತುಂಬಾ ಕಷ್ಟವಾಗುತ್ತಿದೆ. ನೌಕರಿ ಕೇಳಿಕೊಂಡು ಬರುವವರಲ್ಲಿ ಕೌಶಲ್ಯವೇ ಇರುವುದಿಲ್ಲ. ನುರಿತ ನೌಕರರು ಸಿಗದೆಯೇ ಟಿಸಿಎಸ್ ಕಂಪನಿಯೊಂದರಲ್ಲೇ 80,000 ಹುದ್ದೆಗಳು ಖಾಲಿ ಬಿದ್ದಿವೆ ಎಂಬುದನ್ನು ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಬೇರೆ ಬೇರೆ ಕಂಪನಿಗಳಲ್ಲೂ ಇದೇ ಪರಿಸ್ಥಿತಿಯಿದೆ.

ಹಾಗಿದ್ದರೆ, ದೇಶದ ಶಿಕ್ಷಣ ಸಚಿವಾಲಯ ಏನು ಮಾಡುತ್ತಿದೆ? ಪ್ರಧಾನಿ ನರೇಂದ್ರ ಮೋದಿಯವರು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಾವೀಗ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವುದರ ಹೊಸ್ತಿಲಿನಲ್ಲಿದ್ದೇವೆ. ಅಂತಹದ್ದೊಂದು ಜಾಗದಲ್ಲಿ ನಿಲ್ಲಬೇಕು ಎಂದಾದರೆ ನಮ್ಮ ದೇಶಕ್ಕೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಅತ್ಯುನ್ನತ ನೈಪುಣ್ಯವನ್ನು ಸಾಧಿಸಿದ ನುರಿತ ಹಾಗೂ ಪ್ರತಿಭಾವಂತ ನೌಕರರು ಬೇಕು! ಅಂತಹವರನ್ನು ಎಲ್ಲಿಂದ ತರೋಣ? ಭಾರತದಲ್ಲಿ ಜಗತ್ತಿನ ಶೇ.17ರಷ್ಟು ಜನಸಂಖ್ಯೆಯಿದೆ. ಆದರೆ, ನಮ್ಮ ದೇಶದ ಎಷ್ಟು ಶಿಕ್ಷಣ ಸಂಸ್ಥೆಗಳು ಜಗತ್ತಿನ ಟಾಪ್ 100 ಅತ್ಯುತ್ತಮ ಶಿಕ್ಷಣ ಸಂಸ್ಥೆಗಳ ಪಟ್ಟಿಯಲ್ಲಿವೆ? ಬಹುಶಃ ಯಾವುದೂ ಇಲ್ಲ! ಈ ಕಾರಣಕ್ಕಾಗಿಯೇ ಉನ್ನತ ಶಿಕ್ಷಣಕ್ಕಾಗಿ ನಮ್ಮ ದೇಶದ ವಿದ್ಯಾರ್ಥಿಗಳು ಅಮೆರಿಕ, ಕೆನಡಾ, ಬ್ರಿಟನ್ ಮುಂತಾದ ಪಾಶ್ಚಾತ್ಯ ದೇಶಗಳಿಗೆ ಹೋಗುತ್ತಾರೆ. ಭಾರತದಲ್ಲಿ ತಾಂತ್ರಿಕ ಶಿಕ್ಷಣ ತುಂಬಾ ದುಬಾರಿಯಾಗಿದೆ. ಹೀಗಾಗಿ ವಿದ್ಯಾರ್ಥಿಗಳು ರಷ್ಯಾ ಮತ್ತು ಇನ್ನಿತರ ಕೆಲ ಸಣ್ಣಪುಟ್ಟ ಸೋವಿಯತ್ ದೇಶಗಳಿಗೆ ಸೋವಿ ಶಿಕ್ಷಣವನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಅನೇಕ ವಿದ್ಯಾರ್ಥಿಗಳು ಚೀನಾಕ್ಕೂ ಹೋಗುತ್ತಿದ್ದಾರೆ! ವಿದ್ಯಾರ್ಥಿಗಳ ರೂಪದಲ್ಲಿ ನೂರಾರು ಕೋಟಿ ರುಪಾಯಿ ಭಾರತದಿಂದ ಹೊರಕ್ಕೆ ಹರಿದುಹೋಗುತ್ತಿದೆ. ಅದನ್ನು ತಡೆಯಲು ನಾವು ಏನಾದರೂ ಮಾಡುತ್ತಿದ್ದೇವಾ? ಬಹುಶಃ ಇಲ್ಲ. ನಾವು ನಮ್ಮ ದೇಶದ ಯುವಕರ ಭವಿಷ್ಯದ ಬಗ್ಗೆ ತಲೆಕೆಡಿಸಿಕೊಳ್ಳದೆ ಮಾಫಿಯಾದವರನ್ನೂ, ದಂಧೆಕೋರರನ್ನೂ, ಹಗರಣ ಮಾಡುವವರನ್ನೂ ಬೆಳೆಸುತ್ತಿದ್ದೇವೆ. ನಾವು ನಮ್ಮ ಕೈಯಾರೆ ಶಿಕ್ಷಣ ಕ್ಷೇತ್ರವನ್ನು ಹಾಳುಗೆಡವುತ್ತಿದ್ದೇವೆ. ಹಿಂದೆ ಕಪಿಲ್ ಸಿಬಲ್ ಮಾನವ ಸಂಪನ್ಮೂಲ ಸಚಿವರಾಗಿದ್ದಾಗ ನಡೆದ ಒಂದು ಘಟನೆ ನನಗೆ ನೆನಪಾಗುತ್ತಿದೆ. ಎಂಜಿನಿಯರಿಂಗ್ ಕಾಲೇಜಿನ ಸೀಟುಗಳನ್ನು ಹಣಕ್ಕಾಗಿ ಮಾರಿಕೊಳ್ಳುವ ದೊಡ್ಡ ದಂಧೆ ಬೆಳಕಿಗೆ ಬಂದಿತ್ತು. ಅವರು ಅದರ ಬಗ್ಗೆ ಸಿಬಿಐ ತನಿಖೆಗೆ ಆದೇಶ ನೀಡಿ, ದಂಧೆಕೋರರನ್ನು ಪತ್ತೆಹಚ್ಚಿ ಮಟ್ಟಹಾಕಿದ್ದರು. ಈಗಲೂ ಅಂತಹ ಕಠಿಣ ಕ್ರಮಗಳ ಅಗತ್ಯವಿದೆ. ಶಿಕ್ಷಣ ಕ್ಷೇತ್ರದಲ್ಲಿರುವ ನಟವರಲಾಲ್‌ಗಳನ್ನು ಹುಡುಕಿ ತೆಗೆದು ಜೈಲಿಗೆ ಅಟ್ಟಬೇಕಿದೆ. ಇಲ್ಲದಿದ್ದರೆ ನಾವು ಕವಿ ನೀರಜ್‌ರ ಈ ಸಾಲುಗಳನ್ನು ಗುನುಗುತ್ತಾ ಇರಬೇಕಾಗುತ್ತದೆ:

'ಲುಟ್ ಗಯೇ ಸಿಂಗಾರ್ ಸಭಿ ಬಾಗ್ ಕೆ ಬಬೂಲ್ ಸೆ,
ಔರ್ ಹಮ್ ಖಡೇ ಖಡೇ ಬಹಾರ್ ದೇಖತೇ ರಹೇ,
ಕರವಾ ಗುಜರ್ ಗಯಾ ಗುಬರ್ ದೇಖತೇ ರಹೇ!'

(ತೋಟದ ಮರದಿಂದ ಎಲ್ಲಾ ಸಿಂಗಾರಗಳನ್ನೂ ಕದ್ದೊಯ್ದರು,
ನಾವು ವಸಂತನ ಸೌಂದರ್ಯ ನೋಡುತ್ತಾ ನಿಂತಿದ್ದೆವು,
ಮೆರವಣಿಗೆ ಹೋಯಿತು, ನಾವು ಧೂಳು ನೋಡತೊಡಗಿದೆವು!)

ನಾನಿಲ್ಲಿ ಇನ್ನೂ ಒಂದು ಸಂಗತಿಯನ್ನು ಹೇಳಬೇಕು. ಜಗತ್ತಿನ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಗೆ ನಾನು ಭೇಟಿ ನೀಡಿದ್ದೇನೆ. ಹಾಗೆ ಹೋದಲ್ಲೆಲ್ಲ ದಾನಿಗಳ ಪಟ್ಟಿಯಲ್ಲಿ ಭಾರತದ ಸಾಕಷ್ಟು ದೊಡ್ಡ ದೊಡ್ಡ ಉದ್ಯಮಿಗಳ ಹೆಸರು ಇರುವುದನ್ನು ನೋಡಿ ಅಚ್ಚರಿಪಟ್ಟಿದ್ದೇನೆ. ಏಕೆ ಈ ಉದ್ಯಮಿಗಳು ಭಾರತದಲ್ಲಿ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಬಾರದು? ಏಕೆ ಇವರೆಲ್ಲ ವಿದೇಶಿ ಯುನಿವರ್ಸಿಟಿಗಳಿಗೆ ನೂರಾರು ಕೋಟಿ ರುಪಾಯಿ ದೇಣಿಗೆ ನೀಡುತ್ತಿದ್ದಾರೆ? ನಮ್ಮ ದೇಶದಲ್ಲಿ ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವ ಯುನಿವರ್ಸಿಟಿಗಳು ಇವರಿಗೆ ಕಾಣಿಸುವುದಿಲ್ಲವೇ? ದೇಶದ ಶಿಕ್ಷಣ ಕ್ಷೇತ್ರಕ್ಕೆ ಇವರ ಕೊಡುಗೆ ತುಂಬಾ ಅಗತ್ಯವಿದೆ. ಅದನ್ನು ಇವರಿಗೆ ಅರ್ಥ ಮಾಡಿಸುವವರು ಬೇಕಾಗಿದ್ದಾರೆ.

(ಲೇಖಕರು : ರಾಜ್ಯಸಭಾ ಮಾಜಿ ಸದಸ್ಯರು, ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

● **ಮಾಲಿನಿ ಕೆ ಗೌಡ, ಹಾರೋಹಳ್ಳಿ**
ಭಟ್ರೇ, ಗಂಡಸರೇ ಟಿವಿ ರಿಮೋಟ್ ಕಂಟ್ರೋಲ್ ಇಟ್ಟುಕೊಂಡಿರುತ್ತಾರಲ್ಲ?
- ಅವನ ರಿಮೋಟ್ ನಿನ್ನ ಕೈಯಲ್ಲೇ ಇರುತ್ತದಲ್ಲ ?!

● **ಪ್ರಕಾಶ ಮಹಾಜನ, ಮಂಡ್ಯ**
ಭಟ್ರೇ, ನನಗೆ ಜುಟ್ಟು ಬಿಟ್ಟ ಹುಡುಗನೇ ಬೇಕು ಅಂತಾಳಲ್ಲ?
- ಗ್ರಿಪ್ ಸಿಗಲಿ ಎಂಬ ಲೆಕ್ಕಾಚಾರ!

● **ಚೈತ್ರಾ, ಹಡಗಲಿ**
ಭಟ್ರೇ, ದರ್ಶನ ಕೊಲ್ಲುವಷ್ಟು ದುಷ್ಟ ಇದ್ದಿರಲಾರ ಅನಿಸುತ್ತಾದಲ್ಲ?
- ಯಾರನ್ನು ನೋಡಿದರೆ ನಿನಗೆ ಹಾಗೆ ಅನಿಸುತ್ತದೆ ಎಂಬುದನ್ನಾದರೂ ಹೇಳಬಾರದೇ?!

● **ಜಯಶ್ರೀ ಧರಣೇಶ, ಬೆಂಗಳೂರು**
ಭಟ್ರೇ, ಇತ್ತೀಚೆಗೆ ಅತ್ತೆ ಕಾಟ ಕಮ್ಮಿಯಾಗಿದೆ ಅಂತ ಅನಿಸುತ್ತಿದೆಯಲ್ಲ?
- ಅತ್ತೆ ಇಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡೇ ಮದುವೆಯಾಗುವುದರ ಪರಿಣಾಮ!

● **ಸಂದೇಶ ಕಾವಲುಗದ್ದೆ, (ಇಮೇಲ್ ಮೂಲಕ)**
ಭಟ್ರೇ, ಸಮ್ಮಿಶ್ರ ಸರಕಾರ ಬಂದರೂ ಮೋದಿಯೊಬ್ಬರೇ ಮಿಂಚುತ್ತಿದ್ದಾರಲ್ಲ?
- ನನ್ನನ್ನೇಕೆ ಮರೆತಿರಿ ಅಂತ ಕುಮಾರಣ್ಣನೂ ಹೇಳಬಹುದು!

● **ರವೀಂದ್ರ ಜೆ. ಆರ್‌ಶಿವಮೊಗ್ಗ**
ಭಟ್ರೇ, ಪವಿತ್ರಾ ಗೌಡಳನ್ನು ತನಿಖಾ ಅಧಿಕಾರಿ ದುರುಗುಟ್ಟಿ ನೋಡಿದನಂತೆ?
- ಹಾಗಾದ್ರೆ ಶೆಡ್ ನಲ್ಲಿ ಇದೆ ಶಾಸ್ತಿ!

● **ವಿನೋದ ಶಾಸ್ತ್ರೀ, ಹೊನ್ನಾವರ**
ಭಟ್ರೇ, ಮೊಯಿಲಿ ಅವರ ರಾಜಕೀಯ ಮಹತ್ವಾಕಾಂಕ್ಷೆ ಮುಗಿಯಿತು ಅಂತ ಅನಿಸುತ್ತಿದೆಯಲ್ಲ?
- ಸುಮ್ಮನೆ ಹೆದರಿಸಬೇಡ, ಆ ಆಸಾಮಿ ಮತ್ತೊಂದು ಮಹಾಕಾವ್ಯ ಬರೆಯಲು ಆರಂಭಿಸುತ್ತೆ!

● **ಕೆ. ಬಸವರಾಜು, ಚಿತ್ರದುರ್ಗ**
ಭಟ್ರೇ, ಗಂಡಸರಿಗೆ ಜಡೆ ಕಟ್ಟುವಷ್ಟು ಕೂದಲು ಇರುತ್ತಿದ್ದರೆ ಏನಾಗುತ್ತಿತ್ತು?
- ಆಗ ಆರ್. ಜಿ. ಹಳ್ಳಿ ನಾಗರಾಜ ತುರುಬು ಕಟ್ಟುತ್ತಿದ್ದ!

● **ಸಂಜೀವ ಮೆಹರವಾಡೆ, ಬೆಳಗಾವಿ**
ಸಾರ್, ನನ್ನ ಅಪ್ಪ ಬಳಿ ಹತ್ತಾರು ಕಾರುಗಳಿವೆ ಅಂತಾಳಲ್ಲ?
- ಫೋಟೋ ಕಳಿಸು ಅಂತ ಹೇಳಬೇಕಿತ್ತು!

● **ಜಿ. ಜಿ. ಶೇಟ್, ಕುಂದಾಪುರ**
ಭಟ್ರೇ, ಈ ಕಾಲದಲ್ಲಿ ಏನೇ ಹೇಳಿದರೂ ಜನ ತಪ್ಪು ಭಾವಿಸುತ್ತಾರಲ್ಲ?
- ಯಾವಾಗ ನಿನ್ನ ದರ್ಶನ ಅಂತ ಕೇಳಿದ್ನಪ್ಪಾ.. ಅಷ್ಟಕ್ಕೇ ಸಿಟ್ಟಾಗೋದಾ?!

ಸಂಬಂಧಗಳ ವಿಶ್ವಾಸವನ್ನೇ ಕಳೆದುಕೊಳ್ಳುತ್ತಿದ್ದೇವೆಯೇ?

ಅಭಿಪ್ರಾಯ
ಗಣೇಶ್ ಭಟ್ ವಾರಣಾಸಿ
vveditoped@gmail.com

ಇತ್ತೀಚೆಗೆಗೆ ಪ್ರಸಿದ್ಧ ಫಿನ್‌ಟೆಕ್ ಸಂಸ್ಥೆಯಾದ ಝುರೋದಾದ ಸಹ ಸಂಸ್ಥಾಪಕರಾದ ನಿಖಿಲ್ ಕಾಮತ್ ಅವರು ತಾನು ಮಕ್ಕಳನ್ನು ಹೊಂದಲು ಇಷ್ಟಪಡುವುದಿಲ್ಲ ಎಂದು ಆಡಿದ ಮಾತುಗಳು ಸಾರ್ವಜನಿಕರಲ್ಲಿ ಬಹಳ ಚರ್ಚೆಗಳನ್ನು ಹುಟ್ಟುಹಾಕಿದೆ. ಮಕ್ಕಳಿಗೆ ಜನ್ಮ ನೀಡಿದರೆ ನಮ್ಮ ಜೀವನದ ಅಮೂಲ್ಯ 18 ವರ್ಷಗಳು ಅವರ ಪಾಲನೆ ಹಾಗೂ ಪೋಷಣೆಗಳಲ್ಲೇ ವ್ಯರ್ಥವಾಗುತ್ತವೆ. ದೊಡ್ಡವರಾದ ಮೇಲೆ ಈ ಮಕ್ಕಳು ಹೆತ್ತವರನ್ನು ನೋಡಿಕೊಳ್ಳುತ್ತಾರೆಂದೇನೂ ಇಲ್ಲ, ಮಕ್ಕಳು ನಮ್ಮ ವಂಶವನ್ನು ಬೆಳೆಸುತ್ತಾರೆ ಎಂಬ ಚಿಂತನೆ ತನಗಿಲ್ಲ ಎಂದು ನಿಖಿಲ್ ಕಾಮತ್ ಅವರು ಹೇಳಿದ್ದರು.

ಸ್ಟಾಕ್ ಬ್ರೋಕರೇಜ್ ಮಾಡುವ ಝುರೋದಾದ ನಿಖಿಲ್ ಕಾಮತ್ ಅವರ ಸಂಪತ್ತಿನ ಮೌಲ್ಯ 28,000 ಕೋಟಿ ರುಪಾಯಿಗಳನ್ನು ದಾಟುತ್ತದೆ. ನಿಖಿಲ್ ಕಾಮತ್ ಒಬ್ಬರೇ ಅಲ್ಲ, ಮದುವೆ ಮತ್ತು ಮಕ್ಕಳು ನಮ್ಮ ವೈಯಕ್ತಿಕ ಆಯ್ಕೆ ಎಂದು ಪ್ರತಿಪಾದಿಸಿ ಮಕ್ಕಳನ್ನು ಹಡೆಯದಿರಲು ನಿಶ್ಚಯಿಸಿರುವ ಅಸಂಖ್ಯ ಯುವ ದಂಪತಿಗಳು ನಮ್ಮ ಸಮಾಜದಲ್ಲಿದ್ದಾರೆ. ವೈದ್ಯಕೀಯ ಅಥವಾ ಬೇರೆಬೇರೆ ಕಾರಣಗಳಿಂದ ಮಕ್ಕಳಾಗುತ್ತಿಲ್ಲ ಎಂದು ಕೊರಗುತ್ತಿರುವ ಲಕ್ಷಾಂತರ ದಂಪತಿಗಳು ನಮ್ಮ ಕಣ್ಣ ಮುಂದೆ ಇರುವಾಗ ಮಕ್ಕಳೇ ಬೇಡ ಎಂದು ನಿರ್ಧರಿಸಿರುವ ಜೋಡಿಗಳನ್ನು ಕಾಣುವಾಗ ಬಹಳ ವಿಚಿತ್ರವೆನಿಸುತ್ತದೆ. ಮಕ್ಕಳನ್ನು ಹಡೆಯುವುದಕ್ಕಿಂತ ತಮ್ಮ ವೃತ್ತಿಜೀವನ , ವಹಿವಾಟುಗಳೇ ಮುಖ್ಯ ಎಂದು ಭಾವಿಸುವುದು ಸಾಮಾಜಿಕವಾಗಿ ಅಷ್ಟೇನೂ ಉತ್ತಮ ಬೆಳವಣಿಗೆಯಲ್ಲ. ತಾಯ್ತನ ಎನ್ನುವುದು ಜೀವ ಸಂಕುಲದ ಮುಂದುವರಿಕೆಯ ಪ್ರಧಾನ ಕೊಂಡಿಯಾಗಿದೆ. ಇದು ಪ್ರಕೃತಿ ಸಹಜವಾದ ಪ್ರಕ್ರಿಯೆ. ನಮ್ಮ ಹೆತ್ತವರು ನಮ್ಮನ್ನು ಹೆರುವಾಗ ನಾಳೆ ಈ ಮಕ್ಕಳು ತಮ್ಮ ಪ್ರಯೋಜನಕ್ಕೆ ಬರಲಿ ಎಂದ ಲೆಕ್ಕ ಹಾಕಿರಲಿಕ್ಕಿಲ್ಲ. ಈ ಪ್ರಪಂಚದಲ್ಲಿ ಮಕ್ಕಳಾಗದೇ ಕೊರಗುವ ಎಷ್ಟೋ ದಂಪತಿಗಳು ಇದ್ದಾರೆ. ಮಗುವೊಂದು ವೈಕಲ್ಯತೆಯೊಂದಿಗೆ ಜನಿಸಿದರೂ ಆ ಮಗುವಿಗೆ ವಿಶೇಷ ಕಾಳಜಿಯನ್ನು ಬಹುತೇಕ ಹೆತ್ತವರು ತೋರುತ್ತಾರೆ. ಹಕ್ಕಿಯೊಂದು ಮೊಟ್ಟೆಯಿಟ್ಟು, ಕಾವುಕೊಟ್ಟು, ಮರಿಮಾಡಿ, ಆಹಾರ ತಿನ್ನಿಸಿ, ಬೆಳೆಸುವಾಗಲೂ ಯಾವುದೇ ನಿರೀಕ್ಷೆಯನ್ನಿಟ್ಟುಕೊಂಡಿರುವುದಿಲ್ಲ. ಮರವೊಂದು ಬೀಜವನ್ನು ಸೃಷ್ಟಿಸುವಾಗ ನಾಳೆ ಈ ಬೀಜದಲ್ಲಿ ಮೊಳಕೆಯೊಡೆದ ಸಸಿ ಮರವಾಗಿ ತನ್ನನ್ನು ಸಲಹಬೇಕು ಎಂದು ಭಾವಿಸುವುದಿಲ್ಲ. ಕೆಲವು ಮನುಷ್ಯರ ಹೊರತಾಗಿ ಜಗತ್ತಿನ ಯಾವುದೇ ಜೀವಿಯು ಸಂತಾನೋತ್ಪತ್ತಿ ಹಾಗೂ ಮಕ್ಕಳ ಪೋಷಣೆಯನ್ನು ಒಂದು ವ್ಯವಹಾರವನ್ನಾಗಿ ಭಾವಿಸಿಲ್ಲ.

ಇಂದು ವೈವಾಹಿಕ ಜೀವನವೂ ಒಂದು ವ್ಯವಹಾರವಾಗಿ ಬದಲಾಗುತ್ತಿದೆ. ಇದರ ಪರಿಣಾಮವಾಗಿ ಮುರಿದು ಬೀಳುವ ವೈವಾಹಿಕ ಸಂಬಧಗಳ ಸಂಖ್ಯೆಯೂ ವಿಪರೀತವಾಗಿ ಏರುತ್ತಿದೆ. ಟಿವಿ ರಿಯಾಲಿಟೀ ಶೋ ಬಿಗ್ ಬಾಸ್ ಮೂಲಕ ಸೆಲೆಬ್ರಿಟಿಗಳಾದ ಜೋಡಿಯೊಂದು ನಾಲ್ಕು ವರ್ಷಗಳ ವೈವಾಹಿಕ ಜೀವನವನ್ನು ಮುರಿದುಕೊಳ್ಳುತ್ತಿರುವ ವಿಚಾರವಿಂದು ಮುಖ್ಯವಾಹಿನಿ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಅತಿಯಾಗಿ ಹರಿದಾಡುತ್ತಿದೆ. ಇವರ ಬದುಕಿನ ವಿಚಾರಗಳ ಬಗ್ಗೆ ನಾನಾ ಬಣ್ಣ ಹಾಗೂ ಕಥೆಗಳನ್ನು ಕಟ್ಟಿ ಪ್ರಸಾರ ಮಾಡಲಾಗುತ್ತದೆ. ಈ ನಡುವೆ ಕನ್ನಡ ಸಿನಿಮಾ ಲೋಕದ ಪ್ರತಿಷ್ಠಿತ ಕುಟುಂಬದ ಕುಡಿಯೊಂದರ ಮುರಿದುಬೀಳುತ್ತಿರುವ ವೈವಾಹಿಕ ಜೀವನದ ಸುದ್ದಿ ಅಲ್ಲಿಲ್ಲಿ ಕೇಳತೊಡಗಿದೆ. ಕೆಲವು ದಿವಸಗಳ ಹಿಂದೆ ಕ್ರಿಕೆಟ್ ತಾರೆ ಹಾರ್ದಿಕ್ ಪಾಂಡ್ಯ ಹಾಗೂ ಆತನ ಪತ್ನಿ ನಟಾಶಾ ಸ್ಟಾಂಕೋವಿಕ್ ಮದುವೆ ಮುರಿದು ಬೀಳಲಿದೆ ಎನ್ನುವ ಸುದ್ದಿ ಕೆಲವು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿತ್ತು. ಐಪಿಎಲ್ ಸರಣಿಯ ಸಂದರ್ಭದಲ್ಲಿ ಈ ಸುದ್ದಿ ಹೆಚ್ಚು ಚಾಲ್ತಿಯಲ್ಲಿತ್ತು. ನಂತರದ ದಿವಸಗಳಲ್ಲಿ ಈ ಸುದ್ದಿ ಬಿದ್ದು ಹೋಯಿತು. ಅವರಿಬ್ಬರೂ ಪುನಃ ಒಂದಾಗಿದ್ದಾರೆ ಎಂಬ ಸಮಾಧಾನಕರವಾದ ಸುದ್ದಿ ಬಂದಿದೆ. ಐಶ್ವರ್ಯಾ ರೈ ಮತ್ತು ಅಭಿಷೇಕ್ ಬಚ್ಚನ್ ನಡುವೆ ವಿಚ್ಛೇದನ ನಡೆಯಲಿದೆ ಎನ್ನುವ ಸುದ್ದಿ ಅವರು ಮದುವೆಯಾದ ದಿನದಿಂದ ಇಂದಿನವರೆಗೂ ಮಾಧ್ಯಮಗಳಲ್ಲಿ ವರ್ಷಕ್ಕೆ ಎರಡು ಬಾರಿಯಾದರೂ ಬರುತ್ತಲೇ ಇರುತ್ತದೆ. ಕೆಲವು ಮಾಧ್ಯಮಗಳು ಸುದ್ದಿಗಾಗಿ ಸೆಲೆಬ್ರಿಟಿಗಳ ವೈವಾಹಿಕ ಜೀವನವು ಯಾವಾಗ ಮುರಿದು ಬೀಳುತ್ತದೆ ಎಂದು ಕಾಯುತ್ತಲೇ ಇರುತ್ತವೆ.

ಮುರಿದುಬೀಳುತ್ತಿರುವ ಮದುವೆಗಳು ಇಂದಿನ ದಿನದಲ್ಲಿ ಹೆಚ್ಚುತ್ತಿರುವ ಅಪನಂಬಿಕೆ ಹಾಗೂ ಅವಿಶ್ವಾಸದ ಪ್ರತೀಕವಾಗಿದೆ. ಕೆಲವು ದಿನಗಳ ಹಿಂದೆ ನೊಂದ ಪುರುಷರ ಪರವಾಗಿ ಕೆಲಸ ಮಾಡುವ ಬರ್ಖಾ ಟ್ರೆಹಾನ್ ಹೆಸರಿನ ಸಾಮಾಜಿಕ ಕಾರ್ಯಕರ್ತೆ ಎಕ್ಸ್ (ಈ ಮೊದಲು ಟ್ವಿಟ್ಟರ್ ಆಗಿತ್ತು) ಮೂಲಕ ಇತ್ತೀಚೆಗಿನ ಭಾರತದಲ್ಲೇಕೆ ಡೈವೋರ್ಸ್‌ಗಳು ಹೆಚ್ಚುತ್ತಿವೆ? ವಿಚ್ಛೇದನಕ್ಕೆ ಬಹುದೊಡ್ಡ ಕಾರಣವೇನು? ಎಂದು ಪ್ರಶ್ನಿಸಿದ್ದರು. ಇದಕ್ಕೆ ಸಾವಿರಾರು ಮಂದಿ ಉತ್ತರಿಸಿದ್ದಾರೆ. ಅತೀ ಹೆಚ್ಚಿನ ನಿರೀಕ್ಷೆಗಳು ಮದುವೆ ಕುಸಿಯಲು ಕಾರಣ ಎಂದು ಕೆಲವರು ಹೇಳಿದ್ದಾರೆ. ಇದು ಸತ್ಯವೂ ಹೌದು. ಮದುವೆಯಾಗುವಾಗ ಯುವ ದಂಪತಿಗಳು ಸಾವಿರಾರು ಕನಸುಗಳನ್ನು ಹಾಗೂ ನಿರೀಕ್ಷೆಗಳನ್ನು ಹೊಂದಿರುತ್ತಾರೆ. ಆದರೆ ದಿನಗಳೆದಂತೆ ತಮ್ಮ ಎಲ್ಲಾ ನಿರೀಕ್ಷೆಗಳೂ ಕಾರ್ಯ ಸಾಧುವಲ್ಲ ಎಂದು ಅರಿವಾದೊಡನೆ ನಿಧಾನವಾಗಿ ಭ್ರಮನಿರಸನಕ್ಕೊಳಗಾಗುತ್ತಾರೆ. ನಿರೀಕ್ಷೆಗಳು ಮತ್ತು ವಾಸ್ತವಗಳ ನಡುವಿನ ಅಂತರ ಹೆಚ್ಚುತ್ತಿದ್ದಂತೆ ಪರಸ್ಪರ ಅಸಹನೆ ಹಾಗೂ ಕೋಪಗಳು ಹೆಚ್ಚಾಗುತ್ತದೆ. ಅಂತಿಮವಾಗಿ ಇದು ಡೈವೋರ್ಸಿನೊಂದಿಗೆ ಪರ್ಯವಸಾನಗೊಳ್ಳುತ್ತದೆ. ವಿಶ್ವಾಸದ ಕೊರತೆ, ಸಂವಹನದ ಅಂತರ, ಉದ್ಯೋಗದ ಒತ್ತಡ, ಸಹನೆಯ ಕೊರತೆ, ಸ್ವಕೇಂದ್ರಿತ ಮನಸ್ಥಿತಿ, ಹೊಂದಾಣಿಕೆಯ ಸಮಸ್ಯೆ, ವಿವಾಹೇತರ ಸಂಬಂಧಗಳು, ಹೆತ್ತವರ ಅನಗತ್ಯ ಹಸ್ತಕ್ಷೇಪ, ಅನುಮಾನ, ಔದ್ಯೋಗಿಕ ಜೀವನಕ್ಕೆ ಕೊಡುವ ಪ್ರಾಮುಖ್ಯತೆ, ಹಣದ ಹಿಂದೆ ಬೀಳುವುದು ಸೇರಿದಂತೆ ಮೊದಲಾದ ವಿಚಾರಗಳು ಇಂದಿನ ಯುವಜನತೆಯ ವೈವಾಹಿಕ ಜೀವನದ ವೈಫಲ್ಯತೆಗೆ ಕಾರಣವಾಗಿವೆ. ಇತರರಿಗೆ ಅತಿ ಕ್ಷುಲ್ಲಕ ಎನಿಸುವ ವಿಚಾರಗಳೇ ದಂಪತಿಗಳ ನಡುವೆ ಬೃಹತ್ತಾದ ಸಮಸ್ಯೆಗಳಾಗಿ ಕಾಡುತ್ತವೆ. ಪತಿ ಪತ್ನಿಯರ ಆರ್ಥಿಕ ಸ್ವಾತಂತ್ರ್ಯವೂ ವಿಚ್ಛೇದನಕ್ಕೆ ಕಾರಣವಾಗುತ್ತದೆ ಎಂದು ಹೇಳಲಾಗುತ್ತಿದೆ. ಹಿಂದಿನ ಕಾಲದಲ್ಲಿ ಗಂಡ ಎಷ್ಟೇ ಹಿಂಸೆ ಕೊಟ್ಟರೂ ಆತನನ್ನೇ ಆರ್ಥಿಕವಾಗಿ ಅವಲಂಬಿಸಿರಬೇಕಾದ ಸ್ಥಿತಿ ಇದ್ದ ಕಾರಣ ಗಂಡನೊಂದಿಗೆ ಉಳಿದುಕೊಳ್ಳಬೇಕಾದ ಸ್ಥಿತಿ ಹೆಂಡತಿಯರಿಗೆ ಇತ್ತು. ಇಂದು ಹೆಂಡತಿಯೂ ಆರ್ಥಿಕವಾಗಿ ಸಬಲಳಾಗುತ್ತಿರುವ ಕಾರಣ ಪತಿಯ ದೌರ್ಜನ್ಯಗಳನ್ನು ಪ್ರತಿಭಟಿಸಿ ವೈವಾಹಿಕ ಜೀವನದಿಂದ ಹೊರಬರುವ ಅವಕಾಶ ಪತ್ನಿಗೆ ಇದೆ. ಇಂದಿನ ವಿವಾಹ ವಿಚ್ಛೇದನಗಳಲ್ಲಿ ಗಂಡಂದಿರ ಪಾಲು ಎಷ್ಟಿದೆಯೋ ಅಷ್ಟೇ ಪಾಲು ಹೆಂಡತಿಯರದೂ ಇದೆ. ಭಾರತದಲ್ಲಿಂದು ಆರೇಂಜ್ಡ್ ಮ್ಯಾರೇಜುಗಳಿಗಿಂತ ಲವ್ ಮ್ಯಾರೇಜ್‌ಗಳೇ ಹೆಚ್ಚಿನ ಪ್ರಮಾಣದಲ್ಲಿ ಮುರಿದು ಬೀಳುತ್ತಿರುವುದು ಆಶ್ಚರ್ಯದ ಸಂಗತಿಯಾಗಿದೆ. ಹೆಚ್ಚಿನ ವಿಚ್ಛೇದನಗಳು ಪ್ರೇಮ ವಿವಾಹಗಳಿಂದ ಮಾತ್ರ ಉದ್ಭವಿಸುತ್ತವೆ ಎಂದು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಬಿ ಆರ್ ಗವಾಯಿ ಅವರು ಕಳೆದ ವರ್ಷ ಹೇಳಿಕೆ ನೀಡಿದ್ದರು.

ಮಕ್ಕಳನ್ನು ಬೆಳೆಸುವ ವಿಧಾನದಲ್ಲೇ ಒಂದಿಷ್ಟು ತಪ್ಪುಗಳಾಗುತ್ತಿವೆ. ಹೆತ್ತವರು ತಮ್ಮ ಮಕ್ಕಳನ್ನು ಪ್ರೀತಿಸಬೇಕು ಎನ್ನುವುದು ಸರಿ, ಆದರೆ ಮಕ್ಕಳನ್ನು ವಿಪರೀತವಾಗಿ ಹೊಗಳುವುದು , ಅತಿಯಾಗಿ ಮುದ್ದು ಮಾಡುವುದು ಅಥವಾ ವಿಪರೀತವಾಗಿ ಸಮರ್ಥಿಸುವುದು ಮಕ್ಕಳಲ್ಲಿ ವರ್ತನೆಯ ಸಮಸ್ಯೆಯನ್ನುಂಟು ಮಾಡುತ್ತದೆ. ಬಹಳಷ್ಟು ಹೆತ್ತವರು ತಮ್ಮ ಮಗುವಿನ ಸಿಟ್ಟಿನ ಸ್ವಭಾವವನ್ನು ವೈಭವೀಕರಿಸುವುದನ್ನು ನಾನು ಗಮನಿಸಿದ್ದೇನೆ. ಮಕ್ಕಳ ಕೋಪತಾಪವನ್ನು ಹೆತ್ತವರು ಸಮರ್ಥಿಸಿದರೆ ಮುಂದೆ ಆ ಮಕ್ಕಳು ದೊಡ್ಡವರಾದ ಮೇಲೂ ಸಿಟ್ಟಿನ ಸ್ವಭಾವವನ್ನು ಮುಂದುವರಿಸುವುದರಲ್ಲಿ ಸಂಶಯವಿಲ್ಲ. ದುಡುಕಿನ ಸ್ವಭಾವವು ಮುಂದುವರಿದರೆ ಅಂತವರು ಕೋಪದ ಭರದಲ್ಲಿ ಅಪರಾಧಗಳನ್ನು ಎಸಗುವ ಸಾಧ್ಯತೆ ಹೆಚ್ಚಿರುತ್ತದೆ. ಮಕ್ಕಳು ಮಾಡುವ ತಪ್ಪುಗಳನ್ನೂ ಹೆತ್ತವರು ಸಮರ್ಥಿಸುತ್ತಾ ಹೋದರೆ ಮಕ್ಕಳು ಮುಂದೆ ಒರಟರು, ಹಠವಾದಿಗಳು ಹಾಗೂ ಅಹಂಕಾರಿಗಳಾಗಿ ಬೆಳೆಯುವ ಅಪಾಯ ಇದೆ.

ಹೆತ್ತವರು ತಮ್ಮ ಮಕ್ಕಳು ತಮ್ಮ ಬದುಕಿನಲ್ಲಿ ಯಾವ ಒತ್ತಡವನ್ನೂ ಅನುಭವಿಸದಂತೆ ನೋಡಿಕೊಳ್ಳುತ್ತಿರುವುದರ ಪರಿಣಾಮವಾಗಿ ಈ ಮಕ್ಕಳು ಜೀವನದಲ್ಲಿ ಸಣ್ಣ ಆಘಾತವನ್ನೂ ಎದುರಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದಿಲ್ಲ. ಮೊಬೈಲ್ ನೋಡುವುದನ್ನು ಕಡಿಮೆ ಮಾಡಲು ಹೇಳಿದರೆ, ಓದಲು ಹೇಳಿದರೆ, ಬುದ್ಧಿವಾದವನ್ನು ಹೇಳಿದರೆ ಆತ್ಮಹತ್ಯೆ ಮಾಡಿಕೊಳ್ಳುವ ಮಕ್ಕಳ ಬಗ್ಗೆ ಮಾಧ್ಯಮ ವರದಿಗಳನ್ನು ನೋಡುತ್ತಿರುತ್ತೇವೆ. ಪ್ರೇಮ ವೈಫಲ್ಯಕ್ಕೆ ಜೀವವನ್ನು ಕಳೆದುಕೊಳ್ಳುವ ಯುವ ಜನರಿಗೆ ಲೆಕ್ಕವೇ ಇಲ್ಲ. 2022 ರಲ್ಲಿ ಭಾರತದಲ್ಲಿ 1.7 ಲಕ್ಷ ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅಂಕಿ ಅಂಶಗಳು ಹೇಳುತ್ತವೆ. ಹಸುಳೆಗಳ ತಾಯಂದಿರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ಹೆಂಡತಿ ಮಕ್ಕಳನ್ನು ಅರ್ಧದಲ್ಲಿ ಕೈಬಿಟ್ಟು ಆತ್ಮಹತ್ಯೆ ಮಾಡಿಕೊಳ್ಳುವ ಗಂಡಂದಿರು ಇದ್ದಾರೆ, ತನ್ನನ್ನು ಕೊಂದುಕೊಂಡು ತಂದೆತಾಯಂದಿರಿಗೆ ನಿರಂತರ ಶೋಕವನ್ನು ಕೊಡುವ ಮಕ್ಕಳಿದ್ದಾರೆ. ಯಾರಿಗೋ ಬುದ್ಧಿಕಲಿಸಲೆಂದು ಹಠಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವವರಿಗೂ ಕೊರರತೆಯಿಲ್ಲ. ತನ್ನ ಸಾವಿನಿಂದ ಒಂದಿಷ್ಟು ಜನರಿಗೆ ನೋವಾಗಲಿದೆ, ತನ್ನ ಅವಲಂಬಿತರಿಗೆ ಎಷ್ಟು ಕಷ್ಟವಾಗಲಿದೆ ಎಂಬುದನ್ನು ಇವರು ಆಲೋಚಿಸುವುದೇ ಇಲ್ಲ.

ಸಮಾಜದಲ್ಲಿ ಹೆಚ್ಚುತ್ತಿರುವ ವೃದ್ಧಾಶ್ರಮಗಳು, ಅನಾಥಾಶ್ರಮಗಳು ಹಾಗೂ ನಿರ್ಗತಿಕರ ಪುನರ್ವಸತಿ ಸಂಸ್ಥೆಗಳು ಸಮಾಜದಲ್ಲಿ ಮಾನವ ಸಂಬಂಧಗಳು ದುರ್ಬಲವಾಗುತ್ತಿರುವುದಕ್ಕೆ ಸಾಕ್ಷಿಯಾಗಿವೆ. ಮಕ್ಕಳಿಗೆ ಹೆತ್ತವರೇ ಭಾರವಾಗುತ್ತಿದ್ದಾರೆ. ವೃತ್ತಿಜೀವನದ ಜಂಜಾಟದಲ್ಲಿ ಮಕ್ಕಳಿಗೆ ವೃದ್ಧ ಹೆತ್ತವರನ್ನು ನೋಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಉದ್ಯೋಗಕ್ಕಾಗಿ ವಿದೇಶಗಳಿಗೆ ತೆರಳುವ ಮಕ್ಕಳಿಗೆ ತಮ್ಮ ಹೆತ್ತವರನ್ನು ಅಲ್ಲಿಗೆ ಕರೆದೊಯ್ಯಲು ಆಗುವುದಿಲ್ಲ. ಅಪ್ಪ-ಮಕ್ಕಳ ನಡುವೆ ಹಾಗೂ ಅತ್ತೆ-ಸೊಸೆಯಂದಿರ ನಡುವಿನ ಭಿನ್ನಾಭಿಪ್ರಾಯಗಳೂ ಹೆತ್ತವರು ವೃದ್ಧಾಶ್ರಮಗಳಿಗೆ ಸೇರಲು ಕಾರಣವಾಗುತ್ತವೆ. ಕಾರಣಗಳೇನಿದ್ದರೂ ವಯಸ್ಸಾದ ಹೆತ್ತವರು ಮಕ್ಕಳಿಗೆ ಭಾರ ಅನ್ನಿಸುವ ಮನಸ್ಥಿತಿ ಬರುತ್ತಿರುವುದು ಸಡಿಲಗೊಳ್ಳುತ್ತಿರುವ ಸಂಬಂಧಗಳನ್ನು ಎತ್ತಿ ತೋರಿಸುತ್ತವೆ.

ಹೊಂದಾಣಿಕೆಯ ಸಮಸ್ಯೆ ಎನ್ನುವುದು ಇಂದಿನ ಜನರು ಅತಿಯಾಗಿ ಎದುರಿಸುವ ಸಮಸ್ಯೆಯಾಗಿದೆ. ಅತ್ತೆ - ಸೊಸೆಯಂದಿರ ನಡುವೆ, ಗಂಡ- ಹೆಂಡಿರ ನಡುವೆ, ಅಪ್ಪ- ಮಕ್ಕಳ ನಡುವೆ , ಅಣ್ಣ-ತಮ್ಮಂದಿರ ನಡುವೆ, ಅಕ್ಕ-ತಂಗಿಯರ ನಡುವೆ ಹೊಂದಾಣಿಕೆಯ ಸಮಸ್ಯೆಗಳು ತಲೆದೋರುತ್ತಲೇ ಇರುತ್ತವೆ. ಇವುಗಳ ಪರಿಣಾಮವಾಗಿ ಮತ್ಸರ, ಅನುಮಾನ, ವಿರಸ, ಜಗಳಗಳು ಹೆಚ್ಚಾಗುತ್ತಿವೆ. ಒಂದು ಅಥವಾ ಎರಡು ಮಕ್ಕಳನ್ನು ಮಾತ್ರ ಹೊಂದಿದ ಅತೀ ಚಿಕ್ಕ ಕುಟುಂಬ ವ್ಯವಸ್ಥೆಯ ಜೀವನ ಪದ್ಧತಿಗೆ ನಾವು ತಲುಪಿದ್ದೇವೆ. ಕೂಡು ಕುಟುಂಬದ ವ್ಯವಸ್ಥೆಯು ಇಂದು ನಾಶವಾಗುತ್ತಿದೆ. ಹಿಂದಿನ ಕಾಲದ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಹೊಂದಾಣಿಕೆಯ ಜೀವನವನ್ನು ಕಲಿಯುವ ಅವಕಾಶವಿತ್ತು. ಆದರೆ ಇಂದಿನ ವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಸಂಬಂಧಗಳೇ ಮರೆತು ಹೋಗುತ್ತಿವೆ. ಕೋಚಿಂಗ್, ಪರೀಕ್ಷೆಗಳ ಗಡಿಬಿಡಿಯೆಡೆಯಲ್ಲಿ ಮಕ್ಕಳು ಅಜ್ಜನ ಮನೆ, ಮಾವನ ಮನೆ, ಸೋದರತ್ತೆ, ಸೋದರ ಮಾವನ ಮನೆ, ಚಿಕ್ಕಪ್ಪ ದೊಡ್ಡಪ್ಪನ ಮನೆ ಮೊದಲಾದ ಮನೆಗಳಿಗೆ ಹೋಗುವುದೇ ಅಪರೂಪವಾಗಿಬಿಟ್ಟಿದೆ. ಹೀಗಿರುವಾಗ ಮಕ್ಕಳಿಗೆ ಸಂಬಂಧಿಕರ ಹಾಗೂ ಸಂಬಂಧಗಳ ನೆನಪು ಉಳಿಯುವುದಾದರೂ ಹೇಗೆ?

ಹೆಚ್ಚುತ್ತಿರುವ ಹಲ್ಲೆ, ಆಕ್ರಮಣ ಹಾಗೂ ಕೊಲೆಗಳು ಮಾನವ ಸಂಬಂಧಗಳು ತೀರಾ ಹದಗೆಡುತ್ತಿರುವುದರ ಸೂಚಕವಾಗಿವೆ. ಪ್ರಪಂಚದಲ್ಲಿ ಪ್ರತೀ ವರ್ಷ ದ್ವೇಷದಿಂದ ಬಡಿದಾಡಿಕೊಂಡು ಸಾಯುತ್ತಿರುವ ಮಾನವರ ಸಂಖ್ಯೆ ನಾಲ್ಕು ಲಕ್ಷವನ್ನು ಮೀರುತ್ತದೆ (ಯುದ್ಧಗಳ ಸಾವುನೋವುಗಳನ್ನು ಹೊರತುಪಡಿಸಿ). ಒಂದೇ ತಾಯಿಯ ಹೊಟ್ಟೆಯಲ್ಲಿ ಜನಿಸಿದ ಮಕ್ಕಳು ಮುಂದೆ ದಾಯಾದಿಗಳಾಗಿ ಕಾದಾಡಿ ಪರಸ್ಪರ ಕೊಲ್ಲುವ ಮಟ್ಟಕ್ಕೆ ಹೋಗುತ್ತಾರೆ. ತನ್ನನ್ನು ಪ್ರೇಮಿಸಲು ಅಥವಾ ಮದುವೆಯಾಗಲು ಒಪ್ಪದ ಹುಡುಗಿಯನ್ನು ಕೊಲ್ಲುವ ಹುಡುಗರ ಪ್ರೇಮವನ್ನು ನಿಜಪ್ರೀತಿಯೆಂದು ಒಪ್ಪುವುದಾದರೂ ಹೇಗೆ? ತನಗೆ ಸಿಗದ ಹುಡುಗಿ ಬದುಕಿ ಉಳಿಯಲೇಬಾರದು ಎಂದು ನಿರ್ಧರಿಸುವ ಏಕಮುಖಿ ಪ್ರೇಮಿಗಳು ಪ್ರೀತಿ ಮತ್ತು ದ್ವೇಷಗಳು ಒಂದೇ ನಾಣ್ಯದ ಎರಡುಮುಖಗಳು ಎಂದು ಸಾಬೀತುಪಡಿಸುತ್ತಾರೆ. ಗಂಡನು ಹೆಂಡತಿಯನ್ನು ಕೊಲ್ಲುವುದು, ಹೆಂಡತಿಯು ಗಂಡನನ್ನು ಸಾಯಿಸುವುದು, ಮಕ್ಕಳು ಹೆತ್ತವರನ್ನು ಕೊಲ್ಲುವುದು, ಹೆತ್ತಬ್ಬೆಯೇ ಮಕ್ಕಳನ್ನು ಕೊಲ್ಲುವುದು ಮೊದಲಾದ ಘಟನೆಗಳನ್ನು ಕಾಣುವಾಗ ಮನುಷ್ಯರು ಸಂಬಂಧಗಳಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತದೆ.

ಪ್ರಚಲಿತ

ವಿರೇಶ್ ಎಸ್ ಅಬ್ಬಿಗೇರಿ, ನಾಗರಹಳ್ಳಿ

ಎಲಾನ್ ಮಸ್ಕ್ ಹೇಳಿದರೆ ಎಲ್ಲಮ್ಮನೇ ಹೇಳಿದಂತಾಗುವುದೇ?

ಭಾರತದಲ್ಲಿ ಲೋಕಸಭಾ ಚುನಾವಣೆ ಏನೋ ಮುಗಿದಿದೆ. ಆದರೆ ಸರ್ಕಾರ ಅಸ್ತಿತ್ವಕ್ಕೆ ಬಂದು ಕಾರ್ಯ ಪ್ರವೃತ್ತವಾಗಿದ್ದರೂ ಚುನಾವಣಾ ಕಾವು ಮಾತ್ರ ಇನ್ನೂ ಇಳಿದಿಲ್ಲ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಪ್ರತಿ ಚುನಾವಣೆ ಬಳಿಕದ ಪದ್ಧತಿ, ಆಚಾರಗಳಂತೆ ಇವಿಎಂ ಮೇಲಿನ ದೋಷಾರೋಪಣೆ ಮಾತ್ರ ನಿಂತಿಲ್ಲ. ಪ್ರತಿ ವರ್ಷದಂತೆಯೇ ನರೇಂದ್ರ ಮೋದಿಯವರಂತೆ ಈ ಬಾರಿಯೂ ಇವಿಎಂ ಮಷಿನ್ ಕೂಡ ಚುನಾವಣೆಯ ಮುಖ್ಯ ಕೇಂದ್ರ ಬಿಂದುವಾಗಿತ್ತು.

ಈ ಬಾರಿ ಕಾಂಗ್ರೆಸ್ ಸೇರಿದಂತೆ ವಿರೋಧಿ ಮೈತ್ರಿಕೂಟಕ್ಕೆ ಹೆಚ್ಚು ಸೀಟುಗಳು ಬಂದಿರುವುದರಿಂದ ಈ ಬಾರಿ ಇವಿಎಂ ಮೇಲೆ ಹೆಚ್ಚು ಆಪಾದನೆಗಳು ಬರಲಿಕ್ಕಿಲ್ಲ ಎಂದು ಭಾವಿಸಲಾಗಿತ್ತು. ಆದರೆ ಈಗ ಪಕ್ಕಾ ಆಗಿರುವ ಸುದ್ದಿ ಎಂದರೆ ವಿರೋಧ ಪಕ್ಷಗಳು ತಾವು ಅಧಿಕಾರಕ್ಕೆ ಬರುವ ವರೆಗೂ ಹೀಗೆ ದೂರುವುದನ್ನು ನಿಲ್ಲಿಸಲಾರವು. ಜತೆಗೆ ಈ ಬಾರಿ ಚುನಾವಣೆ ಮುಗಿದ ಮೇಲೆ ಹೆಚ್ಚು ದೂರದೇ ಸುಮ್ಮನಾಗಿದ್ದ ಕಾಂಗ್ರೆಸ್, ಯಾವಾಗ ಟೆಸ್ಲಾ ಮತ್ತು ಎಕ್ಸ್‌ನ ಮಾಲೀಕ ಎಲಾನ್ ಮಸ್ಕ್ ಇವಿಎಂಗಳನ್ನು ಹ್ಯಾಕ್ ಮಾಡಲು ಸಾಧ್ಯ ಎಂದು ಹೇಳಿದನೋ, ಆಗ ಕಾಂಗ್ರೆಸ್ ಮತ್ತೆ ರೊಚ್ಚಿಗೆದ್ದಿದೆ.

ಇಷ್ಟು ದಿನ ಸುಮ್ಮನಿದ್ದ ಕಾಂಗ್ರೆಸ್ ನಾಯಕರು, ಹೌದೌದು, ಇವಿಎಂಗಳನ್ನು ಹ್ಯಾಕ್ ಮಾಡಬಹುದು ಎಂದು ದನಿಗೂಡಿಸುತ್ತಿದ್ದಾರೆ. ಅಲ್ಲ ಈ ಎಲಾನ್ ಮಸ್ಕ್ ಹೇಳಿದರೆ ಏನು ದೇವರೇ ಬಂದು ಪ್ರತ್ಯಕ್ಷನಾಗಿ ಹೇಳಿದಂತೆಯಾ? ಆತ ಹೇಳಿದ ಮಾತ್ರಕ್ಕೆ ಹ್ಯಾಕ್ ಮಾಡಲು ಸಾಧ್ಯ ಎಂದು ತೀರ್ಮಾನವಾಗೇಬಿಟ್ಟಿತಾ? ಮಸ್ಕ್ ಕೂಡ ಹೇಳಿದ್ದು ಇತ್ತೀಚೆಗೆ ಪ್ಯುರ್ಟೋರಿಕೋದಲ್ಲಿ ನಡೆದ ಚುನಾವಣೆಯಲ್ಲಿ ನಡೆದ ಗಲಾಟೆ ಮತ್ತು ಅತಂತ್ರದಿಂದಾಗಿ. ಅಲ್ಲಿನ ಚುನಾವಣೆಯಲ್ಲಿ ಇನ್ನಿಲ್ಲದ ಅಕ್ರಮಗಳು ನಡೆದು ಕುಲಗೆಟ್ಟು ಹೋಗಿದೆ. ಅದನ್ನು ತಂದು ಭಾರತದ ಚುನಾವಣೆಗಳಿಗೂ ಹೋಲಿಸಿ ಮಾತನಾಡುವುದು ಸರಿಯಲ್ಲ.

ಅಷ್ಟಕ್ಕೂ ಮಸ್ಕ್ ಏನು ಸಂಭಾವಿತ, ಸಾಮಾನ್ಯನಲ್ಲ. ಆತ ಹೇಳಿದ್ದು, ಬರೆದಿದ್ದು ಎಲ್ಲ ವಿವಾದವೇ. ಮೊನ್ನೆ ಮೊನ್ನೆ ತೈವಾನ್ ಚೀನಾದ ಭಾಗ ಎಂದು ಹೇಳಿ ಕೆಂಗಣ್ಣಿಗೆ ಗುರಿಯಾಗಿದ್ದ. ಬ್ರೆಜಿಲ್ ನ್ಯಾಯಾಧೀಶರ ವಿರುದ್ಧ, ಉಕ್ರೇನ್‌ನ ವಿರುದ್ಧ ಹೀಗೆ ತನ್ನ ತಲೆಗೆ ಏನು ಬರುತ್ತದೆಯೋ ಅದನ್ನೆಲ್ಲ ಹೇಳುವ, ಸತ್ಯವೋ, ಸುಳ್ಳೋ ಎಂದೂ ನೋಡದೇ ಪೋಸ್ಟ್ ಮಾಡುತ್ತಾನೆ. ಆತನ ಮಾತು ಕಟ್ಟಿಕೊಂಡು ಪ್ರತಿಪಕ್ಷಗಳು ಧರಣಿಗೆ ಕೂಡಲು ಬಂದಿವೆ.

ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ಹಾಕು ತೂಗುವುದು ಕೂಡ ತಪ್ಪು. ಭಾರತ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶ, ಇಲ್ಲಿನ ಚುನಾವಣೆಗಳು ಅತ್ಯಂತ ಪಾರದರ್ಶಕತೆಯಿಂದ ನಡೆಯುವುದರಿಂದಲೇ ಇಡೀ ಜಗತ್ತು ನಮ್ಮ ದೇಶದ ಚುನಾವಣೆಯನ್ನು ನೋಡಿ ಬೆಕ್ಕಸ ಬೆರಗಾಗುತ್ತದೆ. ನಮ್ಮ ದೇಶದ ಚುನಾವಣೆಯಲ್ಲಿ ಯಾವುದೇ ರೀತಿಯ ಅಕ್ರಮಗಳು ನಡೆಯುವುದಿಲ್ಲ. ಆದರೆ ಇದನ್ನು ಅರಿಯದ ಕುತಂತ್ರಿಗಳು, ಇಲ್ಲಿ ದೇಶದ ಘನತೆಗೆ ಧಕ್ಕೆ ಬರುತ್ತದ ಎನ್ನುವುದನ್ನೂ ಲೆಕ್ಕಿಸದೆ ಜಾಗತಿಕ ಮಟ್ಟದಲ್ಲಿ ದೇಶದ ವ್ಯವಸ್ಥೆಯ ವಿರುದ್ಧ ಮಾತನಾಡುವುದನ್ನು ಕುಲಕಸುಬು ಮಾಡಿಕೊಂಡಿವೆ. ಬಾಯಿಗೆ ಬಂದದ್ದು ಮಾತನಾಡುತ್ತವೆ.

ಅದೂ ಅಲ್ಲದೆ ಪ್ಯುರ್ಟೋರಿಕೋದ ಚುನಾವಣೆಯಲ್ಲಿ ಬಳಸಲಾದ ಇವಿಎಂ ಬೇರೆ, ನಮ್ಮ ದೇಶದಲ್ಲಿ ಬಳಸಲಾಗುವ ಇವಿಎಂಗಳು ಬೇರೆಯೇ. ನಮ್ಮ ಚುನಾವಣೆಯಲ್ಲಿ ಬಳಕೆಯಾಗುವ ಇವಿಎಂನ ಚಿಪ್‌ನ್ನು ರೀಪ್ರೋಗ್ರಾಂ ಮಾಡಲು ಬರುವುದಿಲ್ಲ. ಇದರೊಂದಿಗೆ ಮಷಿನ್ ಕೂಡ ಸ್ಟ್ಯಾಂಡ್ ಅಲೋನ್ ಆಗಿರುತ್ತದೆ. ಅಂದರೆ ಅದಕ್ಕೆ ಒತ್ತಿದ ವೋಟನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಮಾತ್ರ ಇರುತ್ತದೆ. ಅದನ್ನು ಹೊರಗಿನ ಯಾವ ಯಂತ್ರದೊಂದಿಗೂ ಸಂಪರ್ಕ ಸಾಧಿಸುವಂತೆ ಮಾಡಲಾಗದು. ಹಾಗಾಗಿ ಇದನ್ನು ಹ್ಯಾಕ್ ಮಾಡಲಾಗುವುದಿಲ್ಲ ಎಂದು ಈಗಾಗಲೇ ಅನೇಕ ಬಾರಿ ಚುನಾವಣಾ ಆಯೋಗ ಹೇಳಿದೆ. ಹೇಳುತ್ತಿದೆ. ಮುಂದೆಯೂ ಹೇಳಲುತ್ತದೆ. ಅಲ್ಲ, ಇಷ್ಟೆಲ್ಲ ಮಾತಾಡುವ ಪ್ರತಿಪಕ್ಷದ ನಾಯಕರು ಏಕೆ ಒಮ್ಮೆ ತಮಗೆ ಗೊತ್ತಿರುವ ಅತ್ಯದ್ಭುತ ಎಂಜಿನಿಯರ್ ಅನ್ನು ಕರೆದುಕೊಂಡು ಬಂದು ಹ್ಯಾಕ್ ಮಾಡಿ ತೋರಿಸಬಾರದು. ಅಲ್ಲವೆ?

ನಿರಾಶ್ರಿತರನ್ನು ಅತಂತ್ರರನ್ನಾಗಿಸಿದ ಕಂದಾಯ ಕಟ್ಟಳೆ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ವಸತಿಯೂ ಒಂದು. ಪ್ರತಿಯೊಬ್ಬರಿಗೂ ಹೊಟ್ಟೆ-ಬಟ್ಟೆಯ ನಂತರ ಇರಲೊಂದು ಸೂರಿನ ಅನಿವಾರ್ಯತೆ ಎದುರಾಗುತ್ತದೆ. ಪಿತ್ರಾರ್ಜಿತ ಆಸ್ತಿ ಇಲ್ಲದ, ಇದ್ದರೂ ಪಾಲು ದಕ್ಕಿಸಿಕೊಳ್ಳಲಾಗದ ಅದೆಷ್ಟೋ ಕುಟುಂಬಗಳು ಜಗತ್ತಿನೆಲ್ಲೆಡೆ ಇವೆ. ಇಂದಿನ ನ್ಯೂಕ್ಲಿಯರ್ ಫ್ಯಾಮಿಲಿ ಪರಿಕಲ್ಪನೆಯ ಓಟವು ದೆಹಲಿಯಿಂದ ಹಳ್ಳಿಯವರೆಗೂ ಕಾಲಿಟ್ಟ ಪರಿಣಾಮ, ಸಬಲರು, ದುರ್ಬಲರು ಎಲ್ಲರೂ ಎಲ್ಲಾದರೊಂದು ಸಣ್ಣ ಮನೆ ಕಟ್ಟಿಕೊಂಡು ನಮ್ಮಷ್ಟಕ್ಕೆ ನಾವು ಗಂಜಿಯೋ ಅನ್ನವೋ ತಿಂದುಕೊಂಡು ಸ್ವತಂತ್ರವಾಗಿರಬೇಕು. ಹಂಗಿನ ಅರಮನೆಗಿಂತ ವಿಂಗಡದ ಗುಡಿಲೇಸು ಎಂಬ ಯೋಚನೆಯಲ್ಲೇ ಪ್ರಯತ್ನಶೀಲರಾಗುತ್ತಾರೆ.

ಆಕೆಯೂ ಹಾಗೆ ಎಂದೋ ಗತಿಸಿದ ಗಂಡನನ್ನು ನೆನೆಯುತ್ತಾ, ತನ್ನಿಬ್ಬರು ಮಕ್ಕಳನ್ನು ಪರರ ಮನೆಯಲ್ಲಿದ್ದು ಬೆಳೆಸುತ್ತಾಳೆ. ಮಕ್ಕಳು ದೊಡ್ಡವರಾಗುತ್ತಿದ್ದಂತೆ, ಪರರ ಮನೆಯಲ್ಲಿ ತಾನು ತನ್ನ ಮಕ್ಕಳು ಭಾರವಾದಂತಹ ಭಾವ ಕಾಡುತ್ತದೆ. ಸ್ವಂತ ಸೂರೊಂದನ್ನು ಸರಕಾರಿ ಜಾಗದಲ್ಲಿ ಕಟ್ಟಿ ವಾಸ್ತವ್ಯ ಹೂಡುತ್ತಾಳೆ. ಈಗ ಮನೆ ಏನೋ ಆಯಿತು. ಮನೆಗೆ ಕರೆಂಟ್ ಸೌಲಭ್ಯ ಬೇಕು. ಭೂ ದಾಖಲೆಗಳಿಲ್ಲದೆ ವಿದ್ಯುತ್ ಸಂಪರ್ಕ ಕೊಡವುದಿಲ್ಲ. ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು, ಸಾಲ ತೆಗೆಯಲು ಆರ್‌ಟಿಸಿಯೂ ಇಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೋ, ಮದುವೆಗೋ ಲೋನ್ ಮಾಡಲೂ ಸಹ ಯಾವ ಹಕ್ಕು ಪತ್ರವೂ ಅವಳ ಬಳಿಯಿಲ್ಲ. ಆಶ್ರಯ ಮನೆಗೆ ಬೇಡಿಕೆ ಸಲ್ಲಿಸಲೂ ಅವಳು ಅನರ್ಹಳು. ಹಾಗಾದರೆ ಇದಕ್ಕೆಲ್ಲ ಪರಿಹಾರ ಏನು?

94ಸಿ ಅರ್ಜಿ ಭರ್ತಿ ಮಾಡಿ ನೀಡಿದರೆ ತನಗೆ ಹಕ್ಕು ಪತ್ರ ಸಿಗುತ್ತದೆ ಎಂಬ ಮಹದಾಸೆ ಹೊತ್ತು, ಅರ್ಜಿ ಸಲ್ಲಿಸಿ, ಕಾದುಕುಳಿತ ಆಕೆಗೆ ಇಂದಿನವರೆಗೂ ಯಾವ ಹಕ್ಕುಪತ್ರವೂ ಸಿಕ್ಕಿಲ್ಲ. ಹೀಗೆ, ಇದು ಯಾರೋ ಒಬ್ಬರ ಸಮಸ್ಯೆ ಮಾತ್ರವಲ್ಲ. ಸಹಸ್ರ ಸಹಸ್ರ ಜನರು ಎದುರಿಸುತ್ತಿರುವ ಇಷ್ಟೂ ಸಮಸ್ಯೆಗಳಿಗೆ ಪರಿಹಾರ ಕೊಡಬೇಕಾದವರು ಯಾರು?

ಈ ಕಾಯಿದೆಯು ಪ್ರಮುಖ ಪದಗಳ ವ್ಯಾಖ್ಯಾನ, ಭೂ ಆದಾಯದ ಮೌಲ್ಯಮಾಪನ, ಹಕ್ಕುಗಳ ದಾಖಲೆಗಳ ನಿರ್ವಹಣೆ, ಭೂಮಿಯ ಸಮೀಕ್ಷೆ ಮತ್ತು ವಸಾಹತು, ಭೂಮಿಯ ವರ್ಗೀಕರಣ, ಭೂ ಕಂದಾಯ ಸಂಗ್ರಹಣೆ, ಕಂದಾಯ ಅಧಿಕಾರಿಯ ಅಧಿಕಾರಗಳು, ಹಕ್ಕನ್ನು ಒದಗಿಸುತ್ತದೆ. ಮೇಲ್ಮನವಿ ಮತ್ತು ಪರಿಷ್ಕರಣೆ, ಮತ್ತು ಅದರ ನಿಬಂಧನೆಗಳನ್ನು ಅನುಸರಿಸದಿದ್ದಕ್ಕಾಗಿ ದಂಡಗಳನ್ನು ವಿಧಿಸುವುದು. ಈ ಕಾಯಿದೆಯು ಕರ್ನಾಟಕದಲ್ಲಿ ಕಂದಾಯ ವ್ಯವಸ್ಥೆಯ ಸಮರ್ಥ ಮತ್ತು ನ್ಯಾಯಯುತ ಆಡಳಿತವನ್ನು ಖಚಿತಪಡಿಸಿಕೊಳ್ಳಲು ಮತ್ತು ಭೂಮಿ ಮತ್ತು ಕಂದಾಯದ ನಿರ್ವಹಣೆಯಲ್ಲಿ ಸ್ಪಷ್ಟತೆ ಮತ್ತು ಖಚಿತತೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಭೂಕಂದಾಯ ಎಂದರೆ ಎಲ್ಲಾ ಮೊತ್ತಗಳು ಮತ್ತು ಪಾವತಿಗಳು ಹಣದಲ್ಲಿ ಅಥವಾ ಯಾವುದೇ ವ್ಯಕ್ತಿಯಿಂದ ಆತನ ಬಳಿಯಿರುವ ಭೂಮಿಯ ಖಾತೆಯಲ್ಲಿ ಯಾವುದೇ ತೆರಿಗೆ, ಸೆಸ್, ದರ ಇತ್ಯಾದಿಗಳನ್ನು ಸರ್ಕಾರವು ಕ್ಲೈಮ್ ಮಾಡಬಹುದಾಗಿದೆ. ಹಿಡುವಳಿದಾರ ಎಂದರೆ ಗುತ್ತಿಗೆದಾರ, ಉಪಕರಣ ಅಥವಾ ಮೌಖಿಕ ಒಪ್ಪಂದದ ಅಡಿಯಲ್ಲಿ ಭೂಮಿಯನ್ನು ಹಿಡಿದಿಟ್ಟುಕೊಳ್ಳುವುದಾಗಿರುತ್ತದೆ. ಜೊತೆಗೆ, ಹಕ್ಕುಗಳ ದಾಖಲೆಗಳು, ಸಮೀಕ್ಷೆ ಮತ್ತು ವಸಾಹತು, ಭೂಮಿಯ ವರ್ಗೀಕರಣ ಇತ್ಯಾದಿ ನಿಯಮಗಳು ಕೂಡ ಇದರಲ್ಲಿವೆ.

ಇನ್ನು, ಭೂಮಿಯ ಪ್ರಕಾರಗಳನ್ನು ಗಮನಿಸಿದರೆ, ಒಣ ಭೂಮಿ (ರಾಜ್ಯ ಸರಕಾರದ ಆಸ್ತಿಯಾಗಿರುವ ಯಾವುದೇ ನೀರಿನ ಮೂಲದಿಂದ ಪಡೆದ ನೀರಿನಿಂದ ನೀರಾವರಿ ಮಾಡುವುದನ್ನು ಹೊರತುಪಡಿಸಿ ಆರ್ದ್ರ ಬೆಳೆಗಳನ್ನು ಬೆಳೆಯಲಾಗದ ಭೂಮಿ), ಆರ್ದ್ರ ಭೂಮಿ (ಮಳೆ ನೀರು ಅಥವಾ ರಾಜ್ಯ ಸರಕಾರದ ಆಸ್ತಿಯಲ್ಲದ ಯಾವುದೇ ನೀರಿನ ಮೂಲದಿಂದ ಪಡೆದ ನೀರನ್ನು ಬಳಸಿ ಆರ್ದ್ರ ಬೆಳೆಗಳನ್ನು ಬೆಳೆಯಬಹುದಾದ ಭೂಮಿ) ಉದ್ಯಾನ ಭೂಮಿ (ತೋಟದ ಬೆಳೆಗಳನ್ನು ಹೊರತುಪಡಿಸಿ ಬೆಳೆಗಳನ್ನು ಬೆಳೆಯಬಹುದಾದ ಭೂಮಿ, ಮತ್ತು ಒಣ ತೋಟದ ಭೂಮಿ ಮತ್ತು ಆರ್ದ್ರ ತೋಟದ ಭೂಮಿಯನ್ನು ಒಳಗೊಂಡಿರುತ್ತದೆ) ಮತ್ತು ತೋಟದ ಭೂಮಿ(ಅಂದರೆ ಏಲಕ್ಕಿ, ಕಾಫಿ, ಮೆಣಸು, ರಬ್ಬರ್ ಅಥವಾ ಚಹಾವನ್ನು ಬೆಳೆಯಬಹುದಾದ ಭೂಮಿ) ಎಂದು ಸಾಮಾನ್ಯವಾಗಿ ವರ್ಗೀಕರಿಸಲಾಗಿದೆ.

ಹಾಗೆಯೇ, ಈ ಒಂದು ಕಾನೂನು ಇದರ ನೀತಿ, ನಿಯಮ ಮತ್ತು ಅಧಿಕಾರಿಗಳ ವ್ಯಾಪ್ತಿಯನ್ನು ರಾಮಚಂದ್ರ, ವರ್ಸಸ್ ಸ್ಟೇಟ್ ಆಫ್ ಕರ್ನಾಟಕ (2006) ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಈ ಕಾಯಿದೆಯ ನಿಬಂಧನೆಗಳು ವ್ಯಕ್ತಿಗಳು, ನಿಗಮಗಳು ಮತ್ತು ಸರ್ಕಾರಿ ಏಜೆನ್ಸಿಗಳು ಹೊಂದಿರುವ ಎಲ್ಲಾ ಜಮೀನುಗಳಿಗೆ ಅನ್ವಯಿಸುತ್ತದೆ ಮತ್ತು ಕಂದಾಯ ಅಧಿಕಾರಿಗೆ ಅಧಿಕಾರವಿದೆ ಎಂದು ಅಭಿಪ್ರಾಯ ತಿಳಿಸುವ ಮೂಲಕ ಹೆಚ್ಚು ಬಲವನ್ನು ನೀಡಿತೆನ್ನಬಹುದು.

ಕೊನೆಯಲ್ಲಿ, 'ಕರ್ನಾಟಕ ಭೂಕಂದಾಯ ಕಾಯಿದೆ, 1964' ಭಾರತದ ಕರ್ನಾಟಕ ರಾಜ್ಯದ ಕಂದಾಯ ಆಡಳಿತವನ್ನು ನಿಯಂತ್ರಿಸುವ ಒಂದು ಸಮಗ್ರ ಶಾಸನವಾಗಿದೆ. ಈ ಕಾಯಿದೆಯು ಭೂ ಕಂದಾಯದ ಮೌಲ್ಯಮಾಪನ ಮತ್ತು ಸಂಗ್ರಹಣೆ, ಹಕ್ಕುಗಳ ದಾಖಲೆಗಳ ನಿರ್ವಹಣೆ ಮತ್ತು ಭೂಮಿಯ ವಸಾಹತುಗಳನ್ನು ಒದಗಿಸುತ್ತದೆ. ಇದು ಕಂದಾಯ ಅಧಿಕಾರಿಗೆ ಅಧಿಕಾರವನ್ನು ನೀಡುತ್ತದೆ ಮತ್ತು ಮೇಲ್ಮನವಿ ಮತ್ತು ಪರಿಷ್ಕರಣೆಯ ಹಕ್ಕನ್ನು ಒದಗಿಸುತ್ತದೆ, ಜೊತೆಗೆ ಅದರ ನಿಬಂಧನೆಗಳನ್ನು ಅನುಸರಿಸದಿದ್ದರೆ ದಂಡವನ್ನು ನೀಡುವ ಅಧಿಕಾರ ಕೂಡ ಹೊಂದಿದೆ ಎಂದಿದೆ.

ಇಂತಹ ಒಂದು ಬಲವಾದ ನಿಯಮಗಳಿದ್ದೂ, ದುರ್ಬಳಕೆ ಮಾಡಿಕೊಂಡಲ್ಲಿ ಹೇಗೆ ಜನರ ವಿರುದ್ಧ ಮತ್ತು ಉಳ್ಳವರೇ ಮತ್ತೆ ಮತ್ತೆ ಅನುಕೂಲ ಪಡೆಯುಂತಾಗಿರುವ ಪ್ರಕರಣಗಳೂ ಅಲ್ಲಲ್ಲಿ ಕಂಡುಬಂದಿವೆ. ಕಾಟಾಚಾರಕ್ಕೆಂದು ಬಹುಶಃ 130ಕ್ಕೂ ಹೆಚ್ಚು ತಾಲೂಕುಗಳಲ್ಲಿ ಈ ಬಗರ್‌ಹುಕುಂ ಸಮಿತಿ ಮಾಡಿದ್ದು ಬಿಟ್ಟರೆ, ಈ ಸಮಿತಿಯಿಂದಾದ ಲಾಭಗಳೇನು ಎಂಬುದು ಸ್ವತಃ ಇಲಾಖೆಗೇ ಅರಿವಿಲಿಕ್ಕಿಲ್ಲ!

ಜತೆಗೆ ದಶಕಗಳು ಕಳೆದರೂ ಯೋಗ್ಯರಿಗೆ, ಅರ್ಹರಿಗೆ ಸಕಾಲದಲ್ಲಿ ಈ ಯೋಜನೆಯ ಪ್ರಯೋಜನವಾಗಿದಿರುವದೂ ಬಹುದೊಡ್ಡ ವಿಫಲತೆ ಎನ್ನಬಹುದು. ಈ ವಿಚಾರವಾಗಿ 'ನಿಜವಾದ ಬಡವರು' ಇರುವ ಅಲ್ಪ ಹಣದಲ್ಲಿ, ಆ ಕಚೇರಿ ಈ ಕಚೇರಿ ಅಲೆಯುತ್ತ ತಲೆಮಾರು ಕಳೆಯುವಂತಾಗಿದೆ. ಇದರ ಕತೆ ಹೀಗಾದರೆ, ಇದೇ ಕಂದಾಯ ಇಲಾಖೆಗೆ ಸೇರಿದ 94(ಸಿ) ನಿಯಮದಿಂದ ಬಡವರು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ, ಇಬ್ಬದಿಯಲ್ಲೂ ಬೆಳಕು ಕಾಣದಂತಾಗಿದ್ದಾರೆ.

ಬಡವರಿಗೆ, ನಿರಾಶ್ರಿತರಿಗೆ ಬದುಕಲು ಸಹಾಯವಾಗಲೆಂದು ಕರ್ನಾಟಕದಲ್ಲಿ ಭೂ ಕಂದಾಯ ಕಾಯ್ದೆಯಲ್ಲಿ ಸೆಕ್ಷನ್ 94(ಸಿ) ಮತ್ತು 94(ಸಿಸಿ) ನಿಯಮಗಳ ಅಡಿಯಲ್ಲಿ - ಸರಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳಿಗೆ ಹಕ್ಕುಪತ್ರ ವಿತರಿಸಲು ಅವಕಾಶವಿದೆ. 94(ಸಿ) - ಆಕ್ರಮಿತ ಭೂಮಿಯಲ್ಲಿ ವಾಸದ ಮನೆ ನಿರ್ಮಾಣದ ಸಂದರ್ಭದಲ್ಲಿ ನಿವೇಶನ ಮಂಜೂರು - 1999 ಅಧಿನಿಯಮದಲ್ಲಿ ಯಾವುದೇ ವ್ಯಕ್ತಿಯು ಸರಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಅನಧಿಕೃತವಾಗಿ ವಶಪಡಿಸಿಕೊಂಡು, ವಾಸದ ಮನೆಯನ್ನು ನಿರ್ಮಿಸಿಕೊಂಡಿದ್ದಾನೆ ಎಂದು ಮತ್ತು ಅದು ಸೂಕ್ತವೆಂದು ಭಾವಿಸುವಂತಹ ವಿಚಾರಣೆಯನ್ನು ನಡೆಸಿದ ನಂತರ ತೃಪ್ತಿಗೊಂಡರೆ (ಜನವರಿ, 2015ಕ್ಕಿಂತ ಮೊದಲಾಗಿರಬೇಕು) ಅಂತಹ ಭೂಮಿಯನ್ನು ಅಂತಹ ವ್ಯಕ್ತಿಯಿಂದ ಈ ಅವಧಿಯೊಳಗೆ ಯೋಗ್ಯ ಶುಲ್ಕವನ್ನು ಪಾವತಿಸಿದ ನಂತರ ಅನುದಾನವನ್ನು ನಿಗದಿಪಡಿಸಬಹುದು. ಆದರೆ, ಈ ನಿಯಮವು ಯಾವುದೇ ರೀತಿಯ ಅರಣ್ಯ ಭೂಮಿಗೆ ಅನ್ವಯಿಸುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳ ಕರ್ನಾಟಕ ರೆಗ್ಯುಲರೈಸೇಶನ್ ಅಧಿನಿಯಮ, 1991 ರ ಅಡಿಯಲ್ಲಿ ಅರ್ಜಿ ಸಲ್ಲಿಸಲಾಗುತ್ತದೆ.

ಬಗರ್‌ಹುಕುಂನಂತೆಯೇ, ಈ (94ಸಿ) ಕಾಯಿದೆಯೂ ಸಹ, ವಸತಿರಹಿತರು - ಸೂರಿಲ್ಲದವರು ಅರ್ಜಿ ಸಲ್ಲಿಸಿದ ಮೇಲೆ, ಇಂದು ಹಕ್ಕುಪತ್ರ ಸಿಕ್ಕೀತು, ನಾಳೆ ಸಿಕ್ಕಿತು ಎಂಬ ಕುರುಡು ಭರವಸೆ ಹೊತ್ತು ಕೂರುವ ಬಡಸಾಮಾನ್ಯರ ಬದುಕನ್ನು ಅಡ್ಡಕತ್ತರಿಯಲ್ಲಿರಿಸಿ ಸುಮ್ಮನೆ ಕುಳಿತುಬಿಟ್ಟಿದೆ. ಸುಮಾರು 5 ಲಕ್ಷದಷ್ಟು ಅರ್ಜಿಗಳನ್ನು ನೇರವಾಗಿಯೇ ತಿರಸ್ಕರಿಸಲಾಗಿದೆ. ಸ್ವತಃ ಕಂದಾಯ ಸಚಿವರೇ ಅನರ್ಹರು ಈ ಯೋಜನೆಯ ಲಾಭ ಪಡೆಯುತ್ತಿರುವ ಅನುಮಾನ ವ್ಯಕ್ತಪಡಿಸಿದ್ದಾರೆ. ಅರ್ಹರಿಗೆ, ಯೋಗ್ಯರಿಗೆ ಸಕಾಲದಲ್ಲಿ ದೊರೆಯಬೇಕಾದ ಸಹಾಯ ಸೌಲಭ್ಯಗಳು ಮರೀಚಿಕೆಗಳಂತೆ ಮುಂದಕ್ಕೆ ಹೋಗುತ್ತಲೇ ಇವೆ. ಇದರಂತೆ, 94ಸಿಸಿಯಲ್ಲಿಯೂ ಎರಡು ಲಕ್ಷಕ್ಕೂ ಹೆಚ್ಚು ಅರ್ಜಿಗಳು ತಿರಸ್ಕೃತಗೊಂಡಿವೆ. ಇದರಲ್ಲಿ, ಯೋಗ್ಯರು, ಬಡವರು ಇರುವುದು ಒಂದು ದುರಂತವೇ ಸರಿ. ಇನ್ನು ಕೆಲವರು, ಕಟ್ಟಡ ಆರಂಭಿಸಿ, ಮುಂದೆ ಕಟ್ಟುವುದಕ್ಕೆ ತಕರಾರು ಬಂದು ಅರ್ಧಕ್ಕೇ ನಿಂತಿವೆ. ಜೋರು ಮಳೆಗಾಲ ಬೇರೆ. ಸಾಲ, ಬಡ್ಡಿಸಾಲ ಮಾಡಿ ಹೇಗೋ ಮನೆಯೊಂದನ್ನು ಹೊಂದಿಸಿಕೊಂಡರಾಯ್ತೆಂದು ಯೋಜನೆಯಲ್ಲಿದ್ದ ಮುಗ್ಧ ಬಡವರ ಪರಿಸ್ಥಿತಿ ಆ ದೇವರಿಗೇ ಮತ್ತು ರಾಜ್ಯ ಕಂದಾಯ ಇಲಾಖೆಯ ಅಧಿಕಾರಿಗಳಿಗೇ ಪ್ರೀತಿ.

ಇನ್ನು, ನಗರ ಪ್ರದೇಶದಲ್ಲಿನ ಅನಧಿಕೃತ ಕಟ್ಟಡ ಮತ್ತು ಬಡಾವಣೆಗಳಿಗೆ (ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ದಾಖಲಿಸಿರುವ ಪ್ರಕರಣ) ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರಕ್ಕೆ, ಕಂದಾಯ ಇಲಾಖೆಗೆ ಹಿನ್ನಡೆ ಮತ್ತು ಮುಖಭಂಗವಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಜನರ ಸೇವೆಯ ಪ್ರತಿಜ್ಞೆಗೈದು ಅಧಿಕಾರಕ್ಕೆ ಬಂದ ಸರಕಾರ ಕೂಡಲೇ, ಮಳೆಗಾಲ ರಚ್ಚೆಹಿಡಿದು ಸುರಿಯುವ ಮುನ್ನವೇ ಬೀದಿಬದಿಯಿರುವ ಅರೆಬರೆ 94ಸಿ ಹೊಂದಿರುವ ಮನೆಗಳಿಗೆ ಒಂದು ಪರ್ಯಾಯ ಮಾರ್ಗ ಕಂಡುಕೊಳ್ಳಬೇಕು ಅಥವಾ ಒಂದು ವಿಶೇಷಾಧಿಕಾರದ ಮೂಲಕ ರಾಜ್ಯ ಕಂದಾಯ ಸಚಿವರು, ಉಸ್ತುವಾರಿ ಸಚಿವರು ಮತ್ತು ಆಯಾ ಜಿಲ್ಲಾಧಿಕಾರಿಗಳು ಸ್ವಯಿಚ್ಛೆಯ ಪರಮಾಧಿಕಾರ ಬಳಸಿ, ಯೋಗ್ಯರಿಗೆ ಸೂರು ಒದಗಿಸಿಕೊಡುವ ಮೂಲಕ ಕಾನೂನಿನ ಅಡೆತಡೆಗಳನ್ನು ನಿವಾರಿಸುವ ಮೂಲ ಹೊಣೆಗಾರಿಕೆ ಹೊಂದಿದ್ದಾರೆಂಬುದನ್ನು ಈ ಮೂಲಕ ಹೇಳಬಯಸುತ್ತೇನೆ. 'ಜನರಿಂದ' ಆಯ್ಕೆಯಾದವರು ಮಾಡಿದ ನಿಯಮಗಳು, ಕಾನೂನುಗಳು ಸಕಾಲದಲ್ಲಿ 'ಜನರಿಗಾಗಿ' ಮತ್ತು 'ಜನರಿಗೋಸ್ಕರ' ಬಳಕೆಯಾಗದಿದ್ದರೆ ಈ ಎಲ್ಲ ನೀತಿನಿಯಮಗಳು ಅರಣ್ಯರೋದನವೇ ಸರಿ!

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಹಂಗಾದ್ರೆ ಹಂಗೆ; ಹಿಂಗಾದ್ರೆ ಹಿಂಗೆ!

ಮೋದಿ ಸಂಪುಟದಲ್ಲಿ ಕುಮಾರಣ್ಣಂಗೆ ಬಹುದೊಡ್ಡ ಖಾತೆಗೆ ಸಿಕ್ಕಿದೆ. ಆದರೆ ಅವರಿಗೆ ಕರ್ನಾಟಕದ ಮಣ್ಣಿನ ಋಣ ಮರೆಯೋಕೆ ಆಗಲ್ಲ. ಅದ್ಕೆ ಕೇಂದ್ರ ಸಚಿವರಾದ್ರೂ, ಕರ್ನಾಟಕದ ವಿಷಯವನ್ನೇ ತಲೆಕೆಡಿಸಿಕೊಂಡಂತೆ ಕಾಣುತ್ತಿದೆ. ಸಚಿವರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಕರ್ನಾಟಕದ ಕಾಗದಗಳಿಗೆ ಸಹಿ ಹಾಕಿದ್ದ ಕುಮಾರಣ್ಣ, ದೆಹಲಿಯಲ್ಲಿ ಕೂತರೂ ಕರ್ನಾಟಕದ್ದೇ ಚಿಂತೆ ಮಾಡುತ್ತಿದ್ದಾರಂತೆ.

ಎರಡು ದಿನದ ಮಟ್ಟಿಗೆ ಕರ್ನಾಟಕಕ್ಕೆ ಬಂದಿದ್ದ ಅವರು, ಹಳೇ ಮೈಸೂರು ಭಾಗದ ಮಠ-ಮಂದಿರಗಳನ್ನೆಲ್ಲ ಸುತ್ತು ಹಾಕಿ ವಾಪಸು ದೆಹಲಿಗೆ ತೆರಳಿದ್ದಾರೆ. ಆದರೆ ದೆಹಲಿಗೆ ತೆರಳೋ ಮೊದಲು ಡಿಕೆಶಿ, ಸಿದ್ದರಾಮಯ್ಯ, ಡಿಕೆಸು ವಿರುದ್ಧ ವಾಗ್ದಾಳಿ ನಡೆಸಿದ್ದರು. ಸುದ್ದಿಗೋಷ್ಠಿಯಲ್ಲಿ ಈ ಎಲ್ಲ ವಿಷ್ಯದ ಬಳಿಕ ದರ್ಶನ್ ಪ್ರಕರಣದ ಬಗ್ಗೆ ಕೇಳುತ್ತಿದ್ದಂತೆ 'ನಾನು ಕೇಂದ್ರ ಸಚಿವ. ಈ ವಿಷಯ ರಾಜ್ಯಕ್ಕೆ ಸಂಬಂಧಿಸಿದ್ದು, ಆದ್ದರಿಂದ ಈ ಬಗ್ಗೆ ಪ್ರತಿಕ್ರಿಯಿಸಿಲ್ಲ' ಎಂದು ಹೇಳಿದರು. ಆದರೆ ಆ ಹೇಳಿಕೆ ನೀಡಿದ ಗಂಟೆ ಕಳೆಯುವ ಮೊದಲೇ ಬಿಬಿಎಂಪಿಯಲ್ಲಿ ಒಂದೇ ಕೆಲಸಕ್ಕೆ ಎರಡು ಬಿಲ್ ಎಂದು ಡಿಕೆ ಟಾರ್ಗೆಟ್ ಮಾಡಿದ್ದ ಟ್ವೀಟ್ ಮಾಡಿದ್ದರು.

ವಿಷ್ಯಾ ಅಷ್ಟಕ್ಕೆ ಬಿಡದೇ, ದೆಹಲಿ ಹೋಗುತ್ತಿದ್ದಂತೆ ಅಶ್ವಿನ್ ವೈಷ್ಣವ್ ಅವರನ್ನು ಭೇಟಿಯಾಗಿರೋ ಕುಮಾರಸ್ವಾಮಿ ಅವರು ರಾಜ್ಯ ರೈಲ್ವೇ ಯೋಜನೆಗಳಿಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಕರ್ನಾಟಕದವರೇ ಆಗಿರುವ ಸೋಮಣ್ಣ ರೈಲ್ವೇ ಇಲಾಖೆಯ ರಾಜ್ಯ ಖಾತೆ ಸಚಿವರಾಗಿದ್ದರೂ, ಕ್ಯಾಬಿನೆಟ್ ರ್‍ಯಾಂಕ್ ಜತೆಯೇ ನನ್ನ ಮಾತು ಎಂದು ವೈಷ್ಣವ್ ಅವರನ್ನು ಭೇಟಿಯಾಗಿದ್ದಾರೆ. ಮುಂದೆ ದೇವೇಗೌಡರ ಕಾಲದ ನೀರಾವರಿ, ರೈಲ್ವೇ ಸೇರಿದಂತೆ ಯಾವೆಲ್ಲ ಯೋಜನೆಗಳು ಬಾಕಿ ಉಳಿದಿವೆಯೋ ಆ ಎಲ್ಲ ವರ್ಕ್‌ಗಳನ್ನು ಮುಗಿಸುವ ಲೆಕ್ಕಾಚಾರದಲ್ಲಿದ್ದಾರಂತೆ. ಅದ್ಕೆ ರಾಜ್ಯದ ಬಗ್ಗೆ ಜಾಸ್ತಿ ತಲೆಕೆಡಿಸಿಕೊಳ್ಳಲ್ಲ ಅಂದ್ರಿಲ್ಲ ಅಂದಿಕ್ಕೆ, ನಾವೆಲ್ಲ 'ಹಂಗಾದ್ರೆ ಹಂಗೆ; ಹಿಂಗಾದ್ರೆ ಹಿಂಗೆ' ಅಂದ್ರಂತೆ.



ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 178

ಸಮಾಚಾರ ಸಣ್ಣದಲ್ಲ

ಕೇಜ್ರಿಗೆ ಜು.3ವರೆಗೂ ನ್ಯಾಯಾಂಗ ಬಂಧನ

ದೆಹಲಿ: ದೆಹಲಿ ಮುಖ್ಯಮಂತ್ರಿ, ಆಮ್ ಆದ್ಮಿ ಪಕ್ಷದ ಮುಖಂಡ ಅರವಿಂದ ಕೇಜ್ರಿವಾಲ್ ನ್ಯಾಯಾಂಗ ಬಂಧನ ಅವಧಿ ಜು.3ರವರೆಗೂ ವಿಸ್ತರಣೆಯಾಗಿದೆ. ದೆಹಲಿ ಮದ್ಯ ನೀತಿ

ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾದ ಕೇಜ್ರಿವಾಲ್ ನ್ಯಾಯಾಂಗ ಬಂಧನ ಅವಧಿ ಬುಧವಾರ ಮುಕ್ತಾಯಗೊಂಡಿತ್ತು. ತಿಹಾರ್ ಜೈಲಿನಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ಕೋರ್ಟ್‌ಗೆ ಹಾಜರುಪಡಿಸಿ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ ಕೋರಿ ಜಾರಿ ನಿರ್ದೇಶನಾಲಯ ಅರ್ಜಿ ಸಲ್ಲಿಸಿತ್ತು. ಕೇಜ್ರಿವಾಲ್ ಪರ ವಕೀಲರು ವಿರೋಧ ವ್ಯಕ್ತಪಡಿಸಿದ್ದರು. ನ್ಯಾ.ಬಿಂದು ನ್ಯಾಯಾಂಗ ಬಂಧನ ಅವಧಿ ವಿಸ್ತರಿಸಿ ಆದೇಶಿಸಿದರು. ಕೇಜ್ರಿವಾಲ್ ಜಾಮೀನು ಅರ್ಜಿ ವಿಚಾರಣೆ ಗುರುವಾರ ನಡೆಸುವುದಾಗಿ ನ್ಯಾಯಾಲಯ ತಿಳಿಸಿದೆ.

ಹೊಸ ಪಕ್ಷ ಸ್ಥಾಪನೆ: ಕೇರಳ ಜೆಡಿಎಸ್

ಕೇರಳ: ಜಾತ್ಯಾತೀತ ಜನತಾದಳ(ಜೆಡಿಎಸ್) ಪಕ್ಷ, ಬಿಜೆಪಿ ನೇತೃತ್ವದ 'ಎನ್‌ಡಿಎ' ಮೈತ್ರಿಕೂಟದ ಜತೆಗೂಡಿ, ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಸಚಿವರಾಗಿ ಕೇಂದ್ರ ಸರಕಾರದ ಭಾಗವೂ ಆಗಿರುವುದರಿಂದ ಮೂಲ ಪಕ್ಷದಿಂದ ದೂರವಾಗಲು ಜೆಡಿಎಸ್ ಕೇರಳ ಘಟಕ ನಿರ್ಧರಿಸಿದೆ. ಹೊಸ ಪಕ್ಷವನ್ನೇ ಸ್ಥಾಪನೆ ಮಾಡಲು ಘಟಕದ ಪದಾಧಿಕಾರಿಗಳು, ಸದಸ್ಯರು ನಿರ್ಧರಿಸಿದ್ದಾರೆ. ಕೇರಳ ಜೆಡಿಎಸ್ ನಾಯಕರು ಸಭೆ ನಡೆಸಿ ಹೊಸ ಪಕ್ಷ ಸ್ಥಾಪನೆಗೆ ತೀರ್ಮಾನ ಕೈಗೊಂಡಿದ್ದಾರೆ. ಆದರೆ ಚುನಾಯಿತ ಶಾಸಕರಿಗೆ ಅನರ್ಹತೆ ಭೀತಿ ಎದುರಾಗಿದೆ. ಹಾಗಾಗಿ, ಹೊಸ ಪಕ್ಷದಲ್ಲಿ ತಮಗೆ ಯಾವುದೇ ಅಧಿಕೃತ ಸ್ಥಾನ ಬೇಡ ಎಂದು ತಿಳಿಸಿದ್ದಾರೆ. ಶಾಸಕತ್ವ ಉಳಿಸಿಕೊಳ್ಳಲು ಸದ್ಯಕ್ಕೆ ಜೆಡಿಎಸ್‌ನಲ್ಲೇ ಉಳಿಯುವುದಾಗಿ ಶಾಸಕರು ತಿಳಿಸಿದ್ದಾರೆ. ಸಚಿವ ಕೆ.ಕೃಷ್ಣನ್ ಕುಟ್ಟಿ , ಮಾಜಿ ಸಚಿವ ಮ್ಯಾಥ್ಯೂ ಟಿ.ಥಾಮಸ್ ಜೆಡಿಎಸ್‌ನಿಂದ ಕೇರಳ ವಿಧಾನಸಭೆಗೆ ಆಯ್ಕೆಯಾದವರು.

ಆಕಸ್ಮಿಕ ಸಿಡಿದ ಗುಂಡು: ಕಾನ್‌ಸ್ಟೆಬಲ್ ಸಾವು

ಅಯೋಧ್ಯೆ: ಶ್ರೀರಾಮ ಜನ್ಮಭೂಮಿ ಸಂಕೀರ್ಣದಲ್ಲಿ ಕಾವಲು ಕರ್ತವ್ಯಕ್ಕೆ ನಿಯೋಜಿಸಲಾಗಿದ್ದ ಉತ್ತರ ಪ್ರದೇಶ ಪೊಲೀಸ್ ವಿಶೇಷ ಘಟಕದ ಕಾನ್‌ಸ್ಟೇಬಲ್ ಒಬ್ಬರು ಅವರ ಸೇವಾ ಬಂದೂಕಿನಿಂದ ಆಕಸ್ಮಿಕವಾಗಿ ಸಿಡಿದ ಗುಂಡಿನಿಂದ ಬುಧವಾರ ಬೆಳಗ್ಗೆ ಸಾವಿಗೀಡಾಗಿದ್ದಾರೆ. ಮೃತರನ್ನು ಶತ್ರುಘ್ನ ವಿಶ್ವಕರ್ಮ(25) ಎಂದು ಗುರುತಿಸಲಾಗಿದೆ. ರಾಮಮಂದಿರದ ಮುಖ್ಯ ಭಾಗದಿಂದ 150 ಮೀ. ದೂರದಲ್ಲಿರುವ ಕೋಟೇಶ್ವರ ದೇವಾಲಯ ಮುಂಭಾಗ ನಿರ್ಮಾಣ ಹಂತದಲ್ಲಿರುವ ವಿಐಪಿ ಗೇಟ್ ಬಳಿ ವಿಶ್ವಕರ್ಮ ಅವರನ್ನು ಭದ್ರತಾ ಸೇವೆಗೆ ನಿಯೋಜಿಸಲಾಗಿತ್ತು. ಗುಂಡು ವಿಶ್ವಕರ್ಮ ಅವರ ಹಣೆಗೆ ತಗುಲಿದೆ. ಜತೆಗೇ ಇದದ್ದಿತರೆ ಭದ್ರತಾ ಸಿಬ್ಬಂದಿ ಕೂಡಲೇ ವಿಶ್ವಕರ್ಮರನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. ಸ್ಥಳಕ್ಕೆ ಭೇಟಿ ನೀಡಿದ ಹಿರಿಯ ಪೊಲೀಸ್ ಅಧಿಕಾರಿಗಳು, ಗುಂಡು ಆಕಸ್ಮಿಕವಾಗಿ ಸಿಡಿಯಿತೊ ಅಥವಾ ಆತ್ಮಹತ್ಯೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಅಗ್ನಿ ದುರಂತ: ಕುವೈತ್ ₹12.5 ಲಕ್ಷ ಪರಿಹಾರ

ಅಲ್ ಅಸೀಮಾ ಗವರ್ನೇಟ್: ಕುವೈತ್ ದೇಶದ ದಕ್ಷಿಣ ಅಹ್ಮದಿ ಗವರ್ನರೇಟ್‌ನಲ್ಲಿ 46 ಭಾರತೀಯರು ಸೇರಿ 50 ಜನರ ಸಾವಿಗೆ ಕಾರಣವಾದ ಬಹು ಮಹಡಿ ಕಟ್ಟಡ ಅಗ್ನಿದುರಂತದಲ್ಲಿ ಸಂತ್ರಸ್ತರಾದ ಕುಟುಂಬಗಳಿಗೆ ಕುವೈತ್ ಸರಕಾರ ತಲಾ 15,000 ಅಮೆರಿಕನ್ ಡಾಲರ್(12.50 ಲಕ್ಷ ರು.) ಪರಿಹಾರ ಧನ ನೀಡಲಿದೆ. ಜೂ.12ರಂದು ಮಂಗಾಫ್ ನಗರದ 7 ಅಂತಸ್ತಿನ ಕಟ್ಟಡದಲ್ಲಿ ಅಗ್ನಿ ಅವಘಡವಾಗಿ ಭಾರತೀಯರೇ ಹೆಚ್ಚು ಬಲಿಯಾದರು. ಕುವೈತ್‌ನ ಎಮಿರ್ ಶೇಖ್ ಮೆಶಾಲ್ ಅಲ್-ಅಹ್ಮದ್ ಅಲ್ -ಜಾಬರ್ ಅಲ್-ಸಬಾಹ್ ಅವರ ಆದೇಶದ ಮೇರೆಗೆ ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ಒದಗಿಸಲಾಗುತ್ತಿದೆ. ಪರಿಹಾರ ಧನವನ್ನು ಆಯಾ ದೇಶದ ರಾಯಭಾರ ಕಚೇರಿಗಳಿಗೆ ತಲುಪಿಸಲಾಗುತ್ತದೆ ಎಂದು ಅರಬ್ ಟೈಮ್ಸ್ ಪತ್ರಿಕೆ ಬುಧವಾರ ವರದಿ ಮಾಡಿದೆ.

{ ಪ್ರಿಯಾಂಕಾ ವಾದ್ರಾ } ರಾಹುಲ್ ಗಾಂಧಿ ಸೋದರಿ

ನನ್ನ ಮುದ್ದು ಸೋದರನಿಗೆ 54ನೇ ಜನ್ಮದಿನದ ಶುಭಾಷಯಗಳು. ಜೀವನದ ಬಗ್ಗೆ ವಿಶೇಷ ಪರಿಕಲ್ಪನೆ ಹೊಂದಿರುವ ನನ್ನ ಪ್ರೀತಿಯ ಸೋದರನ ಬಾಳ ಹಾದಿಯಲ್ಲಿ ಬೆಳಕು ಉಜ್ವಲವಾಗಿರಲಿ, ಇಡೀ ವಿಶ್ವವೇ ತೆರೆದುಕೊಳ್ಳಲಿ. ಅವನು ಸೋದರನಷ್ಟೇ ಅಲ್ಲ, ಸದಾ ಕಾಲಕ್ಕೂ ನನ್ನ ಆತ್ಮೀಯ ಸ್ನೇಹಿತ, ವಾದ ಮಾಡುವ ಮಾರ್ಗದರ್ಶಕ, ನನ್ನ ಪಾಲಿನ ತತ್ವಜ್ಞಾನಿ ಹಾಗೂ ಉತ್ತಮ ನಾಯಕ. ನಿನ್ನನ್ನು ಅತ್ಯಧಿಕವಾಗಿ ಪ್ರೀತಿ ಮಾಡುವೆ ಸೋದರ. ಸದಾ ಮಿನುಗುತ್ತಿರು.

ನಳಂದಾ ವಿವಿ ಸಂಶೋಧನೆ ಆಧಾರಿತ ಶಿಕ್ಷಣಕ್ಕೆ ಒತ್ತು

ಐತಿಹಾಸಿಕ ನಳಂದಾ ವಿವಿ ಹೊಸ ಕ್ಯಾಂಪಸ್ ಉದ್ಘಾಟಿಸಿದ ಪ್ರಧಾನಿ ಮೋದಿ

ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ದಿನ ಎಂದು ಬಣ್ಣನೆ-ಪ್ರಾಚೀನ ವಿವಿ ಅಂಗಳ ಸುತ್ತಾಟ

ನಳಂದಾ: ಬಿಹಾರ ರಾಜ್ಯದ ರಾಜ್‌ಗೀರ್ ಪ್ರದೇಶದಲ್ಲಿ ನಿರ್ಮಿಸಲಾಗಿರುವ ನೂತನ ನಳಂದಾ ವಿಶ್ವವಿದ್ಯಾಲಯ ಆಧುನಿಕ ಹಾಗೂ ಸಂಶೋಧನೆ ಆಧಾರಿತ ಉನ್ನತ ಶಿಕ್ಷಣ ವ್ಯವಸ್ಥೆಗೆ ಒತ್ತು ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವಿಶ್ವ ಪರಂಪರೆ ತಾಣವಾಗಿರುವ ಐತಿಹಾಸಿಕ ನಳಂದಾ ವಿಶ್ವ ವಿದ್ಯಾಲಯದ ಸಮೀಪದಲ್ಲೇ ರಾಜ್‌ಗೀರ್‌ನಲ್ಲಿ 1749 ಕೋಟಿ ರು. ವೆಚ್ಚದಲ್ಲಿ 455 ಎಕರೆಗಳಲ್ಲಿ ಹೊಸದಾಗಿ ನಿರ್ಮಿಸಿದ ನಳಂದಾ ವಿವಿ ಕ್ಯಾಂಪಸ್ ಬುಧವಾರ ಉದ್ಘಾಟಿಸಿದ ಬಳಿಕ ಪ್ರಧಾನಿ ಮೋದಿ ಮಾತನಾಡಿದರು.

ಭಾರತವನ್ನು ಜ್ಞಾನದ ಪ್ರಧಾನ ಕೇಂದ್ರವಾಗಿಸುವುದೇ ಮೋದಿ ಸರಕಾರದ ಗುರಿ. ಪ್ರಾಚೀನ ನಳಂದಾ ವಿಶ್ವಕ್ಕೇ ಜ್ಞಾನ ಕೇಂದ್ರವಾಗಿತ್ತು. 21ನೇ ಶತಮಾನದ ಭಾರತ ಜ್ಞಾನ ಹಂಚುವ ಮೂಲಕ ಉನ್ನತ ಶಿಕ್ಷಣದ ಕೇಂದ್ರವಾಗಬೇಕು ಎಂಬ ಆಶಯವನ್ನು ಪ್ರಧಾನಿ ಮೋದಿ ವ್ಯಕ್ತಪಡಿಸಿದರು.

ಯೋಜನೆ ಯಶಸ್ಸಿಗೆ ಬಾಲ್ಯದಲ್ಲೇ ಮಕ್ಕಳನ್ನು ಸೃಜನಶೀಲರನ್ನಾಗಿಸಬೇಕು. ಮಕ್ಕಳಲ್ಲಿ ಗಗನಯಾನದಂತಹ ಯೋಜನೆ, ವೈಜ್ಞಾನಿಕ ಆಸಕ್ತಿ ಉತ್ತೇಜಿಸುವುದು ಉತ್ತಮ ಬೆಳವಣಿಗೆ ಎಂದರು.

ಎನ್‌ಡಿಎ ಸರಕಾರ ಕಳೆದ 10 ವರ್ಷಗಳಲ್ಲಿ ದೇಶದ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅಭಿವೃದ್ಧಿ ನಡೆಸಿದೆ. ವಾರಕ್ಕೊಂದು ವಿವಿ, 10 ದಿನಗಳಿಗೊಂದು ಕೈಗಾರಿಕಾ ತರಬೇತಿ ಸಂಸ್ಥೆ, 2 ದಿನಕ್ಕೊಂದು ಅಟಲ್ ಟಿಂಕರಿಂಗ್, ಪ್ರತಿ ದಿನ 2 ಕಾಲೇಜು ಸ್ಥಾಪನೆ ಮಾಡಿ ದಾಖಲೆಯಿದೆ. ದೇಶದಲ್ಲಿ ಐಐಎಂ ಸಂಖ್ಯೆ 21ಕ್ಕೆ, ಏಮ್ಸ್ ಸಂಖ್ಯೆ 22ಕ್ಕೆ ಏರಿದೆ. ವೈದ್ಯಕೀಯ ಕಾಲೇಜು ಸಂಖ್ಯೆ ದ್ವಿಗುಣಗೊಂಡಿವೆ. ಪೇಟೆಂಟ್ ಹಾಗೂ ಸಂಶೋಧನಾ ಲೇಖನ ಪ್ರಕಟಿಸುವ ಭಾರತೀಯರ ಸಂಖ್ಯೆ ಹೆಚ್ಚಾಗಿದೆ. 1 ಲಕ್ಷ ಕೋಟಿ ಅನುದಾನ ಸಂಶೋಧನೆ ಮತ್ತು ನಾವೀನ್ಯತೆಗೆ ಮೀಸಲಿಡಲಾಗಿದೆ. 100 ಸ್ಟಾರ್ಟ್‌ಅಪ್‌ಗಳಿದ್ದಲ್ಲಿ ಈಗ 1.30 ಲಕ್ಷ ಸ್ಟಾರ್ಟ್‌ಅಪ್‌ಗಳಿವೆ. ನಮ್ಮ ದೇಶದ ವಿಶ್ವವಿದ್ಯಾಲಯಗಳ ರ್‍ಯಾಂಕಿಂಗ್ ಜಾಗತಿಕ ಮಟ್ಟದಲ್ಲಿ ಉತ್ತಮವಾಗಿದೆ ಎಂದು ಮೋದಿ ಮಾಹಿತಿ ಹಂಚಿಕೊಂಡರು.

800 ವರ್ಷಗಳ ಕಾಲ ಜ್ಞಾನಧಾರೆ ಹರಿಸಿದ ಉನ್ನತ ಶಿಕ್ಷಣ ಸಂಸ್ಥೆ

ವಿಶ್ವದೆಲ್ಲೆಡೆಯ ಜ್ಞಾನದೇಗುಲವಾಗಿದ್ದ ನಳಂದಾ

ನಳಂದಾ: 5ನೇ ಶತಮಾನದಲ್ಲಿ ನಿರ್ಮಾಣವಾದ ನಳಂದಾ ವಿಶ್ವವಿದ್ಯಾಲಯ 800 ವರ್ಷಗಳ ಕಾಲ ವಿಶ್ವದ ವಿವಿಧೆಡೆಯ ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ನೀಡಿ ಜ್ಞಾನದ ಬಾಗಿಲು ತೆರೆದಿದೆ.

ಆದರೆ, 12ನೇ ಶತಮಾನದಲ್ಲಿ ಭರತ ಖಂಡದಾಚೆಗಿನ ದಾಳಿಕೋರ ಮೊಹಮ್ಮದ್ ಭಕ್ತಿಯಾರ್ ಖಿಲ್ಜಿ ಮತ್ತವನ ದುಷ್ಟ ಸೈನ್ಯದ ಕೈಗೆ ಸಿಲುಕಿ ಇಡೀ ವಿದ್ಯಾಲಯ ನಾಶವಾಯಿತು. ನಳಂದಾದ ಪುಸ್ತಕ ಸಂಗ್ರಹಾಲಯದಲ್ಲಿದ್ದ ಜ್ಞಾನದ ಭಂಡಾರವೇ ಆಗಿದ್ದ 9 ಲಕ್ಷ ಮಹಾನ್ ಗ್ರಂಥಗಳು, ಅಮೂಲ್ಯ ಓಲೆಗರಿಗಳು ಬೆಂಕಿಗೆ ಆಹುತಿಯಾದವು. ಪುಸ್ತಕ ಸಂಗ್ರಾಹಲಯದ ಕಟ್ಟಡಕ್ಕೆ ಹೊತ್ತಿದ ಬೆಂಕಿ ಆರಲು 6 ತಿಂಗಳೇ ಬೇಕಾಯಿತು ಎಂದು ಹೇಳಲಾಗಿದೆ.

2007ರಲ್ಲಿ ಫಿಲಿಪ್ಪೀನ್ಸ್‌ನಲ್ಲಿ ನಡೆದ ಎರಡನೇ ಈಸ್ಟ್ ಏಷ್ಯಾ ಶೃಂಗಸಭೆಯಲ್ಲಿ ನಳಂದಾ ವಿಶ್ವವಿದ್ಯಾಲಯದ ಮರು ನಿರ್ಮಾಣಕ್ಕೆ ನಿರ್ಣಯ ಕೈಗೊಳ್ಳಲಾಗಿತ್ತು. ನಳಂದಾ ಯುನಿವರ್ಸಿಟಿ ಕಾಯ್ದೆ 2010ರ ಅನ್ವಯ ಭಾರತ ಸರಕಾರ ನಿರ್ಮಾಣ ಕಾರ್ಯ ಆರಂಭ ಮಾಡಿತ್ತು.

ಪುರಾತನ ನಳಂದಾ ಅಂಗಳದಲ್ಲಿ:

ನೂತನ ಕ್ಯಾಂಪಸ್ ಉದ್ಘಾಟನೆಗೂ ಮುನ್ನ ಪ್ರಧಾನಿ ಮೋದಿ, ಯುನೆಸ್ಕೋ ವಿಶ್ವ ಪರಂಪರೆಯ ತಾಣ 5ನೇ

ಶತಮಾನದ ಪ್ರಾಚೀನ ಕಟ್ಟಡದ ಅವಶೇಷಗಳ ಸುತ್ತ ಓಡಾಟ ನಡೆಸಿದ್ದಾರೆ. ಈ ವೇಳೆ ಅವರಿಗೆ ಭಾರತೀಯ ಪುರಾತತ್ವ ಸಮೀಕ್ಷಾ ಸಂಸ್ಥೆಯ(ಎಎಸ್‌ಐ) ಪಟನಾ ವೃತ್ತದ ಅಧೀಕ್ಷಕ ಪುರಾತತ್ವ ಶಾಸ್ತ್ರಜ್ಞರಾದ ಗೌತಮಿ ಭಟ್ಟಾಚಾರ್ಯ ಅವರು ಹಾಜರಿದ್ದು, ಪ್ರಾಚೀನ ನಳಂದಾ ವಿವಿಯ ಅವಶೇಷಗಳ ಬಗ್ಗೆ ಪ್ರಧಾನಿ ಮೋದಿ ಅವರಿಗೆ ಮಾಹಿತಿ ನೀಡಿದರು. ಪ್ರಧಾನಿ ಹಳೆಯ ಕಟ್ಟಡದ ಸ್ತೂಪಗಳು, ದೇವಾಲಯ, ವಸತಿ ಮತ್ತು ಶೈಕ್ಷಣಿಕ ಕಟ್ಟಡ, ಕಲಾಕೃತಿಗಳನ್ನು ವೀಕ್ಷಿಸಿದರು. ಉದ್ಘಾಟನೆ ಬಳಿಕ ಮೋದಿ ಕ್ಯಾಂಪಸ್‌ನಲ್ಲಿ ಸಸಿ ನೆಟ್ಟು ನೀರೆರೆದಿದ್ದಾರೆ.

ಪಾದಚಾರಿ ಮಾರ್ಗದಲ್ಲಿ ಮಲಗಿದ್ದವ ಸಾವು
ವೈಎಸ್‌ಆರ್ ಕಾಂಗ್ರೆಸ್ ಸಂಸದನ ಪುತ್ರಿ ಆರೋಪಿ
ಪೊಲೀಸ್ ಸ್ಟೇಷನ್ ಜಾಮೀನು ಮೇಲೆ ಬಿಡುಗಡೆ

ಐಶಾರಾಮಿ ಕಾರು ಅತಿವೇಗ ಚಾಲನೆಗೆ ಬಡ ಯುವಕ ಬಲಿ

ಚೆನ್ನೈ: ವೈಎಸ್‌ಆರ್ ಕಾಂಗ್ರೆಸ್ ರಾಜ್ಯಸಭಾ ಸದಸ್ಯರ ಪುತ್ರಿಯ ಐಶಾರಾಮಿ ಕಾರಿನ ಅತಿವೇಗದ ಚಾಲನೆಗೆ ಪಾದಚಾರಿ ಮಾರ್ಗದಲ್ಲಿ ಮಲಗಿದ್ದ ಪೇಂಟರ್ ವೃತ್ತಿಯ ಬಡ ಯುವಕ ಬಲಿಯಾಗಿದ್ದಾನೆ. ಪ್ರಕರಣದಲ್ಲಿ ಆರೋಪಿ ಯುವತಿ ಮಾಧುರಿಯನ್ನು ಬಂಧಿಸಿದರೂ ತಕ್ಷಣವೇ ಸ್ಟೇಷನ್ ಬೇಲ್ ನೀಡಿ ಬಿಡುಗಡೆ ಮಾಡಲಾಗಿದೆ. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಪುಣೆಯ ಪೋರ್ಷೆ ಕಾರು ಬಾಲಕ ಚಾಲಕನಿಂದ ಅಪಘಾತ ಪ್ರಕರಣದ ಬಳಿಕ ಮತ್ತೊಂದು ಹೈಪ್ರೊಫೈಲ್ ಐಶಾರಾಮಿ ಕಾರು ಅಪಘಾತ ವರದಿಯಾಗಿದೆ. ಸಂಸದ ಬೀಡಾ ಮಸ್ತನ್ ರಾವ್ ಅವರ ಪುತ್ರಿ ಮಾಧುರಿ ಚಲಾಯಿಸುತ್ತಿದ್ದ ಬಿಎಂಡಬ್ಲ್ಯು ಕಾರು ಸೋಮವಾರ ರಾತ್ರಿ ಚೆನ್ನೈ ಬಸಂತ ನಗರದಲ್ಲಿ ರಸ್ತೆಬದಿ ಪಾದಚಾರಿ ಮಾರ್ಗದಲ್ಲಿ ಮಲಗಿದ್ದ ಯುವಕನ ಮೇಲೆ ಹರಿದಿದೆ. ಯುವಕ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಮೃತನನ್ನ 24 ವರ್ಷದ ಪೇಂಟರ್ ಸೂರ್ಯ ಎಂದು ಗುರುತಿಸಲಾಗಿದೆ.

ಅಪಘಾತದ ಶಬ್ದ ಕೇಳಿದ ಸುತ್ತಲಿನ ಪ್ರದೇಶದ ಜನತೆ ಸ್ಥಳಕ್ಕೆ ಧಾವಿಸಿ ಕಾರಿನಲ್ಲಿದ್ದವರನ್ನು ತರಾಟೆ ತೆಗೆದುಕೊಂಡಿದ್ದಾರೆ. ಆರೋಪಿ ಮಾಧುರಿ ಮತ್ತು ಗೆಳತಿ ಜನರಿಗೇ ಹೆದರಿಸಿದ್ದಾರೆ. ಪರಿಸ್ಥಿತಿ ಕೈಮೀರುವ ಸೂಚನೆ ಸಿಕ್ಕ ಕೂಡಲೇ ಇಬ್ಬರೂ ಪರಾರಿಯಾಗಿದ್ದಾರೆ.

ಜೆ5 ಶಾಸ್ತ್ರಿನಗರ ಪೊಲೀಸ್ ಠಾಣೆ ಬಳಿ ಮೃತನ ಸಂಬಂಧಿಕರು ಜಮಾಯಿಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ. ಪೊಲೀಸರು ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದಾಗ ಪುದುಚೆರಿ ನೋಂದಣಿ ಕಾರು ಸಂಸದರ ಒಡೆತನಕ್ಕೆ ಸೇರಿದ್ದು ಎಂದು ತಿಳಿದು ಬಂದಿದೆ. ಮೊದಲು ಶಾಸಕರಾಗಿದ್ದ ಬೀಡಾ ಮಸ್ತನ್ ರಾವ್ 2022ರಲ್ಲಿ ರಾಜ್ಯಸಭಾ ಸಂಸದರಾಗಿದ್ದಾರೆ.

ಮಂತ್ರೋದ್ಘೋಷ ನಡುವೆ ಪವನ್ ಅಧಿಕಾರ ಸ್ವೀಕಾರ

ಅಮರಾವತಿ: ಆಂಧ್ರಪ್ರದೇಶ ಸರಕಾರದ ಉಪ ಮುಖ್ಯಮಂತ್ರಿಯಾಗಿ ಜನಸೇನಾ ನಾಯಕ ಪವನ್ ಕಲ್ಯಾಣ್ ಬುಧವಾರ ಮಂತ್ರೋದ್ಘೋಷ ಧಾರ್ಮಿಕ ಆಚರಣೆ ನಡುವೆ ಅಧಿಕಾರ ಸ್ವೀಕರಿಸಿ ಗಮನ ಸೆಳೆದರು. ಬಳಿಕ

ಹಿರಿಯ ಅಧಿಕಾರಿಗಳ ಜತೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸಂಪುಟದಲ್ಲಿ ಪವನ್, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ, ಪರಿಸರ, ಅರಣ್ಯ ಹಾಗೂ ವಿಜ್ಞಾನ ತಂತ್ರಜ್ಞಾನ ಖಾತೆ ನಿಭಾಯಿಸಲಿದ್ದಾರೆ. ಪೀಠಾಪುರಂ ವಿಧಾನಸಭಾ ಕ್ಷೇತ್ರದಿಂದ ಪವನ್ ಆಯ್ಕೆಯಾಗಿದ್ದಾರೆ. ಅಧಿಕಾರ ಸ್ವೀಕಾರ ಬಳಿಕ ಜನಸೇನಾ ಪಕ್ಷ, ಟಿಡಿಪಿ, ಬಿಜೆಪಿ ಮುಖಂಡರು ಅಭಿನಂದನೆ ಸಲ್ಲಿಸಿದರು.

ಬಾರಾಮುಲ್ಲಾ: ಇಬ್ಬರು ಉಗ್ರರು ಹತ

ಬಾರಾಮುಲ್ಲಾ: ಜಮ್ಮು-ಕಾಶ್ಮೀರದ ಬಾರಾಮುಲ್ಲಾದಲ್ಲಿ ಸೊಪೊರಾ ಪ್ರದೇಶದಲ್ಲಿ ಬುಧವಾರ ಕಾರ್ಯಾಚರಣೆ ನಡೆಸಿದಾಗ ಇಬ್ಬರು ಉಗ್ರರು ಹತರಾದರು. ಮೃತರ ಗುರುತು ಪತ್ತೆ ಹಚ್ಚುವ ಕಾರ್ಯ ನಡೆದಿದೆ. ಉಗ್ರರ ಜತೆಗಿನ ಗುಂಡಿನ ಚಕಮಕಿಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ.

- **ಭದ್ರತಾಪಡೆಯ ಇಬ್ಬರು ಸಿಬ್ಬಂದಿಗೆ ಗಾಯ**

ರಿಯಾಸಿ ದಾಳಿ ಬಳಿಕ ಭದ್ರತಾ ಪಡೆಗಳಿಂದ ಉಗ್ರರ ಪತ್ತೆಗೆ ಡ್ರೋನ್ ಬಳಸಲಾಗುತ್ತಿದೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆ ಪ್ರಧಾನಿ ಮೋದಿ ಗುರುವಾರ 2 ದಿನಗಳ ಭೇಟಿಗೆ ಶ್ರೀನಗರಕ್ಕೆ ಬರಲಿದ್ದು, ಭದ್ರತೆ ಬಿಗಿಗೊಳಿಸಲಾಗಿದೆ. ವಟರ್‌ಗಮ್ ಪ್ರದೇಶದಲ್ಲಿ ಉಗ್ರರ ಶೋಧ ಕಾರ್ಯಾಚರಣೆ ವೇಳೆ ಅಡಗಿದ್ದ ಭಯೋತ್ಪಾದಕರು ಭದ್ರತಾ ಪಡೆಗಳು ಮೇಲೆ ಗುಂಡಿನ ದಾಳಿ ನಡೆಸಿದರು. ಭದ್ರತಾ ಪಡೆ ಸಿಬ್ಬಂದಿ ಕೂಡ ಪ್ರತಿ ದಾಳಿ ನಡೆಸಿದಾಗ ಇಬ್ಬರು ಉಗ್ರರು ಹತರಾದರು. ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿ ಹಾಗೂ ಒಬ್ಬ ಯೋಧ ಗಾಯಗೊಂಡರು.

ರಿಯಾಸಿ ದಾಳಿ ಉಗ್ರರಿಗೆ ನೆರವು; ಒಬ್ಬ ಸೆರೆ

ರಿಯಾಸಿಯಲ್ಲಿ ಯಾತ್ರಿಕರ ಬಸ್ ಮೇಲೆ ಉಗ್ರ ದಾಳಿ ನಡೆಸಿದ ಪ್ರಕರಣದಲ್ಲಿ ರಜೌರಿ ನಿವಾಸಿ ಆರೋಪಿ ಹಾಕಿಮ್ ದಿನ್ ಎಂಬಾತನನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ. ಉಗ್ರರಿಗೆ ದಾಳಿಗೆ ಬೇಕಾದ ವಸ್ತುಗಳನ್ನು ಆರೋಪಿ ಸರಬರಾಜು ಮಾಡಿದ್ದ ಎಂದು ರಿಯಾಸಿ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಡೆಪ್ಯುಟಿ ಸ್ಪೀಕರ್ ಹುದ್ದೆ ಸ್ವೀಕಾರಕ್ಕೆ ಮೈತ್ರಿಪಕ್ಷಗಳ ಸಮ್ಮತಿ

ಮೋದಿ ಸೂಚಿಸಿದವರೇ ಸ್ಪೀಕರ್: ಎನ್‌ಡಿಎ

ದೆಹಲಿ: ಲೋಕಸಭಾ ಸ್ಪೀಕರ್ ಚುನಾವಣೆ ಸದ್ಯದಲ್ಲೇ ನಡೆಯಲಿದ್ದು, ಜೆಡಿಯು ಮತ್ತು ಟಿಡಿಪಿ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ಪಕ್ಷಗಳು ಈ ಅವಕಾಶವನ್ನು ಹೇಗೆ ಬಳಸಿಕೊಳ್ಳಲಿವೆಯೋ? ಎಂಬ ಕುತೂಹಲಕ್ಕೆ ತೆರೆಬಿದ್ದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸ್ಪೀಕರ್ ಹುದ್ದೆಗೆ ಯಾರನ್ನೇ ಆಯ್ಕೆ ಮಾಡಿದರೂ ನಮ್ಮ ಸಮ್ಮತಿ ಇದೆ ಎಂದು ಎನ್‌ಡಿಎ ಮೈತ್ರಿಕೂಟದ ಎಲ್ಲಾ ಪಕ್ಷಗಳ ನಾಯಕರು ಒಕ್ಕೊರಲ ಘೋಷಣೆ ಮಾಡಿದ್ದಾರೆ.

ಲೋಕಸಭಾ ಸ್ಪೀಕರ್ ಆಯ್ಕೆ ವಿಚಾರವಾಗಿ ಸಲಹೆ ಮತ್ತು ಅದ್ಯತೆ ಸ್ವೀಕರಿಸಲು ಮೈತ್ರಿಪಕ್ಷಗಳ ನಾಯಕರ ಸಭೆಯನ್ನು ಬುಧವಾರ ದೆಹಲಿಯಲ್ಲಿ ಕರೆಯಲಾಗಿತ್ತು. ಸಭೆಯಲ್ಲಿ ಹಲವು ಪಕ್ಷಗಳು ಯಾವುದೇ ನಿರ್ದಿಷ್ಟ ವ್ಯಕ್ತಿಯನ್ನು ಸ್ಪೀಕರ್ ಹುದ್ದೆಗೆ ಸೂಚಿಸಲಿಲ್ಲ. ಕೆಲ ಪಕ್ಷಗಳ ನಾಯಕರಂತೂ ಪ್ರಧಾನಿ ಮೋದಿ ಅವರು ಯಾರನ್ನೇ ಸ್ಪೀಕರ್ ಸ್ಥಾನಕ್ಕೆ ಆಯ್ಕೆ ಮಾಡಿದರೂ ಅವರನ್ನು ಬೆಂಬಲಿಸುತ್ತೇವೆ ಎಂದು ಹೇಳಿದವು.

ಎನ್‌ಡಿಎ ಮೈತ್ರಿಕೂಟ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಘಟಿತ ಘಟಕ. ಹೀಗಾಗಿ ಲೋಕಸಭಾ ಸ್ಪೀಕರ್ ಯಾರಾಗಬೇಕು ಎಂಬ ನಿರ್ಧಾರವನ್ನು ಅವರೇ ತೆಗೆದುಕೊಳ್ಳಲಿ. ಮೋದಿ ನಿರ್ಧಾರಕ್ಕೆ ಮೈತ್ರಿಪಕ್ಷಗಳ ಸಮ್ಮತಿ ಇದೆ ಎಂದು ಮುಖಂಡರು ಹೇಳಿದ್ದಾಗಿ ವರದಿಯಾಗಿದೆ.

ಡೆಪ್ಯೂಟಿ ಸ್ಪೀಕರ್ ಸ್ಥಾನವನ್ನು ಒಂದು ಮೈತ್ರಿ ಪಕ್ಷಕ್ಕೆ ನೀಡಲು ಬಿಜೆಪಿ ನಿರ್ಧರಿಸಿದೆ. ಈ ಹುದ್ದೆಗೆ ಮೈತ್ರಿಪಕ್ಷಗಳು ತಮ್ಮ ಆದ್ಯತೆಯ ಹೆಸರನ್ನು ಸೂಚಿಸಬೇಕಿದೆ ಎಂಬ ಮಾತುಗಳು ಕೇಳಿಬಂದಿವೆ.

2014 ಮತ್ತು 2019ರಲ್ಲಿ ಬಿಜೆಪಿಗೆ ಪೂರ್ಣ ಬಹುಮತವಿದ್ದ ಕಾರಣ ಆಗಿನ ಸಂದರ್ಭ ಬೇರೆ ರೀತಿ ಇತ್ತು. ಈಗ ಸಾಕಷ್ಟು ಸದಸ್ಯಬಲ ಹೊಂದಿರುವ ಬಲಿಷ್ಠ ಪ್ರತಿಪಕ್ಷವಿದೆ. ಹೀಗಾಗಿ ಈ ಬಾರಿಯ ಲೋಕಸಭಾ ಸ್ಪೀಕರ್ ಸ್ಥಾನ ಬಹಳ ಮಹತ್ವದ್ದಾಗಿರಲಿದೆ. ಸಮರ್ಥರನ್ನೇ ಆರಿಸಿ ಎಂದು ಮೈತ್ರಿಪಕ್ಷಗಳು ಬಿಜೆಪಿಗೆ ಸಲಹೆ ನೀಡಿವೆ.

ತಾಪದಲ್ಲಿ ಕುದಿಯುತ್ತಿದೆ ಮೆಕ್ಕಾ; 550 ಹಜ್ ಯಾತ್ರಿಗಳ ಸಾವು

ಪವಿತ್ರ ನಾಡಲ್ಲಿ 52 ಡಿಗ್ರಿ ಸೆಲ್ಸಿಯಸ್‌ಗೇರಿದ ತಾಪಮಾನ

ಜೆರುಸಲೇಮ್: ಉತ್ತರ ಭಾರತ ಹೀಟ್‌ವೇವ್‌ನಿಂದ ತತ್ತರಿಸಿದಂತೆ ಸೌದಿ ಅರೇಬಿಯಾದಲ್ಲೂ ತಾಪಮಾನ ಭಾರಿ ಏರಿಕೆ ಕಂಡಿದ್ದು ಮೆಕ್ಕಾಗೆ ಹಜ್ ಯಾತ್ರೆ ಕೈಗೊಂಡವರಲ್ಲಿ 550 ಮಂದಿ ಬಿಸಿಗಾಳಿ ಹೊಡೆತಕ್ಕೆ ಬಲಿಯಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮುಸ್ಲಿಮರ ಪವಿತ್ರ ಧಾರ್ಮಿಕ ಸ್ಥಳ ಮೆಕ್ಕಾದಲ್ಲಿ ಯಾತ್ರೆ ತೆರಳಿದವರ ಆರೋಗ್ಯದ ಬಗ್ಗೆ ಆತಂಕ ಸೃಷ್ಟಿಯಾಗಿದೆ. ಈ ಬಾರಿ ಮೆಕ್ಕಾದಲ್ಲಿ ತೀವ್ರ ಶಾಖದ ವಾತಾವರಣ ಸೃಷ್ಟಿಯಾಗಿದ್ದು ಯಾತ್ರೆಗೆ ಬರುವವರಿಗೆ ಸಂಕಷ್ಟ ತಂದೊಡ್ಡಿದೆ.

ಮೃತಪಟ್ಟ 550 ಜನರಲ್ಲಿ ಬಹುತೇಕರು ಶಾಖ ಸಂಬಂಧಿ ಆರೋಗ್ಯ ಸಮಸ್ಯೆಯಿಂದಲೇ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ. 550 ಯಾತ್ರಿಕರಲ್ಲಿ 323 ಮಂದಿ ಈಜಿಪ್ಟ್ ನವರಾಗಿದ್ದರೆ, 60 ಮಂದಿ ಜೋರ್ಡನ್ ಮೂಲದವರು ಎಂದು ತಿಳಿದುಬಂದಿದೆ.

ಧಾರ್ಮಿಕ ಕೇಂದ್ರದಲ್ಲಿ ಪ್ರತಿ ದಶಕಕ್ಕೊಮ್ಮೆ 0.4 ಡಿಗ್ರಿ ಸೆಲ್ಸಿಯಸ್ ತಾಪಮಾನ ಏರಿಕೆಯಾಗುತ್ತಿದೆ ಎಂದು ಸೌದಿ ಮೂಲದ ಹವಾಮಾನ ಸಂಸ್ಥೆ ಮಾಹಿತಿ ನೀಡಿದೆ. ಶಾಖದ ಹೊಡೆತದಿಂದ ಬಳಲುತ್ತಿರುವ 2 ಸಾವಿರ ಯಾತ್ರಿಗಳಿಗೆ ಚಿಕಿತ್ಸೆ ನೀಡಿರುವುದಾಗಿ ಸೌದಿ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಬಾರಿಯೂ ಹಜ್ ಯಾತ್ರೆ ಸಂದರ್ಭ 240 ಯಾತ್ರಿಕರು ಬಿಸಿಗಾಳಿ ಹೊಡೆತದಿಂದ ಮೃತಪಟ್ಟಿದ್ದರು.

ಮೆಕ್ಕಾ ಪ್ರವಾಸ ವೇಳೆ ತಮ್ಮ ದೇಶದ ನಾಗರಿಕರೂ ಮೃತಪಟ್ಟಿದ್ದಾರೆಂದು ಇಂಡೋನೇಶಿಯಾ, ಇರಾನ್ ಕೂಡ ಮಾಹಿತಿ ನೀಡಿವೆ.

ಈ ಬಾರಿಯ ಹಜ್ ಯಾತ್ರೆ ವೇಳೆ 18 ಲಕ್ಷ ಯಾತ್ರಿಕರು ಮೆಕ್ಕಾಗೆ ಭೇಟಿ ನೀಡಿದ್ದಾರೆ. ಅವರಲ್ಲಿ 16 ಲಕ್ಷ ಜನ ವಿದೇಶಿಯರಾಗಿದ್ದಾರೆ.

ನಿಗಾ ದೊಡ್ಡ ಸವಾಲು

ಅಕ್ರಮವಾಗಿ ಹಜ್ ಯಾತ್ರೆಗೆ ಬರುವವರ ಆರೋಗ್ಯದ ಮೇಲೆ ನಿಗಾ ಇಡುವುದು ಹಣಕಾಸಿನ ಸಮಸ್ಯೆ ಹಿನ್ನೆಲೆ ದೊಡ್ಡ ಸವಾಲಾಗಿದೆ. ಅನುಮತಿ ಇಲ್ಲದೇ ಇದ್ದರೂ ಯಾತ್ರೆ ಬರುವವರು ಎಲ್ಲೂ ತಮ್ಮ ಹೆಸರು ನೋಂದಾಯಿಸಿಕೊಳ್ಳದ ಕಾರಣ ಅವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವುದೇ ಕಷ್ಟ. ಅಧಿಕೃತ ಮಾರ್ಗಗಳ ಮೂಲಕ ಹಜ್ ಯಾತ್ರೆಗೆ ಆಗಮಿಸುವವರಿಗೆ ನೀಡುವ ಎಸಿ ಸೌಲಭ್ಯ ಮತ್ತು ಆಹಾರ ಪೂರೈಕೆ ಅನುಮತಿ ಇಲ್ಲದೇ ಬರುವವರಿಗೆ ಸಿಗುವುದಿಲ್ಲ. ಹಾಗಾಗಿ ಹಲವರು ಸಮರ್ಪಕ ಆಹಾರ ವ್ಯವಸ್ಥೆ ಇಲ್ಲದೇ ಬಳಲುತ್ತಾರೆ. ಅಕ್ರಮ ಯಾತ್ರಿಕರು ಸರಿಯಾದ ಆಶ್ರಯ ತಾಣಗಳು ಸಿಗದೇ ಬಿಸಿಲಿನ ಝಳಕ್ಕೆ ಸಿಲುಕಿ ಸಾವನ್ನಪ್ಪುವ ಸಂಖ್ಯೆ ಹೆಚ್ಚಿದೆ. ಅಕ್ರಮ ಯಾತ್ರಿಕರ ಕಾರಣದಿಂದಾಗಿಯೇ ಈ ಬಾರಿ ಹಜ್ ಯಾತ್ರಿಕರ ಸಾವಿನ ಸಂಖ್ಯೆ ಹೆಚ್ಚಿದೆ ಎನ್ನಲಾಗಿದೆ.

ಛತ್ರಿ ಬಳಸಲು ಸೂಚನೆ

ಬಿಸಿಲಲ್ಲಿ ಹೆಚ್ಚು ಓಡಾಡದಂತೆ ಯಾತ್ರಿಕರಿಗೆ ಸೌದಿ ಆಡಳಿತ ಮನವಿ ಮಾಡಿದೆ. ಸೂಕ್ತ ಪ್ರಮಾಣದಲ್ಲಿ ನೀರು, ಆಹಾರ ಸೇವಿಸುವಂತೆ, ಹೊರಗೆ ಓಡಾಡಲೇಬೇಕಾದಾಗ ತಪ್ಪದೇ ಛತ್ರಿ ಬಳಸುವಂತೆ ಸೂಚನೆ ನೀಡಿದೆ. ಆದರೆ ಮೌಂಟ್ ಅರಾಫತ್ ಮೇಲೆ ಯಾತ್ರಿಕರು ಸೂರ್ಯನ ಪ್ರಕರ ಬಿಸಿಲಿನಲ್ಲಿಯೇ ಪ್ರಾರ್ಥನೆ ಸಲ್ಲಿಸಬೇಕಾಗುತ್ತದೆ. ಅದು ಅನಿವಾರ್ಯವಾಗಿದೆ. ಮೆಕ್ಕಾಗೆ ಭೇಟಿ ನೀಡಿದವರಲ್ಲಿ ಬಹಳಷ್ಟು ಮಂದಿ ನಿತ್ರಾಣವಾಗಿ ರಸ್ತೆ ಬದಿ ಕೂತಿದ್ದನ್ನು ಕಂಡಿದ್ದೇವೆಂದು ಪ್ರವಾಸಿಗರು ಹೇಳಿದ್ದಾಗಿ ವರದಿಯಾಗಿದೆ.

₹100 ಕೋಟಿ ಲಂಚಕ್ಕೆ ಸಿಎಂ ಕೇಜ್ರಿವಾಲ್ ಬೇಡಿಕೆ

ದೆಹಲಿ: ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) 100 ಕೋಟಿ ರು. ನೀಡುವಂತೆ ಲಂಚ ಹಣಕ್ಕೆ ಸೌಥ್ ಗ್ರೂಪ್‌ಗೆ ದೆಹಲಿ ಮುಖ್ಯಮಂತ್ರಿ, ಎಎಪಿ ಮುಖಂಡ ಅರವಿಂದ್ ಕೇಜ್ರಿವಾಲ್ ಬೇಡಿಕೆ ಇಟ್ಟಿದ್ದರು ಎಂದು ಜಾರಿ ನಿರ್ದೇಶನಾಲಯ ಬುಧವಾರ

ನ್ಯಾಯಾಲಯದಲ್ಲಿ ಹೇಳಿಕೆ ಸಲ್ಲಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕೇಜ್ರಿವಾಲ್ ಸಲ್ಲಿಸಿದ್ದ ಸಾಮಾನ್ಯ ಜಾಮೀನು ಅರ್ಜಿಗೆ ವಿರೋಧ ವ್ಯಕ್ತಪಡಿಸಿದೆ.

'ಎಎಪಿ' ಪ್ರಕರಣದಲ್ಲಿ ಆರೋಪಿಯಾಗಿದೆ. ಪಕ್ಷದ ಅಪರಾಧ ಎಸಗಿದರೆ ಪಕ್ಷದ ಉಸ್ತುವಾರಿ ಹೊತ್ತಿರುವ ಎಲ್ಲಾ ವ್ಯಕ್ತಿಗಳನ್ನು ತಪಿತಸ್ಥರೆಂದು ಪರಿಗಣಿಸಲಾಗುವುದು ಎಂದು ಕೇಂದ್ರ ತನಿಖಾ ಸಂಸ್ಥೆ ನ್ಯಾಯಾಲಯಕ್ಕೆ ತಿಳಿಸಿದೆ. ಮಾಜಿ ಡಿಸಿಎಂ ಮನೀಶ್ ಸಿಸೋಡಿಯರನ್ನು ಇದೇ ಪ್ರಕರಣದಲ್ಲಿ ಆರೋಪಿಯಾಸಿದಾಗ 'ಎಎಪಿ'ಯನ್ನಿನ್ನೂ ಆರೋಪಿ ಎಂದು ಹೆಸರಿಸಿರಲಿಲ್ಲ ಎಂದು ಇ.ಡಿ ತಿಳಿಸಿದೆ.

ಕೇಜ್ರಿವಾಲ್ ಎಎಪಿ ರಾಷ್ಟ್ರೀಯ ವಕ್ತಾರರಾಗಿರುವುದರಿಂದ ಪಕ್ಷ ಮಾಡಿದ ಅಪರಾಧದಲ್ಲಿ ಅವರೂ ಭಾಗಿ ಎಂದು ಇ.ಡಿ ನ್ಯಾಯಾಲಯಕ್ಕೆ ತಿಳಿಸಿದೆ. ಜಾಮೀನು ಅರ್ಜಿ ವಿಚಾರಣೆ ಗುರುವಾರ ಮುಂದುವರಿಯಲಿದೆ.

5 ಲಕ್ಷ ಅಕ್ರಮ ವಾಸಿಗೆ ಅಮೆರಿಕದ ಪೌರತ್ವ

ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷೀಯ ಚುನಾವಣೆ ಸಮೀಪಿಸುತ್ತಿರುವ ಸಮಯದಲ್ಲಿ ಪೌರತ್ವ ವಿಚಾರದಲ್ಲಿ ಶ್ವೇತಭವನ ಮಹತ್ವದ ನಿರ್ಧಾರ ಪ್ರಕಟಿಸಿದೆ. ಕಾನೂನು ಮಾನ್ಯತೆ ಇಲ್ಲದೇ ದೇಶದಲ್ಲಿ ಅಕ್ರಮವಾಗಿ ನೆಲೆಸಿರುವ 5 ಲಕ್ಷ



ಜನರಿಗೆ ಪೌರತ್ವ ನೀಡುವುದಾಗಿ ಶ್ವೇತಭವನ ಬುಧವಾರ ತಿಳಿಸಿದೆ.

ಅಮೆರಿಕ ಪೌರತ್ವ ಪಡೆದಿರುವ ನಾಗರಿಕರ ಸಂಗಾತಿಗಳಿಗೆ ಕಾನೂನಾತ್ಮಕ ಸ್ಥಾನಮಾನ ಕಲ್ಪಿಸುವ ಯೋಜನೆಯನ್ನು ಅಧ್ಯಕ್ಷ ಜೋ ಬೈಡನ್ ಅವರ ಆಡಳಿತ ಘೋಷಿಸಿದೆ. ಈ ಯೋಜನೆಯಲ್ಲಿ ಅಮೆರಿಕ ಗ್ರೀನ್ ಕಾರ್ಡ್ ಹೊಂದಿರುವವರನ್ನು ಮದುವೆಯಾದವರಿಗೆ ದೇಶದ ಪೌರತ್ವ ಸಿಕ್ಕಿಲ್ಲದಿದ್ದರೆ ಅಂತಹವರು ಪೌರತ್ವಕ್ಕೆ ಅರ್ಜಿ ಸಲ್ಲಿಸಬಹುದೆಂದು ಸರಕಾರ ತಿಳಿಸಿದೆ.

ಯಾರು ಅರ್ಹರು?: 2024ರ ಜೂ.17ಕ್ಕೂ ಮುಂಚಿನ 10 ವರ್ಷ ಅಮೆರಿಕದಲ್ಲಿ ನೆಲೆಸಿರುವವರು, ಅಮೆರಿಕ ಪೌರತ್ವ ಹೊಂದಿರುವವರನ್ನು ಮದುವೆಯಾದವರು ಈ ಯೋಜನೆಯಡಿ ಪೌರತ್ವ ಪಡೆಯಲು ಅರ್ಹರು. ದಂಪತಿಯ ಮಕ್ಕಳೂ ಹೊಸ ಯೋಜನೆಯಡಿ ಪೌರತ್ವ ಪಡೆಯಬಹುದಾಗಿದೆ. ಇಂಥ 50 ಸಾವಿರ ಮಕ್ಕಳಿಗೆ ಇದರ ಪ್ರಯೋಜನ ಲಭಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲು ಹಳಿ ಸುರಕ್ಷತೆ; 18 ಸಾವಿರ ಹುದ್ದೆಗೆ ನೇಮಕ

ದೆಹಲಿ: ಭಾರತೀಯ ರೈಲ್ವೆ 18 ಸಾವಿರಕ್ಕೂ ಹೆಚ್ಚು ಸಹಾಯಕ ಲೋಕೋ ಪೈಲಟ್ ನೇಮಿಸಿಕೊಳ್ಳುವುದಾಗಿ ಘೋಷಿಸಿದೆ.

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಬಳಿ ಕಾಂಚನಜಂಗಾ ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ 9 ಜನ ಸಾವಿಗೀಡಾದ ಹಿನ್ನೆಲೆ

ಪ್ರಯಾಣಿಕರ ಸುರಕ್ಷತೆ ಖಚಿತಪಡಿಸಿಕೊಳ್ಳಲು ಹಾಗೂ ಭವಿಷ್ಯದಲ್ಲಿ ಅಪಘಾತ ತಪ್ಪಿಸಲು 18,799 ಸಹಾಯಕ ಲೋಕೊ ಪೈಲಟ್‌ಗಳನ್ನು ನೇಮಿಸಿಕೊಳ್ಳಲು ನಿರ್ಧರಿಸಲಾಗಿದೆ.

ರೈಲು ಚಾಲಕ, ಇನ್‌ಸ್ಪೆಕ್ಟರ್, ಸಿಬ್ಬಂದಿ ನಿಯಂತ್ರಕ, ಲೋಕೋ ಇನ್‌ಸ್ಟ್ರಕ್ಟರ್, ರೈಲು ನಿಯಂತ್ರಕ, ಟ್ರ್ಯಾಕ್ ನಿರ್ವಾಹಕ, ಸ್ಟೇಷನ್ ಮಾಸ್ಟರ್, ಪಾಯಿಂಟ್‌ಮನ್, ಎಲೆಕ್ಟ್ರಿಕ್ ಸಿಗ್ನಲ್ ನಿರ್ವಾಹಕ, ಸಿಗ್ನಲಿಂಗ್ ಮೇಲ್ವಿಚಾರಕ ಹುದ್ದೆಗಳಿಗೆ ನೇಮಕ ನಡೆಯಲಿದೆ. ಹುದ್ದೆ ನೇಮಕ ಅಧಿಸೂಚನೆ ಹೊರಡಿಸಿ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ದೈಹಿಕ ಸಾಮರ್ಥ್ಯ ಮತ್ತು ವೈದ್ಯಕೀಯ ತಪಾಸಣೆ ನಡೆಸಬೇಕಿರುವುದರಿಂಧ ಖಾಲಿ ಹುದ್ದೆಗಳ ಭರ್ತಿಗೆ 6 ತಿಂಗಳು ಬೇಕಾಗಬಹುದು ಎಂದು ನಿರೀಕ್ಷಿಸಲಾಗಿದೆ. ಸುರಕ್ಷತಾ ವಿಭಾಗ ದಡಿ 10 ಲಕ್ಷ ಹುದ್ದೆಗಳು ಮಂಜೂರಾಗಿವೆ. ಸದ್ಯ 1.5 ಲಕ್ಷ ಹುದ್ದೆಗಳಿಗೆ ನೇಮಕ ಮಾಡಬಹುದಾಗಿದೆ ಎಂದು ಸಚಿವಾಲಯ ಆರ್‌ಟಿಐ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ತಿಳಿದುಬಂದಿದೆ.

ಜೂನ್ ಶೇ.20ರಷ್ಟು ವಾಡಿಕೆ ಮಳೆ ಕೊರತೆ

ದೆಹಲಿ: ಜೂ.1ರಿಂದ ನೈರುತ್ಯ ಮುಂಗಾರು ಋತು ಆರಂಭವಾಗಿದ್ದರೂ ಈ ಬಾರಿ ವಾಡಿಕೆಯಷ್ಟೂ ಮಳೆಯಾಗಿಲ್ಲ. ಜೂನ್ ಅವಧಿಯ ವಾಡಿಕೆ ಮಳೆಯಲ್ಲಿ ಶೇ.20ರಷ್ಟು ಕೊರತೆಯಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಬುಧವಾರ ಮಾಹಿತಿ ನೀಡಿದೆ.

ಉತ್ತರ ಭಾರತದಲ್ಲಿ ಬಿಸಿಗಾಳಿ ಆರ್ಭಟಿಸುತ್ತಿದೆ. ಇನ್ನೊಂದೆಡೆ ಮಳೆ ಕೊರತೆ ದೇಶದಲ್ಲಿ ಜನರನ್ನು ಸಂಕಷ್ಟಕ್ಕೆ ದೂಡಿದೆ. ಮೇ 30ರಂದು ನೈರುತ್ಯ ಮುಂಗಾರು ಕೇರಳ ಪ್ರವೇಶ ಮಾಡಿದೆ. ಆದರೆ ನಿರೀಕ್ಷಿಸಿದಷ್ಟು ಮಳೆ ಆಗಿಲ್ಲ. ಜೂ.13ರಿಂದ 18ರ ನಡುವೆ ಮುಂಗಾರಿನಲ್ಲಿ ಯಾವುದೇ ಪ್ರಗತಿಯಾಗಿಲ್ಲ ಎಂದು ವರದಿ ತಿಳಿಸಿದೆ. ಸದ್ಯ ಮುಂಗಾರು ಚುರುಕುಗೊಳ್ಳುವ ಹಂತದಲ್ಲಿದ್ದು ಮಹಾರಾಷ್ಟ್ರ, ಛತ್ತೀಸ್‌ಗಢ, ಒಡಿಶಾ, ಆಂಧ್ರಪ್ರದೇಶ ಕರಾವಳಿ, ಬಂಗಾಳ ಕೊಲ್ಲಿ, ಬಿಹಾರ, ಜಾರ್ಖಂಡ್ ಭಾಗಗಳಲ್ಲಿ ಮುಂದಿನ 3-4 ದಿನ ಉತ್ತಮ ಮಳೆ ನಿರೀಕ್ಷಿಸಲಾಗಿದೆ. ಕರ್ನಾಟಕದ ಬೆಂಗಳೂರು, ಚಿಕ್ಕಮಗಳೂರು, ದಾವಣಗೆರೆ, ಚಾಮರಾಜನಗರ, ಧಾರವಾಡ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಜೂ.25ರವರೆಗೆ ಜೋರು ಮಳೆ ನಿರೀಕ್ಷಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಒಡಿಶಾ ಪ್ರತಿಪಕ್ಷದ ನಾಯಕ ಪಟ್ನಾಯಕ್

ಭುವನೇಶ್ವರ: ಒಡಿಶಾ ವಿಧಾನಸಭೆ ಪ್ರತಿಪಕ್ಷ ನಾಯಕರಾಗಿ ಪಕ್ಷದ ಶಾಸಕರು ನನ್ನನ್ನು ಆಯ್ಕೆ ಮಾಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಬುಧವಾರ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಪಟ್ನಾಯಕ್, ಬಿಜೆಡಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರು ನನ್ನನ್ನು ಪ್ರತಿಪಕ್ಷದ ನಾಯಕ ಮತ್ತು ಬಿಜೆಡಿ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಿದ್ದಾರೆ. ನಾನು ಅವರಿಗೆ ಅಭಿನಂದನೆ ಸಲ್ಲಿಸಿದ್ದೇನೆ ಎಂದರು. ಹಿರಿಯ ಶಾಸಕ ಪ್ರಸನ್ನ ಆಚಾರ್ಯ ಪ್ರತಿಪಕ್ಷ ಉಪ ನಾಯಕ ಮತ್ತು ಮಾಜಿ ಸ್ಪೀಕರ್ ಪ್ರಮೀಳಾ ಮಲ್ಲಿಕ್ ಸದನದಲ್ಲಿ ಪ್ರತಿಪಕ್ಷದ ಮುಖ್ಯ ಸಚೇತಕಿಯಾಗಿ ನೇಮಕ ಮಾಡಲಾಗಿದೆ. ಪ್ರತಾಪ್ ಕೇಶರಿ ದೇಬ್ ಅವರನ್ನು ವಿಧಾನಸಭೆ ಪ್ರತಿಪಕ್ಷದ ಉಪ ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿದೆ ಎಂದರು.

ಇಂದು ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಜೂ.20ರಂದು ಬೆಳಗ್ಗೆ 9.30ರಿಂದ 11.00 ಗಂಟೆಗೆ ನೀರಿನ ಅದಾಲತ್ ಆಯೋಜಿಸಿದೆ ಎಂದು ಮಂಡಳಿ ತಿಳಿಸಿದೆ. ನಗರದ (ವಾಯುವ್ಯ-2), (ವಾಯುವ್ಯ-4), (ಕೇಂದ್ರ-1-2), (ಈಶಾನ್ಯ-2), (ಉತ್ತರ-1-2), (ಉತ್ತರ-2-2), (ದಕ್ಷಿಣ-1-2), (ದಕ್ಷಿಣ-2-2), (ನೈರುತ್ಯ-2), (ನೈರುತ್ಯ-5) (ಪೂರ್ವ-1-3) ಮತ್ತು (ಪೂರ್ವ-2-3) ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ದೂರು ನೀಡಬಹುದು ಹಾಗೂ ವಾಟ್ಸ್ ಅಪ್ ನಂಬರ್ 8762228888 ಗೆ ಸಂದೇಶದ ಮೂಲಕ ದೂರು ದಾಖಲಿಸಬಹುದು ಎಂದು ತಿಳಿಸಿದೆ.

ಎಚ್‌ಎಸ್‌ಆರ್‌ಪಿ ಗಡುವು ವಿಸ್ತರಣೆ

ಬೆಂಗಳೂರು: ರಾಜ್ಯ ಸರಕಾರವು ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಕೆ ಗಡುವನ್ನು ಸೆಪ್ಟೆಂಬರ್ 15ರವರೆಗೆ ವಿಸ್ತರಣೆ ಮಾಡಿ ಆದೇಶಿಸಿದೆ. ಕೇಂದ್ರ ಸರಕಾರದ ಆದೇಶದ ಮೇರೆಗೆ ರಾಜ್ಯ ಸರಕಾರವು ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಸುವುದನ್ನು ಕಡ್ಡಾಯಗೊಳಿಸಿದ್ದು, ಕರ್ನಾಟಕದಲ್ಲಿ ಈಗಾಗಲೇ ಈ ಆದೇಶವನ್ನು ಜಾರಿಗೆ ತರಲಾಗಿದೆ. ಈಗಾಗಲೇ ಅನೇಕ ವಾಹನ ಸವಾರರು ತಮ್ಮ ನಂಬರ್ ಪ್ಲೇಟ್‌ನ್ನು ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್‌ಗೆ ಬದಲಾವಣೆ ಮಾಡಿಕೊಂಡಿದ್ದು, ಇನ್ನೂ ಹಲವರು ಮಾಡಿಲ್ಲ. ಈ ಹಿಂದೆ ಕರ್ನಾಟಕ ಹೈಕೋರ್ಟ್ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಮಾಡದವರ ವಿರುದ್ಧ ಜುಲೈ 4ರವರೆಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳದಂತೆ ಸೂಚನೆ ನೀಡಿದ್ದು, ಗಡುವನ್ನು ವಿಸ್ತರಿಸಲು ಅನುಮತಿಯನ್ನು ನೀಡಿತ್ತು. ಅದರಂತೆ ರಾಜ್ಯ ಸರಕಾರವು ಅವಧಿಯನ್ನು ವಿಸ್ತರಿಸಿದ್ದು, ಸೆಪ್ಟೆಂಬರ್ 15ರವರೆಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಕೆಗೆ ಗಡುವು ವಿಸ್ತರಣೆ ಮಾಡಿ ಆದೇಶಿಸಿದೆ.

ನಟ ಪ್ರಥಮ್‌ಗೆ ಜೀವ ಬೆದರಿಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಬಂಧನದ ಬಗ್ಗೆ ಮಾತನಾಡಿದ್ದಕ್ಕೆ ನಟ, ಬಿಗ್ ಬಾಸ್ ಮಾಜಿ ಸ್ಪರ್ಧಿ ಪ್ರಥಮ್‌ಗೆ ದರ್ಶನ್ ಅಭಿಮಾನಿಗಳು ಜೀವ ಬೆದರಿಕೆ ಹಾಕಿರುವ ಹಿನ್ನೆಲೆಯಲ್ಲಿ ಈ ಬಗ್ಗೆ



ಕ್ರಮ ಕೈಗೊಳ್ಳಬೇಕು ಎಂದು ಜ್ಞಾನಭಾರತಿ ನಗರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ರೇಣುಕ ಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಬಂಧನವಾಗಿದ್ದರೂ ಅವರ ಅಭಿಮಾನಿಗಳು ಸಮರ್ಥಿಸಿಕೊಳ್ಳುತ್ತಿರುವ ಬಗ್ಗೆ ಇತ್ತೀಚೆಗೆ ನಟ ಪ್ರಥಮ್ ಕಿಡಿಕಾರಿದ್ದರು. ನನಗೆ ಒಂದು ವಾರ ಪೊಲೀಸ್ ಕಾನ್‌ಸ್ಟೇಬಲ್ ಆಗಲು ಅವಕಾಶ ಕೊಟ್ಟರೆ, ದರ್ಶನ್ ಅಂಧ ಅಭಿಮಾನಿಗಳಿಗೆ ನಾಯಿಗೆ ಹೊಡೆದಂಗೆ ಹೊಡೆಯುತ್ತೇನೆ. ಆ ಪೊಲೀಸ್ ಸ್ಟೇಷನ್ ಬಳಿ ಇದ್ದವರಲ್ಲಿ ಒಬ್ಬನಾದರೂ ಅವರ ತಾಯಿಗೆ ಒಂದು ಹೊತ್ತು ಊಟ ಕೊಡಿಸಲು ಯೋಗ್ಯತೆ ಇಲ್ಲ ಎಂದು ಆಕ್ರೋಶ ಹೊರಹಾಕಿದ್ದರು. ಹೀಗಾಗಿ ಪ್ರಥಮ್‌ಗೆ ನಟ ದರ್ಶನ್ ಅಭಿಮಾನಿಗಳಿಂದ ಬೆದರಿಕೆ ಕರೆಗಳು ಬರುತ್ತಿವೆ ಎಂದು ದೂರಿದ್ದಾರೆ.

ಯಾರಿಗೋಸ್ಕರವೋ ಜೀವನ ಹಾಳು ಮಾಡಿಕೊಳ್ಳಬೇಡಿ: ದೂರು ನೀಡಿದ ಬಳಿಕ ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಪ್ರಥಮ್ ಅವರು, ಜೀವನ ಬಹಳ ದೊಡ್ಡದು, ಯಾರಿಗೋಸ್ಕರವೋ ನೀವು ಅದನ್ನ ಹಾಳು ಮಾಡಿಕೊಳ್ಳಬೇಡಿ. ನಾನು ತುಂಬಾ ಶಾಂತಿಯಿಂದಲೇ ಇದ್ದೆ, ನೀವು ಅತಿಯಾಗಿ ನಮ್ಮ ಕರ್ನಾಟಕದ ಅಳಿಯ ತಂಡದ ಆಫೀಸ್ ನೋಗೆ ಕಾಲ್ ಮಾಡಿ ಬೆದರಿಕೆ ಹಾಕುತ್ತಲೇ ಬಂದಿದ್ದೀರಿ. ಬದುಕು ಸುಂದರವಾದದ್ದು, ಅಂಧಾಭಿಮಾನಿಗಳೇ ನಿಮ್ಮ ತಂದೆ ತಾಯಿಗಳಿಗೆ ಮೀಸಲಿಡಿ. ಯಾರಿಗೋಸ್ಕರವೋ ಹಾಳುಮಾಡಿಕೊಳ್ಳಬೇಡಿ. ಕನ್ನಡಕ್ಕಾಗಿ, ಕಾವೇರಿಗಾಗಿ, ಸಂಸ್ಕೃತಿ ಉಳಿಸೋಕೆ ಬೇಕಾದರೆ ಜೈಲಿಗೆ ಹೋಗಿ, ಯಾರಿಗೋಸ್ಕರವೋ ಜೀವನ ಹಾಳು ಮಾಡಿಕೊಳ್ಳಬೇಡಿ ಎಂದು ತಮಗೆ ಬೆದರಿಕೆ ಹಾಕಿರುವ ದರ್ಶನ್ ಅಭಿಮಾನಿಗಳಿಗೆ ಪರೋಕ್ಷವಾಗಿ ಸಲಹೆ ನೀಡಿದ್ದಾರೆ.

ಖಲಿಸ್ತಾನಿ ನಿಜ್ಜರ್ ಸಾವಿಗೆ ವರ್ಷ | ಸಂಸದರಿಂದ ಎದ್ದುನಿಂತು ಮೌನಾಚರಣೆ

ಉಗ್ರನಿಗೆ ಕೆನಡಾ ಸಂಸತ್ ಗೌರವ

ಟೊರಂಟೊ: ಕಾನಿಷ್ಕಾ ವಿಮಾನ ದುರಂತ ಪ್ರಕರಣದಲ್ಲಿ ಭಾರತದ ಪೊಲೀಸರಿಗೆ ಬೇಕಾಗಿದ್ದ ಉಗ್ರ, ಖಲಿಸ್ತಾನಿ ಹೋರಾಟಗಾರ ಕೆನಡಾ ನಿವಾಸಿ ಹರ್ದೀಪ್ ಸಿಂಗ್ ನಿಜ್ಜರ್ ಕೊಲೆಗೀಡಾಗಿ ಜೂ.18ಕ್ಕೆ ಒಂದು ವರ್ಷವಾಗಿದೆ. ಈ ಹಿನ್ನೆಲೆ ಮಂಗಳವಾರ ಕೆನಡಾ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಸಂಸದರೆಲ್ಲಾ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿ ನಿಜ್ಜರ್‌ಗೆ ಗೌರವ ಸಲ್ಲಿಸಿದ್ದಾರೆ. ಸದ್ಯ ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕೆನಡಾ ಹೌಸ್ ಆಫ್ ಕಾಮನ್ಸ್‌ನಲ್ಲಿ ಸ್ಪೀಕರ್ ಗ್ರೆಗ್ ಫರ್ಗುಸ್ ಮಾತನಾಡಿ, ವರ್ಷದ ಹಿಂದೆ ಸುರ್ರೆಯಲ್ಲಿ ಕೊಲೆಯಾದ ಹರ್ದೀಪ್ ಸಿಂಗ್ ನಿಜ್ಜರ್ ಅವರ ಸ್ಮರಣಾರ್ಥ ಮೌನ ಆಚರಿಸೋಣ ಎಂದು ಪ್ರಕಟಿಸಿದರು. ಬಳಿಕ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಮೌನ ಆಚರಿಸಿದರು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಯನ್ನು ಕೆನಡಾದಲ್ಲಿರುವ ಖಲಿಸ್ತಾನಿಗಳು ಸಂಭ್ರಮದಿಂದ ಆಚರಣೆ ಮಾಡಿದ್ದರು. ಅದಾದ ಕೆಲವೇ ದಿನಗಳಲ್ಲಿ ಖಲಿಸ್ತಾನಿ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್‌ನನ್ನು ಕೆನಡಾದ ಸುರ್ರೆ ನಗರದಲ್ಲಿ ಕೊಲ್ಲಲಾಗಿತ್ತು. ಪಂಜಾಬಿಗಳೇ ಹೆಚ್ಚಿರುವ ಸುರ್ರೆ ನಗರದ ಗುರುನಾನಕ್ ಸಿಖ್ ಗುರುದ್ವಾರದ ಬಳಿಕ ಖಲಿಸ್ತಾನಿ ಉಗ್ರನ ಹತ್ಯೆ ನಡೆದಿತ್ತು.

2023ರ ಜೂ.18ರಂದು ಕೆನಡಾದ ಸುರ್ರೆ ನಗರದಲ್ಲಿ ಖಲಿಸ್ತಾನಿ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್ ಅಪರಿಚಿತರ ಗುಂಡೇನಿಂದ ಸಾವಿಗೀಡಾಗಿದ್ದ.

ಕೆನಡಾ ಸಂಸದರ ಈ ನಡೆಯನ್ನು ಟೊರಂಟೊದಲ್ಲಿನ ಭಾರತೀಯ ದೂತಾವಾಸ ಕಚೇರಿ ತೀವ್ರವಾಗಿ ಖಂಡಿಸಿದೆ. 1985ರಲ್ಲಿ ನಡೆದಿದ್ದ ಕಾನಿಷ್ಕಾ ವಿಮಾನ ದುರಂತದಲ್ಲಿ ಮೃತರಾದವರನ್ನು ನೆನಪಿಸಿ ಜಗತ್ತಿನ ಗಮನ ಸೆಳೆಯಲು ಯತ್ನಿಸಿದೆ. ಕೆನಡಾ ಸಂಸತ್ ನಡೆಗೆ ಆಕ್ರೋಶ ವ್ಯಕ್ತಪಡಿಸಿದೆ.

ಭಾರತ ದೂತಾವಾಸ ಆಕ್ರೋಶ

ಪಂಜಾಬ್‌ನಲ್ಲಿ ಧರ್ಮಗುರುವೊಬ್ಬರ ಕೊಲೆಗೆ ಸಂಚು ನಡೆಸಿದ್ದು, ಮೂಲಭೂತವಾದ ಹರಡುತ್ತಿದ್ದುದು ಸೇರಿದಂತೆ ನಾಲ್ಕು ಅಪರಾಧ ಪ್ರಕರಣಗಳಲ್ಲಿ ನಿಜ್ಜರ್ ವಿರುದ್ಧ ಎನ್‌ಐಎ ತನಿಖೆ ನಡೆಸುತ್ತಿತ್ತು. ಅಲ್ಲದೆ ಆತನ ಕುರಿತು ಮಾಹಿತಿ ನೀಡಿದವರಿಗೆ 10 ಲಕ್ಷ ರು. ಬಹುಮಾನ ನೀಡುವುದಾಗಿಯೂ ಎನ್‌ಐಎ ಘೋಷಿಸಿತ್ತು.

ಖಲಿಸ್ತಾನ್ ಟೈಗರ್ ಫೋರ್ಸ್ ಉಗ್ರ ಸಂಘಟನೆ ಮುಖ್ಯಸ್ಥನಾಗಿದ್ದ ನಿಜ್ಜರ್, ಪ್ರತ್ಯೇಕವಾದಿಗಳಿಗೆ ಹೆಚ್ಚಿನ ನೆರವು ಒದಗಿಸುತ್ತಿದ್ದ. ಭಾರತದಲ್ಲಿ ಹಲವು ಉಗ್ರ ಚಟುವಟಿಕೆಗಳ ಹಿಂದೆ ಈತನ ಕೈವಾಡವಿದೆ. ಕೆನಡಾದಲ್ಲೂ ಸಿಖ್ ಸಮುದಾಯದವರನ್ನು ಎತ್ತಿ ಕಟ್ಟುತ್ತಿದ್ದ. ಹಾಗಾಗಿ ಈತ ಸೇರಿ 40 ಉಗ್ರರನ್ನು ಭಾರತ ಮೋಸ್ಟ್ ವಾಂಟೆಡ್ ಉಗ್ರರ ಪಟ್ಟಿಗೆ ಸೇರಿಸಿತ್ತು.

ರಾಜ್ಯದ ಯೋಜನೆಗೆ ವೇಗ ನೀಡಲು ಎಚ್‌ಡಿಕೆ ಮನವಿ

ಬೆಂಗಳೂರು: ರಾಜ್ಯದ ರೈಲ್ವೇ ಯೋಜನೆಗಳಿಗೆ ವೇಗ ನೀಡುವಂತೆ ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಕೇಂದ್ರ ರೈಲ್ವೇ ಸಚಿವ ಅಶ್ವಿನ್ ವೈಷ್ಣವ್ ಅವರನ್ನು ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಅಶ್ವಿನ್ ವೈಷ್ಣವ್ ಅವರನ್ನು ಭೇಟಿಯಾಗಿ ರಾಜ್ಯದ ರೈಲ್ವೆ ಯೋಜನೆಗಳ ಬಗ್ಗೆ ಚರ್ಚೆ ನಡೆಸಿದರು. ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ಹಾಗೂ ಹಾಲಿ ನಡೆಯುತ್ತಿರುವ ರೈಲ್ವೆ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವುದು. ಹೊಸ ರೈಲ್ವೆ ಮಾರ್ಗಗಳಿಗೆ ಅನುಮೋದನೆ ನೀಡಿ ಹಣಕಾಸು ನೆರವು ಒದಗಿಸುವ ಬಗ್ಗೆ ರೈಲ್ವೆ ಸಚಿವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದರು. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು ನನಗೆ ಬಹಳ ಸಂತೋಷ ಉಂಟು ಮಾಡಿತು ಎಂದು ಟ್ವಿಟ್ ಮಾಡಿದ್ದಾರೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಕಾಲದಲ್ಲಿ ಮಂಜೂರಾಗಿದ್ದ ಬೆಂಗಳೂರು - ಸತ್ಯಮಂಗಲ - ಚಾಮರಾಜನಗರ (ಕನಕಪುರ - ಮಳವಳ್ಳಿ ಮಾರ್ಗವಾಗಿ) ರೈಲ್ವೇ ಯೋಜನೆಯನ್ನು ಕೈಗೆತ್ತಿಕೊಂಡು ಶೀಘ್ರವಾಗಿ ಪೂರ್ಣಗೊಳಿಸಲು ರೈಲ್ವೆ ಸಚಿವರನ್ನು ಕುಮಾರಸ್ವಾಮಿ ಕೋರಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ರೈಲ್ವೆ ಸಚಿವರ ಜತೆ ಮಾಹಿತಿ ಹಂಚಿಕೊಳ್ಳಲಾಯಿತು ಎಂದು ಕುಮಾರಸ್ವಾಮಿ ತಿಳಿಸಿದರು.

ಹಜ್‌ಯಾತ್ರೆ: ಬಿಸಿಲಾಘಾತಕ್ಕೆ 68 ಭಾರತೀಯರ ಸಾವು

ಮೆಕ್ಕಾ: ಸೌದಿ ಅರೇಬಿಯದ ಮೆಕ್ಕಾದಲ್ಲಿ ಗರಿಷ್ಠ ತಾಪಮಾನ 52 ಡಿಗ್ರಿ ಸೆಲ್ಸಿಯಸ್ ಮುಟ್ಟಿದೆ. ಹಜ್ ಯಾತ್ರೆ ಕೈಗೊಂಡ ಭಾರತದವರೂ ಸೇರಿದಂತೆ ವಿವಿಧ ದೇಶಗಳ ಧಾರ್ಮಿಕ ಯಾತ್ರಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿಸಿಲಿನ ಹೊಡೆತಕ್ಕೆ ಸಿಲುಕಿ 68 ಭಾರತೀಯರು ಸೇರಿದಂತೆ 550ಕ್ಕೂ ಅಧಿಕ ಯಾತ್ರಾರ್ಥಿಗಳು ಮೃತಪಟ್ಟಿದ್ದಾರೆ.

- ಮೆಕ್ಕಾದಲ್ಲಿ 52 ಡಿ.ಸೆ. ತಲುಪಿದ ತಾಪಮಾನ
- 18 ಲಕ್ಷ ಯಾತ್ರಾರ್ಥಿಗಳು ಈ ವರ್ಷ ಭಾಗಿ
- 2,000 ಯಾತ್ರಿಕರಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ

ಭಾರತದ 68 ಯಾತ್ರಿಕರು ಮೃತಪಟ್ಟಿರುವುದನ್ನು ಮೆಕ್ಕಾ ಅಧಿಕಾರಿಗಳು ದೃಢಪಡಿಸಿದ್ದಾರೆ. ಭಾರತದ ಯಾತ್ರಿಕರಲ್ಲಿ ಹೆಚ್ಚಿನವರು ಬಿಸಿಗಾಳಿ ಹೊಡೆತದಿಂದ ಬಸವಳಿದು ಮೃತಪಟ್ಟಿದ್ದಾರೆ. ಕೆಲವರು ವಯೋಸಹಜ ಕಾಯಿಲೆಯಿಂದ ಮೃತಪಟ್ಟಿದ್ದಾರೆ ಎಂದು ರಾಜತಾಂತ್ರಿಕ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪ್ರತಿ ವರ್ಷ ಲಕ್ಷಾಂತರ ಸಂಖ್ಯೆಯ ಮುಸ್ಲಿಮರು ಪವಿತ್ರ ಕ್ಷೇತ್ರ ಮೆಕ್ಕಾಕ್ಕೆ ಭೇಟಿ ನೀಡುತ್ತಾರೆ. ಮೆಕ್ಕಾದ ಗ್ರ್ಯಾಂಡ್ ಮಸೀದಿಯಲ್ಲಿ ತಾಪಮಾನ 51.8 ಡಿಗ್ರಿ ಸೆಲ್ಸಿಯಸ್ ತಲುಪಿದೆ ಎಂದು ಸೌದಿ ರಾಷ್ಟ್ರೀಯ ಹವಾಮಾನ ಕೇಂದ್ರ ತಿಳಿಸಿದೆ.

ಈ ವರ್ಷ 18 ಲಕ್ಷ ಯಾತ್ರಾರ್ಥಿಗಳು ಹಜ್ ಯಾತ್ರೆಯಲ್ಲಿ ಭಾಗವಹಿಸಿದ್ದಾರೆ, ಅವರಲ್ಲಿ 16 ಲಕ್ಷ ವಿದೇಶಿಯರೇ ಇದ್ದಾರೆ. ಶಾಖದ ಆಘಾತದಿಂದ ಬಳಲುತ್ತಿರುವ 2,000ಕ್ಕೂ ಹೆಚ್ಚು ಯಾತ್ರಾರ್ಥಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸೌದಿ ಅರೇಬಿಯಾದ ಅಧಿಕಾರಿಗಳು ತಿಳಿಸಿದ್ದಾರೆ. 2023ರಲ್ಲಿ ಕನಿಷ್ಠ 240 ಯಾತ್ರಾರ್ಥಿಗಳು ಸಾವನ್ನಪ್ಪಿದ್ದರು. ಈ ಪೈಕಿ ಹೆಚ್ಚಿನವರು ಇಂಡೋನೇಷ್ಯಾದವರು.

ರಾಗಿಗೆ 4290 ರು., ಹತ್ತಿಗೆ 7121 ರು. | ರೈತರಿಗೆ 2 ಲಕ್ಷ ಕೋಟಿ ರು.ಗಳ ಲಾಭ

14 ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ಬುಧವಾರ 14 ಖಾರಿಫ್ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಘೋಷಿಸಿದೆ.

ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ರೈತರ ಹಿತದೃಷ್ಟಿಯಿಂದ 14 ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ನೀಡಲು ನಿರ್ಧರಿಸಲಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಬುಧವಾರ ತಿಳಿಸಿದ್ದಾರೆ.

ಗೋಧಿಗೆ 2,300 ರು. ಕನಿಷ್ಟ ಬೆಂಬಲ ಬೆಲೆ ಘೋಷಿಸ ಲಾಗಿದೆ. ಮೊದಲಿನ ಬೆಲೆಗಿಂತ 117 ರು. ಏರಿಕೆ ಮಾಡಲಾಗಿದೆ. ಈ ನಿರ್ಧಾರದಿಂದ ರೈತರಿಗೆ ಒಟ್ಟು 2 ಲಕ್ಷ ಕೋಟಿ ರು. ಗಳಷ್ಟು ಮೊತ್ತ ಹೆಚ್ಚುವರಿ ಯಾಗಿ ಬೆಂಬಲ ಬೆಲೆಯಲ್ಲಿ ಸಿಗಲಿದೆ. ಈ ಮೌಲ್ಯ ಕಳೆದ ಬಾರಿಗಿಂತ 35 ಸಾವಿರ ಕೋಟಿ ರು. ಅಧಿಕವಾಗಿದೆ ಎಂದು ತಿಳಿಸಿದ್ದಾರೆ.

ಕನಿಷ್ಠ ಬೆಂಬಲ ಬೆಲೆ

ಬೆಳೆ	ಬೆಂಬಲ ಬೆಲೆ
ಹತ್ತಿ	7,121 ರು.
ಜೋಳ	3,321 ರು.
ರಾಗಿ	4,290 ರು.
ಹೆಸರುಕಾಳು	8,682 ರು.
ಉದ್ದಿನಕಾಳು	7,400 ರು.

ಅಲ್ಲದೇ, ಎಣ್ಣೆಕಾಳುಗಳು ಮತ್ತು ಬೇಳೆಕಾಳುಗಳಿಗೆ ಅತ್ಯಧಿಕ ಎಂಎಸ್‌ಪಿ ಹೆಚ್ಚಳಕ್ಕೆ ಶಿಫಾರಸು ಮಾಡಲಾಗಿದೆ. ಎಳ್ಳು ಕ್ವಿಂಟಲ್‌ಗೆ 632 ಹೆಚ್ಚಳ ಮಾಡಲಾಗಿದೆ. ನೈಜರ್‌ಬೀಡ್ ಕ್ವಿಂಟಲ್‌ಗೆ 983 ಹೆಚ್ಚಳ ಅರ್ಹರ್ ದಾಲ್‌ಗೆ 550 ರು. ಹೆಚ್ಚಳ ಮಾಡಲಾಗಿದೆ ಎಂದು ವಿವರಿಸಿದರು.

ಸದ್ಯ ಭಾರತೀಯ ಆಹಾರ ನಿಗಮದಲ್ಲಿ 53.4 ಮಿಲಿಯನ್ ಟನ್ ಅಕ್ಕಿ ಹೊಂದಿದ್ದು ಒಂದು ವರ್ಷಗಳ ಕಾಲ ಕಲ್ಯಾಣ ಯೋಜನೆಗಳಿಗೆ ಇದು ಪೂರೈಕೆಯಾಗಲಿದೆ. ಯಾವುದೇ ಹೆಚ್ಚುವರಿ ಖರೀದಿಯ ಅಗತ್ಯವಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

ಸಂಪುಟ ಸಭೆ ನಿರ್ಧಾರಗಳು: ಮಹಾರಾಷ್ಟ್ರದ ವಾದ್ವಾನ್ ಬಳಿ 76,200 ಕೋಟಿ ರು. ಮೌಲ್ಯದ ಗ್ರೀನ್‌ಫೀಲ್ಡ್ ಆಳ ಬಂದರು ನಿರ್ಮಾಣಕ್ಕೆ ಸಚಿವ ಸಂಪುಟ ಸಭೆ ಸಮ್ಮತಿಸಿದೆ. ಈ ಯೋಜನೆ ನಿರ್ಮಾಣದ ಜವಾಬ್ದಾರಿಯನ್ನು ವಾದ್ವಾನ್ ಪೋರ್ಟ್ ಪ್ರಾಜೆಕ್ಟ್ ಲಿ. ಕಂಪನಿಗೆ ವಹಿಸಲು ನಿರ್ಧರಿಸಲಾಗಿದೆ. ಈ ಬಂದರು ನಿರ್ಮಾಣದಿಂದ 12 ಲಕ್ಷ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದರು.

ತಮಿಳುನಾಡು ಮತ್ತು ಗುಜರಾತ್ ಕರಾವಳಿಯಲ್ಲಿ 500 ಮೆಗಾವಾಟ್ ಸಾಮರ್ಥ್ಯದ ಪವನಶಕ್ತಿ ಉತ್ಪಾದನೆ, ದೇಶದ ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಧಿ ವಿಜ್ಞಾನ ವಿಶ್ವವಿದ್ಯಾಲಯದ ಕ್ಯಾಂಪಸ್ ಲ್ಯಾಬ್ ನಿರ್ಮಾಣ, 2,870 ಕೋಟಿ ರು. ವೆಚ್ಚದಲ್ಲಿ ವಾರಣಾಸಿಯ ಲಾಲ್ ಬಹದ್ದೂರ್ ಶಾಸ್ತ್ರಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವಿಸ್ತರಣೆ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ.

ಏಕದಿನ ಸರಣಿ ಗೆದ್ದ ವನಿತೆಯರು

ಸ್ಮೃತಿ ಮಂದಾನ ಶತಕದ ದಾಖಲೆ

325 ರನ್‌ಗಳನ್ನು ಬೆನ್ನಟ್ಟಿ 4 ರನ್ ಅಂತರದಿಂದ ಸೋತ ದ. ಆಫ್ರಿಕಾ



ಸತತ ಎರಡು ಶತಕಗಳ ಮೂಲಕ ಸ್ಮೃತಿ ಮಂಧಾನ ಭಾರತ ಮಹಿಳಾ ತಂಡದ ಪರ ಅತ್ಯಧಿಕ ಶತಕ ಸಿಡಿಸಿದವರ ಪಟ್ಟಿಯಲ್ಲಿ ಮಿಥಾಲಿ ರಾಜ್ ಜತೆ ಜಂಟಿ ಅಗ್ರಸ್ಥಾನ ಪಡೆದಿದ್ದಾರೆ.

ಬೆಂಗಳೂರು: ನಾಯಕಿ ಹರ್ಮನ್ ಪ್ರೀತ್ ಕೌರ್ (103 ರನ್, 88 ಬಾಲ್) ಹಾಗೂ ಸ್ಮೃತಿ ಮಂದಾನ (136ರನ್ 120 ಬಾಲ್) ಅವರ ಅಮೋಘ ಶತಕಗಳ ನೆರವಿನಿಂದ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಬುಧವಾರ ನಡೆದ ಐಸಿಸಿ ಚಾಂಪಿಯನ್ ಶಿಪ್ ಟೂರ್ನಿಯ ಎರಡನೇ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ ಮಹಿಳಾ ತಂಡ ದಕ್ಷಿಣಾ ಆಫ್ರಿಕಾ ತಂಡವನ್ನು ನಾಲ್ಕು ರನ್‌ಗಳಿಂದ ಸೋಲಿಸಿ ಒಂದು ಪಂದ್ಯ ಬಾಕಿ ಉಳಿದಿರುವಂತೆಯೇ ಸರಣಿ ಕೈ ವಶ ಮಾಡಿಕೊಂಡಿದೆ.

ಭಾರತ ನೀಡಿದ 325 ರನ್‌ಗಳ ಬೃಹತ್ ಗುರಿಯನ್ನು ದಿಟ್ಟತನದಿಂದ ಬೆನ್ನಟ್ಟಿದ ದ. ಆಫ್ರಿಕಾ ವನಿತೆಯರು ನಾಯಕಿ ಲಾರಾ ವೊಲ್ವಾರ್ಡ್ಟ್ (135 ರನ್, 135 ಬಾಲ್) ಮತ್ತು ಮೆರಿಜಾನ್ ಕಾಪ್ (114 ರನ್, 94 ಬಾಲ್) ಅವರ ಶತಕಗಳ ಹೊರತಾಗಿಯೂ 50 ಓವರ್‌ಗಳಲ್ಲಿ ಆರು ವಿಕೆಟ್ ಕಳೆದುಕೊಂಡು 321 ರನ್ ಗಳಿಸಲಷ್ಟೇ ಶಕ್ತವಾಯಿತು.

ಈ ಪಂದ್ಯ ಹಲವು ದಾಖಲೆಗಳಿಗೆ ಸಾಕ್ಷಿಯಾಯಿತು. ಭಾರತದ ಪರ ಸತತ ಎರಡನೇ ಶತಕ ಬಾರಿಸಿದ ಸ್ಮೃತಿ ಮಂದಾನ ಒಟ್ಟಾರೆ ಏಳನೇ ಶತಕದೊಂದಿಗೆ ಮಿಥಾಲಿ ರಾಜ್ ಅವರ ಏಳು ಶತಕಗಳ ದಾಖಲೆ ಸರಿಗಟ್ಟಿದರು. ಮೊದಲ ಏಕದಿನ ಪಂದ್ಯದಲ್ಲಿ 103 ಎಸೆತಗಳಲ್ಲಿ 12 ಬೌಂಡರಿ 1 ಸಿಕ್ಸರ್ ಬಾರಿಸುವ ಮೂಲಕ ಅದ್ಭುತ ಶತಕ ಬಾರಿಸಿದ್ದ ಮಂದಾನ ಅಂತಾರಾಷ್ಟ್ರೀಯ ಕ್ರಿಕೆಟ್ ನಲ್ಲಿ ಭಾರತ ಪರ ಆಡಿದ ಮಹಿಳಾ ಆಟಗಾರ್ತಿಯರಲ್ಲಿ ಮೊದಲ ಸ್ಥಾನಕ್ಕೆ ಏರಿದ್ದಾರೆ.

ಆಫ್ರಿಕಾದ ನಾಯಕಿ ಲಾರಾ ವೊಲ್ವಾರ್ಡ್ಟ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡರು.ಓಪನರ್ ಆಗಿ ಕ್ರೀಸ್‌ಗೆ ಆಗಮಿಸಿದ ಸ್ಮೃತಿ ಮಂದಾನ ಹಾಗೂ ಶಫಾಲಿ ವರ್ಮಾ ಉತ್ತಮ ಆರಂಭ ಪಡೆಯಲಿಲ್ಲ. ತಂಡದ ಮೊತ್ತ 38 ರನ್ ಇರುವಾಗಲೇ ಶಫಾಲಿ ವರ್ಮಾ ಔಟ್ ಆದರು. ಬಳಿಕ ಬಂದ ಹೇಮಲತಾ 24 ರನ್ ಗಳಿಸಿ ಔಟ್ ಆಗಿದರು. ಇದು ತಂಡಕ್ಕೆ ಹಿನ್ನಡೆಯಾದಂತೆ ಆಯಿತು. ಆದರೆ ಸ್ಮೃತಿ ಮಂದಾನ ಅಬ್ಬರದ ಬ್ಯಾಟಿಂಗ್ ಮುಂದುವರೆಸಿ ಕೇವಲ 103 ಎಸೆತಗಳಲ್ಲಿ ಶತಕ ಬಾರಿಸಿ ದಾಖಲೆ ಬರೆದರು. ನಾಯಕಿ ಆಟವಾಡಿದ ಹರ್ಮನ್‌ಪ್ರೀತ್ ಕೌರ್ ಔಟ್ ಆಗದೇ 88 ಎಸೆತಗಳಲ್ಲಿ 9 ಬೌಂಡರಿ, 3 ಭರ್ಜರಿ ಸಿಕ್ಸರ್ ಸಮೇತ 103 ರನ್‌ಗಳನ್ನು ಸಿಡಿಸಿದರು. ಕ್ಯಾಪ್ಟನ್‌ಗೆ ಉತ್ತಮ ಸಾಥ್ ಕೊಟ್ಟ ರಿಚಾಘೋಷ್ ಔಟ್ ಆಗದೇ 13 ಬಾಲ್‌ಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಮೇತ 25 ರನ್ ಗಳಿಸಿದರು. ಈ ಮೂಲಕ ಭಾರತದ ಮಹಿಳಾ ತಂಡ ನಿಗದಿತ 50 ಓವರ್ಗಳಲ್ಲಿ 3 ವಿಕೆಟ್ ನಷ್ಟಕ್ಕೆ 325 ರನ್‌ಗಳ ಬೃಹತ್ ಗುರಿ ನೀಡಿತು. ಇದನ್ನು ಬೆನ್ನಟ್ಟಿದ ದ. ಆಫ್ರಿಕಾ ಜಯದ ಹತ್ತಿರಕ್ಕೆ ಬಂದು ಎಡವಿತು. ಈ ಮೂಲಕ ವನಿತೆಯರ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಬೆನ್ನಟ್ಟಿ ಗೆದ್ದ ದಾಖಲೆಯಿಂದ ವಂಚಿತವಾಯಿತು. ಭಾರತದ ಪರ ದೀಪ್ತಿ ಶಮಾ ಮತ್ತು ಪೂಜಾ ವಸ್ತ್ರಾಕರ್ ತಲಾ ಎರಡು ವಿಕೆಟ್ ಪಡೆದರು.

ಸೇಂಟ್ ಜೋಸೆಫ್ಸ್ ಶಾಲೆಯಲ್ಲಿ ದಶಮಾನೋತ್ಸವದಲ್ಲಿ ಅನೀಲ್ ಜಾನ್ ಸಿಕ್ವೇರಾ ಅವರನ್ನು ಅಭಿನಂದಿಸಲಾಯಿತು. ರೆವರೆಂಡ್ ಫಾ. ಜೋಸೆಫ್ ಡಿಸೋಜಾ, ರೆವರೆಂಡ್ ಫಾ. ಸಿರೀಲ್ ಮೆನೆಜಸ್, ರೆವರೆಂಡ್ ಫಾ. ವಿಶಾಲ್ ಪಿಂಟೋ, ಉಪ ಪ್ರಾಂಶುಪಾಲರಾದ ಸಿಸ್ಟರ್ ಶೀನಾ ಇದ್ದರು.

ಸಾವಿರ ಬಸ್ ರಸ್ತೆಗಿಳಿಸಲು ಕೆಎಸ್‌ಆರ್‌ಟಿಸಿ ಚಿಂತನೆ

ಬೆಂಗಳೂರು: ಶಕ್ತಿ ಯೋಜನೆ ಆರಂಭದ ಬಳಿಕ ಹಲವು ಮಾರ್ಗಗಳಲ್ಲುಂಟಾದ ಬಸ್‌ಗಳ ಕೊರತೆಯಿಂದಾಗಿ ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರಿಗೆ ಸಮಸ್ಯೆಯಾಗಿದ್ದು, ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸುವಂತೆ ಬೇಡಿಕೆ ಹೆಚ್ಚಿದೆ.

300ಕ್ಕೂ ಹೆಚ್ಚಿನ ಹೊಸಮಾರ್ಗಗಳಲ್ಲಿ ಹೆಚ್ಚುವರಿ ಬಸ್ ಸೇವೆ ಆರಂಭಿಸಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದ್ದು, ಶಾಲೆ-ಕಾಲೇಜುಗಳು ಹೆಚ್ಚಿರುವ ಮಾರ್ಗಗಳನ್ನು ಕೆಎಸ್‌ಆರ್‌ಟಿಸಿ ಗುರುತಿಸಿದೆ. ಅಂತಹ ಭಾಗಗಳಿಗೆ ಹೆಚ್ಚುವರಿ ಅಥವಾ ಹೊಸದಾಗಿ ಬಸ್ ಸೇವೆ ಆರಂಭಿಸಲು ಸಿದ್ಧತೆ ನಡೆಸಿದೆ. ಕೆಎಸ್‌ಆರ್‌ಟಿಸಿಗೆ ಸೇರ್ಪಡೆಯಾಗಿರುವ 814 ಬಸ್‌ಗಳ ಪೈಕಿ 500 ಬಸ್‌ಗಳನ್ನು ನಿಯೋಜಿಸಲು ನಿರ್ಧಾರ ಮಾಡಲಾಗಿದೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ನಮ್ಮ ಸರಕಾರ ಹೊಸ ಬಸ್ ಖರೀದಿಸಲು ಮುಂದಾಗಿದ್ದು, ಬಿಜೆಪಿ ಸರಕಾರದಲ್ಲಿ ಒಂದು ಹೊಸಬಸ್ ಖರೀದಿ ಮಾಡಿರಲಿಲ್ಲ. ಇದರಿಂದ ಪ್ರಯಾಣಿಕರಿಗೆ ತುಂಬಾ ಕಷ್ಟವಾಗಿತ್ತು. ವಿಭಾಗೀಯ ಮಟ್ಟದಲ್ಲಿ ಗುರುತಿಸಲಾಗಿರುವ ಹೊಸಮಾರ್ಗಗಳಲ್ಲಿ ಮುಂದಿನ 3 ತಿಂಗಳಲ್ಲಿ ಸೇವೆ ಆರಂಭ ಮಾಡಲಾಗುತ್ತದೆ. ಬಸ್ ಸೇವೆ ಅವಶ್ಯಕತೆಯಿರುವ ಮಾರ್ಗಗಳ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಸೂಚನೆ ನೀಡಲಾಗಿದೆ ಎಂದರು.

ಕೆಎಸ್‌ಆರ್‌ಟಿಸಿ ವ್ಯಾಪ್ತಿಯಲ್ಲಿ ಬಸ್‌ಗಳ ಕೊರತೆ ನೀಗಿಸುವ ಸಲುವಾಗಿ ಹೊಸ ಬಸ್ ಖರೀದಿ ಮಾಡಲಾಗುತ್ತಿದೆ. ಸದ್ಯ 814 ಹೊಸ ಬಸ್‌ಗಳ ಸೇರ್ಪಡೆ ಜತೆಗೆ 977 ಹಳೇ ಬಸ್‌ಗಳನ್ನು ಪುನಶ್ಚೇತನ ಮಾಡಲಾಗುತ್ತದೆ. 100 ಹೊಸ ಪಲ್ಲಕ್ಕಿ ಸ್ಲೀಪರ್ ಬಸ್‌ಗಳ ಸೇರ್ಪಡೆಗೆ ಸರಕಾರ ಅನುಮತಿ ನೀಡಿದ್ದು, 20 ಅಂಬಾರಿ, 20 ಐರಾವತ ಉತ್ಸವ ಬಸ್‌ಗಳ ಖರೀದಿಗೆ ಅನುಮತಿ ಕೋರಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರಕಾರ ಕೂಡ ಈಗಾಗಲೇ ಗ್ರೀನ್ ಸಿಗ್ನಲ್ ನೀಡಿದೆ. ಸಾಮಾನ್ಯ ಸಾರಿಗೆ ಬಸ್‌ಗಳ ಜತೆಗೆ ಪ್ರೀಮಿಯಂ ಬಸ್‌ಗಳ ಸಂಖ್ಯೆಯನ್ನೂ ಹೆಚ್ಚಿಸಲು ನಿಗಮ ಯೋಜನೆ ಮಾಡಿದೆ.

ಕರ್ನಾಟಕ ಭವನದ ಕಳಪೆ ಕಾಮಗಾರಿ: ತನಿಖೆಗೆ ಆದೇಶ

ಬೆಂಗಳೂರು: ಮಂತ್ರಾಲಯದಲ್ಲಿ 5 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾದ ಕರ್ನಾಟಕ ಭವನದ ಕಾಮಗಾರಿ ಕಳಪೆಯಾಗಿರುವ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ತನಿಖೆ

ನಡೆಸಲು ಲೋಕಾಯುಕ್ತರಿಗೆ ನೀಡಿ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಆದೇಶಿದ್ದಾರೆ.

ಕಳಪೆ ಕಾಮಗಾರಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಹಾಗೂ ಕಳಪೆ ಕಾಮಗಾರಿಗೆ ಸಂಬಂಧಿಸಿದಂತೆ ತನಿಖೆಯನ್ನು ನಡೆಸಲು ಪ್ರಕರಣವನ್ನು ಲೋಕಾಯುಕ್ತರವರಿಗೆ ವಹಿಸಲು ಆದೇಶಿಸಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಅವರು ಕಂದಾಯ ಇಲಾಖೆ ಮುಜರಾಯಿ ವಿಭಾಗದ ಸರಕಾರದ ಪ್ರಧಾನ ಕಾರ್ಯದರ್ಶಿಗೂ ಪತ್ರ ಬರೆದಿದ್ದಾರೆ. ಕರ್ನಾಟಕದಿಂದ ಮಂತ್ರಾಲಯಕ್ಕೆ ಹೋಗುವ ಭಕ್ತಾದಿಗಳಿಗೆ ಅನುಕೂಲ ವಾಗುವಂತೆ 100 ಕೊಠಡಿಗಳ ಅತಿಥಿಗೃಹ ನಿರ್ಮಾಣ ಮಾಡಲು 5 ಕೋಟಿ ರು.ಗಳನ್ನು 2010ರಲ್ಲಿ ಮಂಜೂರು ಮಾಡಲಾಗಿತ್ತು. ಈ ವೆಚ್ಚದಲ್ಲಿ 2019ರಲ್ಲಿ 100 ಕೊಠಡಿಗಳ ಕರ್ನಾಟಕ ಭವನ (ಛತ್ರ) ನಿರ್ಮಾಣ ಮಾಡಿ ಸರಕಾರಕ್ಕೆ ಹಸ್ತಾಂತರ ಮಾಡಲಾಗಿತ್ತು. ಆದರೆ ಕಾಮಗಾರಿಯಲ್ಲಿ ಕಳಪೆಯಾಗಿದೆ ಎಂದು ಆರೋಪ ಕೇಳಿಬಂದಿದೆ.

ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಸೂಚನೆ

ಗೋಡೆಗಳು ಬಿರುಕು ಮೂಡಿದ್ದು, ಕೊಠಡಿಗಳಲ್ಲಿ ನೀರು ಸೋರಿಕೆ, ವಿದ್ಯುತ್ ಸಂಪರ್ಕದ ಅವ್ಯವಸ್ಥೆ, ಚರಂಡಿಗೆ ಸಂಪರ್ಕ ಕಲ್ಪಿಸಿದ ಪೈಪ್‌ಗಳ ಸೋರಿಕೆ, ಕಟ್ಟಡಕ್ಕೆ ಅಳವಡಿಸಿದ ಟೈಲ್ಸ್‌ಗಳು ತುಂಬಾ ಹಾನಿಗೊಳಗಾಗಿದೆ, ಬಿಸಿನೀರಿಗೆ ಅಳವಡಿಸಿದ ಗೀಸರ್‌ಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಅಲ್ಲದೇ ಪ್ರತಿಯೊಂದು ಕೊಠಡಿಗಳ ಬಾಗಿಲು, ಕಿಟಕಿ, ಪೀಠೋಪಕರಣಗಳು ಕಳಪೆ ಗುಣಮಟ್ಟದ್ದಾಗಿರುವುದಾಗಿ ಆರೋಪ ವಿದೆ. ಈ ಹಿನ್ನೆಲೆಯಲ್ಲಿ ಕಳಪೆ ಕಾಮಗಾರಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಹಾಗೂ ಕಳಪೆ ಕಾಮಗಾರಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಪ್ರಕರಣವನ್ನು ಲೋಕಾಯುಕ್ತರಿಗೆ ವಹಿಸಿ ಸಚಿವ ರಾಮಲಿಂಗಾರೆಡ್ಡಿ ಆದೇಶ ಹೊರಡಿಸಿದ್ದಾರೆ.

ರೇಸ್ ಕೋರ್ಸ್‌ನಲ್ಲಿ ಮತ್ತೆ ಕುದುರೆ ಓಟದ ಸಂಭ್ರಮ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್(ರೇಸ್ ಕೋರ್ಸ್)ನಲ್ಲಿ ಷರತ್ತುಗಳ ಅನ್ವಯ ಕುದುರೆ ಪಂದ್ಯಗಳನ್ನು ಆಯೋಜಿಸುವುದಕ್ಕೆ ಹೈಕೋಟ್ ಅನುಮತಿ ನೀಡಿ ಆದೇಶಿಸಿದೆ.

ಪರವಾನಗಿ ರದ್ದು

ತೆರಿಗೆ ವಂಚನೆಗಾಗಿ ಅಕ್ರಮವಾಗಿ ಬೆಟ್ಟಿಂಗ್ ಮಾಡಿದ ಆರೋಪದಲ್ಲಿ ಆರೋಪ ಪಟ್ಟಿ ದಾಖಲಿಸಿರುವ ಬುಕ್ಕಿಗಳ ಪರವಾನಿಗೆಯನ್ನು ರದ್ದುಪಡಿಸಲು ಮಂಡಳಿಯ ವಾರ್ಷಿಕ ಸಾಮಾನ್ಯಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಅಲ್ಲದೆ, ಕುದುರೆ ಪಂದ್ಯಗಳ ಆಯೋಜನೆಯಲ್ಲಿ ಬುಕ್ಕಿ ಕಂಪೆನಿಗಳಿಗೆ ಯಾವುದೇ ಸಂಬಂಧವಿಲ್ಲ. ಹೀಗಾಗಿ ಕುದುರೆ ಪಂದ್ಯಗಳ ಆಯೋಜನೆಗೆ ಅವಕಾಶ ಕಲ್ಪಿಸಬೇಕು ಎಂದು ಪೀಠಕ್ಕೆ ಕೋರಿದರು. ಜತೆಗೆ, ಪ್ರತಿದಿನ ಒಂದು ಕೋಟಿಗಿಂತಲೂ ರು.ಗಿಂತಲೂ ಹೆಚ್ಚು ತೆರಿಗೆ ಸಂಗ್ರಹವಾಗುತ್ತಿದೆ. ಇದು ಸರಕಾರದ ಬೊಕ್ಕಸಕ್ಕೆ ಸೇರುತ್ತಿದೆ. ಅಲ್ಲದೆ, ಕುದುರೆ ಪಂದ್ಯಗಳಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಎರಡು ಸಾವಿರಕ್ಕೂ ಹೆಚ್ಚು ಜನ ಇದನ್ನು ಅವಲಂಬಿಸಿದ್ದಾರೆ. ಆದ್ದರಿಂದ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಬೇಕು ಎಂದು ಕೋರಿದ್ದರು.

ಕುದುರೆ ಪಂದ್ಯಗಳ ಆಯೋಜನೆಗೆ ಕೋರಿದ್ದ ಮನವಿ ತಿರಸ್ಕರಿಸಿದ್ದ ರಾಜ್ಯ ಸರಕಾರದ ಕ್ರಮವನ್ನು ಪ್ರಶ್ನಿಸಿ ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್, ಕರ್ನಾಟಕ ಟ್ರೈನ್ಸ್ ಅಸೋಸಿಯೇಷನ್ಸ್, ಕರ್ನಾಟಕ ರೇಸ್ ಕುದುರೆ ಮಾಲೀಕರ ಸಂಘ, ಕರ್ನಾಟಕ ಜಾಕಿಗಳ ಸಂಘ ಸೇರಿದಂತೆ ಮತ್ತಿತರರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಕುಮಾರ್ ಅವರಿದ್ದ ನ್ಯಾಯಪೀಠ, 2024ರ ಮಾರ್ಚ್ ತಿಂಗಳಲ್ಲಿ ಸರ್ಕಾರ ಅನುಮತಿ ನೀಡಿದ್ದ ಷರತ್ತುಗಳ ಅನ್ವಯ ಕುದುರೆ ಪಂದ್ಯಗಳನ್ನು ಆಯೋಜನೆ ಮಾಡುವುದಕ್ಕೆ ಅವಕಾಶ ನೀಡಿ ಆದೇಶಿಸಿದೆ.

ಅಲ್ಲದೆ, ಆನ್‌ಕೋರ್ಸ್(ಬೆಂಗಳೂರಿನಲ್ಲಿ ನಡೆಯುವ ಪಂದ್ಯ) ಮತ್ತು ಆಫ್ ಕೋರ್ಸ್ (ಹೊರಭಾಗಗಳಲ್ಲಿ ಮೈಸೂರು, ಬಾಂಬೆ ನಡೆಯುವ ಪಂದ್ಯಗಳು) ಗಳನ್ನು ಬಿಟಿಸಿ ಹಮ್ಮಿಕೊಳ್ಳಬಹುದಾಗಿದೆ. ಅಲ್ಲದೆ, ರಾಜ್ಯ ಸರಕಾರವು ಕುದುರೆ ಪಂದ್ಯಗಳ ಆಯೋಜನೆ ವೇಳೆ ಅದರ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಮಾಡಬಹುದು ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಸಾಮಾಜಿಕ ತಾಣ ಪಯಣ

ಜಸ್ಟ್ ಪಾಸ್

ನಮ್ಮ
ಸಾಧನೆಗೆ
ಸುಲಭವಾಗಿ
ನಾವು
ಪಡೆಯಬಹುದು
ಭಾರತ ರತ್ನ...
ಆದರೆ
ಜೀವನದಲಿ
ಏಗಿ ಏಗಿ
ಜಸ್ಟ್
ಪಾಸಾದವನೇ
ಶ್ರೇಷ್ಠ ರತ್ನ!

● **ಕೆ ನಟರಾಜ್**

ನಮ್ಮೊಳಗೊಬ್ಬ ನಾಜೂಕಯ್ಯ

ಕಣ್ಣೆದುರಲ್ಲೇ ನಡೆವ
ತಪ್ಪಿಗೆ, ಮೌನದಲಿದ್ದು
ಅಂಕಿತವನೊತ್ತುವ
ನಮ್ಮೊಳಗಿಹ ನಾಜೂಕಯ್ಯ;

ಕಾಣದ್ದ ಕಂಡಂತೆ, ಕೇಳಿದ್ದ
ಕೇಳದಂತೆ ನಟಿಸುತ್ತಾ
ಬದುಕುತ್ತಿರುವ
ನಮ್ಮೊಳಗಿಹ ನಾಜೂಕಯ್ಯ;

ಕಾಮನಬಿಲ್ಲಿನಲಿ
ಕಪ್ಪನ್ನು ಹುಡುಕುತ,
ಬೆಣ್ಣೇಲಿ ಕೂದಲ ತೆಗೆವ
ನಮ್ಮೊಳಗಿಹ ನಾಜೂಕಯ್ಯ;

ಹಸುವಿನ ಮುಖವಾಡ
ಹೊತ್ತು, ಹೆಬ್ಬುಲಿಯಂದದಿ
ರಕ್ತಕ್ಕೆ ಹಾತೊರೆಯುತ್ತಿರುವ
ನಮ್ಮೊಳಗಿಹ ನಾಜೂಕಯ್ಯ!

ಅನಾವರಣವಾಗಲಿ ನಿಜ
ಮುಖ, ಮನವಾಗಲಿ
ನಿರುಮ್ಮಳ, ಸರಳ, ಸಹಜ
ಸುಂದರವಾಗಲಿ ಬದುಕು!!

● **ಶ್ರೀವಲ್ಲಿ ಮಂಜುನಾಥ**

ಹಾಯ್ಕುಗಳು

ಪ್ರತಿ ಒಲವು
ಅವರವರ ಆಯ್ಕೆ
ಪ್ರೇಮ ಕೈಪಿಡಿ
★
ನೋವು ಇಲ್ಲದ
ಬದುಕಿನ ನಾವೆಯು
ಒಲವು ಮಾತ್ರ
★
ಒಲವಿಲ್ಲದ
ಪ್ರೇಮ, ಸಂಸಾರಗಳು
ಲಾಭ ಕೂಟವು
★
ಬೆಚ್ಚಗಿರಲಿ
ಒಲವಿನ ಕಥೆಯು
ಸ್ವಚ್ಛ ಮನದಿ
★
ಪ್ರತಿ ದುಃಖಕ್ಕೂ
ಮುಲಾಮು ಹಚ್ಚುವ ನೀ
ಒಲವೇ ಸರಿ
★
ಮಳೆ ಸುರಿದ
ಮೋಡದಂತೆ ನಿರ್ಮಲ
ನನ್ನ ಒಲವು
★
ಖಾಲಿ ಪುಟವು
ಹಲವು ಯೋಚನೆಯ
ಸ್ವಚ್ಛಂದ ಪ್ರೀತಿ
★
ಸುರಿವ ಮಳೆ
ಯೌವನದ ಒಲವೆ
ಪ್ರೇಮ ವ್ಯಾಖ್ಯಾನ
★
ಹಚೆಯಾಡುವ
ಮಳೆಯ ಹನಿಯಂತೆ
ನಿನ್ನ ಅಪ್ಪುಗೆ
★
ನೀನು ಚಂದಿರ
ತಂಪಾದ ಕೊಳದಲ್ಲಿ
ನನ್ನ ಪ್ರೇಮಿಸು
★
ಚಳಿಯ ಬಿಸಿ
ನಿನ್ನ ಅಪ್ಪುಗೆಯಲ್ಲಿ
ದೀರ್ಘ ಚುಂಬನ
★
ಭೋಗ ಸಂಭೋಗ
ಆನಂದವೇ ಹೊರೆತು
ಅನಂತವಲ್ಲ

● **ಡಾ. ರವಿಶಂಕರ್ ಎ.ಕೆ**

ಕಾರ್ಟೂನ್

● **ಎಚ್.ಎಸ್. ವಿಶ್ವನಾಥ್**

ತರ್ಲೆ-ತಿಮ್ಮಾ



ಈಕೆಯ ಕೆನ್ನೆಯ ಗುಳಿಯೊಳಗೆ ಬಿದ್ದರೆ, ಮತ್ತೆ ಮೇಲಕ್ಕೇಳುವುದು ಅನುಮಾನವೇ! ಚಿತ್ರದಲ್ಲಿರುವವರು, ಸೃಷ್ಟಿ ದಾಂಗೆ

ವಿಧಿ ಲಿಖಿತ ಎಂಬ ಚಿದಂಬರ ರಹಸ್ಯ

● **ವಿದ್ಯಾ ಶಂಕರ್ ಶರ್ಮ, ಬೆಂಗಳೂರು.**

ಮನುಷ್ಯನಿಗೆ ಜೀವನ ಸಹಜವಾಗಿಯೇ ಸಂಕೀರ್ಣವಾದುದು. ಅದನ್ನು ಆದಷ್ಟೂ ಸರಳವಾಗಿ ನೋಡಬೇಕೆಂದು ನಾವು ಬಯಸಿದರೂ ಅದರಲ್ಲಿ ಸಫಲರಾಗಿರುವವರು ಬಹಳ ವಿರಳ. ಹುಟ್ಟಿದ ಕ್ಷಣದಿಂದ ಮೋಹಗಳಿಗೆ ಸಿಲುಕಿಸಿಕೊಳ್ಳುತ್ತಲೇ ಸಾಗುವ ಮನುಜ ಅಡಿಗಡಿಗೆ ಜೀವನವನ್ನು ಮತ್ತಷ್ಟು ಜಟಿಲವಾಗಿಸಿಕೊಳ್ಳುತ್ತ ತನ್ನ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಜೀವನದ ಪರಮ ಸತ್ಯವನ್ನು ಅರಿಯಲು ವಿಫಲವಾಗುತ್ತಾನೆ. ಹುಟ್ಟು ಆಕಸ್ಮಿಕವಾದರೆ ಸಾವು ನಿಶ್ಚಿತ. ತನ್ನ ಸುತ್ತಲೂ ನಡೆಯುತ್ತಿರುವ ಘಟನೆಗಳು ತನ್ನ ಜೀವನದಲ್ಲಿ ನಡೆಯಲಾರವೆಂಬ ಭ್ರಮೆಯಲ್ಲಿಯೇ ಮನುಷ್ಯ ಇರುತ್ತಾನೆ.



ಮುಂದಿನ ಒಂದು ಕ್ಷಣದಲ್ಲಿ ಏನು ನಡೆಯಬೇಕು ಎಂಬುದು ಮೊದಲೇ ನಿರ್ಧರಿಸಿದಂತೆ ನಮ್ಮ ಜೀವನದ ಓಟ ಸಾಗುತ್ತದೆ. ಈ ರೀತಿಯ ಗ್ರಹಿಕೆಗೆ ಕಾರಣವೂ ಇಲ್ಲದಿಲ್ಲ. ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ಬಾಳಿನಲ್ಲಿ ಜರುಗುವ ಕೆಲವು ಸಂಗತಿಗಳಿಗೆ ಇಂತಹುದೇ ಕಾರಣ ಎಂದು ನಿರ್ಧರಿಸಲು ಸಾಧ್ಯವೇ ಆಗುವುದಿಲ್ಲ. ಯಾವುದೇ ಮುನ್ಸೂಚನೆ ಇಲ್ಲದೆ ಬರುವ ನಮ್ಮ ಪ್ರೀತಿಪಾತ್ರರ ಅಕಾಲಿಕ ಸಾವು ಎಲ್ಲಕ್ಕಿಂತ ಹೆಚ್ಚಾಗಿ ನಮ್ಮನ್ನು ಕಾಡುವ ವಿಧಿ ವೈಚಿತ್ರ್ಯ. ಸಾವು ಎಂಬ ಜೀವನದ ಕಹಿ ಸತ್ಯ ನಿಶ್ಚಿತವಾದರೂ ಅದು ಸಂಭವಿಸುವ ಸಮಯ ಮತ್ತು ರೀತಿ ಮನುಕುಲದ ಎಲ್ಲ ತರ್ಕಗಳಿಗೆ ಮೀರಿದ್ದು.

ವೈಜ್ಞಾನಿಕ ದೃಷ್ಟಿಕೋನ, ತರ್ಕ ಮತ್ತು ಪರಿಶೋಧನೆ ಇವುಗಳನ್ನೆಲ್ಲ ಮೀರಿದ ಒಂದು ಅಗೋಚರ ಶಕ್ತಿ ಇದೆ ಎಂಬುದು ಪದೇ ಪದೇ ನಮ್ಮ ಕಣ್ಣೆದುರಿಗೆ ನಿರೂಪಿತವಾಗುತ್ತಿದ್ದರೂ ಮೋಹದ ಸುಳಿಯಲ್ಲಿ ಸಿಲುಕಿದ ನಾವು ಇದನ್ನು ಅರಿಯಲು ನಿರಂತರವಾಗಿ ವಿಫಲರಾಗುತ್ತೇವೆ. ಇದರಿಂದ ನಾವು ನಮ್ಮನ್ನು ನೋವಿಗೆ ಈಡು ಮಾಡುತ್ತ ನಮ್ಮ ಸುತ್ತ ಮುತ್ತಲಿನವರನ್ನೂ ನಿರಾಶೆಯ ಕೂಪಕ್ಕೆ ತಳ್ಳುತ್ತೇವೆ. ನಮಗೆ ಹತ್ತಿರವಾದವರ ಅಗಲುವಿಕೆ ನಮಗೆ ಸಹಿಸಲಸಾಧ್ಯವಾದ ಆಘಾತವಾದರೂ ಅದು ನಮಗೆ ವಿಧಿ ಆಗಲೇ ಬರೆದಿಟ್ಟ ಹಣೆ ಬರಹವಾಗಿರುತ್ತದೆ. ಇನ್ನೊಂದು ನಮ್ಮ ಗ್ರಹಿಕೆಗೆ ನಿಲುಕದ ವಿಚಿತ್ರವೆಂದರೆ, ಕೆಲವರ ಜೀವನದಲ್ಲಿ ಮಾತ್ರ ಆಕಸ್ಮಿಕ ಎನ್ನುವಂತ ದುರಂತ ಸಂಭವಿಸುವುದು. ಇದೇಕೆ ಹೀಗೆ ಎನ್ನುವ ಪ್ರಶ್ನೆಗೆ ನಮ್ಮಲ್ಲಿ ಉತ್ತರ ಇಲ್ಲ. ನಮ್ಮ ಪುರಾಣ ಗ್ರಂಥಗಳು ಕರ್ಮ ಫಲದ ಸಿದ್ಧಾಂತವನ್ನು ಪ್ರತಿಪಾದಿಸಿವೆ. ನಮ್ಮ ಅನೇಕ ಹಿಂದಿದ ಜನ್ಮಗಳ ಸಂಚಿತ ಕರ್ಮಗಳ ಫಲವನ್ನು ನಾವು ಈ ಜನ್ಮದಲ್ಲಿ ಅನುಭವಿಸುತ್ತೇವೆ ಎಂಬ ವಾದಕ್ಕೆ ಪುಷ್ಠಿ ನೀಡುವಂತೆ, ಜೀವನದ ಆಗು ಹೋಗುಗಳು ಒಬ್ಬರಿಂದೊಬ್ಬರಿಗೆ ಸಂಪೂರ್ಣ ಬೇರೆ ಬೇರೆಯಾಗಿರುತ್ತವೆ.

ನಮ್ಮ ವ್ಯಾಪ್ತಿ ಮತ್ತು ಪ್ರಾಪ್ತಿಗೆ ಎಷ್ಟೆಂದು ಮೊದಲೇ ನಿರ್ಧರಿಸಿದಂತೆ ಜೀವನ ನಡೆಯುತ್ತದೆಯೇ ವಿನಃ ನಮ್ಮ ಯಾವ ಯೋಜನೆ ಅಥವಾ ನಿರೀಕ್ಷೆಯಂತೆ ಅಲ್ಲ. ಜಗತ್ತಿನ ಈ ಪರಮ ಸತ್ಯದ ಮುಂದೆ ಬೇರೆ ಎಲ್ಲ ಗೌಣವಾಗಿ ತೋರುತ್ತದೆ. ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿದಾಗ ಮಾತ್ರ ಈ ಜೀವನದ ನಶ್ವರತೆಯ ಅರಿವು ನಮಗೆ ಮೂಡಲು ಸಾಧ್ಯ.

ಹುಡುಗರನ್ನು, ತರುಣರನ್ನು, ಮುದುಕರನ್ನು, ಗರ್ಭದಲ್ಲಿ ಇರುವ ಶಿಶುಗಳನ್ನು, ಹೀಗೆ ಎಂತಹ ಅವಸ್ಥೆಯಲ್ಲೂ ಸಾವು ಅವರನ್ನು ತೆಗೆದುಕೊಂಡು ಹೋಗಬಹುದು. ಈ ಜಗತ್ತೇ ಹೀಗೆ. ನಮಗೇ ಏಕೆ ಹೀಗೆ, ಈ ಜಗತ್ತಿನ ರೀತಿ ಏಕೆ ಹೀಗೆ ಎಂದು ಪ್ರಶ್ನಿಸುವ ಬದಲು ಇದೇ ಸೃಷ್ಟಿಯ ಮೂಲ ರಹಸ್ಯ ಎಂಬುದನ್ನು ಅರಿತರೆ ದುಃಖ ದುಮ್ಮಾನಗಳನ್ನು ಸೈರಿಸಲು ನಾವು ಸಮರ್ಥರಾಗಬಹುದು.

ಬಾಲ್ಯದ ಸಂಗಾತಿ ಸೈಕಲ್

● **ಪುರುಷೋತ್ತಮ್ ವೆಂಕಿ, ಚಿತ್ರದುರ್ಗ.**

ಬಾಲ್ಯದಲ್ಲಿ ಸೈಕಲ್ ತುಳಿಯುವಾಗ ಇದ್ದ ಮಜಾ ಈಗ ಬುಲೆಟ್ ಬೈಕ್ ಓಡಿಸಿದ್ರೂ ಸಿಗಲ್ಲ. ಚಿಕ್ಕಂದಿನಲ್ಲಿ ಸೈಕಲ್ ತುಳಿಯೋಕೆ ಪಡುತ್ತಿದ್ದ ಕಷ್ಟಗಳು ಒಂದೆರಡಲ್ಲ. ನಮ್ಮ ಏರಿಯಾದಲ್ಲಿ ಬಸಣ್ಣ ಎಂಬುವವರು ಸೈಕಲ್ ಶಾಪ್ ಇಟ್ಟುಕೊಂಡಿದ್ದರು. ನಮ್ಮ ಏರಿಯಾದ ಮಟ್ಟಿಗೆ ಅವರ ಸೈಕಲ್ ಶಾಪ್ ಅಂದ್ರೆ ತುಂಬಾ ಫೇಮಸ್ ಆಗಿತ್ತು. ನಾನು ಅಮ್ಮ ಕೊಡುತ್ತಿದ್ದ ನಾಲ್ಕಾಣೆ, ಎಂಟಾಣೆಯನ್ನು ಜೋಡಿಸಿ, ಹಾಗೋ ಹೀಗೋ ವಾರಕ್ಕೊಮ್ಮೆ ಮೂರ್ನಾಲ್ಕು ರೂಪಾಯಿ ಒಟ್ಟುಗೂಡಿಸಿ ಭಾನುವಾರ ಬಂದರೆ ಸಾಕು ಸೈಕಲ್ ಸವಾರಿ ಶುರು ಮಾಡಿಬಿಡುತ್ತಿದ್ದೆ. ನಮ್ಮ ಮನೆಯ ಹತ್ತಿರ ದೊಡ್ಡ ಖಾಲಿ ಮೈದಾನವಿದ್ದು ಸೈಕಲ್ ಕಲಿಯಲು ಅದೊಂದೇ ಪ್ರಶಸ್ತ ಸ್ಥಳವಾಗಿತ್ತು.

ಒಂದು ದಿನ ಸೈಕಲ್ ಒಂದು ಗಂಟೆಗೆ ಅಂತ ಬಾಡಿಗೆಗೆ ತಂದವನು ಎರಡು ಗಂಟೆಯಾದರೂ ವಾಪಾಸ್ ಕೊಡದೇ ತುಳಿಯುತ್ತಲೇ ಇದ್ದೆ. ಈ ವಿಚಾರ ಗೊತ್ತಾಗಿ ಸೈಕಲ್ ಶಾಪ್ ಓನರ್ ನಾನಿದ್ದ ಜಾಗಕ್ಕೆ ಹುಡುಕಿಕೊಂಡು

ಬಂದೇಬಿಟ್ಟರು. ನಾನು, 'ಕೆಡ್ತಲ್ಲಪ್ಪಾ ಕೆಲಸ..' ಅಂತ ಅಂದುಕೊಳ್ಳುತ್ತಾ, ಸೈಕಲ್‌ನ್ನು ಅಲ್ಲೇ ಬಿಟ್ಟು ಎದ್ನೋ ಬಿದ್ನೋ ಅಂತ ಓಡಿಬಿಟ್ಟೆ. ಮತ್ತೆ ಮರುದಿನ ಸೈಕಲ್ ಕೇಳೋಕೆ ಹೋದರೆ ಎಲ್ಲಿ ಅವರು ಬೈತಾರೋ ಅಂತ ಒಂದಷ್ಟು ದಿನ ಸೈಕಲ್ ಶಾಪ್ ಕಡೆ ಹೋಗೋದೆ ಬಿಟ್ಟುಬಿಟ್ಟಿದ್ದೆ.

ಕಾಲಕ್ರಮೇಣ ಬೇರೆಯವರ ಹತ್ತಿರ ಸೈಕಲ್ ಕೇಳಿ ಪಡೆದು ತುಳಿಯೋದು ಕಲಿತೆ. ಇನ್ನು ಹೈಸ್ಕೂಲ್ ನಲ್ಲಿ ಸೈಕಲ್ ಕೊಟ್ಟಾಗ ಸ್ವರ್ಗಕ್ಕೆ ಒಂದೇ ಗೇಣು ಅನ್ನಿಸಿದ್ದು ಸುಳ್ಳಲ್ಲ. ಸುಮಾರು ವರ್ಷಗಳ ಕಾಲ ನಾನು ಸೈಕಲ್ ತುಳಿದುಕೊಂಡೇ ಕೆಲಸ ಕಾರ್ಯಗಳಿಗೆ ಓಡಾಡಿದೆ. ಈ ಆಧುನಿಕ ಯುಗದಲ್ಲಿ ಸೈಕಲ್‌ಗಳು ಮೂಲೆ ಗುಂಪಾಗಿವೆ. ಸೈಕಲ್‌ನ ಜಾಗವನ್ನು ಇತರೆ ವಾಹನಗಳು ಆಕ್ರಮಿಸಿವೆ.

ಬಸಣ್ಣನ ಸೈಕಲ್ ಶಾಪ್ ಇನ್ನೂ ಇದೆ. ಆದರೆ ಸೈಕಲ್‌ಗಳ ಬಳಕೆ ಹೆಚ್ಚಾಗಿ ಇಲ್ಲದ ಕಾರಣ ದುಡಿಮೆ ಅಷ್ಟಕ್ಕಷ್ಟೇ ಅನ್ನುತ್ತಾರೆ. ಈಗ ನಾನು ಹೊಸ ಬೈಕ್ ಕೊಂಡುಕೊಂಡಿದ್ದರೂ ಸಹ ನನ್ನ ಹಳೆಯ ಸೈಕಲ್ ಇನ್ನೂ ನನ್ನ ಹತ್ತಿರ ಇದೆ. ಅದನ್ನು ನೋಡಿದಾಗಲೆಲ್ಲ ಹಳೆಯ ನೆನಪುಗಳು ಜ್ಞಾಪಕವಾಗಿ ಹೃದಯ ಭಾರವೆನಿಸುತ್ತದೆ. ಮನಸ್ಸು ಮತ್ತೆ ಬಾಲ್ಯದ ಕಡೆ ಓಡುತ್ತದೆ. ನೆನಪುಗಳ ಮಾತೇ ಮಧುರ ಅನ್ನುವುದು ಅದಕ್ಕೇ ಅಲ್ಲವೆ!

ವಿ ಟಾಕೀಸ್

ಜುಲೈನಲ್ಲಿ ಮಾಫಿಯಾ

ಪ್ರಜ್ವಲ್ ದೇವರಾಜ್ ಮತ್ತೆ ಆ್ಯಕ್ಷನ್ ಲುಕ್‌ನಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಮಾಫಿಯಾ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವಾಗಿದ್ದು ಪ್ರಜ್ವಲ್ ಪೊಲೀಸ್ ಆಫೀಸರ್ ಆಗಿ ಕಾಣಿಸಿಕೊಂಡಿದ್ದಾರೆ. ಬೆಂಗಳೂರು ಕುಮಾರ್ ಫಿಲಂಸ್ ಲಾಂಛನದಲ್ಲಿ ಕುಮಾರ್ ಬಿ ನಿರ್ಮಿಸಿರುವ ಈ ಚಿತ್ರವನ್ನು ಹೆಚ್.ಲೋಹಿತ್ ನಿರ್ದೇಶಿಸಿದ್ದಾರೆ. ಚಿತ್ರೀಕರಣ ಮುಗಿಸಿರುವ ಮಾಫಿಯಾ ಚಿತ್ರವನ್ನು ಜುಲೈ 26ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ. ಆರಂಭದಿಂದಲೂ ಸಾಕಷ್ಟು ಕುತೂಹಲ ಹುಟ್ಟಿಸಿರುವ ಈ ಚಿತ್ರದ ಬಿಡುಗಡೆಗೆ ಸಿನಿಪ್ರಿಯರು ಕಾತುರದಿಂದ ಕಾಯುತ್ತಿದ್ದರು. ಅಂತು ಈಗ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಪ್ರಜ್ವಲ್‌ಗೆ ಜತೆಯಾಗಿ ಅದಿತಿ ಪ್ರಭುದೇವ ಬಣ್ಣಹಚ್ಚಿದ್ದಾರೆ. ದೇವರಾಜ್, ಸಾಧುಕೋಕಿಲ, ಶೈನ್ ಶೆಟ್ಟಿ, ವಿಜಯ್ ಚೆಂಡೂರ್, ವಾಸುಕಿ ವೈಭವ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಬೆಂಗಳೂರು, ಮೈಸೂರು ಹಾಗೂ

ಹೈದರಾಬಾದ್ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಅದ್ದೂರಿ ವೆಚ್ಚದ ಈ ಚಿತ್ರದಲ್ಲಿ ಐದು ಅದ್ಭುತ ಸಾಹಸ ಸನ್ನಿವೇಶಗಳಿವೆ. ನಾಲ್ಕು ಹಾಡುಗಳಿದ್ದು, ಅನೂಪ್ ಸೀಳಿನ್ ಸಂಗೀತ ಸಂಯೋಜಿಸಿದ್ದಾರೆ. ಎಸ್ ಪಾಂಡಿಕುಮಾರ್ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ.

ಈ ಸಿನಿಮಾದಲ್ಲಿ ಮಧ್ಯಮ ವರ್ಗದವರ ಕಷ್ಟ ಸುಖದ ಜತೆಗೆ ಹಾರರ್ ಸ್ಟೋರಿಯೂ ಇದೆ. ಟೆಡ್ಡಿಬೇರ್ ಒಳಗೆ ಆತ್ಮ ಹೇಗೆ ಸೇರಿಕೊಳ್ಳುತ್ತದೆ. ಇದರಿಂದ ನಾಯಕ ಮತ್ತು ನಾಯಕಿಗೆ ಯಾವೆಲ್ಲಾ ಸಮಸ್ಯೆಗಳು ಕಾಡುತ್ತವೆ ಎಂಬುದನ್ನು ಕುತೂಹಲ ಭರಿತವಾಗಿ ಕಟ್ಟಿಕೊಡಲಾಗಿದೆ. ಬೆಂಗಳೂರು, ಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

-ಬಿ.ಲೋಕೇಶ್ ನಿರ್ದೇಶಕ

ಹಾರರ್ ಕಥೆಯ ಟೆಡ್ಡಿಬೇರ್

ನಿರ್ದೇಶಕ ಪುರಿಜಗನ್ನಾಥ್ ಜತೆಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಅನುಭವವಿರುವ ಬಿ.ಲೋಕೇಶ್ ಈಗ ಚಂದನವನದಲ್ಲಿ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಲೋಕೇಶ್, ಟೆಡ್ಡಿಬೇರ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಟೆಡ್ಡಿಬೇರ್ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ. ಹಿರಿಯ ನಿರ್ದೇಶಕ ಸಾಯಿ ಪ್ರಕಾಶ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಟೆಡ್ಡಿಬೇರ್‌ನಲ್ಲಿ ಹಾರರ್ ಅಂಶಗಳು ಬೆರೆತಿದ್ದು, ಮಧ್ಯಮ ವರ್ಗದವರ ಕಥೆಯನ್ನು ಮನಸ್ಸಿಗೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ.

ಭಾರ್ಗವ್ ನಾಯಕನಾಗಿ ನಟಿಸಿದ್ದು, ಶೈಲಜಾ ಸಿಂಹ ಮತ್ತು ದೀನಾ ಪೂಜಾರಿ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಸ್ವರ್ಣರೇಖಾ, ದಿಶಾ ಪೂವಯ್ಯ, ಕಿಟ್ಟಿ ತಾಳಿಕೋಟೆ, ಮುತ್ತು, ಅರವಿಂದ್,

ಬೇಬಿ ಅಕ್ಷರಾ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಂಗೀತ ವಿವೇಕ್ ಜಂಗ್ಲಿ, ಛಾಯಾಗ್ರಹಣ ದೀಪು-ಬೆನಕರಾಜ್, ಸಂಕಲನ ಸಂತೋಷ್, ಸಾಹಸ ಸ್ಟಂಟ್ ಶಿವ, ಗಣೇಶ್, ಚನ್ನಕೃಷ್ಣ ಅವರದಾಗಿದೆ. ಆದ್ಯಲಕ್ಷ್ಮೀ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಜ್ಯೋತಿರಾ ರಾಕೇಶ್, ಭರತ್ ಮತ್ತು ನವೀನ್ ಜಂಟಿಯಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಬೆಂಗಳೂರು, ಮಂಗಳೂರು ಸುತ್ತಮುತ್ತ ಚಿತ್ರೀಕೆರಣ ನಡೆಸಲಾಗಿದೆ. ಜುಲೈ ತಿಂಗಳಲ್ಲಿ ಟೆಡ್ಡಿಬೇರ್ ತೆರೆಗೆ ಬರಲಿದೆ.

ಇಬ್ಬನಿ ತಬ್ಬಿದ ಇಳೆಯ ಇಂಪಾದ ಗಾನ

ಪರಂವಃ ಸ್ಟುಡಿಯೋಸ್ ಲಾಂಛನದಲ್ಲಿ ಜಿ.ಎಸ್ ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ನಿರ್ಮಿಸುತ್ತಿರುವ ಇಬ್ಬನಿ ತಬ್ಬಿದ ಇಳೆಯಲಿ ಚಿತ್ರ ಶೀರ್ಷಿಕೆಯಲಿಯೇ ಎಲ್ಲರ ಮನಗೆದ್ದಿದೆ. ಚಂದ್ರಜಿತ್ ಬೆಳ್ಳಿಯಪ್ಪ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಮೊಲದ ಸುಮಧುರ ಗಾನ ಇದೇ ಶುಕ್ರವಾರ ಬಿಡುಗಡೆಯಾಗಲಿದೆ. ಓ ಅನಾಹಿತ ಎಂಬ ಹಾಡು ಇದಾಗಿದ್ದು ಸಂಗೀತ ಪ್ರಿಯರ ಮನಗೆಲ್ಲುವುದು ಖಚಿತವಾಗಿದೆ. ನಿರ್ದೇಶಕ ಚಂದ್ರಜಿತ್ ಬೆಳ್ಳಿಯಪ್ಪ ಅವರೆ ಈ ಹಾಡಿಗೆ ಸಾಹಿತ್ಯ ರಚಿಸಿದ್ದಾರೆ. ಚಿತ್ರದಲ್ಲಿ ಆರು ಹಾಡುಗಳಿದ್ದು ಗಗನ್ ಬಡೇರಿಯಾ ಸಂಗೀತ ಸಂಯೋಜಿಸಿದ್ದಾರೆ. ದೀಕ್ಷಿತ್ ಈ ಗೀತೆಗೆ ನೃತ್ಯ ಸಂಯೋಜನೆ ಮಾಡಿದ್ದು, ಕಪಿಲ್ ಕಪಿಲನ್ ಈ ಹಾಡಿಗೆ ದನಿಯಾಗಿದ್ದಾರೆ.

ಚಿತ್ರೀಕರಣ ಮುಗಿಸಿರುವ ಇಬ್ಬನಿ ತಬ್ಬಿದ ಇಳೆಯಲಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ. ಪಂಚತಂತ್ರದ ಮೂಲಕ ಪ್ರೇಕ್ಷಕರ ಮನ ಗೆದ್ದಿದ್ದ ವಿಹಾನ್ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಅಂಕಿತಾ ಅಮರ್ ನಾಯಕಿಯಾಗಿ ಕಾಣಿಸಿಕೊಂಡಿ ದ್ದಾರೆ. ತೆಲುಗಿನ ಸೂಪರ್ ಹಿಟ್ ಗೀತಾಂಜಲಿ ಸೇರಿದಂತೆ ಅನೇಕ ಚಿತ್ರಗಳಲ್ಲಿ ನಟಿಸಿರುವ ಗಿರಿಜಾ ಶೆಟ್ಟರ್ ಈ ಚಿತ್ರದ ಮೂಲಕ ಬಹಳ ವರ್ಷಗಳ ಬಳಿಕ ಅಭಿನಯಕ್ಕೆ ಮರಳಿದ್ದಾರೆ. ಶ್ರೀವತ್ಸನ್ ಸೆಲ್ವರಾಜನ್ ಛಾಯಾಗ್ರಹಣ ಹಾಗೂ ರಕ್ಷಿತ್ ಕಾಪ್ ಸಂಕಲನ ಈ ಚಿತ್ರಕ್ಕಿದೆ.

ಕುತೂಹಲ ಮೂಡಿಸಿದ ರೆಚೆಲ್



ಮಾಲಿವುಡ್ ಅಂಗಳದಲ್ಲಿ ಕುತೂಹಲ ಮೂಡಿಸಿರುವ ರೆಚೆಲ್ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಮೂಲ ಮಲೆಯಾಳಂನಲ್ಲಿ ನಿರ್ಮಾಣವಾಗಿರುವ ರೆಚೆಲ್ ಕನ್ನಡದಲ್ಲಿಯೂ ರಿಲೀಸ್ ಆಗಲಿದೆ. ಕ್ರೈಂ, ಥ್ರಿಲ್ಲರ್ ಕಥೆ ಚಿತ್ರದಲ್ಲಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗಿದೆ. ಆನಂದಿನಿ ಬಾಲಾ ನಿರ್ದೇಶನದಲ್ಲಿ ಸಿದ್ಧವಾಗಿರುವ ಈ ಚಿತ್ರವನ್ನು ಎನ್.ಎಂ.ಬದೂಷ ನಿರ್ಮಾಣ ಮಾಡಿದ್ದಾರೆ. ಹನಿ ರೋಸ್ ನಾಯಕಿಯಾಗಿ ನಟಿಸಿದ್ದು ರಗಡ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಕೈಯಲ್ಲಿ ಕತ್ತಿ, ರಕ್ತ ಸಿಕ್ತವಾದ ಮುಖ, ಇದೆಲ್ಲವನ್ನೂ ನೋಡಿದರೆ ಇದು ಮರ್ಡರ್ ಮಿಸ್ಟ್ರಿಯ ಕಥೆ ಎಂಬುದು ಸ್ಪಷ್ಟವಾಗುತ್ತದೆ. ಬಾಬು ರಾಜ್, ಕಲಾಭವನ್ ಶಾಜೋನ್, ರೋಷನ್ ಬಶೀರ್, ಚಂದು ಸಲೀಂಕುಮಾರ್, ರಾಧಿಕಾ ರಾಧಾಕೃಷ್ಣನ್, ಜಾಫರ್ ಇಡುಕ್ಕಿ, ವಿನೀತ್ ತಟ್ಟಿಲ್, ಜೋಜಿ, ದಿನೇಶ್ ಪ್ರಭಾಕರ್, ಪಾಲಿ ವಲ್ಸನ್, ವಂದಿತಾ ಮನೋಹರನ್ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಪ್ಯಾನ್ ಇಂಡಿಯಾ ಸಿನಿಮಾವಾಗಿರುವ ರೆಚೆಲ್ ಮಲೆಯಾಳಂ, ಕನ್ನಡ ಸೇರಿದಂತೆ ಪಂಚ ಭಾಷೆಗಳಲ್ಲಿ ಮೂಡಿಬರಲಿದೆ. ಛಾಯಾಗ್ರಹಣ ಸ್ವರೂಪ್ ಫಿಲಿಪ್, ಸಂಗೀತ ಇಶಾನ್ ಛಾಬ್ರಾ, ಸಂಕಲನ ಮನೋಜ್ ಅವರದ್ದಾಗಿದೆ. ರೆಚೆಲ್ ಜುಲೈನಲ್ಲಿ ತೆರೆಗೆ ಬರುವ ನಿರೀಕ್ಷೆ ಇದೆ.

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಅನುರಾಧ, ಶುಕ್ಲಪಕ್ಷ, ತ್ರಯೋದಶಿ, ಯೋಗ ಸಾಧ್ಯ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಬೆಳ್ಳುಳ್ಳಿ ಎಸಳುಗಳನ್ನು ಹಾಲಿನಲ್ಲಿ ಹಾಕಿ ಕುದಿಸಿ, ಸೋಸಿ ಬೆಲ್ಲ ಸೇರಿಸಿ ರಾತ್ರಿ ಮಲಗುವ ಮುನ್ನ ಕುಡಿಯುವುದರಿಂದ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುವುದು. ಅಲ್ಲದೇ ಎದೆ ಬಡಿತ, ನರಗಳ ಬಳಹೀನತೆ, ರಕ್ತದ ಒತ್ತಡ ಎಲ್ಲವೂ ಪೂರ್ತಿಯಾಗಿ ಶಮನವಾಗುವುದು.

ಸೌಂದರ್ಯ ಸೂತ್ರ

ಮೆಂತ್ಯೆಯನ್ನು ಹಾಲಿನಲ್ಲಿ ಬೆರೆಸಿ ರಾತ್ರಿಯಿಡೀ ನೆನೆಸಿಡಿ. ಮರುದಿನ ಇದನ್ನು ನುಣ್ಣಗೆ ರುಬ್ಬಿ ತಲೆಗೆ ಹಚ್ಚಿಕೊಳ್ಳಿ. ಇದರಿಂದ ಕೂದಲು ಉದುರುವುದು ಕಡಿಮೆಯಾಗುವುದಲ್ಲದೆ, ರೇಷ್ಮೆಯಂತೆ ನುಣುಪಾಗುವುದು.

ದಿನ ಭವಿಷ್ಯ

ಮೇಷ
ಹಣಕಾಸಿನ ಸ್ಥಿತಿಯು ಉತ್ತಮವಾಗಿರುತ್ತದೆ. ಕೇವಲ ಹಗಲುಗನಸು ಕಾಣುವುದನ್ನು ಬಿಡಿ. ನಿಮಗೆ ಮಾಡಲು ಸಾಧ್ಯವಾದುದನ್ನು ಆಯ್ಕೆ ಮಾಡಿಕೊಂಡು ಕೆಲಸ ಪೂರೈಸಿ.

ವೃಷಭ
ಗೆಳೆಯರ ಒತ್ತಾಯದ ಮೇರೆಗೆ ಪ್ರಮುಖ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುವುದು. ನಿಮ್ಮ ಪ್ರಯತ್ನಕ್ಕೆ ಭಗವಂತನ ಕೃಪೆ ಇದೆ.

ಮಿಥುನ
ಪ್ರಮುಖ ವ್ಯಕ್ತಿಯೊಬ್ಬರ ಭೇಟಿಗೆ ಜಾತಕಪಕ್ಷಿಯಂತೆ ಕಾಯುವಿರಿ. ಆದರೆ ಗ್ರಹಸ್ಥಿತಿಯು ಕೂಡಾ ನಿರಾಸೆಯನ್ನುಂಟು ಮಾಡುವುದು.

ಕಟಕ
ನಿಮ್ಮನ್ನು ಸುಮ್ಮನೆ ಒತ್ತಡದಲ್ಲಿರಿಸುವ ಕಾರ್ಯತಂತ್ರವನ್ನು ರೂಪಿಸುವ ಗೆಳೆಯರಿಂದ ದೂರವಿರಿ. ಸಂಗಾತಿಯ ಸಕಾಲಿಕ ಎಚ್ಚರಿಕೆಯಿಂದ ನೆಮ್ಮದಿ.

ಸಿಂಹ
ನಿಮ್ಮ ಕಾರ್ಯಗಳ ಸಫಲತೆಗೆ ಅನಿರೀಕ್ಷಿತ ವಲಯದಿಂದ ಭಾರೀ ಸಹಾಯ ದೊರೆಯುವುದು. ಇದರಿಂದ ಮನಸ್ಸಿಗೆ ಆನಂದ.

ಕನ್ಯಾ
ಸಾಮಾಜಿಕ ಕಾರ್ಯ ಕ್ಷೇತ್ರದಲ್ಲಿ ಗೌರವ ಆದರಗಳು ದೊರೆಯುವುದು. ಹಳೆಯ ಕಡತ ಗಳನ್ನು ಸೂಕ್ಷ್ಮವಾಗಿಯೇ ಪರಿಶೀಲಿಸಿ ವಿಲೇವಾರಿ ಮಾಡಿ.

ತುಲಾ
ಸ್ನೇಹಿತರ ಇಲ್ಲವೆ ಬಂಧುಗಳ ಸಹಕಾರವನ್ನು ಪಡೆಯಿರಿ. ಹಣಕಾಸಿನ ಪರಿ ಸ್ಥಿತಿ ಅಷ್ಟೇನು ಆಶಾ ದಾಯಕವಾಗಿಲ್ಲದ ಕಾರಣ ಹಣವನ್ನು ಮಿತವಾಗಿ ಬಳಸಿ.

ವೃಶ್ಚಿಕ
ಹೆಚ್ಚಿನ ವೇಗದ ಅಥವಾ ನಿರ್ಲಕ್ಷ್ಯದ ವಾಹನ ಚಾಲನೆಯು ಅಪಘಾತ ಉಂಟುಮಾಡುತ್ತದೆ. ಪ್ರಯಾಣದಲ್ಲಿ ರಸ್ತೆ ನಿಯಮಗಳನ್ನು ಪಾಲಿಸಿ.

ಧನು
ಹಣಕಾಸು ವ್ಯವಹಾರದಲ್ಲಿ ಎಚ್ಚರಿಕೆಯಿಂದ ಇರಿ. ಬ್ಯಾಂಕಿನಲ್ಲಿ ವ್ಯವಹರಿಸುವಾಗ ಬ್ಯಾಂಕಿಗೆ ಸಂಬಂಧಪಟ್ಟ ದಾಖಲೆಗಳನ್ನು ಸರಿಯಾಗಿಟ್ಟುಕೊಳ್ಳಿ.

ಮಕರ
ಸರ್ಕಾರಿ ಕೆಲಸದಲ್ಲಿ ಅನ್ಯರ ಹಸ್ತಕ್ಷೇಪದಿಂದ ತೊಂದರೆ. ಯಾರೊ ಡನೆಯೂ ಗುಟ್ಟು ಬಿಟ್ಟುಕೊಡದಿರಿ. ಸಂಗಾತಿಯ ಜತೆ ವಾದ ವಿವಾದವನ್ನು ಮಾಡಿಕೊಳ್ಳದಿರಿ.

ಕುಂಭ
ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನು ಹೊಂದುತ್ತಿರುವ ನಿಮ್ಮನ್ನು ಕಂಡು ಇತರರು ಅಸೂಯೆ ಪಡುವರು. ಆ ಬಗ್ಗೆ ತಲೆ ಕೆಡಿಸಿಕೊಳ್ಳದೆ ನಿಮ್ಮ ಕಾರ್ಯದಲ್ಲಿ ತಲ್ಲೀನರಾಗಿ.

ಮೀನ
ದೈಹಿಕ ಆಲಸ್ಯತನದಿಂದ ಕೆಲಸ ಕಾರ್ಯಗಳಲ್ಲಿ ಹಿನ್ನಡೆ ಉಂಟಾಗುವುದು. ಮಕ್ಕಳ ವಿಷಯದಲ್ಲಿ ಹರ್ಷದಾಯಕ ವಾರ್ತೆಗಳನ್ನು ಕೇಳುವಿರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1986 – ಕನ್ನಡದ ನಟ ನೀನಾಸಂ ಸತೀಶ್ ಜನನ
- 1985: ಮದರ್ ತೆರೇಸಾ ಅವರಿಗೆ ರಾಷ್ಟ್ರಪತಿ ಪದಕವನ್ನು ನೀಡಲಾಯಿತು.
- 1866: ಇಟಲಿ ಆಸ್ಟ್ರಿಯಾದ ಮೇಲೆ ಯುದ್ಧ ಘೋಷಿಸಿತು.
- 1756 – ಬ್ರಿಟೀಷರಿಂದ ಕಲ್ಕತ್ತಾವನ್ನು ಮರಳಿ ಪಡೆದ ಬಂಗಾಳದ ಸಿರಾಜ್ ಉದ್-ದೌಲಾ ನವಾಬ್

ಚಿತ್ರಸ್ಫೂರ್ತಿ



ಅಬುಧಾಬಿಯ ಫಾಹಿದ್ ದ್ವೀಪದಲ್ಲಿರುವ ಮನಾರ್ ನಗರದಲ್ಲಿನ ಆರ್ಟ್ ಆಫ್ ಲೈಟ್ ಪ್ರದರ್ಶನದಲ್ಲಿ ಜಿಮ್ ಡೆನೆವನ್ ಅವರ ಮರಳಿನ ಸ್ಮಾರಕ ಭೂಮಿಯ ಕಲಾಕೃತಿ ಪ್ರದರ್ಶಿಸಲಾಯಿತು. ಇದು ಸುಮಾರು ಕಾಲು ಕಿ.ಮೀ ವಿಸ್ತೀರ್ಣವಿದ್ದು, 27 ಮೀಟರ್ ಎತ್ತರವಿದೆ. ಅಬುಧಾಬಿಯ ಸುತ್ತ ವ್ಯಾಪಕವಾದ ಪ್ರದರ್ಶನದ ಭಾಗವಾಗಿ ಸೆಲ್ಫ್ ಸಿಮಿಲರ್ ತುಣುಕು ಯುಎಇಯಲ್ಲಿ ಪ್ರದರ್ಶನದಲ್ಲಿದೆ. ರಾತ್ರಿಯಲ್ಲಿ ಕಲಾಕೃತಿಗಳ ಮೇಲೆ ಅಳವಡಿಸಿರುವ ಸಾವಿರಕ್ಕೂ ಹೆಚ್ಚು ಸೌರಶಕ್ತಿಯ ದೀಪಗಳನ್ನು ಬೆಳಗಿಸಿದಾಗ ದೃಶ್ಯವು ಸಂಪೂರ್ಣವಾಗಿ ಬದಲಾಗುತ್ತದೆ. ಬಾಹ್ಯಾಕಾಶದಲ್ಲಿನ ನೀಲಿಯ ಬಣ್ಣದ ಜೊತೆಗೆ ನೆಲದಲ್ಲಿ ಹರಡಿರುವ ಸೃಷ್ಟಿಯ ಮೇಲೆಲ್ಲಾ ಮಿಂಚುವಂತೆ ಗೋಚರಿಸುತ್ತವೆ.

ಚಿತ್ರಮಾಹಿತಿ:
ವಿಶ್ವನಾಥ್ ಬಳುವನೇರಲು

ಗುರುಭಕ್ತಿಯಿಂದ, ಗುರುಕೃಪೆಗೆ ಪಾತ್ರನಾದ ತೋಟಕಾಚಾರ್ಯ

ಒಂದೊಳ್ಳೆ ಮಾತು

ಅದ್ವೈತ ತತ್ವದ ಪ್ರತಿಪಾದಕರಾದ ಆದಿ ಶಂಕರಾಚಾರ್ಯರಿಗೆ ನಾಲ್ಕು ಜನ ಮಹಾಮಹಿಮರಾದ ಶಿಷ್ಯರಿದ್ದರು. ಅವರು ಪದ್ಮಪಾದ, ಹಸ್ತಾಮಲಕ, ಸುರೇಶ್ವರಾಚಾರ್ಯ ಮತ್ತು ತೋಟಕಾ ಚಾರ್ಯ. ಕೊನೆಯವನಾದ ತೋಟಕಾಚಾರ್ಯ, ವಿದ್ಯಾರ್ಥಿ ಜೀವನದಲ್ಲಿ ದಡ್ಡ ವಿದ್ಯಾರ್ಥಿಯಾಗಿದ್ದನು. ಆದರೆ ಆತನು ತನ್ನ ಗುರುಗಳಾದ ಶಂಕರರಲ್ಲಿ ತುಂಬಾ ಭಕ್ತಿಯನ್ನು ಇಟ್ಟು ಕೊಂಡಿದ್ದನು. ತನ್ನ ಗುರುಗಳಿಗಾಗಿ ಯಾವ ಸೇವೆಯನ್ನು ಮಾಡಲು ಸಹ ಆತ ಸಿದ್ಧನಾಗಿದ್ದನು.

ಒಂದು ದಿನ ಪಾಠ ಇನ್ನೇನು ಪ್ರಾರಂಭವಾಗಬೇಕು ಈ ದಡ್ಡ ಶಿಷ್ಯನು ಗುರುಗಳ ಬಟ್ಟೆ ಒಗೆಯುವುದರಲ್ಲಿ ನಿರತನಾಗಿದ್ದನು. ತರಗತಿಗೆ ಬರುವುದು ಸ್ವಲ್ಪ ತಡವಾಯಿತು. ಗುರುಗಳು ಆ ದಿನ ಬ್ರಹ್ಮ ಸೂತ್ರದ ಪಾಠ ಮಾಡುವುದಿತ್ತು. ಉಳಿದ ಶಿಷ್ಯರು ತೋಟಕಾಚಾರ್ಯ ಬರದೇ ಇರುವುದನ್ನು ಕಂಡು ಇನ್ನು ತಡ ಮಾಡುವುದು ಬೇಡ ತರಗತಿಯನ್ನು ಪ್ರಾರಂಭಿಸಿ ಎಂದು ಗುರುಗಳಾದ ಶಂಕರಾಚಾರ್ಯರಲ್ಲಿ ಒತ್ತಾಯ ಮಾಡಿದರು. ವಿದ್ಯಾರ್ಥಿಗಳು, 'ಗುರುಗಳೇ, ತೋಟಕಾಚಾರ್ಯ ಒಬ್ಬ ದಡ್ಡ ವಿದ್ಯಾರ್ಥಿ. ಅವನಿಗೆ ಬ್ರಹ್ಮಸೂತ್ರ ಎಂದರೇನು ಎಂಬುದೇ ತಿಳಿಯದು. ನಮ್ಮ ಹೇಳಿಕೊಡುವುದನ್ನು ಪ್ರಾರಂಭ ಮಾಡಿ, ಅವನಿಗಾಗಿ ಕಾದು ಪ್ರಯೋಜನವಿಲ್ಲ. ಏಕೆಂದರೆ ಈ ಗ್ರಂಥದಲ್ಲಿನ ಶ್ಲೋಕಗಳ ಸೂಕ್ಷ್ಮ ರೀತಿಯ ಭಾವವನ್ನು ಆತ ಅರಿಯಲಾರ' ಎಂದರು. ಇದನ್ನು ಕೇಳಿದ ಶಂಕರರು ಅಹಂಕಾರದ ಶಿಷ್ಯರಿಗೆ ಸ್ವಲ್ಪ ಪಾಠ ಕಲಿಸಬೇಕು ಎಂದು ಮನಸ್ಸಿನಲ್ಲಿ ಅಂದುಕೊಂಡರು. ಅವರು ತಕ್ಷಣವೇ ತಮ್ಮ ಭಕ್ತನಾದ ತೋಟಕಾಚಾರ್ಯನಿಗೆ ಮಾನಸಿಕವಾಗಿ ಗುರುಕೃಪೆಯ ಮಳೆಯನ್ನೇ ಸುರಿಸಿದರು. ತೋಟಕಾಚಾರ್ಯನಿಗೆ ಆ ಕ್ಷಣದಲ್ಲೇ ಜ್ಞಾನೋದಯವಾಯಿತು. ಬ್ರಹ್ಮವಿದ್ಯೆಯ ಅರಿವು ಆತನಲ್ಲಿ ಆ ಕೂಡಲೇ ಪ್ರಾಪ್ತಿಯಾಯಿತು. ತರಗತಿಗೆ ಬಂದ ಮೇಲೆ ಶ್ಲೋಕಗಳ ರೂಪದಲ್ಲಿ ಆತ ಗುರುಗಳನ್ನು ಸ್ತುತಿಸಲು ಪ್ರಾರಂಭಿಸಿದ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಪೂರ್ಣ ಶಾಸ್ತ್ರಗಳಲ್ಲಿ ವಿಜ್ಞಾನದ ನಿಧಿಯಾದ ದಯಾಸಾಗರನೇ, ಉಪನಿಷತ್ತುಗಳ ಮಹಾವಾಕ್ಯಗಳು ನಿಧಿಯನ್ನು ನನ್ನ ಮುಂದಿಟ್ಟಿರುವಿರಿ. ನನ್ನ ಹೃದಯ ಮಂದಿರದಲ್ಲಿ ನೆಲೆಸಿರುವ ತಮ್ಮ ಪಾದ ಕಮಲಗಳನ್ನು ನಾನು ಧ್ಯಾನಿಸುತ್ತಿದ್ದೇನೆ. ನನ್ನ ನೆಚ್ಚಿನ ಗುರುವರ್ಯರಾದ ಆದಿಶಂಕರರು ತಾವು ನನ್ನ ಆಶ್ರಯದಾತರು. ಜೀವ ಮತ್ತು ಈಶ್ವರ ಈ ರೂಪಗಳ ಮಹಾ ತತ್ವಗಳ ವ್ಯಾಖ್ಯಾನವನ್ನು ಪ್ರತಿಪಾದಿಸಿರುವ ತಮಗೆ ಅನಂತ ವಂದನೆಗಳು. ತಾವೇ ನನ್ನ ದೇವರು. ಇಂದು ನಾನು ಪರಿಪೂರ್ಣನಾಗಿದ್ದೇನೆ. ನನ್ನ ಮರುಳು ಮನದ ಸಾಗರವನ್ನು ತೊಳೆದು ಹಿಂಗಿಸಿದ್ದೀರಿ. ಗುರುವೇ ನೀವೇ ನನ್ನ ಅಧ್ಯಾತ್ಮಿಕ ದಾರಿದೀಪ. ನನ್ನ ಅನೇಕ ಜನ್ಮಗಳ ಪುಣ್ಯ ವಿಶೇಷಗಳಿಂದ ತಮ್ಮ ಪಾದಪದ್ಮಗಳ ದರ್ಶನ ನನಗೆ ದೊರಕಿದೆ. ಈ ತಮ್ಮ ಭೃತ್ಯನನ್ನು ಕಾಪಾಡಿ. ನನ್ನ ಅಧ್ಯಾತ್ಮ ಗುರುದೇವ ಎಂಬುದು ಅದರ ಭಾವಾರ್ಥ.

ಅದುವರೆವಿಗೂ ಮಡ್ಡಿಯಂತಿದ್ದು ಶ್ಲೋಕಗಳ ಗಂಧವನ್ನೆ ಅರಿಯದೆ ನಾಲ್ಕು ಮಾತುಗಳನ್ನು ಆಡಲಾರದ ತೋಟಕಾಚಾರ್ಯನ ಇಂತಹ ಅದ್ಭುತ ವಿದ್ವತ್ ವಾಕ್ಯಗಳನ್ನು ಕೇಳುತ್ತಿದ್ದಂತೆಯೇ ಇತರ ಶಿಷ್ಯರು ದಿಗ್ಭ್ರಾಂತರಾದರು. ಆಮೇಲೆ ಅವರ ಅಹಂಕಾರವೂ ಮಟ್ಟ ಹಾಕಲ್ಪಟ್ಟಿತು.

ಶಿವಾನಂದ ಗುರುಗಳು ಬರೆದ ಕಥೆಗಳ ಸಂಗ್ರಹದಲ್ಲಿ ಸಿಕ್ಕ ಈ ಘಟನೆಯಲ್ಲಿ ಗುರುವಿನ ಮಹತ್ವ ನಮಗೆ ಬಹಳ ಪ್ರಭಾವಯುತವಾಗಿ ಮನದಟ್ಟಾಗುತ್ತದೆ. ಗುರುವಿನ ಕೃಪೆಯೊಂದಿದ್ದರೆ ಬದುಕಿನಲ್ಲಿ ಬಂದೊಮ್ಮೆ ನಮ್ಮ ಹಣೆಬರಹವೇ ಸರಿಯಾಗಿರದಿದ್ದರೂ ಕೂಡ ಗುರು ನಮ್ಮನ್ನು ಮುನ್ನಡೆಸಲು ಸಾಧ್ಯ ಎನ್ನುವುದು ಅರಿವಿಗೆ ಬರುತ್ತದೆ. ಎಷ್ಟೋ ಮಕ್ಕಳು ಹುಟ್ಟುತ್ತಾ ಎಲ್ಲಾ ಒಳ್ಳೆಯ ಗುಣಗಳನ್ನು ಪಡೆದು ಹುಟ್ಟುವುದಿಲ್ಲ. ಅವರ ಹುಟ್ಟು, ಸಂಸಾರದ ವಾತಾವರಣ, ತಂದೆ ತಾಯಿಯ ಅಜ್ಞಾನ ಇವೆಲ್ಲವೂ ಆ ಮಕ್ಕಳನ್ನು ಬೂದಿ ಮುಚ್ಚಿದ ಕೆಂಡದಂತೆ ಮಂಕಾಗಿರಿಸುತ್ತದೆ.

ಆದರೆ ಅಂತಹ ಮಕ್ಕಳಿಗೆ ಒಬ್ಬ ವಿದ್ವತ್ಪೂರ್ಣ ಗುರು ದೊರೆತರೆಂದರೆ, ಆ ಗುರುವಿನ ಕೃಪೆ ಆ ಮಕ್ಕಳಿಗಾಗಿ ಎಂದಾದರೆ ಖಂಡಿತ ಆ ಮಕ್ಕಳು ಪ್ರಜ್ವಲಿಸಲು ಪ್ರಾರಂಭಿಸುತ್ತಾರೆ. ಎಲ್ಲಕ್ಕಿಂತ ಮೊದಲು ಮಕ್ಕಳಿಗೆ ಗುರು ಹಿರಿಯರಿಗೆ ವಿನಮ್ರತ ಭಾವದಿಂದ ನಡೆದುಕೊಳ್ಳುವುದನ್ನು ಹೇಳಿಕೊಟ್ಟರೆ ಅವರ ಮುಂದಿನ ಬದುಕು ಆ ಗುರು ಹಿರಿಯರ ಆಶೀರ್ವಾದದಿಂದಲೇ ಉಜ್ವಲವಾಗುತ್ತದೆ.

ಪದಬಂಧ



ಎಡದಿಂದ ಬಲಕ್ಕೆ
1. ಮತ್ತೊಂದು ಆಡಿನಿಂದ ಆರಂಭವಾಗುವ ಹೆಬ್ಬಾವು (4)
3. ಅವನಿಗೆ ಸರ ತರುವ ಆತುರ (4)
6. ನಿಜ ಹೇಳಿದ ಮನುಷ್ಯ (3)
7. ಬುದ್ಧನಿಗೆ ಮತ್ತೊಂದು ಹೆಸರು (3)
9. ಕಣ್ಣಿಗೆ ಹಚ್ಚುವ ಕಾಡಿಗೆ (3)
11. ಕಣಿ ಹೇಳುವವಳು (4)
12. ವಜಾಮಾಡು ಅಥವಾ ತೆಗೆದು ಹಾಕು ಎಂದರ್ಥ (4)
14. ರೇಗುವುದು ಎಕ್ಕಡದಿಂದ ಆರಂಭವಾಗಿದೆ (3)
16. ಹಾಡುಗಾರನಿಗೆ ಇನ್ನೊಂದು ಹೆಸರು (3)
18. ಹುಲ್ಲಿನ ಮೆದೆ (3)
19. ಎರಡೂ ಕೈಗಳಿಂದ ಬಾಣ ಬಿಡಬಲ್ಲವನು (4)
20. ಅವನು ನೀಡಿದ ಒಪ್ಪಿಗೆ (4)

ಮೇಲಿನಿಂದ ಕೆಳಕ್ಕೆ
2. ದೊಡ್ಡ ಭೂಮಿಯ ಒಡೆಯ (5)
4. ಸರ ದೀರ್ಘವಾಗಿ ರಾಗ ಸೇರಿದರೆ ಸಲೀಸು (3)
5. ಹಿರಿಯಣ್ಣ (3)
8. ತೆಳುವಾಗಿರುವ ಲೋಹದ ಹಳೆ (3)
9. ಮನದೊಳಗೇಕೋ ಹೆದರಿಕೆ (3)
10. ವೇದನೆಪಡು ಎಂದರ್ಥ (3)
11. ನಾಲ್ಕು ಬಳ್ಳಗಳ ಪರಿಮಾಣ (3)
13. ದೊಡ್ಡ ಮಟ್ಟದ ನಾಶ (5)
15. ಸ್ವಾದವನ್ನು ತಿಳಿಸುವ ನಾಲಗೆ (3)
17. ಉತ್ತರ ಮತ್ತು ಪಶ್ಚಿಮಗಳ ನಡುವಿನ ದಿಕ್ಕು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಇಬ್ಬನಿ 3. ಆಶ್ವಾಸನೆ 5. ವೇಲಾವನ 6. ಜಲದ 7. ನಮಸ್ಕಾರ 9. ನೆರಳು 11. ಮದ 13. ಹಂತ 16. ವಿರಸ 18. ಕಟಾಂಜನ 20. ಮಯೂರ 21. ಗಡಿಯಾರ 22. ಕರವೀರ 23. ಸಮೂಹ
ಮೇಲಿನಿಂದ ಕೆಳಕ್ಕೆ: 2. ನಿವೇದನೆ 3. ಆನನ 4. ನೆಸರ 6. ಜನುಮ 8. ಮಜ್ಜೆ 10. ರಕ್ತ 12. ದ್ವಾರ 14. ತವರ 15. ಅಜ 17. ಸಮರಸ 18. ಕಟುಕ 19. ನಗರ

● ಸಿ. ರವಿಶಂಕರ ಶಾಸ್ತ್ರಿ, ದಂಟೆ

ದಿನಕ್ಕೊಂದು ಮಾಹಿತಿ

ಸ್ನಾನದ ವೇಳೆ ಸೃಜನಶೀಲತೆ



ಮನುಷ್ಯನು ಯಾವ ಸಂದರ್ಭದಲ್ಲಿ ಅತ್ಯಂತ ಸೃಜನಶೀಲನಾಗಿರುತ್ತಾನೆ ಎಂದರೆ ನಿಜಕ್ಕೂ ಆಶ್ಚರ್ಯ ಪಡುತ್ತೀರಿ. ಸಂಶೋಧಕರ ಪ್ರಕಾರ, ಬಾತ್‌ರೂಮ್‌ನಲ್ಲಿ ಬೆಚ್ಚಗಿನ ನೀರು ಮೈಮೇಲೆ ಬಿದ್ದಾಗ ಮನುಷ್ಯನ ಕ್ರಿಯಾತ್ಮಕತೆಯೂ ಹೆಚ್ಚುತ್ತದೆಯಂತೆ. ಆಗ ಆತನ ಯೋಚನಾಶಕ್ತಿ ಅತ್ಯಂತ ವೇಗವಾಗಿ ಕೆಲಸ ಮಾಡುತ್ತದೆ. ಇದಕ್ಕೆ ಕಾರಣ, ಬೆಚ್ಚಗಿನ ನೀರು ದೇಹದಲ್ಲಿ ಡೋಪಮೈನ್ ಎನ್ನುವ ಹಾರ್ಮೋನ್‌ನ ಹರಿವನ್ನು ಹೆಚ್ಚಿಸುತ್ತದೆ. ಮತ್ತದು ನಮ್ಮನ್ನು ಹೆಚ್ಚು ಸೃಜನಶೀಲರನ್ನಾಗಿ ಮಾಡುತ್ತದೆ. ಖ್ಯಾತ ವಿಜ್ಞಾನಿ ಆರ್ಕಿಮಿಡೀಸ್‌ನ ಸಂಶೋಧನೆ ಸಾಕಾರ ಗೊಂಡಿದ್ದು, ಸ್ನಾನದ ಮನೆಯಲ್ಲೇ ಅಲ್ಲವೇ..?

ಪುಸ್ತಕ ಲೋಕ



ಸಸ್ಯ ಸಗ್ಗ

ಕೆ.ಎನ್. ಗಣೇಶಯ್ಯ ಅವರು ಅನುಭವದ ಪರಿಧಿಗೆ ಬಂದಿರುವ ಸಸ್ಯ ಶಾಸ್ತ್ರದ ವಿಸ್ಮಯಕಾರಿ ಸಂಗತಿಗಳನ್ನು ಸಸ್ಯ ಸಗ್ಗ ಕೃತಿಯಲ್ಲಿ ಪರಿಚಯಿಸಿದ್ದಾರೆ. ಸಸ್ಯಶಾಸ್ತ್ರದ ವಿಜ್ಞಾನಿಯಾಗಿರುವ ಲೇಖಕರು, ನಾಲ್ಕು ದಶಕಗಳ ಸಸ್ಯ ಸಂಶೋಧನೆಯಲ್ಲಿ ಕಂಡ ಸಸ್ಯ ಜಗತ್ತಿನ ಸೋಜಿಗಗಳನ್ನು ಸಾಹಿತ್ಯ ರೂಪಕ್ಕಿಳಿಸಿದ್ದಾರೆ. ತಮ್ಮ ಸಂಶೋ ಧನೆಯ ವಿವಿಧ ಆಯಾಮಗಳನ್ನು ವೃತ್ತಿ ಜೀವನದ ಕಥನದೊಂದಿಗೆ ಮೇಳೈಸಿ ರಚಿಸಿರುವ ವಿಶಿಷ್ಟ ಕೃತಿ ಇದು. ಸಸ್ಯ ಸಗ್ಗ ಪುಸ್ತಕದಲ್ಲಿ 376 ಪುಟಗಳಿವೆ. ಪುಸ್ತಕವನ್ನು ಓದುತ್ತಿದ್ದಂತೆಯೇ ಸಸ್ಯ ಜಗತ್ತಿನ ಹಲವಾರು ಸೋಜಿಗ ಸಂಗತಿಗಳು ನಿಮ್ಮ ಮುಂದೆ ಬಂದು ನಿಂತ ಹಾಗೆ ಭಾಸವಾಗುತ್ತದೆ. ವಿದ್ಯಾರ್ಥಿಗಳಿಂದ ಹಿಡಿದು ಪುಸ್ತಕವನ್ನು ಓದುವ ಆಸಕ್ತಿ ಇರುವ ಪ್ರತಿ ವ್ಯಕ್ತಿಗೂ ಈ ಹೊತ್ತಿಗೆಯ ವಿಷಯ ರುಚಿಸುತ್ತದೆ.

ಟ್ವೀಟ್‌ಮೆಂಟ್

ಮೆಕ್ ಮಿಲನ್
ನಿಮ್ಮ ಮನಸ್ಸಿನ ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರಿದ ವಿಷಯದ ಬಗ್ಗೆ ಹೇಳಿ?
ಬ್ರುಬೇಸ್
ಟಿವಿ ಚಾನೆಲ್‌ನ್ನು ನೋಡುವುದು ನಿಲ್ಲಿಸಿದ್ದು!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಇತ್ತೀಚೆಗೆ ಕಾಡ್ಗಿಚ್ಚಿನ ಕಾರಣದಿಂದ ಸುದ್ದಿಯಲ್ಲಿದ್ದ ಭೀಮತಾಲ್ ಸರೋವರವು ಯಾವ ರಾಜ್ಯದಲ್ಲಿದೆ?

- ಎ. ಪಶ್ಚಿಮ ಬಂಗಾಳ.
- ಬಿ. ಹರ್ಯಾಣ.
- ಸಿ. ಉತ್ತರಾಖಂಡ.
- ಡಿ. ಮಣಿಪುರ.

ಉತ್ತರ: ಸಿ. ಉತ್ತರಾಖಂಡ.

ಮಾಹಿತಿ

ಇತ್ತೀಚೆಗೆ, ಭಾರತೀಯ ವಾಯುಪಡೆಯ (ಐ ಎ ಎಫ್) ಹೆಲಿಕಾಪ್ಟರ್, ಹತ್ತಿರದ ಕಾಡಿನ ಬೆಂಕಿಯನ್ನು ನಿಯಂತ್ರಿಸಲು ಉತ್ತರಾಖಂಡ್ನ ನೈನಿತಾಲ್‌ನಲ್ಲಿರುವ ಭೀಮತಾಲ್ ಸರೋವರದಿಂದ ನೀರನ್ನು ಸಂಗ್ರಹಿಸಿದೆ. ಬೆಂಕಿಯನ್ನು ನಿಯಂತ್ರಿಸಲು ಸಹಾಯ ಮಾಡಲು ಭಾರತೀಯ ಸೇನೆ ಮತ್ತು ಐ ಎ ಎಫ್ ಅನ್ನು ಕರೆಸಲಾಯಿತು. ಎಮ್ ಐ-17 ಚಾಪರ್‌ಗಳ ಮೂಲಕ ನೀರನ್ನು ಮೇಲಕ್ಕೆತ್ತಲಾಯಿತು. ನೈನಿತಾಲ್ ಜಿಲ್ಲೆಯ ಉತ್ತರಾಖಂಡದ ಅತಿ ದೊಡ್ಡ ಸರೋವರವಾದ ಭೀಮತಾಲ್ ಸರೋವರವು ಕುಮಾನ್ ಪ್ರದೇಶದ ಕೇಂದ್ರಬಿಂದುವಾಗಿದೆ. ಇದನ್ನು ಭಾರತದ 'ಸರೋವರಗಳ ಜಿಲ್ಲೆ' ಎಂದು ಕರೆಯಲಾಗುತ್ತದೆ. ಈ ಸರೋವರಕ್ಕೆ ಮಹಾಭಾರತದ ಭೀಮನ ಹೆಸರನ್ನು ಇಡಲಾಗಿದೆ. ಇದು ಭೂಮಿಯ ಹೊರಪದರ ಬದಲಾವಣೆಯಿಂದಾಗಿ ನೈಸರ್ಗಿಕವಾಗಿ ರೂಪುಗೊಂಡಿದೆ. ಬ್ರಿಟೀಷರ ಕಾಲದಲ್ಲಿ 1883 ರಲ್ಲಿ ಕಲ್ಲಿನಲ್ಲಿ ಈ ಆಣೆಕಟ್ಟನ್ನು ನಿರ್ಮಿಸಲಾಗಿದೆ.

ಕಾಮಕಸ್ತೂರಿಯ ಕರಾಮತ್ತು

ತುಳಸಿಯನ್ನು ಹೋಲುವ ಕಾಮಕಸ್ತೂರಿಗಿಡವನ್ನು ಮನೆಯಂಗಳ, ತೋಟಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ತುಂಬಾ ಸುವಾಸನೆಯನ್ನು ಹೊಂದಿರುವ ಈ ಗಿಡದ ಬೀಜಗಳ ಬಳಕೆ ಹೆಚ್ಚು. ಇದು ಕೊಬ್ಬು, ಕಬ್ಬಿಣ ಮತ್ತು ನಾರಿನಂಶವನ್ನು ಹೊಂದಿದೆ. ದೇಹಕ್ಕೆ ತಂಪನ್ನು ನೀಡುವುದರ ಜತೆಗೆ ಅನೇಕ ರೋಗಗಳಿಗೆ ಮನೆ ಮದ್ದಾಗಿದೆ. ಕಾಮಕಸ್ತೂರಿಯನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ಒಸಿಮಮ್ ಬೆಸಿಲಿಕಮ್

ಔಷಧಿ ಗುಣಗಳು: ದೇಹವನ್ನು ತಂಪಾಗಿರಿಸಲು ಸಹಕಾರಿ; ಬೇಸಿಗೆಯಲ್ಲಿ, ತುಂಬಾ ಉಷ್ಣತೆ ಆದಾಗ, ದೇಹವನ್ನು ತಂಪಾಗಿರಿಸಲು, ರಾಸಾಯನಿಕಗಳಿಂದ ತಯಾರಿಸಿದ ತಂಪು ಪಾನೀಯಗಳನ್ನು ಕುಡಿಯುವ ಬದಲು, ಕಾಮ ಕಸ್ತೂರಿ ಬೀಜವನ್ನು ನೀರಿನಲ್ಲಿ ನೆನೆ ಹಾಕಿಕೊಂಡು ಕುಡಿಯುವುದರಿಂದ ದೇಹದ ಉಷ್ಣತೆಯು ನಿಯಂತ್ರಣದಲ್ಲಿರುತ್ತದೆ.

ಗಂಟಲು ಬೇನೆಗೆ ಮನೆಮದ್ದು: ಕಾಮಕಸ್ತೂರಿಯ ಹಸಿ ಎಲೆಗಳನ್ನು ಅರೆದು, ಅದರಿಂದ ರಸವನ್ನು ತೆಗೆದು, ಸೋಸಿಕೊಂಡು ಆ ರಸಕ್ಕೆ ಸ್ವಲ್ಪ ಜೇನು ತುಪ್ಪ ಬೆರೆಸಿ ಸೇವಿಸುವುದರಿಂದ ಗಂಟಲು ಬೇನೆ ಗುಣಮುಖ ವಾಗುತ್ತದೆ.

ಮಲಬದ್ಧತೆಗೆ ಉತ್ತಮ ಪರಿಹಾರ: ಕಾಮ ಕಸ್ತೂರಿ ಬೀಜಗಳನ್ನು ನೀರಿನಲ್ಲಿ ನೆನೆಸಿ. ಅದು ಉಬ್ಬಿ ಲೋಳೆಯಂತಾದಾಗ, ಸ್ವಲ್ಪ ಕಲ್ಲುಸಕ್ಕರೆಯ ಪುಡಿಯನ್ನು ಸೇರಿಸಿ, ಸೇವಿಸುವುದರಿಂದ ದೇಹ ತಂಪಾಗಿ, ಮಲ ಬದ್ಧತೆಯು ನಿವಾರಣೆಯಾಗುತ್ತದೆ. ಅಜೀರ್ಣ ವನ್ನು ಹೋಗಲಾಡಿಸುವುದು; ಅಜೀರ್ಣದ ಸಮಸ್ಯೆ ಯಿಂದ ಬಳಲುತ್ತಿರುವವರು, ಮನೆಯಲ್ಲಿ ಕಾಮ ಕಸ್ತೂರಿ ಗಿಡ ಬೆಳೆಸಿದರೆ, ತುಂಬಾ ಪ್ರಯೋಜನವಿದೆ. ಕಾಮ ಕಸ್ತೂರಿಯ ಹೂವುಗಳನ್ನು ನೀರಿನಲ್ಲಿ ಅರೆದು, ನಂತರ ಅದನ್ನು ಶುದ್ಧವಾಗಿ ಸೋಸಿಕೊಂಡು, ಅದಕ್ಕೆ ಸ್ವಲ್ಪ ಜೇನುತುಪ್ಪ ಸೇರಿಸಿ, ಗಂಟೆಗೊಮ್ಮೆ 1/2 ಚಮಚ ರಸವನ್ನು ತೆಗೆದುಕೊಳ್ಳುವುದರಿಂದ ಜೀರ್ಣಕ್ರಿಯೆ ಸರಾಗವಾಗಿ ಆಗುತ್ತದೆ.

ಹಿತ್ತಲ ಗಿಡ

ಬೆಂ. ಮು. ಮಾರುತಿ

ದೇಹದ ತೂಕ ಕಡಿಮೆ ಮಾಡುವಲ್ಲಿ ಸಹಕಾರಿ: ನಿತ್ಯವೂ ಕಾಮಕಸ್ತೂರಿ ಬೀಜದ ಬಳಕೆ ದೇಹ ತೂಕ ನಿಯಂತ್ರಣಕ್ಕೆ ಸಹಕಾರಿಯಾಗಿದೆ. ಕಾಮಕಸ್ತೂರಿ ಬೀಜಗಳನ್ನು ನೀರಿನಲ್ಲಿ ನೆನೆಸಿಟ್ಟುಕೊಂಡು, ಪ್ರತಿ ದಿನ ಕುಡಿಯುವುದರಿಂದ ದೇಹದ ತೂಕ ಕಡಿಮೆಯಾಗುತ್ತದೆ.

ರೋಗನಿರೋಧಕ ಶಕ್ತಿಯ ವೃದ್ಧಿ: ಕಾಮಕಸ್ತೂರಿಯು ಫ್ಲೈವನೋಯ್ಡ್ಸ್ ಅಂಶವನ್ನು ಹೊಂದಿದೆ. ಇದರ ಬೀಜವನ್ನು ನೆನೆಹಾಕಿ, ಹಾಲು ಮತ್ತು ಜೇನುತುಪ್ಪ ಸೇರಿಸಿ ತಂಪು ಪಾನೀಯದ ಹಾಗೆ ಉಪಯೋಗಿಸುವುದರಿಂದ, ದೇಹದಲ್ಲಿನ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

ದೇಹದ ದುರ್ಗಂಧ ನಿವಾರಣೆ: ಕಾಮಕಸ್ತೂರಿಯ ನೈಸರ್ಗಿಕ ಸುಮಾಸನೆಯನ್ನು ಹೊಂದಿದೆ. ಇದರ ಎಲೆಯ ರಸವನ್ನು ತೆಗೆದು, ದೇಹಕ್ಕೆ ಹಚ್ಚಿಕೊಂಡರೆ, ದೇಹದ ದುರ್ಗಂಧ ದೂರವಾಗುತ್ತದೆ.

ಶೀತ, ಜ್ವರಕ್ಕೆ ಪರಿಹಾರ: ಶೀತವಾಗಿ ಮೂಗಿನಿಂದ ನೀರು ಸುರಿಯುತ್ತಿದ್ದರೆ ಮತ್ತು ಜ್ವರ ಬರುತ್ತಿದ್ದರೆ, ಕಾಮ ಕಸ್ತೂರಿ ಎಲೆಗಳ ಕಷಾಯವನ್ನು ಮಾಡಿ.

ಟೈಟಾನ್‌ನತ್ತ ಊಜಿ ನೊಣ

ಮಾನವ ಅಂತರ್‌ಗ್ರಹ ಯಾತ್ರಿಯಾಗಿ ಚಂದ್ರನನ್ನು ಮುಟ್ಟಿದ್ದೇ ಒಂದು ಸಾಹಸಗಾಥೆ!. ಇತ್ತೀಚೆಗೆ ರೋಬೋಗಳು ಮಂಗಳ ಗ್ರಹದ ಮೇಲೆ ಇಳಿದು ಜೀವಿಗಳಿಗಾಗಿ ಜಾಲಾಡುತ್ತಿರುವ ವಿಷಯ ನಿಮಗೆ ತಿಳಿದೇ ಇದೆ. ಇಂಥ ಬೆಳವಣಿಗೆಗಳ ಸಂದರ್ಭದಲ್ಲಿ ಯಃಕಶ್ಚಿತ್ ಒಂದು 'ಊಜಿ ನೊಣ' (ಒಂದು ಜಾತಿಯ ದೊಡ್ಡ ನೊಣ) ಪ್ರಪ್ರಥಮ ಅಂತರ್ ಗ್ರಹ ಯಾತ್ರಿಯಾಗಲಿದೆಯೆಂದರೆ ನೀವು ನಂಬುತ್ತೀರ? ಆಶ್ಚರ್ಯದ ಸಂಗತಿಯೆಂದರೆ ಭೂಮಿಯಿಂದ ಬಹು ದೂರದಲ್ಲಿರುವ ಶನಿ ಗ್ರಹದ ಉಪಗ್ರಹ ಟೈಟಾನ್‌ಗೆ ಈ ಊಜಿ ನೊಣದ ಮಹಾನ್ ಪಯಣ!

ಸದ್ಯಕ್ಕೆ ಭೂಮಿಯ ಮೇಲೆ ಟೈಟಾನ್ ಉಪಗ್ರಹದ ವಾತಾವರಣವನ್ನು ಕೃತಕವಾಗಿ ನಿರ್ಮಾಣ ಮಾಡಲಾಗಿದೆ. ಈ ವಾತಾವರಣದಲ್ಲಿ ಊಜಿನೊಣಗಳನ್ನು ಉಪಸ್ಥಿತಿಗೊಳಿಸುವ ವಿವಿಧ ಸನ್ನಿವೇಶಗಳನ್ನು ಕೃತಕವಾಗಿ ಸೃಷ್ಟಿಸಲಾಗಿದೆ. ಇಲ್ಲಿ ಊಜಿ ನೊಣದ ಪ್ರಥಮ ಸಂತತಿಗಳ ಸತ್ತ ಪಳೆಯುಳಿಕೆಗಳನ್ನು ಹರಡಲಾಗಿರುತ್ತದೆ. ಈ ಎಲ್ಲ ಕೃತಕ ವಾತಾವರಣಗಳೂ ಊಜಿ ನೊಣಕ್ಕೆ ಕೃತಕ ಟೈಟಾನನ್ನು ನಿರ್ಮಾಣ ಮಾಡಿಕೊಡಲಿವೆ. ಈ ಪ್ರಥಮ ಹಂತದ ಪ್ರಯೋಗ ಮುಂದಿನ ವರ್ಷ ಕೈಗೂಡಲಿದೆ.

ಟೈಟಾನನ್ನೇ ವಿಜ್ಞಾನಿಗಳು ಏಕೆ ಆರಿಸಿದ್ದಾರೆ ?

ಟೈಟಾನ್ ಗ್ರಹದ ವಾತಾವರಣ ಬಹುಮಟ್ಟಿಗೆ ಭೂಮಿಯ ವಾತಾವರಣಕ್ಕೆ ಸರಿಹೊಂದಬಲ್ಲದು. ಇತ್ತೀಚಿನ ಸಂಶೋಧನೆಗಳ ಪ್ರಕಾರ ಟೈಟಾನ್‌ನಲ್ಲಿ ಸಾಕಷ್ಟು ಉಷ್ಣತೆ ಏರಿಕೆಯಾದರೆ ಜೀವಿಗಳು ಉಳಿದು ಬೆಳೆಯುವ ಸಾಧ್ಯತೆಗಳು ಕಂಡುಬಂದಿವೆ. ಮುಂದೊಂದು ದಿನ ಇದು ಜೀವಿಗಳ ನೆಲೆಗೆ ಪ್ರಾಶಸ್ತ್ರ ಉಪಗ್ರಹವಾಗಬಲ್ಲದು ಎಂದು ವಿಜ್ಞಾನಿಗಳು ಯೋಚಿಸಿದ್ದಾರೆ.



ಬಹುಮುಖ್ಯ ಸಂಗತಿಯೆಂದರೆ, ಸುಮಾರು 400 ಕೋಟಿ ವರ್ಷಗಳ ನಂತರ ಸೂರ್ಯ ಕೆಂಪು ದೈತ್ಯ ಸ್ಥಿತಿಯನ್ನು ತಲುಪಲಿದ್ದಾನೆ. ಆಗ ಭೂಮಿಯ ಉಷ್ಣತೆ ಅಪಾರವಾಗಿ ಹೆಚ್ಚಿ ಇಡೀ ಜೀವಸಂಕುಲ ನಿರ್ನಾಮವಾಗಲಿದೆ. ಇದೇ ಸಂದರ್ಭದಲ್ಲಿ ಸೂರ್ಯನಿಂದ ಬಹು ದೂರದಲ್ಲಿರುವ ಟೈಟಾನ್ ಉಪಗ್ರಹದ ಉಷ್ಣತೆಯಲ್ಲಿ ಸಾಕಷ್ಟು ಏರಿಕೆಯಾಗಲಿದೆ. ಟೈಟಾನ್‌ನ ಈಗಿನ ಉಷ್ಣತೆ ಮೈನಸ್ 190 ಡಿಗ್ರಿ ಸೆಲ್ಸಿಯಸ್, ಸೂರ್ಯ ಕೆಂಪು ದೈತ್ಯ ಸ್ಥಿತಿಯಲ್ಲಿ ಹಬ್ಬಿದ ನಂತರ ಅದರ ಉಷ್ಣತೆ ಭೂಮಿಯ ಈಗಿನ ಉಷ್ಣತೆಯಷ್ಟು ಹೆಚ್ಚಬಹುದು ಎನ್ನುವುದು ವಿಜ್ಞಾನಿಗಳ ಲೆಕ್ಕಾಚಾರ. ಇದಕ್ಕೆ ಪೂರಕವಾಗಿ ಇಲ್ಲಿಯ ವಾತಾವರಣ ಒತ್ತಡ ಭೂಮಿಯ ವಾತಾವರಣದ ಒತ್ತಡದ ಶೇ. 50ರಷ್ಟು ಹೆಚ್ಚಾಗಿದೆ.

ಊಜಿ ನೊಣವೇ ಏಕೆ ಗಗನಯಾತ್ರಿ ?

ಈ ಊಜಿ ನೊಣ ಜೀವ ವಿಜ್ಞಾನದಲ್ಲೇ ಒಂದು ಮಾದರಿ ಜೀವಿಯಾಗಿದೆ. ಇದರ ದೇಹದಲ್ಲಿರುವ ಜೀನ್‌ಗಳು ಮಾನವ ದೇಹದಲ್ಲಿರುವ ಕೆಲವು ಜೀನ್ಸ್‌ಗಳಿಗೆ ಹೊಂದಿಕೆಯಾಗುತ್ತಿವೆ. ಈ ಊಜಿ ನೊಣ ನಮಗೆ ಗೊತ್ತಿರುವ ಜೀವಿಗಳಲ್ಲೇ ಅತ್ಯಂತ ಕರಾರುವಕ್ಕಾದ ಜೈವಿಕ ಲಕ್ಷಣಗಳನ್ನು ಪ್ರದರ್ಶಿಸುತ್ತಿದೆ. ಅಲ್ಲದೆ ಇದನ್ನು ಒಂದು ಯಂತ್ರಕ್ಕೆ ಹೋಲಿಸಬಹುದು ! ಇದರಿಂದಾಗಿ ಈ ಊಜಿ ನೊಣದ ಮೇಲಿನ ಟೈಟಾನ್ ಪ್ರಯೋಗಗಳು ಮಾನವನ ದೇಹದ ಮೇಲೆಯೇ ನಡೆಸಿದ ಪ್ರಯೋಗಗಳೆಂದೇ ಭಾವಿಸಬಹುದು.

ವಿಜ್ಞಾನ ವಿಸ್ಮಯ

ಕೆ. ನಟರಾಜ್



ಈ ಪ್ರಯೋಗಗಳ ಕಾರ್ಯವೈಖರಿ

ಈ ಕೃತಕ ಸಿಲಿಂಡರ್‌ನ ವಾತಾವರಣದಲ್ಲಿ ಬೇರೆ ಬೇರೆ ಉಷ್ಣತೆ, ಒತ್ತಡ ಮತ್ತು ಇತರೆ ಬದಲಾವಣೆಗಳನ್ನು ಪ್ರತಿ ಅರ್ಧ ಗಂಟೆಗೊಮ್ಮೆ ಕ್ರಮೇಣ ಬದಲಿಸುತ್ತಾ ಹೋಗಲಾಗುತ್ತದೆ. ಇದರಲ್ಲಿ ಗಂಡು ಮತ್ತು ಹೆಣ್ಣು ನೊಣಗಳನ್ನು ಬೇರೆ ಬೇರೆಯಾಗಿ ಇಟ್ಟು ಅನೇಕ ಪ್ರಯೋಗಗಳನ್ನು ನಡೆಸಲಾಗುತ್ತದೆ. ಈ ಎಲ್ಲಾ ಪ್ರಯೋಗಗಳ ನಂತರ ಕೊನೆಯಲ್ಲಿ ಉಳಿಯುವ ಊಜಿ ನೊಣವೇ ನಮ್ಮ ಮುಂದಿನ ನಮ್ಮ ಟೈಟಾನ್ ಉಪಗ್ರಹದ ಗಗನಯಾತ್ರಿಯಾಗಲಿದೆ ! ಒಂದು ವೇಳೆ ಒಂದಕ್ಕಿಂತ ಹೆಚ್ಚು ನೊಣಗಳೇ ನಾದರೂ ಉಳಿದರೆ ಅವುಗಳಲ್ಲಿ ಅತ್ಯಂತ ಚುರುಕಾದ ನೊಣವೇ ಕೊನೆಯಲ್ಲಿ ಗಗನಯಾತ್ರಿಯಾಗಿ ಆಯ್ಕೆಯಾಗಲಿದೆ.

ಆಯ್ಕೆಯ ಮಾನದಂಡ

ಒಬ್ಬ ವ್ಯಕ್ತಿ ಗಗನಯಾತ್ರಿಯಾಗಿ ಆಯ್ಕೆಯಾಗಬೇಕಾದರೆ ಆತ ಅನೇಕ ಕಠಿಣ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಬೇಕಾಗುತ್ತದೆ. ಬಹುಮುಖ್ಯವಾಗಿ ಆತನ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳು, ಆರೋಗ್ಯ, ದೃಢತೆ ಮುಂತಾದ ವಿಷಯಗಳು ಆಯ್ಕೆಯ ಮಾನದಂಡಗಳಾಗಿರುತ್ತವೆ. ಒಟ್ಟಿನಲ್ಲಿ ಆತ ಶಿಸ್ತಿನ ಸಿಪಾಯಿಯಾದಲ್ಲಿ ಮಾತ್ರ ಆಯ್ಕೆ ಖಚಿತ.
ಇಲ್ಲಿ ಊಜಿ ನೊಣ ಒಬ್ಬ ಶಿಸ್ತಿನ ಸಿಪಾಯಿಯ ಎಲ್ಲಾ ಗುಣಗಳನ್ನು ಪ್ರದರ್ಶಿಸುತ್ತಿರುವುದರಿಂದ ಇದರ ಆಯ್ಕೆ ಅತ್ಯಂತ ಸೂಕ್ತ ಎನ್ನುವುದು ವಿಜ್ಞಾನಿಗಳ ಅಭಿಪ್ರಾಯ.

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಗುರುವಾರ
20 | 06 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಜುಲೈನಲ್ಲಿ ಮಾಫಿಯಾ

ಕಾಮಕಸ್ತೂರಿಯ ಕರಾಮತ್ತು

ಬಿ ಪಾಸಿಟಿವ್

ಅತೀ ಮಿತಿಯಲ್ಲಿದ್ದರೆ ಸೊಗಸು

ಅತೀ ಅನ್ನೋದು ಅತಿಯಾದರೆ ಅಮೃತವು ವಿಷವೇ! ಹೌದು ಜೀವನದಲ್ಲಿ ಯಾವುದು ಅತಿಯಾಗ ಬಾರದು. ಅತಿಯಾದ ನಂಬಿಕೆಯು ಒಳ್ಳೆಯದಲ್ಲ. ಅತಿಯಾದ ಭಾವನೆಗಳು, ಪ್ರೀತಿ, ಭರವಸೆ, ಭಯ, ಕನಸು ಮತ್ತು ಆಸೆಗಳು. ಅತೀ ಅನ್ನುವುದು ಅತಿಯಾಗಿ ಬಿಟ್ಟರೆ ಬದುಕಿನ ಬಣ್ಣವನ್ನೇ ಕಳೆದುಕೊಂಡು ಬರಿದಾದ ಗೋಡೆಯಂತೆ ಬಿತ್ತರಿಸುತ್ತದೆ. ಎಲ್ಲವು ಇತಿ–ಮಿತಿ ಯಲ್ಲಿ ಇದ್ದರೆ ಮಾತ್ರ ಅರ್ಥ ಕೊಡುವುದು. ಕಳೆದುಕೊಂಡವರ, ಬಿಟ್ಟು ಹೋದವರ ಬಗ್ಗೆ ಅವರಿಗೆ ಇಷ್ಟ ಇಲ್ಲ ಎಂದು ಸುಮ್ಮನಾಗಬೇಕು. ಅವರೇ ಬೇಕು ಅಂತ ಮೇಲೆ ಬಿದ್ದು ಹೋದಷ್ಟು ಸಂಬಂಧದ ಮೌಲ್ಯಗಳಿಗೆ

ಬೆಲೆ ಇರದು. ಅವರನ್ನು ಅವರ ಪಾಡಿಗೆ ಬಿಟ್ಟು ಬಿಡಿ. ನಮ್ಮ ಬೆಲೆ ಅವರಿಗೆ ಒಂದಲ್ಲ ಒಂದು ದಿನ ಅರಿವಾಗಿಯೇ ತಿರುತ್ತದೆ ಮತ್ತು ಪಶ್ಚಾತ್ತಾಪ ಪಡುತ್ತಾರೆ ಕಳೆದು ಕೊಂಡು. ಆಗುವುದೆಲ್ಲ ಒಳ್ಳೆಯದಕ್ಕೆ, ಅವರಿಗೆ ಅರ್ಹತೆ ಇಲ್ಲ ಎಂದು ತಿಳಿದುಕೊಳ್ಳುವುದೇ ಸರಿ. ಅತಿಯಾಗಿ ಭಾವುಕವಾಗಿ ಚಿಂತಿಸಿದಷ್ಟು ನೋವು ವೇದನೆಯ ಬದುಕಾಗಿ ಬಿಡುತ್ತದೆ. ಇರುವಷ್ಟು ದಿವಸ ನಗುತ್ತಾ ಬಾಳ ಬೇಕು. ಅದಕ್ಕೆ ಅತೀ ಅನ್ನುವುದು ಮಿತಿಯಾಗಿ ಜೀವನದಲ್ಲಿ ಸ್ವೀಕರಿಸಿದಷ್ಟು ಬದುಕು ಸುಂದರ. ಬದುಕು ನಿಂತ ನೀರಲ್ಲ ಹರಿವ ಝರಿಯಂತೆ ಇರುವುದೊಂದೇ ಜೀವನ ಸುಖ –ದುಃಖಗಳು ಎರಡು ಮುಖದ ನಾಣ್ಯದಂತೆ ಸಮಾನವಾಗಿ ಸ್ವೀಕರಿಸಿ ಜೀವನದಲ್ಲಿ ಮುಂದೆ ಸಾಗುತ್ತಿರಬೇಕು. ಇರುವಷ್ಟು ಮಾತ್ರ ಬದುಕು ನಮ್ಮದು. ಸಿಗದನ್ನು ಬಯಸಿ ಅತಿಯಾಗಿ ಮನಸು ಕೆಡಿಸಿಕೊಂಡು ಇಂದಿನ ನಾಳೆಯ ಖುಷಿಗೆ ನಾವೇ ಅಡ್ಡಗೋಡೆ ಆಗಿ ಬಿಡುತ್ತೇವೆ ಅಷ್ಟೇ? ಅದಕ್ಕೆ ಬದುಕಿನಲ್ಲಿ ಬಂದಂತೆ ಮುಂದೆ ಹೋದಾಗಲೇ ಈ ಜೀವನವನ್ನು ಅರಿತು ಬದುಕಿನ ದಡ ಸೇರಲು ಸಾಧ್ಯ.

• ವಾಣಿ ಮೈಸೂರು

ಲವ್‌ಎವೆರಿ ಬಾಡಿ

ಸಂಗೀತಕ್ಕೆ ನಮ್ಮಲ್ಲಿ ಬಹಳ ಮಹತ್ವ ವಿದೆ. ಇಂಥ ಸಮಯದಲ್ಲಿ ಇಂಥದೇ ರಾಗ ಹಾಡಬೇಕೆಂದು ನಮ್ಮ ಹಿರಿಯರು ಹೇಳಿದ್ದರಲ್ಲಿ ಸಾಕಷ್ಟು ಅರ್ಥವಿದೆ. ಮಳೆಗಾಲಕ್ಕೆ, ಬೇಸಿಗೆಗೆ, ಚಳಿಗೆ ಹೀಗೆ ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ರಾಗಗಳೆಂದು ವರ್ಗೀಕರಿಸಿ ರುವುದರ ಹಿಂದೆ ಆರೋಗ್ಯದ ಗುಟ್ಟಿದೆ ಎಂದರೆ ಅಚ್ಚರಿಯಾಗಬ ಹುದು. ಹಲವು ರೋಗಗಳಿಗೆ ಸಂಗೀತದಿಂದಲೇ ಚಿಕಿತ್ಸೆ ನೀಡುವ ಪದ್ಧತಿಯೂ ಈಗ ಚಾಲ್ತಿಯಲ್ಲಿದೆ. ಮ್ಯೂಸಿಕ್ ಥೆರಪಿ ಇಂದು ಭಾರತದಲ್ಲಿ ಮಾತ್ರವಲ್ಲದೆ ಬೇರೆ ದೇಶಗಳಲ್ಲೂ ಪ್ರಚಲಿತದಲ್ಲಿದೆ. ಈ ಎಲ್ಲಾ ಕಾರಣ ದಿಂದಲೇ ಭಾರತದಲ್ಲಿ ಸಂಗೀ ತವನ್ನು ಶಾಸ್ತ್ರೀಯವಾಗಿ ಅಭ್ಯಸಿಸುವುದಕ್ಕೆ ಅನುವು ಮಾಡಿಕೊಡಲಾಗಿದೆ. ಇತ್ತೀ ಚಿನ ಸಂಶೋಧನೆಯೊಂದರ ಪ್ರಕಾರ ಸಂಗೀತ ಮೆದುಳನ್ನು ಉಲ್ಲಸಿತಗೊಳಿ ಸುವುದಲ್ಲದೆ, ಚಿಕ್ಕ ವಯಸ್ಸಿನಿಂದಲೇ ಮಗುವಿಗೆ ಸಿಗುವ ಸಂಗೀತ ತರಬೇತಿ ಮಗು ಬೆಳೆಯುವಾಗ ಅದರ ಬುದ್ಧಿಯನ್ನು ತಿದ್ದಿ ತೀಡುವ ಸಾಮರ್ಥ್ಯ ಹೊಂದಿದೆಯಂತೆ.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com



ಕೃತಕ ವಿಶ್ವಸುಂದರಿ!

'ಕೃತಕ ಬುದ್ಧಿಮತ್ತೆಯು ಮನುಷ್ಯರು ಮಾಡುವ ಎಲ್ಲಾ ಕೆಲಸವನ್ನು ಮಾಡಬಲ್ಲದು' ಎಂದು ಜಗತ್ತಿನಲ್ಲೆಡೆ ಗುಸುಗುಸು. ಕೃತಕ ಬುದ್ಧಿಮತ್ತೆಯಿಂದ ಯುದ್ಧವು ನಡೆಯಬಲ್ಲದು, ವೈರಸ್ ಹರಡಿ ಹೊಸ ಸಾಂಕ್ರಾಮಿಕ ರೋಗ ಹರಡಬಲ್ಲದು ಎಂದು ಜನರು ಲೋಕದೆಲ್ಲೆಡೆ ಚರ್ಚೆಯನ್ನು ಮಾಡುತ್ತಿರುವ ಕಾಲವಿದು. ಇಂತಹ ಸಮಯದಲ್ಲಿ ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಿದ ಸುಂದರಿಯರು ಚರ್ಚೆಗೆ ಗ್ರಾಸವಾಗಿದ್ದಾರೆ.

ಜೋಷ್ ಮಾತು
• ವಿಕ್ರಮ ಜೋಶಿ

ಮೊದಲೆಲ್ಲಾ ಯಜ್ಞ ಕುಂಡದಿಂದ ರೂಪಸಿಯರು ಬರುತ್ತಿದ್ದರಂತೆ. ಅರ್ಜುನನ್ನು ಮಣಿಸಲು ಆತನನ್ನು ಮೋಹಿಸಬಲ್ಲ ಅಪ್ರತಿಮ ಸುಂದರಿಯಾದ ದ್ರೌಪದಿಯನ್ನು ದ್ರುಪದನು ಋಷಿ ಮುನಿಗಳಿಗೆ ಹೇಳಿ ಮಂತ್ರದಿಂದ ಸೃಷ್ಟಿಸಿದ್ದನಂತೆ. ಈಗ ನಾವು ಸಾಫ್ಟ್‌ವೇರ್ ಕೋಡ್ ಬರೆದು, ಸೃಷ್ಟಿಶೀಲ ಕೃತಕ ಬುದ್ಧಿಮತ್ತೆಯ ಸಹಾಯದಿಂದ, ಜಿಪಿಯು ಬಳಕೆ ಮಾಡಿ ಅಂದಗಾತಿಯರನ್ನು ಸೃಷ್ಟಿಸುತ್ತಿದ್ದೇವೆ. ಅಷ್ಟೇ ಅಲ್ಲ ಕೃತಕ ಸುಂದರಿಯರ ವಿಶ್ವ ಮಟ್ಟದಲ್ಲಿ ಸ್ಪರ್ಧೆಯೂ ನಡೆಯಲು ಶುರುವಾಗಿದೆ. ಸ್ಪರ್ಧೆಯಲ್ಲಿ ತೀರ್ಪುಗಾರರು ಯಾರು ಎಂದು ಊಹಿಸಬಲ್ಲಿರಾ? ತೀರ್ಪುಗಾರರು ಕೂಡ ಕೃತಕ ಬುದ್ಧಿಮತ್ತೆ! ಹೌದು – ನಾಲ್ಕು ತೀರ್ಪುಗಾರರಲ್ಲಿ ಇಬ್ಬರು ಮನುಷ್ಯರು, ಇನ್ನೆರಡು ಕೃತಕ ಬುದ್ಧಿಮತ್ತೆಗಳು! ನಾವು ಎಂತಹ ಅದ್ಭುತವಾದ ಯುಗದಲ್ಲಿ ಜೀವಿಸುತ್ತಿದ್ದೇವೆ ನೋಡಿ. ದೇವರು ನಿರ್ಮಿಸಿದ ಸೌಂದರ್ಯವನ್ನು ಅದಕ್ಕಿಂತ ಹೆಚ್ಚು ಪರಿಪೂರ್ಣವಾಗಿ ಮನುಷ್ಯರು ನಿರ್ಮಿಸಿ ನಂತರ ಅದನ್ನು ಅಳೆಯುವುದಕ್ಕೆ ಅದೇ ಮನುಷ್ಯರು ನಿರ್ಮಿಸಿದ ಒಂದು ಗಣಿತವನ್ನು ಬಳಸುತ್ತಿರುವ ದಿನ ಮನುಷ್ಯನ ಕಲ್ಪನೆಗೂ ಮೀರಿದ್ದು. ಇದರೊಳಗೆ ವಿಚಾರವು ಇಳಿದು ಮನದಾಳದಲ್ಲಿ ಕೂರಲು ಕೊಂಚ ಸಮಯವೇ ಬೇಕು! ಸುಮಾರು ಒಂದುವರೆ ಸಾವಿರ ಕೃತಕ ಬುದ್ಧಿಮತ್ತೆ ಸೃಷ್ಟಿಸಿದ ಸುಂದರಿಯರು ವರ್ಲ್ಡ್ ಎಐ ಕ್ರಿಯೇಟರ್ಸ್ ಅವಾರ್ಡ್ಸ್ (WAICA) ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಅವುಗಳಲ್ಲಿ ಹತ್ತು ಸುಂದರಿಯರನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗಿದೆ. ಆ ರೂಪವತಿಯರ ಸೌಂದರ್ಯ, ಬಣ್ಣ, ಮೈಕಟ್ಟು, ಅವರನ್ನು ಸೃಷ್ಟಿಸಿದ ತಂತ್ರಜ್ಞಾನ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಅವರು ಗಳಿಸಿರುವ ಜನಪ್ರಿಯತೆಯನ್ನೆಲ್ಲ ಗಮನಿಸಿ ಅಂತಿಮ ಕೃತಕ ವಿಶ್ವಸುಂದರಿಯನ್ನು ಆಯ್ಕೆ ಮಾಡಲಾಗುತ್ತದೆ. ಈ ಸುಂದರಿಯರು ನೋಡಲು ಮನುಷ್ಯರಿಗಿಂತ ಚೆಂದ, ಕೆಲವರು ಗಿಳಿಯಂತೆ ಮಾತನಾಡುತ್ತಾರೆ, ಇನ್ನು ಕೆಲವರು ವಿಡಿಯೋದಲ್ಲಿ ಮೇನಕೆಗಿಂತ ಚೆಂದವಾಗಿ ಕಾಣಿಸಿಕೊಂಡಿದ್ದಾರೆ. ಜಗತ್ತಿನ ಬೇರೆ ಬೇರೆ ದೇಶಗಳ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಪ್ರಾವೀಣ್ಯತೆಯನ್ನು ಪಡೆದವರು ಇವರನ್ನೆಲ್ಲ ರೂಪಿಸಿ ತಮ್ಮ ಕಂಪನಿಗಳಲ್ಲಿ ದುಡಿಸಿಕೊಳ್ಳುತ್ತಿದ್ದಾರೆ!

ಬ್ರಹ್ಮನನ್ನೇ ಬೆರಗಾಗಿಸುವ ರೂಪ

ಆಯಾನಾ ರೇನ್ಬೋ ರೊಮಾನಿಯಾದವಳು, ಅನ್ನೆ ಕೆರ್ಡಿ ಫ್ರೆಂಚಿನ ಸುಂದರಿ, ಆಯ್ಲಾ ಲೌ ಎನ್ನುವವಳು ಜಪಾನ್–ಆಫ್ರಿಕನ್–ಬ್ರೆಜಿಲ್ ಮಿಶ್ರಿತ ರೂಪದರ್ಶಿ, ಎಲಿಜಾ ಖಾನ್ ಅವಳನ್ನು ತಯಾರಿಸಿದ್ದು ಬಾಂಗ್ಲಾದೇಶದ ಒಬ್ಬ ಎಐ ತಂತ್ರಜ್ಞ, ಅಸಿನಾ ಇಲ್ಕ್ ಎನ್ನುವಾಕೆ ಟರ್ಕಿಯ ಸುಂದರಿ, ಕೆಂಜಾ ಲಾಯ್ಲಿ ಇವಳು ಮೊರಾಕೊ ದೇಶದವಳು; ಆಕೆಗೆ ಎರಡು ಲಕ್ಷ ಇನ್ಸ್ಟಾಗ್ರಾಮ್ ಹಿಂಬಾಲಕರಿದ್ದಾರೆ, ಪ್ಯಾರಿಸಿನ ಲಲಿನಾಳಂತೂ ನಿಜವಾಗಿಯೂ ಇದ್ದವಳಂತೆ ಕಾಣುತ್ತಾಳೆ, ಒಲಿವಿಯಾ ಸಿ – ಪೋರ್ಚುಗೀಸ್ ಎಐ ಮಾಡೆಲ್, ಸೆರೆನ್ ಎಯ್ ಮತ್ತೋರ್ವ ಟರ್ಕಿಯ ಎಐ ಚೆಲುವೆ, ಜಾರಾ ಶತಾವರಿ ಎನ್ನುವಾಕೆ ಭಾರತದ ಎಐ ಬೆಡಗಿ. ಒಬ್ಬೊಬ್ಬರೂ ಅತ್ಯಂತ ಆಕರ್ಷಣೀಯ ಬೆಡಗಿಯರು, ರವಿವರ್ಮನ ಕುಂಚದ ಕಲೆಗೂ ಮೀರಿದವರು, ಬ್ರಹ್ಮನೂ ಬೆರಗಾಗುವಷ್ಟು ರೂಪದ ಗಣಿಯನ್ನು ಹೊಂದಿದವರು, ಸಾಮಾಜಿಕ ಜಾಲತಾಣದಲ್ಲಿ ಲಕ್ಷಾಂತರ ಪುರುಷರ ಹಾಗೂ ಮುಹಿಳೆಯರ ಮನವನ್ನು ಗೆದ್ದವರು. ತಂತ್ರಜ್ಞಾನದಲ್ಲಿ ಬೆರೆತ ಶೃಂಗಾರ ರಸವು ಮನುಷ್ಯ ಹಾಗೂ ಮಷಿನ್‌ಗಳ ಜತೆಗಿನ ಭವಿಷ್ಯವನ್ನು ಇನ್ನಷ್ಟು ಕುತೂಹಲಕಾರಿಯಾಗಿ ಮಾಡಿದೆ!

ಎಐಯ ಒಡಲಿನ ಕೂಸುಗಳು

ಇವರೆಲ್ಲ ಯಾರು? ಇವರ ಉದ್ದೇಶವೇನು? ಇಂತಹ ಹಲವಾರು ಪ್ರಶ್ನೆಗಳು ಸಮುದ್ರದ ತೆರೆಗಳಂತೆ ಒಂದಾದ ಮೇಲೆ ಇನ್ನೊಂದು ಏಳಬಹುದು. ಈ ಜಗತ್ತಿನಲ್ಲಿ ಹೆಣ್ಣು, ಹೊನ್ನು, ಮಣ್ಣುಗಳ ಕುರಿತಾದ ಪ್ರಶ್ನೆಗಳಿಗೆ ಉತ್ತರಿಸಿದಷ್ಟು ಕಡಿಮೆ. ಇವರೆಲ್ಲ ಸಾಫ್ಟ್‌ವೇರ್ ಕೋಡ್‌ಗಳು, ಸೃಷ್ಟಿಶೀಲ ಕೃತಕ ಬುದ್ಧಿಮತ್ತೆಯೇ ಇವರ ಜೀವಾಳ. ದಿನದಿಂದ ದಿನಕ್ಕೆ ಇವರ ಬಳಕೆ ಹಾಗೂ ಬೇಡಿಕೆ ಹೆಚ್ಚುತ್ತಿದೆ. ಮನುಷ್ಯನಿಗೆ ಮುದಕೊಡುವುದು, ಸಹಾಯ ನೀಡುವುದು, ಆಪ್ತನಾಗುವುದೇ ಇವುಗಳ ಉದ್ದೇಶ. ಇವರನ್ನು ಚಾಟ್ಬಾಟ್ಗಳಾಗಿ, ಏಕಾಂತದಲ್ಲಿರುವವರಿಗೆ ಮಾತನಾಡಬಲ್ಲ ಸಂಗಾತಿಯಾಗಿ, ಶಾಲೆಯಲ್ಲಿ ಕಲಿಸುವುದಕ್ಕಾಗಿ ಹಾಗೂ ಮನೆಯಲ್ಲಿ ವಿಡಿಯೋ ಗೇಮ್ ಆಡುವುದಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಜಾಹೀರಾತು ಹಾಗೂ ಪ್ರಚಾರದ ಕೆಲಸದಲ್ಲೂ ಈ ತಂತ್ರಜ್ಞಾನದ ಬಳಕೆಯು ಉಪಯುತ್ತವೆನಿಸಿದೆ. ನೆಟ್ ಡ್ರಾಗಾನ್ ವೆಬ್ಸಾಫ್ಟ್, ಡಿಕ್ಟೇಟರ್ ಹೋಲ್ಡಿಂಗ್ಸ್, ಅಬುಧಾಬಿ ಇಂಟರ್‌ನ್ಯಾಷನಲ್ ಹೋಲ್ಡಿಂಗ್ ಲಿಮಿಟೆಡ್‌ಗಳಲ್ಲಿ ಈ ಕೃತಕ ಬುದ್ಧಿಮತ್ತೆಯ ಮೇಲೆ ತಯಾರಿಸಿದ ವ್ಯಕ್ತಿಗಳೇ ಆಡಳಿತ ಮಂಡಳಿಯಲ್ಲಿ ಕೆಲಸ ಮಾಡುತ್ತಿರುವುದು! ಇನ್ನು ಹಲವಾರು ಕಂಪನಿಗಳ ಸಿಇಓಗಳ ವೈಯಕ್ತಿಕ ಸಹಾಯಕರೂ ಕೃತಕ ಬುದ್ಧಿಮತ್ತೆಯ ಒಡಲಿಂದ ಜನಿಸಿದ ಸುಂದರಿಯರೇ!

ನೈಜತೆಯಿಂದ ಮೆಷಿನ್‌ಗಳವರೆಗೆ!

ನೋಡು ನೋಡುತ್ತಿರುವಂತೆ ಇದೊಂದು ದೊಡ್ಡ ಉದ್ಯಮವಾಗಲಿದೆ. ಭುವಿಯ ಮೇಲಿನ ನಿಜವಾದ ಸುಂದರಿಯರನ್ನು ಮೀರಿಸಲಿದ್ದಾರೆ ಇವರು. ಅವರು ಹಾಡಲು ಶುರುಮಾಡಿದರೆ? ಕುಣಿಯಲು ಶುರುಮಾಡಿದರೆ? ಅವರನ್ನೊಳಗೊಂಡ ವಿಡಿಯೋಗಳನ್ನು ಮೋಹಕವಾಗಿದ್ದು ಜನರು ಅದಕ್ಕೇ ಮಾರಿ ಹೋದರೆ? ಸುಂದರಿಯರ ಹಾಗೆ ಸುಂದರ ಪುರುಷರನ್ನೂ ಕೂಡ ಕೃತಕ ಬುದ್ಧಿಮತ್ತೆ ಬಳಸಿ ಸೃಷ್ಟಿಸಲಾಗುತ್ತಿದೆ. ಇನ್ನು ಕೆಲವು ವರ್ಷಗಳಲ್ಲಿ ಡಿಜಿಟಲ್ ಮಾರ್ಕೆಟಿಂಗ್ ತುಂಬಾ ಇವರೇ ತುಂಬಿಕೊಳ್ಳಬಹುದು. ನಾವು ಲಭ್ಯವಿಲ್ಲವೆಂದರೆ ನಮ್ಮ ಪ್ರತಿರೂಪವು ನಮ್ಮ ಕೆಲಸ ಮಾಡಬಹುದು. ಒಮ್ಮೆ ಬ್ರ್ಯಾಂಡ್ ಆದಂತೆ ನಮ್ಮಂತಿರುವ ನಮ್ಮ ಸ್ವರೂಪವೂ ದುಡಿಯಲಾರಂಭಿಸಬಹುದು! ಯೋಚಿಸಿದಷ್ಟು ಹೊಸ ದಾರಿಯು ಕಾಣುತ್ತದೆ. ಈ ಕ್ಷೇತ್ರದಲ್ಲಿ ನೀವು ಮನುಷ್ಯರ ಹತ್ತಿರ ವ್ಯವಹರಿಸಿದಷ್ಟೇ ನೈಜತೆಯಿಂದ ಮಷಿನ್‌ಗಳ ಜತೆಗೂ ವ್ಯವಹರಿಸುವ ದಿನಗಳು ಹತ್ತಿರವಾಗಿವೆ. ಒಂದು ಅಂದಾಜಿನ ಪ್ರಕಾರ ಕೃತಕ ಬುದ್ಧಿಮತ್ತೆಯಿಂದ ತಯಾರಿಸಿದ ವ್ಯಕ್ತಿತ್ವದ ಬೇಡಿಕೆ ಪ್ರತಿ ವರ್ಷಕ್ಕೆ ಸುಮಾರು 70 ಬಿಲಿಯನ್ ಡಾಲರ್ ಆಗಲಿದೆ. ಇವುಗಳನ್ನು ತಯಾರಿಸಲು ಈಗಂತೂ ಒಂದಾ, ಎರಡಾ? ಹತ್ತಾರು ಸಾಫ್ಟ್‌ವೇರ್‌ಗಳು ಲಭ್ಯವಿವೆ. ಇವತ್ತಿನ ರಚನಾಶೀಲ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನಕ್ಕೆ ಇತಿ ಮಿತಿಗಳೇ ಇಲ್ಲ. ಮನುಷ್ಯನ ಸೃಜನಶೀಲತೆಯ ಮೀತಿಯನ್ನು ಮೀರಿ ಅವುಗಳನ್ನು ಬಳಸಬಹುದು; ಕಲ್ಪನೆಯ ತುದಿಯ ತನಕ ಯೋಚಿಸಿ ಆತ ತನ್ನ ರೂಪವನ್ನು ಪರಿಪೂರ್ಣವಾಗಿ ಸೃಷ್ಟಿಸಬಹುದು. ಸೌಂದರ್ಯವು ದೈವದತ್ತವಾದುದು, ಅದನ್ನು ಮನುಷ್ಯನು ಈಗಾಗಲೇ ಶೋಷಣೆ ಮಾಡುತ್ತಿದ್ದಾನೆ, ಬೇಡವಾದ ರೀತಿಯಲ್ಲಿ ಬಳಸುತ್ತಿದ್ದಾನೆ. ಇನ್ನು ಈ ಕೃತಕ ಸುಂದರಿಯರು ನಮ್ಮ ಲೋಕಕ್ಕೆ ಬಂದು ಏನೆಲ್ಲಾ ಮಾಡಬಹುದು? ಅದನ್ನು ಊಹಿಸುವುದು ನಿಮಗೆ ಬಿಟ್ಟಿದ್ದು!

• ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಮದ್ದೂರು ವಡೆ ಸೊಗಡು

ಬೆಂಗಳೂರು, ಮೈಸೂರು ಹೆದ್ದಾರಿಯಲ್ಲಿ ಓಡಾಡುವವರಿಗೆ ಹೇಳಲೇಬೇಕಿಲ್ಲ. ಖಾಸಗಿ ವಾಹನಗಳಲ್ಲಿ ಬರುವವರು ಮದ್ದೂರಿನ ಸುಪ್ರಸಿದ್ಧ ಹೋಟೆಲ್ ಟಿಫಾನೀಸ್ ಒಳಹೊಕ್ಕು ಎರಡೆರಡು ಬಿಸಿಬಿಸಿ ಮದ್ದೂರು ವಡೆ ಮೆಲ್ಲದೇ ಹೋಗುವುದಿಲ್ಲ. ಅಷ್ಟೊಂದು ಸ್ವಾದಿಷ್ಟ ಈ ಮದ್ದೂರು ವಡೆ. ಇದು ಮದ್ದೂರಿನಲ್ಲಿ ಜನಿಸಿತೇ? ಇದರ ಇತಿಹಾಸವೇನು ? 1917 ರ ವೇಳೆ ರಾಮಚಂದ್ರ ಬುಧ್ಯ ಎನ್ನುವ ದಕ್ಷಿಣ ಕನ್ನಡದವರು ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ಸಣ್ಣದೊಂದು ಕ್ಯಾಂಟೀನ್ ನಡೆಸುತ್ತಿದ್ದರಂತೆ. ಉದ್ದಿನ ವಡೆ, ಪಕೋಡ, ಬೋಂಡಾ ತಯಾರಿಸಿ ರೈಲೊಳಗೆ , ಹೊರಗೆ ಮಾರುತ್ತಿದ್ದರಂತೆ. ಒಮ್ಮೆ ಏನಾಯಿತು ಗೊತ್ತೇ? ಕಡಲೆಹಿಟ್ಟು ಖಾಲಿಯಾಗಿದೆ. ರೈಲು ಇನ್ನೇನು ಬರುವ ಸಮಯ. ತರಲು ವೇಳೆಯಿಲ್ಲ. ಗಿರಾಕಿಗಳಿಗೆ ಏನು ಹೇಳು ವುದು? ಆದದ್ದಾಗಲಿ ಎಂದು ಉಳಿದಿದ್ದ ಮೈದಾಹಿಟ್ಟು, ಅಕ್ಕಿಹಿಟ್ಟು, ಈರುಳ್ಳಿ, ಹಸಿಮಣಸು ಹಾಕಿ ಉಂಡೆ ಮಾಡಿ ಎಣ್ಣೆಗೆ ಬಿಟ್ಟರಂತೆ. ತಿಂದ ಗಿರಾಕಿಗಳು ಹೊಗಳಿದ್ದೇ ಹೊಗಳಿದ್ದು. ಮರುದಿನ ಅದಕ್ಕೇ ಹೆಚ್ಚಿನ ಬೇಡಿಕೆ. ತಿಂಡಿಯ ಹೆಸರು ಕೇಳಿದವರಿಗೆ ಮದ್ದೂರಿನಲ್ಲಿ ಜನಿಸಿದ್ದರಿಂದ ಮದ್ದೂರು ವಡೆ ಎಂದರಂತೆ! ಇದಕ್ಕೀಗ 107 ವರ್ಷ. ಆದರೂ ಮುಪ್ಪಡರಿಲ್ಲ, ಸಶಕ್ತವಾಗಿದೆ. ಬುಧ್ಯರ ನಂತರ ಮಗ ಹೆಚ್.ಡಿ.ಹೆಬ್ಬಾರ್, ನಂತರ ಅವರ ಮಗ ಗೋಪಾಲಯ್ಯ, ನಂತರ ಅವರ ಮಗ ಜಯಪ್ರಕಾಶ್ ಹೀಗೆ ಅವರ ಸಂತತಿಯವರ ಮಾಲೀಕತ್ವದಲ್ಲಿ ಹೋಟೆಲ್ ಟಿಫಾನೀಸ್ ಮೂಲಕ ಮದ್ದೂರು ವಡೆ ಸಾಮ್ರಾಜ್ಯ ವಿಸ್ತಾರವಾಗಿದೆ.

ಪಾಕಶಾಲೆ

ತಯಾರಿಕೆಗೆ ಅಗತ್ಯ ಸಾಮಗ್ರಿಗಳು; ಮೈದಾಹಿಟ್ಟು, ಚಿರೋಟಿ ರವಾ, ಅಕ್ಕಿಹಿಟ್ಟು, ಈರುಳ್ಳಿ, ತೆಂಗಿನ ತುರಿ, ಹಸಿಮೆಣಸು, ಇಂಗು, ಎಣ್ಣೆ.

ಮಾಡುವ ವಿಧಾನ; 1 ಲೋಟ ಮೈದಾಹಿಟ್ಟು , ಅರ್ಧ ಲೋಟ ಅಕ್ಕಿಹಿಟ್ಟು ನೀರಿನಲ್ಲಿ ಕೊಂಚ ಗಟ್ಟಿಯಾಗಿ ಕಲಸಿ ಅದಕ್ಕೆ 1/4 ಲೋಟ ರವಾ , ಇಂಗು, ಕಾಯಿತುರಿ, ಹೆಚ್ಚಿದ ಈರುಳ್ಳಿ, ಹಸಿಮೆಣಸು ಬೆರೆಸಿ ಸಣ್ಣ ಉಂಡೆಗಳನ್ನಾಗಿ ಮಾಡಿಟ್ಟುಕೊಳ್ಳಬೇಕು. 10 ನಿಮಿಷ ಬಿಟ್ಟು ಬಾಣಲೆಯಲ್ಲಿ ಮಂದ ಉರಿಯಲ್ಲಿ ಕೆಂಪಾಗುವವರೆಗೆ ಬೇಯಿಸಬೇಕು. ಕೆಳಗಿಳಿಸಿ ಕಾಯಿ ಚಟ್ನಿಯೊಂದಿಗೆ ಸವಿದರೆ ಆ ಸ್ವರ್ಗ ಬಹುದೂರವೇನಿಲ್ಲ! ಆಗೆಲ್ಲ ರೂ.5ಕ್ಕೆ ದೊರೆಯುತ್ತಿದ್ದ ವಡೆ ನಂತರ ರೂ. 10 ಆಗಿ ಇದೀಗ ರೂ. 15 ರ ಬಾಗಿಲು ತಟ್ಟಿದೆ. ಕೇವಲ ಮದ್ದೂರು ವ್ಯಾಪ್ತಿಯಲ್ಲಿದ್ದುದು ಗಡಿ ದಾಟಿ ಬಸ್, ರೈಲು, ತಾರಾ ಹೋಟೆಲ್, ಟೋಲ್, ಸಿಗ್ನಲ್, ಎಲ್ಲೆಡೆ ದೊರೆಯುತ್ತದೆ.ಆದರೂ ಮೂಲ ಹೋಟೆಲಿನ ರುಚಿ, ಸೊಗಡು ಅದರ ಮಜಾನೇ ಬೇರೆ ! ಇಂದಿಗೂ ನಿತ್ಯ ಸದಾ ವೇಳೆ ಬೆಂಗಳೂರು, ಮೈಸೂರಿನಿಂದ ಕಾರುಗಳಲ್ಲಿ ಬಂದು ಮದ್ದೂರುವಡೆ ತಿಂದು ಮನೆಯವರಿಗೆ ಕಟ್ಟಿಸಿಕೊಂಡು ಹೋಗುತ್ತಾರೆ.

ಸಣ್ಣದಲ್ಲದ ಕತೆಗಳು

• ಅಶೋಕ ವಿ ಬಳ್ಳಾ, ಸೂಳೇಬಾವಿ

ಚಸ್ಮಾ

'ಏ ದೋಸ್ತ, ನಿನ್ನೆ ನಿಮ್ಮ ಮನೀ ಹತ್ರ ಹಾದು ಹೊಂಟಾಗ ಕುಸಮಕ್ಕ ಭೆಟ್ಟಿ ಆಗಿದ್ಲು. ಚಸ್ಮಾ ಬ್ಯಾರೇ ಹಾಕ್ಕೊಂಡಿದ್ಲು, ದೌಡ ಗುರುತೇ ಸಿಗಲಿಲ್ಲ' ಎಂದ ಗೆಳೆಯನಿಗೆ ಅವನು ಮನಸ್ಸಿನಲ್ಲೇ 'ಬಹುಶಃ ನೀನು ಚಸ್ಮಾ ಹಾಕ್ಕೊಂಡಿರಲಿಕ್ಕಿಲ್ಲ, ಅದಕ್ಕೇ ನೀನವಳಿಗೆ ಬೇಗ ಗುರ್ತು ಸಿಕ್ಕೀ ಅನಿಸುತ್ತೆ!' ಎಂದು ಪೇಲವ ನಗೆ ಸೂಸಿದ.

★★★

ಪೇಪರ್ ಪ್ಲೇಟ್

ಎಷ್ಟೇ ಅವಸರ ಮಾಡಿದ್ರೂ ಮಕ್ಕಳನ್ನು ಶಾಲೆಗೆ ಕಳಿಸಿ, ತಾವು ರೆಡಿಯಾಗಿ ಆ ಗಂಡ-ಹೆಂಡತಿ ನೆಮ್ಮದಿಯಿಂದ ತಿಂಡಿ ತಿನ್ನಬೇಕೆಂದರೆ, ಗಡಿಯಾರ ಬಸ್ಸಿನ ಸಮಯವಾಯ್ತೆಂದು ಎಚ್ಚರಿಸುತ್ತಲೇ ಇರುತ್ತದೆ. ಆಗ ಅವಳು 'ರೀ ಇವತ್ತೊಂದಿನ ಪೇಪರ್ ಪ್ಲೇಟಲ್ಲೇ ತಿನ್ನೋಣ್ವ, ತಟ್ಟೆ ತೊಳಿಯೋ ಸಮಯ ಉಳಿಯುತ್ತೆ. ಪ್ಲೀಜ್!' ಎಂದಾಗ, ಅವನು ಆಯ್ತು ಎನ್ನುತ್ತಾನೆ. ಬೇಡವೆಂದರೂ ಅವಳು ತಾನೇ ಬಯಸಿ ತಂದ ಬಗೆಬಗೆ ತಟ್ಟೆಗಳು ಎಂದಿನಂತೆ ಸೆಲ್ಫಿನ ಕಂಬಿಗಳ ಹಿಂದೆ ಖೈದಿಗಳಾಗುತ್ತವೆ.

★★★

ರಿವರ್ಸ್

'ಇಂದಿನ ಆಧುನಿಕ ಯುಗದಲ್ಲಿ ಸುಶಿಕ್ಷಿತರು ಸಹ ಮೌಢ್ಯಗಳನ್ನು ಪಾಲಿಸುತ್ತಿರುವುದು ವಿಷಾದನೀಯ ಸಂಗತಿ. ಅಮಾವಾಸ್ಯೆ, ಹಬ್ಬ-ಉತ್ಸವಗಳಿಗೆ ವಾಹನಗಳನ್ನು ಪೂಜಿಸುವುದು, ಹಾರಗಳನ್ನು ಹಾಕಿ ಅಲಂಕರಿಸುವುದು, ನಿಂಬೆಹಣ್ಣು, ಮೆಣಸಿನಕಾಯಿಗಳನ್ನು ಕಪ್ಪು ದಾರದಲ್ಲಿ ಕಟ್ಟುವುದು ಮಾಡುತ್ತಿದ್ದೇವೆ. ಪ್ರಜ್ಞಾವಂತ ನಾಗರಿಕರಾದ ನಾವು ಇವುಗಳ ವಿರುದ್ಧ ಧ್ವನಿ ಎತ್ತಬೇಕು. ಮೂಢನಂಬಿಕೆಗಳನ್ನು ಧಿಕ್ಕರಿಸಲು ಮೊದಲು ನಾವೇ ಮುಂದಾಗಬೇಕು' ಎಂದು ಒಂದು ಗಂಟೆಯ ಕಾಲ ನಿರರ್ಗಳವಾಗಿ ಮಾತನಾಡಿ ಹೊರಟಿದ್ದ ಉಪನ್ಯಾಸಕ ಕಾರನ್ನು ಸ್ಟಾರ್ಟ್ ಮಾಡಿ, ರಿವರ್ಸ್ ತೆಗೆದುಕೊಳ್ಳುವ ಮುಂಚೆ ತುಸು ಮುಂದಕ್ಕೆ ಮೂವ್ ಮಾಡಿದ.

ವಯಸ್ಸು ಕೇವಲ ಸಂಖ್ಯೆ!

ಕ್ರಿಕೆಟಿಗರು ಸಾಮಾನ್ಯವಾಗಿ 35 ವರ್ಷ ದಾಟುತ್ತಿದ್ದಂತೆಯೇ ನಿವೃತ್ತಿಯಾಗುತ್ತಾರೆ. ಆದರೆ 40 ವರ್ಷ ದಾಟಿದ ಬಳಿಕವೂ ರಣಜಿ ಟ್ರೋಫಿ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಲು ಸಾಧ್ಯ, ಸಾಧಿಸುವ ಹಠವಿದ್ದರೆ ಅದಕ್ಕೆ ವಯಸ್ಸಿನ ಹಂಗಿರುವುದಿಲ್ಲ ಎಂಬುದನ್ನು ತೋರಿಸಿಕೊಟ್ಟವರು ಮುಂಬೈ ಮೂಲದ ಉತ್ಸಾಹಿ ಕ್ರಿಕೆಟಿಗ ಪ್ರವೀಣ್ ತಾಂಬೆ.

ಹೆಜ್ಜೆ ಗುರುತು
• ವಾಗೀಶ್ ಕಟ್ಟಿ, ಗೌರಿಬಿದನೂರು

ಭಾರತದ ಹಲವಾರು ಹುಡುಗರಂತೆ ಇವರೂ ಕ್ರಿಕೆಟ್ ಆಟಗಾರನಾಗುವ ಕನಸು ಕಾಣುತ್ತಾ ಬೆಳೆದರು. ಒಂದಲ್ಲ ಒಂದು ದಿನ ಮುಂಬೈ ತಂಡದ ಪರ ರಣಜಿ ಪಂದ್ಯ ಆಡುವ ಭರವಸೆ ಇಟ್ಟುಕೊಂಡಿದ್ದರು. ವಯಸ್ಸಾದಂತೆ ಮುಂಬೈ ತಂಡವನ್ನು ಪ್ರತಿನಿ ಧಿಸುವ ಅವಕಾಶಗಳೂ, ವರುಷಗಳು ಉರುಳಿದಂತೆ ಮಸುಕಾಗ ಲು ಪ್ರಾರಂಭಿಸಿತು. ಏನೇ ಆದರೂ ಪಟ್ಟು ಬಿಡದೆ, ದಿನವೂ ಅಭ್ಯಾಸವನ್ನು ಮಾಡುತ್ತಾ, ಭರವಸೆಯೊಂದಿಗೆ, ಕಷ್ಟ ಕಾಲದ ದರ್ಶನವಾಗುತ್ತಿದ್ದರೂ ಸ್ಪಷ್ಟ ಮಾರ್ಗದರ್ಶನದಿಂದ ಮುನ್ನಡೆಯುತ್ತಿದ್ದರು. ಒಂದು ಕಡೆ ಸಂಸಾರದ ಜವಾಬ್ದಾರಿ, ಇನ್ನೊಂದು ಕಡೆ ತನ್ನ ಕನಸನ್ನು ನನಸಾಗಿಸಿಕೊಳ್ಳುವ ಆಸೆ. ಇವೆರಡರ ಮಧ್ಯೆ ಜೀವನದೂಗಿಸಲು ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಆಡಲು ಅವಕಾಶ ನೀಡುವ ಕಂಪನಿಗಳಲ್ಲಿ ಕೆಲಸ ಮಾಡಿಕೊಂಡು ಜೀವನ ನಿರ್ವಹಣೆ. ವಯಸ್ಸು ನಲವತ್ತರ ಗಡಿಗೆ ಬಂದು ನಿಲ್ಲುತ್ತದೆ. ಇನ್ನೇನು ಆಡುತ್ತೀಯ ಎಂದು ಮನೆಯಲ್ಲಿ ಗಲಾಟೆ, ಕೆಲಸ ಮಾಡುವ ಕಂಪನಿಯಲ್ಲಿಯೂ ಇನ್ನು ಆಟ ಆಡುವುದು ಸಾಕು, ಅದೇ ಕಂಪನಿಯಲ್ಲಿ ಕ್ರಿಕೆಟ್ ಕೋಚ್ ಆಗಿ ಕೆಲಸ ಮಾಡುವಂತೆ ಹೇಳುತ್ತಾರೆ. ಆದರೆ ಕತ್ತಲಿನ ನಂತರ ಬೆಳಕಿದೆ ಎನ್ನುವ ಭರವಸೆ ನಲವತ್ತರ ಯುವಕನಿಗೆ. 2013ರ ಐಪಿಎಲ್ ಟೂರ್ನಿಯಲ್ಲಿ ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಆಯ್ಕೆಯಾದರು. ಆ ಸಮಯದಲ್ಲಿ ರಾಜಸ್ಥಾನ್ ರಾಯಲ್ಸ್‌ನ ಮಾರ್ಗದರ್ಶಕರಾಗಿದ್ದ ರಾಹುಲ್ ದ್ರಾವಿಡ್ ಈ ಮಧ್ಯವಯಸ್ಸಿನ ಯುವಕನ ಶ್ರದ್ಧೆ ಮತ್ತು ನಿರಂತರ ಅಭ್ಯಾಸವನ್ನು ನೆಟ್ಸ್‌ನಲ್ಲಿ ಗಮನಿಸಿದ್ದರು.

ಛಲಬಿಡದ ಮಲ್ಲನ ಭಗೀರಥ ಪ್ರಯತ್ನ

ಮರುವರ್ಷ ಅಂದರೆ 2014ರ ಐಪಿಎಲ್ ನಲ್ಲಿ ರಾಜಸ್ಥಾನ್ ರಾಯಲ್ಸ್ ಪರ ಮೈದಾನಕ್ಕಿಳಿದರು. ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ ಪಂದ್ಯದಲ್ಲಿ ಹ್ಯಾಟ್ರಿಕ್ ಪಡೆದು ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಈ ಆಟಗಾರನ ಇಷ್ಟು ವರುಷಗಳ ಪರಿಶ್ರಮಕ್ಕೆ 2014ರಲ್ಲಿ, 41ನೇ ವಯಸ್ಸಿನಲ್ಲಿ ಸೂಕ್ತ ಫಲ ಲಭಿಸಿತ್ತು. ಅವರ ಕನಸಾದ ಮುಂಬೈ ಪರ ರಣಜಿ ಕ್ರಿಕೆಟ್ ಆಡುವ ಕನಸು ಕೂಡ ಅದೇ ವರ್ಷ ಸಾಕಾರಗೊಂಡಿತ್ತು. ಈ ಆಟಗಾರ 2014ರಲ್ಲಿ ರಾತ್ರೋ ರಾತ್ರಿ ಉದಯಿಸಿದ ಪ್ರತಿಭೆಯಲ್ಲ.

40 ನಂತರ ಮುಟ್ಟಿದ್ದೆಲ್ಲಾ ಚಿನ್ನ

ಹೌದು, ಕ್ರಿಕೆಟಿಗರು ಸಾಮಾನ್ಯವಾಗಿ 35 ವರ್ಷ ದಾಟುತ್ತಿದ್ದಂತೆಯೇ ನಿವೃತ್ತಿಯಾಗುತ್ತಾರೆ. ಆದರೆ 40 ವರ್ಷ ದಾಟಿದ ಬಳಿಕವೂ ರಣಜಿ ಟ್ರೋಫಿ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟವರೆ ಪ್ರವೀಣ್ ತಾಂಬೆ. ರಣಜಿ ಟ್ರೋಫಿ ಕ್ರಿಕೆಟ್ ಆಡಬೇಕೆಂದು ಹತ್ತಾರು ವರ್ಷಗಳ ಕಾಲ ನಡೆಸಿದ ಕಠಿಣ ತಪಸ್ಸಿನ ಬಳಿಕವೂ ತಾಂಬೆಗೆ ಅವಕಾಶವೇ ಸಿಕ್ಕುತ್ತಿರಲಿಲ್ಲ. ಆದರೆ, ವಯಸ್ಸು 40 ದಾಟಿದ ಬಳಿಕ ತಾಂಬೆ ಮುಟ್ಟಿದ್ದೆಲ್ಲವೂ ಚಿನ್ನ. ವಯಸ್ಸಾಗಿದೆ ಎಂಬ ಕಾರಣಕ್ಕೆ, ತಮ್ಮ ವೃತ್ತಿಬದುಕಿನ ಉದ್ದಕ್ಕೂ ಮುಂಬೈ ಪರ ರಣಜಿ ಟ್ರೋಫಿ ಕ್ರಿಕೆಟ್ ತಂಡದ ಸಂಭಾವ್ಯ ಆಟಗಾರರ ಪಟ್ಟಿವರೆಗೂ ಬಂದು ಅಂತಿಮ ಆಟಗಾರರ ಪಟ್ಟಿ ಸೇರುವಲ್ಲಿ ತಿರಸ್ಕೃತರಾಗುತ್ತಿದ್ದ ತಾಂಬೆ, ತಾನು ಕಂಡ ಕನಸಿನ ಕುದುರೆಯ ಬೆನ್ನೇರುವುದನ್ನು ಮಾತ್ರ ನಿಲ್ಲಿಸಲೇ ಇಲ್ಲ. ಪ್ರತೀ ವರ್ಷ ರಣಜಿ ಆಡಲು ತಮ್ಮ ದೈನಂದಿನ ಜೀವನದ ಎಲ್ಲಾ ಅಡೆತಡೆಗಳನ್ನು ಮೆಟ್ಟಿನಿಂತು ತಮ್ಮ ಪ್ರಯತ್ನವನ್ನು ಮಾತ್ರ ಹಿಡಿದಿಟ್ಟಿದ್ದರು.

ಹತ್ತಿಪ್ಪತ್ತು ವರ್ಷಗಳ ಕಾಲ ಮುಂಬೈನ ಗಲ್ಲಿ, ಟೆನಿಸ್ ಬಾಲ್ ಹಾಗೂ ಲೀಗ್ ಕ್ರಿಕೆಟ್ ಆಡುವ ಮೂಲಕ ರಣಜಿ ಟ್ರೋಫಿ ಕ್ರಿಕೆಟ್‌ನಲ್ಲಿ ಒಮ್ಮೆಯಾದರೂ ಆಡಲೇಬೇಕೆಂಬ ಭಗೀರಥ ಪ್ರಯತ್ನ ನಡೆಸಿದ್ದ ಛಲಬಿಡದ ಮಲ್ಲ. ಕ್ರಿಕೆಟ್ ಜಗತ್ತಿನಲ್ಲಿ ತಮ್ಮದೇ ಛಾಪು ಮೂಡಿಸಲು ಪ್ರವೀಣ್ ತಾಂಬೆ ಅವರು ಪಟ್ಟಿರುವ ಹತ್ತಾರು ವರ್ಷಗಳ ಪರಿಶ್ರಮದ ಫಲ, ಸಾಧನೆಯನ್ನು ವಿಶ್ವಕ್ಕೆ ಪರಿಚಯಿಸಲು ಒಂದು ಬಯೋಪಿಕ್ ಮೂಲಕ ಬಾಲಿವುಡ್‌ನಲ್ಲಿ 'ಕೌನ್ ಪ್ರವೀಣ್ ತಾಂಬೆ' ಎಂಬ ಸಿನಿಮಾ ಬಂದಿದೆ. ಇದಲ್ಲವೇ ಎಂತಹ ಪರಿಸ್ಥಿಯಲ್ಲಿಯೂ ಎದೆಗುಂದದೆ, ಆತ್ಮವಿಶ್ವಾಸ, ಸಮರ್ಪಣಾ ಮನೋಭಾವ ಮತ್ತು ಕನಸುಗಳನ್ನು ಬೆನ್ನಟ್ಟುವ ಸಾಮರ್ಥ್ಯವೆಂದರೆ. ವಯಸ್ಸು ಕೇವಲ ಒಂದು ಸಂಖ್ಯೆ ಅಷ್ಟೇ!